# ಅಪರಂಜಿ

ತಿಳಿನಗೆಯ ಕಾರಂಜಿ



ಜನವರಿ - 2013

ಶಾಸಕರು ಮಂತ್ರಿಗಳು ಕಾರ್ಪೋರೇಟರ್‌ಗಳು ಭ್ರಷ್ಟ ಅಧಿಕಾರಿಗಳು
ಇವರೆಲ್ಲರ ಒಂದು ರಾಶಿ ವಿಧಾನ ಸೌಧದ ಮುಂದೆ





# ಅಪರಂಜಿ

ತಿಳಿನಗೆಯ ಕಾರಂಜಿ



ಸಂಪಾದಕ ಮಂಡಳಿ

ಸಂಪಾದಕರು
ಶ್ರೀ ಎಂ. ಶಿವಕುಮಾರ್

ಉಪ ಸಂಪಾದಕರು
ಶ್ರೀ ಬೇಲೂರು ರಾಮಮೂರ್ತಿ

ಸದಸ್ಯರು
ಶ್ರೀ ಎಚ್.ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ

ಟ್ರಸ್ಟಿಗಳು
ಶ್ರೀ ಎಂ. ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ಜಿ. ನಾಗೇಶ್
ಶ್ರೀ ವಿ.ಆರ್. ನಾಥ್
ಶ್ರೀ ಎ.ಆರ್. ರಾಜಗೋಪಾಲ್
ಶ್ರೀ ಕೆ. ರವೀಂದ್ರ ರಾವ್

ವಿಶೇಷ ಆಹ್ವಾನಿತರು
ಶ್ರೀ ಆರ್. ಶೇಷಗಿರಿರಾವ್
ಶ್ರೀ ಆರ್.ಎಸ್. ಪ್ರಶಾಂತ್

ಗೌರವ ಸಲಹೆಗಾರರು
ಶ್ರೀ ಅ.ರಾ.ಸೇ.

**ಚಂದಾ ವಿವರ:**
ಬಿಡಿ ಪ್ರತಿ: ರೂ. 10/-
ವಾರ್ಷಿಕ ಚಂದಾ: ರೂ. 100/-
ಹತ್ತು ವರ್ಷದ ಚಂದಾ: ರೂ. 750/-

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ



ಸಂಪುಟ 30
ಸಂಚಿಕೆ - 4
ಜನವರಿ - 2013

## ಈ ಸಂಚಿಕೆಯಲ್ಲಿ.....


| | | |
|---|---|---|
| ಅಪರಂಜಿ ಕಿಡಿ | **ಪ್ರಕಾಶ್** | 3 |
| ವಿದುರಾಶ್ವತ್ಥದ... | **ವತ್ಸನ** | 5 |
| ಯೋಗ ಕಲಿಯುವ.. | **ಇ.ಆರ್. ರಾಮಚಂದ್ರನ್** | 11 |
| 2012ಸಿಂಹಾವಲೋಕನ | **ಸಿ.ಆರ್. ಸತ್ಯ** | 15 |
| ಅನುಕರಣಾ ಪ್ರಿಯರು | **ಎಚ್. ಶಾಂತರಾಜ ಐತಾಳ್** | 21 |
| ಆಲಿಸು ರಾಧೆಯಾ ಕೊಳಲಿನಾ ಕರೆ | | 25 |
| ಪರಿಚಾಯಣ | **ಅನಿತಾ ನರೇಶ್ ಮಂಚಿ** | 29 |
| ಕರೆಗಳ ಕರಕರೆ | **ಸೂರಿ ಹಾರ್ದಳ್ಳಿ** | 32 |
| ಇವೆಲ್ಲಾ ಏಪ್ರಿಲ್...... | **ಬೇಲೂರು ರಾಮಮೂರ್ತಿ** | 38 |
| ಕಟ್ಟೆ ಪ್ಲಾನ್ | **ಡಾ. ರುಕ್ಮಿಣಿ ರಘುರಾಮ್** | 41 |
| ವಿವಿಧ ಶಾಸ್ತ್ರ....... | **ನಂದಿನಿ ಕಾಪಡಿ** | 44 |
| ಕೂಲಿಟ್ಟು | **ಪ್ರೊ. ಶ್ಯಾಮಲ ರವಿಶಂಕರ್** | 50 |


*ಮುದ್ರಣ : ರವಿ ಗ್ರಾಫಿಕ್ಸ್ - ಅಕ್ಷರ ಜೋಡಣೆ : ಒಮೇಗಾ ಲೇಸರ್‌ಟೆಕ್*
ಪ್ರಕಾಶಕರು : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003. email: koravanji42@hotmail.com

ಸಂಪರ್ಕ ವಿಳಾಸ: **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು - 560 068. ದೂರವಾಣಿ: 080-26688488. email: belururamamurthy@gmail.com

| | | |
|---|---|---|
| ಮಾನವರ ಮೇಲೆ ಗ್ರಹಗಳ... | **ನೀರಗುಂದ ಕೇಶವಮೂರ್ತಿ ರಾವ್** | 53 |
| ಬೀchiಯೊಡನೆ ಒಂದು.... | **ಎನ್. ರಾಮನಾಥ್** | 57 |
| ತುಂತುರು | **ದಂನಳ** | 62 |
| ವೀಕ್ಷಕ ದೇವರುಗಳೇ, ಇದೊ... | **ಕೃಷ್ಣ ಸುಬ್ಬರಾವ್** | 63 |
| ಸಂಕೇತಗಳು | **ಅಣ್ಣಾಸ್ವಾಮಿ ಮೊದಲಿಯಾರ್** | 67 |
| ಬೃಹತ್ ಹಂಡೆ ಗುರೂಜಿ...... | **ಗೌತಮ** | 74 |
| ನಗೆಗಾರ–ದಾರ್ಶನಿಕ ಬೀchi | **ಪುನರ್ವಸು** | 78 |
| ಮಗನೆಂಬ ಮರ್ಕಟ....... | **ಗೋಪಾಲಿ** | 83 |
| ಕಳ್ಳನನ್ನು ಹಿಡಿದ ಪುರೋಹಿತರು! | **ರಮ್ಯ** | 92 |
| ಕಾಡು ಹರಟೆ | **ಅಶೋಕ ಭಾಗಮಂಡಲ** | 95 |
| ಹಗರಣಗಳಿಂದ ಸ್ವಯಂ ನಿವೃತ್ತಿ | | 99 |
| ನಾಡಿಗೇರ್ ಕೃಷ್ಣರಾಯರ.... | **ಎಸ್.ಎನ್. ಚಂದ್ರಶೇಖರ್** | 101 |
| ಕೋತ್ವಿದ್ಯೆ | **ವಾಣೀ ಸುರೇಶ್** | 106 |
| ಹುರುಳಿಕಟ್ಟು | **ಎಚ್. ಗೋಪಾಲಕೃಷ್ಣ** | 110 |


**ಮುಖಪುಟ ವ್ಯಂಗ್ಯಚಿತ್ರ - ಗುಜ್ಜಾರ್**

**ಒಳಪುಟಗಳ ವ್ಯಂಗ್ಯಚಿತ್ರಗಳು - ಶೃಂಗೇರಿ ರಘುಪತಿ**

# ಅಪರಂಜಿ ಕಿಡಿ

● ಪ್ರಕಾಶ್



ಸುವರ್ಣ ವಿಧಾನ ಸೌಧದಲ್ಲಿ ಮೊದಲ ಅಧಿವೇಶನ – ಸುದ್ದಿ

**● ಬೆಳಗಾವಿಯಲ್ಲಿ ಬೆಳಗಾಯಿತು !!**

★★★

ಒಮ್ಮೆ ಒಬ್ಬರಿಗೆ ಮಾತ್ರ ಮಾತಿನ ಅವಕಾಶ – ಬೆಳಗಾವಿ ಸುದ್ದಿ

**● ಇದನ್ನ ಎಂದೋ ಜಾರಿಗೆ ತರಬೇಕಾಗಿತ್ತು !!**

★★★

ನ್ಯಾಯಮಂಡಳಿ ಸದಸ್ಯರಿಗೆ ನ್ಯಾಯಾಂಗದ ಹಿನ್ನೆಲೆ ಅಗತ್ಯ – ಹೇಳಿಕೆ

**● ''ಅರೆ'' !!**

★★★

''ಸರ್ಕಾರಗಳ ಮೇಲೆ ನಂಬಿಕೆ ಇಲ್ಲ'' – ಶ್ರೀ ಸಂತೋಷ್ ಹೆಗ್ಡೆ

**● ಒಪ್ಪಬೇಕಾದ ಮಾತು !!**

★★★

ಡಿಸೆಂಬರ್ ಇಪ್ಪತ್ತೊಂದರಂದು ಪ್ರಳಯ ಖಂಡಿತ ಆಗುಲ್ಲ : ಏಕೆ ಗೊತ್ತೇ?

**● ನೀವೆಲ್ಲಾ ಇದನ್ನ ಓದುತ್ತಾ ಇದೀರಲ್ಲಾ !!**

★★★

ಕಾವೇರಿ ಪ್ರಾಧಿಕಾರದ ನಿರ್ಧಾರಕ್ಕೆ ಎರಡೂ ರಾಜ್ಯಗಳು ಬದ್ಧರಾಗಬೇಕು – ಕರುಣಾನಿಧಿ

**● ಹಾಗಲ ಕಾಯಿಗೆ ಬೇವಿನ ಕಾಯಿ ಸಾಕ್ಷಿ !!**

★★★

ಕೊಡಗಿನಲ್ಲಿ ತಣ್ಣಗಿರುವ ಕಾವೇರಿ ಮಂಡ್ಯದ ಬಳಿ ಕಾವೇರುತ್ತಾಳಂತೆ!!

★★★

ನಾನೀಗ ಸ್ವತಂತ್ರ ವ್ಯಕ್ತಿ – ಶ್ರೀ ಪುಟ್ಟಸ್ವಾಮಿ

**● ಇದೇ ಸ್ವಾತಂತ್ರ್ಯ ಸಕಲರಿಗೂ ದೊರಕುವಂತಾಗಲಿ !!**

★★★

# ಮೊದಲ ಮಾತು

*ನಾಡಿನ ದಾರ್ಶನಿಕ ನಗೆಗಾರರೆಂದೇ ಖ್ಯಾತರಾಗಿದ್ದ ಬೀಚಿಯವರ ಜನ್ಮಶತಮಾನೋತ್ಸವವನ್ನು ಅವರ ಹಿರಿಮೆಗೆ ತಕ್ಕಂತೆ ಆಚರಿಸುವ ಸಲುವಾಗಿ ಈ ಬಾರಿಯ ಹಾಸ್ಯೋತ್ಸವವನ್ನು ಅವರ ನೆನಪಿಗೆ ಮೀಸಲಿಟ್ಟಿದ್ದೇವೆ. ನಮ್ಮ ನಗೆ ಚಟುವಟಿಕೆಗಳಿಗೆ ಸದಾ ಪ್ರೋತ್ಸಾಹ ನೀಡುತ್ತಿರುವ ಹಿರಿಯ ರಂಗಕರ್ಮಿ ಮಾಸ್ಟರ್ ಹಿರಣ್ಣಯ್ಯನವರ ಚಾಲನೆ, ಪ್ರೊ. ಕೃಷ್ಣೇಗೌಡ ಮತ್ತು ಗಂಗಾವತಿ ಪ್ರಾಣೇಶ್ ಇವರುಗಳ ಹಾಸ್ಯದ ಹೊನಲುಗಳೊಂದಿಗೆ ನಮ್ಮ ಹಾಸ್ಯೋತ್ಸವ ಹೊಸ ವರುಷಕ್ಕೆ ನಾಂದಿ ರೂಪದಲ್ಲಿ ಆಚರಿಸಲ್ಪಡುತ್ತಿದೆ. ಎಂದಿನಂತೆ ನಮ್ಮವರೇ ಆದ ಬೇಲೂರರು ಈ ಸಮಾರಂಭದ ಸಂಪೂರ್ಣ ಸಾರಥ್ಯದ ಚುಕ್ಕಾಣಿ ಹಿಡಿದಿದ್ದಾರೆ.*

*ಈ ಹಾಸ್ಯೋತ್ಸವದ ಸಮಯದಲ್ಲಿ ನಮ್ಮ ಜನವರಿ ತಿಂಗಳ ಸಂಚಿಕೆಯನ್ನು ಎಂದಿನಂತೆ ವಿಶೇಷ ಸಂಚಿಕೆಯನ್ನಾಗಿ ಹೊರತರುತ್ತಿದ್ದೇವೆ. ಅನೇಕ ಮಂದಿ ಹೊಸ ಬರಹಗಾರರು ನಮ್ಮ ಬಳಗವನ್ನು ಸೇರಿರುವುದು ಕನ್ನಡ ಭಾಷೆಯ ಹಾಸ್ಯ ಮನೋಭಾವ ಆರೋಗ್ಯಪೂರ್ಣವಾಗಿರುವುದರ ದ್ಯೋತಕ. ಇವರೆಲ್ಲರಿಗೆ ಹಾಗೂ ನಮ್ಮ ಸಂಚಿಕೆಗೆ ಈಗಾಗಲೇ ಬಹು ಕಾಲದಿಂದ ಬರೆಯುತ್ತಿರುವ ಎಲ್ಲ ಲೇಖಕ ಲೇಖಕಿಯರಿಗೆ ನಮ್ಮ ಹೃದಯ ತುಂಬಿದ ನಮನಗಳು.*

*ಎಂದಿನಂತೆ ಕರಡನ್ನು ಪರಿಶೀಲಿಸಿದ ಹಾಗೂ ಸಂಚಿಕೆಯನ್ನು ಅಚುಕಟ್ಟಾಗಿ ಸಿದ್ಧಪಡಿಸಿದ ಅಪರಂಜಿ ಬಳಗದ ಆನಂದ ಮತ್ತು ಗೋಪಾಲ್ ಇವರಿಗೆ ಒಮೆಗಾ ಲೇಸರ್ ಟೆಕ್‌ನ ಕುಮಾರಿ ಶ್ವೇತ ಮತ್ತು ರವಿ ಗ್ರಾಫಿಕ್ಸ್‌ನ ಚಿ. ಸಂತೋಷ್ ಮತ್ತು ಚಿ. ನಾಗರಾಜ್ ಇವರಿಗೆ ಅಪರಂಜಿಯ ಕೃತಜ್ಞತೆಗಳು.*

*ಬರಲಿರುವ ಹೊಸವರುಷ ಸಕಲರಿಗೂ ಶುಭವನ್ನು ತರಲಿ ಎಂದು ಅಪರಂಜಿ ಭಗವಂತನಲ್ಲಿ ಮಂಡಿಯೂರಿ ಪ್ರಾರ್ಥಿಸುತ್ತಾಳೆ.*

**ಶಿವಕುಮಾರ್**



# ವಿದುರಾಶ್ವತ್ಥದ ವಿನುತಮ್ಮ ಪ್ರಕರಣ

• ವತ್ಸನ

**ಬ**ಡವರ ಬಂಧು, ಕನ್ನಡಿಗರ ಕಣ್ಮಣಿ, ಕೈಗಾರಿಕೆಗಳ ಆಶಾಕಿರಣ ಇನ್ನೂ ಏನೇನೋ ಆಗಿರುವ ಧುರೀಣರೊಬ್ಬರು ತಮ್ಮ ಹೊಸ ಪಕ್ಷವನ್ನು ಉದ್ಘಾಟನೆ ಮಾಡುತ್ತಿದ್ದ ತಮಾಷೆಯನ್ನು ಟಿ.ವಿ.ಯಲ್ಲಿ ನೋಡುತ್ತಿದ್ದೆವು. ಒಮ್ಮೆಲೇ ಇನ್ಸ್‌ಪೆಕ್ಟರ್ ಉಳ್ಳಾಗಡ್ಡಿ ಒಳಕ್ಕೆ ಬಂದು ಕುಳಿತರು. ಶರಲೇಖ ಅವರನ್ನು ನೋಡಿ, ''ಹುಂ, ಹೇಳಿ ಗೌರಿಬಿದನೂರಿನ ಸಮಾಚಾರ ಏನು?'' ಎಂದು ನಗುತ್ತಾ ಕೇಳಿದ. ಉಳ್ಳಾಗಡ್ಡಿಯವರ ಗಾಬರಿ ಅವರ ಮುಖದಲ್ಲೇ ಕಂಡಿತು. ''ಅರೆ, ಅದು ಹ್ಯಾಂಗರೀ ಅಷ್ಟು ಲಗೂನ ನಾನು ಗೌರಿಬಿದನೂರಿಕ್ಕ ಹೊಂಟು ಬಂದಿರೋದನ್ನ ಪತ್ತೆ ಹಚ್ಚಿದ್ರೀ. ಖರೇ ಪತ್ತೇದಾರ ಅಂದ್ರ ನೀವೇನ್ರಪಾ!'' ಅಂತ ಮೆಚ್ಚುಗೆ ಸೂಚಿಸಿದರು ಉಳ್ಳಾಗಡ್ಡಿ. ಶರಲೇಖ ಸರೋಜಮ್ಮನವರನ್ನು ಕರೆದು ಕಾಫಿ ತರಲು ಹೇಳಿ ಉಳ್ಳಾಗಡ್ಡಿಯವರ ಪ್ರಶ್ನೆಗೆ ಸಮಜಾಯಿಷಿ ನೀಡಲು ಪ್ರಾರಂಭಿಸಿದ. ''ಅಲ್ಲಾ ಉಳ್ಳಾಗಡ್ಡಿ, ಯಾವ ಶತಮಾನದಲ್ಲಿದ್ದೀರಾ ಏನು ಕಥೆ? ಸರಿಯಾಯ್ತು. ಪೋಲೀಸಿನವರು ಅಂದ್ರೆ ಮಾಹಿತಿ ತಂತ್ರಜ್ಞಾನದಲ್ಲಿ ಕಳ್ಳರಿಗಿಂತ ಒಂದು ಹೆಜ್ಜೆ ಮುಂದಿರಬೇಕು. ಮೊನ್ನೆ ಯಾವುದೋ ಕಾರಣಕ್ಕೆ ನಿಮಗೆ ಫೋನ್ ಮಾಡಿದ್ದೆ. ನಾಟ್ ರೀಚಬಲ್ ಅಂತ ಬಂತು. ನನ್ನ ಅತಿ ಆಧುನಿಕ ಐ ಫೋನ್‌ನಲ್ಲಿ ಒಂದು ಹೊಸ ಆಪ್ ಇದೆ. ಇದರ ಮೂಲಕ ನಾಟ್ ರೀಚಬಲ್ ಅಂತ ಬಂದಿರೋ ಫೋನ್ ಆ ಕ್ಷಣ ಎಲ್ಲಿದೆ ಅಂತ ಪತ್ತೆ ಹಚ್ಚಬಹುದು. ನನಗೆ ನಿಮ್ಮ ಫೋನ್ ಇದ್ದ ಅರ್ಥಾತ್ ನೀವಿದ್ದ ಜಾಗದ ಅಕ್ಷಾಂಶ, ರೇಖಾಂಶ ಸಿಕ್ಕಬಿಡ್ತು. ಗೂಗಲ್‌ನಲ್ಲಿ ಅದನ್ನು ಹಾಕಿದ ತಕ್ಷಣ ಊರಿನ ಹೆಸರೇ ಕಣ್ಣಿನ ಮುಂದೆ ಬಂತು. ಸರಿ ಎಲ್ಲೋ ಡ್ಯೂಟಿ ಮೇಲೆ ಹೋಗಿರ್ತೀರಾ, ಹಿಂತಿರುಗಿದ ಮೇಲೆ ಕೇಳೋಣ ಅಂತ ಸುಮ್ಮನಾದೆ. ಈಗ ನಿಮ್ಮ ಮುಖ ನೋಡಿದರೆ ಹೋದ ಕೆಲಸ ಮುಗಿದಿಲ್ಲ ಅನ್ನೋ ತರಹ ಆತಂಕದ ಛಾಯೆ ಕಾಣುತ್ತೆ. ಹೇಳಿ ಏನು ಸಮಾಚಾರ?'' ಎಂದ ಶರಲೇಖ. ಅಷ್ಟರಲ್ಲಿ ಸರೋಜಮ್ಮ ಕಾಫಿ, ಕೋಡುಬಳೆ ತಂದು ನಮ್ಮ ಅತಿಥಿಗಳ ಮುಂದೆ ಇಟ್ಟು ಒಳಕ್ಕೆ ಹೋದರು. ಕಾಫಿಯನ್ನು ಗುಟುಕರಿಸುತ್ತಾ ಉಳ್ಳಾಗಡ್ಡಿ, ''ಅದೊಂದು ವಿಚಿತ್ರ ಕಥೆ. ನಿಮ್ಮಿಬ್ಬರ ಸಹಾಯ ಕೇಳೋಣ ಅಂತ್ಲೇ ಇಲ್ಲಿಗೆ ಬಂದೆ. ಇನ್ನೂ ಹನ್ನೆರಡೂ ಆದಂಗಿಲ್ಲ, ಈಗಲೇ ನನ್ನ ಜೋಡಿ

**ತಿನ್ನಲು ಉಣ್ಣಲು ಆಗದಿದ್ದರೂ**
**ಕೂಡಿಡುವ ಆಸೆ**
**ನೆಟ್ಟಗೆ ನಿಲ್ಲಲು ಆಗದಿದ್ದರೂ**
**ಕುರ್ಚಿಯ ಆಸೆ**
**ಅದಕ್ಕೆ ಇವರಿಗೆ**
**ಏರುವವರೆಗೂ ಚಟ್ಟ**
**ರಾಜಕೀಯದ ಚಟ**



ಗೌರಿಬಿದನೂರಿಕ್ಕ ಬಂದೀರೇನು? ಸಂಜೀಕ್ಕ ಪುನಃ ಬೆಂಗಳೂರಿಗೆ ಬಂದ್ಬಿಡ್ಬೋದು. ಕಾರು ರೆಡಿ ಐತಿ'' ಅಂದರು.

ನಮಗೂ ಬೇರೆ ಏನೂ ಅರ್ಜೆಂಟ್ ಕೆಲಸ ಇಲ್ಲದ್ದರಿಂದ ಅವರೊಡನೆ ಹೊರಟೇ ಬಿಟ್ಟೆವು. ಏರ್‌ಪೋರ್ಟ್ ರಸ್ತೆಯನ್ನು ಹಿಡಿದು, ಚಿಕ್ಕಬಳ್ಳಾಪುರ ಸೇರಿ, ಅಲ್ಲಿಂದ ಗೌರಿಬಿದನೂರು ಸೇರೋ ಹೊತ್ತಿಗೆ ತಾಸು ಎರಡಾಗಿತ್ತು. ಕಾರಿನಲ್ಲಿ ಹೋಗುತ್ತಿದ್ದಾಗ ಉಳ್ಳಾಗಡ್ಡಿ ನಮ್ಮ ಯಾತ್ರೆಯ ಉದ್ದೇಶದ ಬಗ್ಗೆ ಸಂಕ್ಷಿಪ್ತ ಮಾಹಿತಿ ಒದಗಿಸಿದರು. ಗೌರಿಬಿದನೂರಿನ ಜೂನಿಯರ್ ಕಾಲೇಜಿನಲ್ಲಿ ಉಳ್ಳಾಗಡ್ಡಿಯವರ ಚಿಕ್ಕಮ್ಮನ ಮಗಳು ಇಂದಿರಮ್ಮ ಪ್ರಿನ್ಸಿಪಾಲ್. ಅವರ ಕಾಲೇಜಿನಲ್ಲಿ ಉಪನ್ಯಾಸಕಿಯೊಬ್ಬರು ಯಾವುದೋ ಪೇಚಿನಲ್ಲಿ ಸಿಲುಕಿ ಕಂಗಾಲಾಗಿದ್ದಾರಂತೆ. ಸಹಜವಾಗಿಯೇ ತನ್ನ ಉಪನ್ಯಾಸಕಿಗೆ ಸಹಾಯ ಮಾಡುವ ಉದ್ದೇಶದಿಂದ ಇಂದಿರಮ್ಮ ತಮ್ಮ ಅಣ್ಣನನ್ನು ತಾಕೀತು ಮಾಡಿದರಂತೆ. ಅಣ್ಣ ಈಗ ನಮ್ಮನ್ನು ಕರೆದುಕೊಂಡು ತಂಗಿಯ ಮನೆಗೆ ಹೊರಟಿದ್ದ.

ನಾವು ನೇರವಾಗಿ ಇಂದಿರಮ್ಮನವರ ಮನೆಗೆ ಹೋದೆವು. ಆಕೆ ನಮ್ಮನ್ನು ಬಹು ಆದರದಿಂದ ಸ್ವಾಗತಿಸಿ ಮೊದಲು ಊಟಕ್ಕೆ ಎಬ್ಬಿಸಿಬಿಟ್ಟರು. ಊಟದ ನಂತರ ಆಕೆ ತಮ್ಮ ಸಮಸ್ಯೆಯನ್ನು ನಮ್ಮ ಮುಂದಿಟ್ಟರು. ''ಎರಡು ವರ್ಷಗಳ ಹಿಂದೆ ವಿನುತಮ್ಮ ಎಂಬಾಕೆ ಉಪನ್ಯಾಸಕಿಯಾಗಿ ನಮ್ಮ ಕಾಲೇಜು ಸೇರಿದರು. ತುಂಬಾ ಒಳ್ಳೆಯ ಹೆಂಗಸು. ವಿದ್ಯಾರ್ಥಿಗಳಿಗೆಲ್ಲಾ ಅಚ್ಚು ಮೆಚ್ಚು. ವಿದುರಾಶ್ವತ್ಥದಲ್ಲಿ ವಾಸ. ಬಸ್ಸಿನಲ್ಲಿ ಬಂದು ಹೋಗಿ ಮಾಡುತ್ತಾರೆ. ಕೆಲಸದಲ್ಲಿ ಗಟ್ಟಿಗಿತ್ತಿ. ಸುಳ್ಳು ತಟವಟ ಏನೂ ತಿಳೀದು. ಆ ದೃಷ್ಟಿಯಿಂದ ಆಕೆ ಸ್ವಲ್ಪ ಮುಗ್ಧೆ ಅಂತಲೇ ಹೇಳಬೇಕು....''

''ಒಂದು ನಿಮಿಷ ಮೇಡಂ, ಮುಗ್ಧೆ ಅಂತ ನೀವು ಹೇಳುಕ್ಕೆ ಏನಾದರೂ ನಿದರ್ಶನ?'' ಶರಲೇಖ ಆಕೆಯನ್ನು ಪ್ರಶ್ನಿಸಿದ.

ಆಕೆ ಒಂದು ನಿಮಿಷ ಯೋಚಿಸಿ, ನಸು ನಗುತ್ತಾ, ''ಆಕೆ ಸಾಮಾನ್ಯವಾಗಿ ರಜೇನೇ ಹಾಕಲ್ಲ. ಎರಡು ತಿಂಗಳ ಹಿಂದೆ ಆಕೆ ನನ್ನ ಬಳಿ ಬಂದು ಒಂದು ದಿನ ರಜೆ ಕೇಳಿದಳು. ನಾನು ಕಾರಣ ಕೇಳಿದೆ. ಆಕೆ ಏನೆಂದಳು ಗೊತ್ತೇ?....'' ಅಂತ ಹೇಳಿ ಎರಡು ಸೆಕೆಂಡ್ ಪಾಸ್ ಕೊಟ್ಟು ''ಮೇಡಂ ನಮ್ಮ ಮನೆ ಮುಂದಿನ ತೋಟದಲ್ಲಿ ದಾಸವಾಳದ ಹೂವುಗಳು ಅರಳಿವೆ. ದಿನವೆಲ್ಲಾ ಕೂತು ಅವನ್ನು ನೋಡುವ ಆಸೆ. ಅದಕ್ಕೇ ರಜೆ ಕೇಳ್ತಿದೇನಿ'' ಅಂದಳು. ''ಅಂತಹ

ಕಾರಣಕ್ಕೆಲ್ಲಾ ರಜೆ ಕೊಡುಕ್ಕಾಗುತ್ತೇನಮ್ಮಾ, ಬೇರೆ ಏನಾದರೂ ಹೇಳುಕ್ಕಾಗುಲ್ಲವೇ'' ಅಂತ ಕೇಳಿದೆ. ಆಕೆ ಸ್ವಲ್ಪ ಯೋಚಿಸಿ, ''ಬೇರೆ ಏನಾದರೂ ಹೇಳಿದರೆ ಅದು ಸುಳ್ಳಾಗುತ್ತದಲ್ಲಾ. ನಾನು ಸುಳ್ಳು ಹೇಳಲಾರೆ. ರಜೆ ಸಿಗದಿದ್ದರೆ ಕೆಲಸಕ್ಕೆ ಬರುತ್ತೇನೆ'' ಅಂತ ಬಹು ಸುಲಭವಾಗಿ ಹೇಳಿದಳು. ಅವಳ ದನಿಯಲ್ಲಿ ನಿರಾಶೆ, ಕೋಪ ಏನೂ ಇರಲಿಲ್ಲ. ಇದೊಂದೇ ಅಲ್ಲ ಯಾವತ್ತೂ ಆಕೆ ತಪ್ಪು ಹೆಜ್ಜೆ ಇಟ್ಟೋಳೇ ಅಲ್ಲ. ಇಂಥವಳ ಮೇಲೆ ವಿದುರಾಶ್ವತ್ಥದ ಪೋಲೀಸರು ಕಳುವಿನ ಅಪವಾದ ಹೊರಿಸಿದ್ದಾರೆ. ನಾನು ಮಾತನಾಡಿ ಅರೆಸ್ಟ್ ಮಾಡೋದನ್ನ ತಪ್ಪಿಸಿದೆ. ಅದಕ್ಕೇ ಅಣ್ಣನ ಸಹಾಯ ಕೇಳಿದ್ದು. ''ನೀವು ಬಂದದ್ದು ಒಳ್ಳೆಯದೇ ಆಯಿತು'' ಎಂದರು ಇಂದಿರಮ್ಮ.

''ಈಗ ಆಕೆ ಎಲ್ಲಿದ್ದಾರೆ?'' ಶರಲೇಖ ಕೇಳಿದ.

''ಇವತ್ತು ಭಾನುವಾರ. ಹಾಗಾಗಿ ಆಕೆ ವಿದುರಾಶ್ವತ್ಥದಲ್ಲಿ ತನ್ನ ಮನೆಯಲ್ಲೇ ಇರುತ್ತಾಳೆ.''

''ಆಕೆಯನ್ನು ಒಮ್ಮೆ ಮಾತನಾಡಿಸಬೇಕಲ್ಲಾ'' ಎಂದ ಶರಲೇಖ.

ಉಳ್ಳಾಗಡ್ಡಿ ಲಗುಬಗೆಯಿಂದ ಎದ್ದು ನಿಂತು, ''ಬನ್ನಿ ಎಲ್ಲರೂ ಅಲ್ಲಿಗೆ ಹೋಗುವ'' ಅಂದ ನಂತರ ನಾವು ವಿದುರಾಶ್ವತ್ಥಕ್ಕೆ ಪ್ರಯಾಣ ಬೆಳೆಸಿದೆವು. ಇಂದಿರಮ್ಮನವರೂ ನಮ್ಮೊಂದಿಗಿದ್ದರೆಂದು ಬೇರೆ ಹೇಳಬೇಕಾಗಿಲ್ಲ. ಗೌರಿಬಿದನೂರಿನಿಂದ ವಿದುರಾಶ್ವತ್ಥಕ್ಕೆ ಹತ್ತು ಕಿಲೋಮೀಟರು. ಊರು ಸೇರುತ್ತಿದ್ದಂತೆ ಸಾವಿರಾರು ವಿವಿಧ ವಿನ್ಯಾಸದ ನಾಗರಕಲ್ಲುಗಳು ನಮ್ಮನ್ನು ಇದಿರುಗೊಂಡವು. ಇಲ್ಲಿನ ನಾಗದೇವತೆಯ ದೇವಸ್ಥಾನ ಬಹು ಪ್ರಸಿದ್ಧಿ. ಇಂದಿರಮ್ಮನವರು ನಮ್ಮನ್ನು ನೇರವಾಗಿ ವಿನುತಮ್ಮನವರ ಮನೆಗೆ ಕರೆದೊಯ್ದರು.

ವಿನುತಮ್ಮನವರ ಮನೆಯಲ್ಲಿ ಕುಳಿತ ನಂತರ ಶರಲೇಖ ವಿಳಂಬವಿಲ್ಲದೇ ತನ್ನ ಮಾಹಿತಿ ಸಂಗ್ರಹಣ ಪ್ರಾರಂಭಿಸಿದ. ನಾವೆಲ್ಲಾ ಸುಮ್ಮನೆ ವಿದ್ಯಾಮಾನಗಳನ್ನು ನೋಡುತ್ತ ಕುಳಿತೆವು.

''ವಿನುತಮ್ಮ, ನಿಮ್ಮ ಮೇಲೆ ಅಪವಾದ ಹೊರಸಿರೋರು ಯಾರು? ಏನು ಈ ಅಪವಾದ?''

''ಜಿಲ್ಲಾ ಪಂಚಾಯಿತಿ ಛೇರ್ಮನ್ ಅರುಣ್‌ದೇ ಇದೆಲ್ಲಾ ಕಿತಾಪತಿ. ಅವರ ಮನೆಯಿಂದ ಬೆಳ್ಳಿ ಸಾಮಾನು ನಾನು ಕದ್ದೆ ಅಂತ ಪೋಲೀಸ್ ಕಂಪ್ಲೇಂಟ್ ಕೊಟ್ಟಿದ್ದಾನೆ. ಇಂದಿರಮ್ಮ ಬರದೇ ಇದ್ರೆ ತುಂಬ ಕಷ್ಟ ಆಗಿರೋದು.''

''ಅವನು ನಿಮ್ಮ ಮೇಲೆ ಸುಳ್ಳು ಅಪವಾದ ಹೊರಿಸುಕ್ಕೆ ಕಾರಣ?''

''ಮನೇಲಿ ಅಂಥ ದಿವಿನಾದ ಹೆಂಡತಿ ಇದ್ದೂ ಇವನು ಶೀಲಾ ಜೊತೆ ಚೆಲ್ಲಾಟ ಆಡ್ತಾ ಇದ್ದದ್ದನ್ನ ತೋಟದ ಹತ್ರ ನೋಡ್ದೆ. ಹೀಗೆಲ್ಲಾ ಮಾಡ್ಬಾರ್ದು ಅಂತ ಬುದ್ಧಿ ಹೇಳ್ದೆ. ಅದಕ್ಕೇ ಬೆಳ್ಳೀ ಸಾಮಾನನ್ನು ನನ್ನ ಮನೆಯಲ್ಲಿ ಬಚ್ಚಿಟ್ಟು ನನ್ನ ಊರು ಬಿಟ್ಟು ಓಡಿಸೊಕ್ಕೆ ಪ್ರಯತ್ನಿಸಿದ್ದಾನೆ ದುರುಳ.''

ಶರಲೇಖ ಉಳ್ಳಾಗಡ್ಡಿ ಮತ್ತು ನನ್ನನ್ನ ಕರೆದುಕೊಂಡು ಹೊರಕ್ಕೆ ಬಂದ. ''ಈಕೆ ಏನನ್ನೋ ಮರೆ ಮಾಚ್ತಾ ಇದ್ದಾಳೆ ಅನ್ನಿಸುತ್ತೆ ನನಗೆ. ಅವಳನ್ನ ಹಿಪ್ನೋಟೈಸ್ ಮಾಡಿ ನಿಜ ಹೊರಕ್ಕೆ ತರಿಸಬಹುದು. ಇದಕ್ಕೆ ನಾನು ಮತ್ತು ವತ್ಸನ ಇಬ್ಬರೇ ಆಕೆಯೊಂದಿಗೆ ಇರಬೇಕಾಗುತ್ತೆ'' ಅಂದ ಶರಲೇಖ. ಉಳ್ಳಾಗಡ್ಡಿ ಅದಕ್ಕೆ ಒಪ್ಪಿ ದೇವಸ್ಥಾನ ನೋಡೋ ಸಬೂಬು ಹೇಳಿ ತಮ್ಮ ತಂಗಿಯನ್ನು ಕರೆದುಕೊಂಡು ಹೋದರು.

ವಿನುತಮ್ಮನವರನ್ನು ಒಂದು ಸೋಫಾದ ಮೇಲೆ ಕೂರಿಸಿ ಅವರ ಒಪ್ಪಿಗೆ ಪಡೆದು ಅವರನ್ನು ಹಿಪ್ನೋಟೈಸ್ ಮಾಡಿದ. ಆಕೆ ಹಿಪ್ನಾಟಿಕ್ ನಿದ್ರೆಯ ಸ್ಥಿತಿಯನ್ನು ತಲುಪಿದ ನಂತರ ಶರಲೇಖ ತನ್ನ ಪ್ರಶ್ನೆಗಳನ್ನು ಪ್ರಾರಂಭಿಸಿದ.

''ನೀನು ಯಾರು?''

''ನಾನು ಘೃತಾಚಿ.''

''ಎಲ್ಲಿಂದ ಬಂದಿರೋದು ನೀನು?''

''ನಾನು ಮಹರ್ಲೋಕ ನಿವಾಸಿ''

''ಮಹರ್ಲೋಕ? ಹಾಗೆಂದರೇನು?''

''ಛೇ ಅಷ್ಟೂ ಗೊತ್ತಿಲ್ಲವೇ ನಿಮಗೆ! ಓದಿರೋರ ಹಾಗೆ ಕಾಣಿಸ್ತೀರಾ. ಏಳು ಲೋಕಗಳಿವೆ ಜಗತ್ತಿನಲ್ಲಿ. ನಿಮ್ಮದು ಭೂಲೋಕ. ಪಾಪ ಪುಣ್ಯಗಳನ್ನು ಗಳಿಸುವ ಕರ್ಮ ಭೂಮಿ. ನಮ್ಮದು ಮಹರ್ಲೋಕ. ಋಷಿ ಮುನಿಗಳ ವಾಸಸ್ಥಾನ. ಇವಲ್ಲದೇ ಇನ್ನೂ ಐದು ಲೋಕಗಳಿವೆ''

''ಇಲ್ಲಿಗೆ ಯಾಕೆ ಮತ್ತು ಹೇಗೆ ಬಂದೆ?''

''ನಾನು ನಮ್ಮ ಲೋಕದಲ್ಲಿ ವಿದ್ಯಾರ್ಥಿನಿ. ಭೂಲೋಕದ ಬಗ್ಗೆ ಓದಿದಾಗ ಒಂದೆರಡು ವರ್ಷ ಅಲ್ಲಿಗೆ ಕಳಿಸಿ ಅಂತ ನಮ್ಮ ಗುರುಗಳನ್ನು ಕೇಳಿದೆ. ಅವರು ಭೂಲೋಕವನ್ನು ಭೇಟಿ ಮಾಡುವುದು ಅಪಾಯಕರ. ಅಲ್ಲಿನ ಭಾವನಾತ್ಮಕ ಪರಿಸರ ನಿನ್ನ ತಪೋಶಕ್ತಿಯನ್ನು ಹೀರಿಬಿಡುತ್ತದೆ. ಆಮೇಲೆ ನೀನು ಹಿಂದಕ್ಕೆ ಬರಲಾಗದು ಎಂದರು. ನನಗೋ ಇಲ್ಲಿಗೆ ಬರುವ ಉತ್ಸಾಹ. ಅವರನ್ನು ಒಪ್ಪಿಸಿ ಇಲ್ಲಿಗೆ ಬಂದೆ.''



''ಈ ಕೊಂಪೆಗೆ ಬರಲು ಯಾಕೆ ಇಷ್ಟಪಟ್ರಿ?''

ಹಿಪ್ನಾಟಿಕ್ ನಿದ್ರೆಯಲ್ಲೂ ಆಕೆಯ ಮುಖ ಕೆಂಪೇರಿತು. ತುಟಿಗಳು ಅದುರಿದವು. ''ಪವಿತ್ರವಾದ ಅಶ್ವತ್ಥ ವೃಕ್ಷಗಳಿರುವ ಈ ಪಾವನ ಸ್ಥಳವನ್ನ ಕೊಂಪೆ ಎನ್ನಲು ಎಂಥ ಧಾರ್ಷ್ಟ್ಯ ನಿಮಗೆ. ಒಂದು ಲೋಕದಿಂದ ಇನ್ನೊಂದು ಲೋಕಕ್ಕೆ ಪ್ರಯಾಣ ಮಾಡಬೇಕಾದರೆ ಅಶ್ವತ್ಥ ವೃಕ್ಷಗಳ ಮೂಲಕ ಮಾತ್ರ ಸಾಧ್ಯ. ನಿಮ್ಮ ಅಂತರಿಕ್ಷ ಯಾತ್ರಿಗಳು ಬೆಳಕಿನ ವೇಗವನ್ನು ದಾಟಲು ವರ್ಮ್ ಹೋಲ್‌ಗಳನ್ನು ಬಳಸುವಂತೆ ಲೋಕ ಸಂಚಾರಿಗಳು ಅಶ್ವತ್ಥವನ್ನು ಬಳಸುವರು.''

''ಈಗ ನೀವು ಸಂದಿಗ್ಧದಲ್ಲಿ ಸಿಲುಕಿರುವಿರಿ. ಏಕೆ ನಿಮ್ಮ ಲೋಕಕ್ಕೆ ಹಿಂತಿರುಗಬಾರದು?''

''ನಾನೂ ಅದನ್ನೇ ಯೋಚಿಸಿದೆ. ಆದರೆ ಒಂದು ಸಮಸ್ಯೆ. ವಿನಾಕಾರಣ ಈ ಕಳುವಿನ ಅಪವಾದ ನನ್ನ ಮೇಲೆ ಬಂದಂದಿನಿಂದ ನನ್ನ ಮನಸ್ಸಿನಲ್ಲಿ ಕ್ರೋಧದ ಸುಳಿವು ಮೂಡಿದೆ. ಕ್ರೋಧವಿದ್ದರೆ ನನ್ನ ತಪೋಶಕ್ತಿ ಕೆಲಸ ಮಾಡುವುದಿಲ್ಲ. ನನ್ನ ಗುರುಗಳು ಹೇಳಿದ್ದು ನಿಜ. ನಿಮ್ಮ ಲೋಕಕ್ಕೆ ಬಂದ ಮೇಲೆ ರಾಗ ದ್ವೇಷಗಳನ್ನು ತಪ್ಪಿಸಿಕೊಳ್ಳಲು ಅಸಾಧ್ಯ. ಅವು ನಮ್ಮನ್ನು ತಮ್ಮ ಪಾಶದಲ್ಲಿ ಬಿಗಿದು ಬಿಡುತ್ತವೆ.''

ಶರಲೇಖ ನನ್ನ ಕಡೆ ತಿರುಗಿ ನೋಡಿದ. ನಾನು ಮೆಲು ದನಿಯಲ್ಲಿ ಆಕೆಗೆ ಕೇಳಿಸದಂತೆ ''ಇದನ್ನ ಡೆಲ್ಯೂಷನ್ ಆಫ್ ಗ್ರಾಂಜರ್ ಅನ್ನುತ್ತಾರೆ. ಇದೊಂದು ಮಾನಸಿಕ ತೊಂದರೆ. ತಾವು ಅತ್ಯಂತ ಹಿರಿಯ ವ್ಯಕ್ತಿಗಳು. ರಾಜ ಮಹಾರಾಜರು ಎಂಬ ಭವ್ಯತೆಯ ಭ್ರಮೆ ಇಂತಹವರಲ್ಲಿ ಮೂಡುವುದು ಸಾಮಾನ್ಯ. ನನಗೆ ಪರಿಚಯವಿರುವ ಸೈಕ್ರಿಯಾಟೆರಿಸ್ಟ್ ಒಬ್ಬರು ಬೆಂಗಳೂರಿನಲ್ಲಿದ್ದಾರೆ. ಬೇಕಾದರೆ ತೋರಿಸಬಹುದು'' ಅಂದೆ.

ಶರಲೇಖ ''ಅದೆಲ್ಲಾ ಈಗ ಬೇಡ. ಮೊದಲು ಈಕೆಯನ್ನು ಹಿಪ್ನಾಟಿಕ್ ನಿದ್ರೆಯಿಂದ ಹೊರತಂದು ಬಿಡೋಣ. ಆಮೇಲೆ ಉಳ್ಳಾಗಡ್ಡಿಗೆ ಹೇಳಿ ಕೇಸನ್ನು ಮುಚ್ಚುವ ಪ್ರಯತ್ನ ಮಾಡಬಹುದು. ನಮ್ಮ ಲೋಕದ ಕೇಸುಗಳೇ ಸಾಕಾಗಿವೆ. ಬೇರೇ ಲೋಕಗಳ ಕೇಸು ಖಂಡಿತಾ ಬೇಡ. ಅಲ್ಲದೇ ಇದು ಗಾನ್ ಕೇಸಿನ ತರಹ ಕಾಣಿಸುತ್ತೆ'' ಅಂದ ಶರಲೇಖ.

ಹಿಪ್ನಾಟಿಕ್ ನಿದ್ರೆಯಲ್ಲಿರುವವರನ್ನು ನಿದ್ರೆಯಿಂದ ಎಬ್ಬಿಸುವ ಮೊದಲು ಈವರಿಗೆ ನಡೆದದ್ದೆಲ್ಲವನ್ನೂ ಮರೆಯಲು ಹೇಳಬೇಕು. ಹಾಗಾಗಿ ಶರಲೇಖ ಆಕೆಯನ್ನು ಕುರಿತು, ''ನೋಡಿ ವಿನುತಮ್ಮ, ಈಗ ನಿಮ್ಮನ್ನು ನಿದ್ರೆಯಿಂದ ಎಬ್ಬಿಸುತ್ತೇನೆ...'' ಎನ್ನುತ್ತಿರುವಾಗಲೇ ಆಕೆ ಬಾಯಿಹಾಕಿ, ''ಆದರೆ ನನ್ನ ಸಮಸ್ಯೆಗೆ ಪರಿಹಾರ ಹೇಳಲಿಲ್ಲವಲ್ಲಾ, ನನ್ನಲ್ಲಿ ಮೂಡಿರುವ ಕ್ರೋಧದ ಕುಡಿಯಿಂದಾಗಿ ನನ್ನ ತಪೋಶಕ್ತಿ ಕುಂದಿದೆ. ಆ ಕ್ರೋಧವನ್ನು ಹೋಗಲಾಡಿಸಿಕೊಳ್ಳುವುದು ಹೇಗೆ ಎಂದು ದಯವಿಟ್ಟು ತಿಳಿಸಿ, ಪ್ಲೀಸ್'' ಅಂತ ಆಕೆ ಬೇಡಿಕೊಂಡಳು.

ನನಗೆ ಅಯ್ಯೋ ಪಾಪ ಅನ್ನಿಸಿತು. ನನಗೆ ತಿಳಿದಷ್ಟನ್ನು ಹೇಳೋಣ ಅಂದುಕೊಂಡು. ''ವಿನುತಮ್ಮ, ಹಿಂದೊಮ್ಮೆ ನಾನು ಆರ್ಟ್ ಆಫ್ ಲಿವಿಂಗ್ ಅನ್ನುವ ಒಂದು ಕಾರ್ಯಕ್ರಮಕ್ಕೆ ಹೋಗಿದ್ದೆ. ಅವರ ಪ್ರಕಾರ ಕ್ರೋಧ ಅಸೂಯೆ ಇವೆಲ್ಲಾ ಹೋಗಬೇಕಾದರೆ ಮೆಡಿಟೇಷನ್

ಅಥವಾ ಧ್ಯಾನ ಮಾಡಬೇಕು ಅಂತ ಹೇಳಿದರು. ಧ್ಯಾನ ಮಾಡಿ ನೋಡಮ್ಮಾ'' ಅಂತ ಹೇಳಿ ಸುಮ್ಮನಾದೆ. ಶರಲೇಖ ಆಕೆಯನ್ನು ಎಚ್ಚರಗೊಳಿಸಿದ ನಂತರ ನಾವು ಬೆಂಗಳೂರಿಗೆ ಹಿಂತಿರುಗಿದೆವು. ದಾರಿಯಲ್ಲಿ ಶರಲೇಖ ಉಳ್ಳಾಗಡ್ಡಿಗೆ ವಿನುತಮ್ಮನ ಕೇಸಿನ ಬಗ್ಗೆ ಏನೋ ಹೇಳುತ್ತಿದ್ದ.

ಇದೆಲ್ಲಾ ನಡೆದು ಒಂದು ತಿಂಗಳಾಗಿರಬಹುದು. ಒಂದು ಸಂಜೆ ನಾನು ಮತ್ತು ಶರಲೇಖ ಟಿ.ವಿ.ಯಲ್ಲಿ ಡಿಸ್ಕವರಿ ಛಾನೆಲ್ ನೋಡುತ್ತಿದ್ದೆವು. ರಾತ್ರಿ ಹತ್ತು ಘಂಟೆ ಸಮಯ. ಹೊರಗೆ ಭರ್ರ್ರೋ ಅಂತ ಮಳೆ ಬೀಳುತ್ತಿತ್ತು. ಒಮ್ಮೆಲೇ ನನ್ನ ಮುಂದಿನ ಸೋಫಾದ ಮೇಲೆ ವಿನುತಮ್ಮ ಪ್ರತ್ಯಕ್ಷವಾದಳು. ಅಲ್ಲ ಅಲ್ಲ, ಪ್ರತ್ಯಕ್ಷವಾದದ್ದು ಘೃತಾಚಿ. ಥೇಟ್ ಮಹರ್ಲೋಕದ ಅಪ್ಸರೆಯಂತೆಯೇ ನಯನ ಮನೋಹರಳಾಗಿ ಕುಳಿತಿದ್ದಳು.

''ಹೀಗೆ ಒಮ್ಮೆಲೇ ಕಾಣಿಸಿಕೊಂಡಿದ್ದಕ್ಕೆ ಕ್ಷಮೆ ಇರಲಿ. ವತ್ಸನ ಅವರೇ, ನಾನು ನಿಮಗೆ ಎಷ್ಟು ವಂದನೆಗಳನ್ನು ಸಲ್ಲಿಸಿದರೂ ಸಾಲದು. ನಿಮ್ಮ ಸಲಹೆಯ ಮೇರೆಗೆ ನಾನು ಧ್ಯಾನ ಮಾಡಲು ಪ್ರಾರಂಭಿಸಿದೆ. ಒಂದೇ ವಾರದಲ್ಲಿ ನನ್ನ ಕ್ರೋಧ ಕಡಿಮೆಯಾಗಲು ಶುರುವಾಯಿತು. ಇಂದು ನನ್ನ ತಪೋಶಕ್ತಿ ಮರಳಿದೆ. ನಮ್ಮ ಮಹರ್ಲೋಕಕ್ಕೆ ಸಂತಸದಿಂದ ಹಿಂತಿರುಗುತ್ತಿದ್ದೇನೆ. ಗುರುದಕ್ಷಿಣೆಯ ರೂಪದಲ್ಲಿ ಇದನ್ನು ನಿಮಗೆ ಕೊಡುತ್ತಿದ್ದೇನೆ ದಯವಿಟ್ಟು ಸ್ವೀಕರಿಸಿ'' ಅಂತ ಹೇಳಿ ನನ್ನ ಕೈಗೆ ಒಂದು ಪ್ಯಾಕೆಟ್ ಕೊಟ್ಟು ಅಂತರ್ಧಾನವಾದಳು ಘೃತಾಚಿ. ನಾನು ಬಹು ಕುತೂಹಲದಿಂದ ಪ್ಯಾಕೆಟ್ ಬಿಚ್ಚಿದೆ. ಒಂದು ಬೆಳ್ಳಿಯ ಚೊಂಬು! ಗಾಬರಿಯಿಂದ ಅದನ್ನು ತಿರುಗಿಸಿ ಅದರ ತಳಭಾಗವನ್ನು ನೋಡಿದೆ. ನನ್ನ ಹೆದರಿಕೆ ನಿಜವಾಗಿತ್ತು. ಸಣ್ಣ ಅಕ್ಷರಗಳಲ್ಲಿ ಅದರ ತಳಭಾಗದಲ್ಲಿ ''ಅರುಣ್ ಗೌಡ'' ಅಂತ ಎನ್‌ಗ್ರೇವ್ ಆಗಿತ್ತು. ನನ್ನ ಗಾಬರಿ ನೋಡಿ, ''ನಿಜಕ್ಕೂ ಗಾನ್ ಕೇಸ್'' ಎಂದು ನಗುತ್ತಾ ಹೇಳಿದ ಶರಲೇಖ.

---

ಮಂತ್ರಿಯಾದರೆ ಕಾರು ಬಂಗಲೆ
ಎಲ್ಲ ಬರುತ್ತೆ ಕೂಡಲೇ
ಗೂಟದ ಕಾರು, ಯೂನಿಫಾರಂ ಡ್ರೈವರು
ಹೋಗು ಎಂದಲ್ಲಿಗೆ ಹೋಗುತ್ತಾನೆ
ಯಾಕೆ ಏನು ಎಂದು ಕೇಳದೇ
ಮಂತ್ರಿಯ ಗುಟ್ಟು ಡ್ರೈವರನ ಬಳಿ
ಮಂತ್ರಿಗಿಂತ ಅವನಿಗೇ ಗೌರವ ಕೇಳಿ

# ಯೋಗ ಕಲಿಯುವ ಸುಯೋಗ

● ಇ.ಆರ್. ರಾಮಚಂದ್ರನ್

**ನಾ**ನು ಯೋಗ ಕಲಿತಿದ್ದು ಒಂದು ಸುಯೋಗವೇ ಸರಿ.

ಒಂದೈದಾರು ವರ್ಷದ ಹಿಂದೆ ಫ್ಲೂ ಬಂದು ಸುಧಾರಿಸಿಕೊಳ್ಳುತ್ತಿರುವಾಗ, ನಮ್ಮ ಅಪಾರ್ಟ್‌ಮೆಂಟಿನಲ್ಲೇ ಇರುವ ಸ್ನೇಹಿತರೊಬ್ಬರು, ಧಡಧಡನೆ ನನ್ನ ಹತ್ತಿರ ಬಂದು. 'ಅಯ್ಯೋ! ಫ್ಲೂ ಬಂತಂತೇ, ಆರೋಗ್ಯ ಸರಿಯಾಗಿ ನೋಡ್ಕೊಳಿ. ದಿನಾ ಒಂದು ಚಮಚದಲ್ಲಿ ಹದವಾಗಿರುವ ಮೇಕೇ ಹಾಲನ್ನು ತುಪ್ಪಟ ಜೇನುತುಪ್ಪದಲ್ಲಿ ಸೇರಿಸಿ, ಉತ್ತರ ದಿಕ್ಕಿನ ಎದುರು ನಿಂತು ತೊಟ್ಟು ತೊಟ್ಟಾಗಿ 14 ದಿವಸ ನೆಕ್ಕಿದರೆ, ನಿಮ್ಮ ಕೆಮ್ಮು ದಮ್ಮು ಹೇಳದೆ ಕೇಳದೆ ಪರಾರಿಯಾಗುತ್ತೆ. ಇದು ಹೋಗದೇ ಇದ್ದರೆ ಇನ್ನೂ ಅಡ್ವಾನ್ಸ್ಡ್ ಟ್ರೀಟ್ಮೆಂಟ್ ಇದೆ. ಬೇಕೆಂದ್ರೆ ತಿಳಿಸುತ್ತೇನೆ. ಈಗ ಸದ್ಯ ಅವಸರದಲ್ಲಿದ್ದೀನಿ. ಆಮೇಲೆ ಸಿಗ್ತೀನಿ.. ಅಂದ ಹಾಗೆ.. ರಾಮಕೃಷ್ಣ ಆಶ್ರಮದಲ್ಲಿ ನಾಳೆಯಿಂದ ಯೋಗ ಕ್ಲಾಸಸ್ ಇದೆ. ನೀವು ಯಾಕೆ ಸೇರಬಾರದು' ಎಂದು ಹೇಳಿ ಭರಭರನೆ ಬುಲೆಟ್ ಟ್ರೈನ್ ತರಹ ಹೊರಟುಹೋದರು. ಏನೇ ಇರ್ಲಿ, ಒಳ್ಳೆ ಇನ್ಫರ್ಮೇಷನ್ ಕೊಟ್ಟಿದ್ದಾರೆ; ಒಂದನ್ನಾದರೂ ಟ್ರೈ ಮಾಡುವಾ ಅಂದ್ಕೊಂಡೆ.

ರಾಮಕೃಷ್ಣ ಆಶ್ರಮ ನಮ್ಮ ಅಪಾರ್ಟ್‌ಮೆಂಟಿನಿಂದ ಮೂರನೇಯ ಬಿಲ್ಡಿಂಗ್. ಇಷ್ಟು ಹತ್ತಿರದಲ್ಲಿ ಯೋಗ ಕ್ಲಾಸಸ್ ಬರ್ತಿರೋದು ನನ್ನ ಪುಣ್ಯ, ಈ ಸಂದರ್ಭವನ್ನು ಉಪಯೋಗಿಸಕೊಳ್ಳಬೇಕು ಅಂದುಕೊಂಡು ಇನ್ಟ್ರಡಕ್ಷನ್ ಕ್ಲಾಸಿಗೆ ಹೋದೆ. ನನ್ನಹಾಗೆ ರಿಟೈರ್ಡ್ ಆಗಿ, ಹೊಟ್ಟೆಯ ಸುತ್ತ ಉದ್ಭವವಾಗಿರುವ ಟೈರ್ ಅನ್ನು ರೀ-ಟ್ರೆಡ್ ಮಾಡಿಕೊಳ್ಳಬಯಸುವ ಒಂದಿಬ್ಬರು, ಹತ್ತಿಪ್ಪತ್ತು ಯುವಕರು ಐದಾರು ಸ್ಕೂಲು ಹುಡುಗರು ಸೇರಿದ್ದರು.

ಒಂದು ತಿಂಗಳ ಕೋರ್ಸಿಗೆ 500 ರೂ. ರಸೀತಿಯ ಜೊತೆ ಕಿಟ್ಟೊಂದನ್ನು ಕೊಟ್ಟರು. ಅದರಲ್ಲಿ ಒಂದು ಜಮಖಾನ, ಯೋಗಾಸನಗಳಿರುವ ಪುಸ್ತಕ. ದಿನಾ ಬೆಳಿಗ್ಗೆ 6 ಘಂಟೆಯಿಂದ 7 ಘಂಟೆಯವರಿಗೆ ಕ್ಲಾಸು.

ನಮ್ಮ ಮೇಷ್ಟ್ರಿಗೆ ಯೋಗ ಹೇಳಿಕೊಡುವುದಕ್ಕೆ ಸರಿಯಾದ ಅಂಗ ವಿನ್ಯಾಸ. ಐದೂ ಮುಕ್ಕಾಲು ಅಡಿ ಎತ್ತರದ ತೆಳುವಾದ ಮನುಷ್ಯ; ಬೊಜ್ಜು ಡೊಳ್ಳು ಹೊಟ್ಟೆಯಿರಲಿ, ಅವರಿಗೆ ಹೊಟ್ಟೆಯೇ ಇಲ್ಲವೇನೋ ಅನ್ನುವ ಹಾಗೆ ಶರೀರ. ದೇಹಕ್ಕೆ, ಮನಸ್ಸಿಗೆ ಯೋಗದಿಂದಾಗುವ ಉಪಯೋಗವನ್ನು ಚೆನ್ನಾಗಿ ವಿವರಿಸಿದರು. ಜೊತೆಗೆ ಇದನ್ನೂ ಹೇಳಿದರು; 'ಕ್ಲಾಸು 6 ಘಂಟೆಗೆ ಶುರು. ಮೊದಲನೇ ದಿವಸ ಐದು ನಿಮಿಷ ಲೇಟಾಗಿ ಬರಬಹುದು. ಮರುದಿನ ಐದು ನಿಮಿಷ ಲೇಟಾದರೆ, ಏನೂ ಯೋಚನೆ ಮಾಡಬೇಡಿ. ಸೀದಾ ಮನೆಗೆ ಹೋಗಿ ಆರಾಮವಾಗಿ ಮಲಗಿ. ಮನೆಯವರಿಗೆ ಮುಂಚೇನೇ ಹೇಳಿರಿ. ಬಾಗಿಲನ್ನು ಹಾಗೇ ಸೇರ್ಸಿರ್ಲಿ, ನೀವು ಬಂದು ಹಾಕ್ತೀರಾಂತ.' ಎಲ್ಲರಿಗೂ ಅದು ಮೊದಲನೇ ಶಾಕ್. ಸುಮ್ಮನೇ ಮುಖ ಮುಖ

ನೋಡಿಕೊಂಡೆವು. ಮುಂದೆ ಏನು ಕಾದಿದೆಯೋಂತ ಆವಾಗಲೇ ಯೋಚನೆ, ಹೆದರಿಕೆ. ಯಾರೋ ಕೇಳಿದರು, ಸಂಡೇ ಕ್ಲಾಸ್ ಇರುತ್ತಾ? ಅದಕ್ಕೆ ಉತ್ತರ ತಕ್ಷಣವೇ ಬಂತು, ನೀವು ಸಂಡೇ ಊಟ ಮಾಡ್ತೀರಿ ತಾನೆ?!

ನಾನು ಆಶ್ರಮದ ಹತ್ತಿರದಲ್ಲೇ ಇದ್ದಿದ್ದರಿಂದ ಎಲ್ಲರಿಗಿಂತ ಮುಂಚೆಯೇ ಹೋದೆ.

ನಮ್ಮ ಮೇಷ್ಟ್ರು ಬರುವ ಹೊತ್ತಿಗೆ ಎಲ್ಲರೂ ಸೇರಿದ್ದೆವು. ತಲೆಯಿಂದ ಕಾಲಿನವರಿಗೆ ಈಜಿಪ್ಷಿಯನ್ 'ಮಮ್ಮಿ'ಯ ತರಹ ಮುಸುಕು ಹಾಕಿದ್ದ ನನ್ನ ಹತ್ತಿರ ಅವರು ಸೀದ ಬಂದು, ಮಫ್ಲರ್, ಸ್ವೆಟರ್ ಯಾಕೆ ಹಾಕಿಕೊಂಡಿದೀರಿ. ಮೈಲಿ ಹುಷಾರಿಲ್ವೇ ಅಂದ್ರು. ನನಗೆ ಫ್ಲು ಆಗಿತ್ತು.... ಅಂತ ಶುರು ಮಾಡ್ದೆ. ನಾನು ಮುಗಿಸುವ ಮೊದಲೇ ಮೇಷ್ಟ್ರು 'ಎಲ್ರೂ ಶರ್ಟು, ಪ್ಯಾಂಟ್ ತಗೆದು ಅಲ್ಲಿ ಮೂಲೇಲಿರೋ ಬೆಂಚ್ಮೇಲೆ ಇಡಿ. ಹಾಗೇ ಬನಿಯನ್ನೂ ಮಡಿಸಿ, ನಿಮ್ಮ ಶರ್ಟಿನ ಮೇಲೆ ಇಡಿ, ಒಳಗಡೆ ಕಾಚಾದ ಮೇಲೆ ಹಾಕಿದ ಚಡ್ಡಿಯಲ್ಲಿ ಬರಬೇಕು' ಅಂತ ಕೂಗು ಹಾಕಿದರು. ನನಗೆ, 'ನಿಮಗೆ ಏನೂ ಆಗಲ್ಲ, ನೀವೂ ಮಿಕ್ಕವರಿಗೆ ಹೇಳಿದ ಹಾಗೆ ಬನ್ನಿ' ಅಂದ್ರು. 'ಚೈನು, ವಾಚೂ ಕೂಡಾ ಕಳಚಿ ನಿಮ್ಮ ಪ್ಯಾಂಟಿನ ಜೋಬಿನಲ್ಲಿಡಿ. ಮೊಬೈಲ್ನ ಆಫ್ ಮಾಡಿ ಇಡಿ. ಏನಾದರೂ ಕಳೆದು ಹೋದರೆ ನನ್ನ ಜವಾಬ್ದಾರಿ' ಅಂತ ಮತ್ತೊಂದು ಕೂಗು. ನಾನೂ ಮಿಕ್ಕವರ ಹಾಗೇ ಚಡ್ಡಿಹಾಕಿಕೊಂಡು ಬಂದೆ.

'ಶುಕ್ಲಾಂಭರದರಂ' ಶ್ಲೋಕದಿಂದ ಶುರುವಾಯಿತು ಕ್ಲಾಸು. ಪ್ರತಿ ದಿನ ಕ್ಲಾಸ್ ಪ್ರೇಯರ್ನಿಂದ ಶುರು.

ಒಟ್ಟು 25 ಜನ. ಐದು ಲೈನಿನಲ್ಲಿ ತಲಾ ಐದೈದು ಜನ ನಿಂತ ಮೇಲೆ, 'ಮುಂಚೆ ನಾನು ಮಾಡುವುದನ್ನು ನೋಡಿ. ಆಮೇಲೆ ನೀವು ಅದನ್ನೇ ಮಾಡಿ. ನೀವು ತಪ್ಪು ಮಾಡಿದರೆ ಸರಿಯಾಗಿ ಮಾಡಲು ಹೇಳಿಕೊಡುತ್ತೇನೆ. ಮತ್ತೆ ಎಲ್ಲರೂ ಸೇರಿ ಒಟ್ಟಿಗೆ ಮಾಡೋಣ.'

ಅಭ್ಯಾಸವಿಲ್ಲದ ದೇಹ ಬಗ್ಗದು. ಸೀನಿಯರ್ ಸಿಟಿಜನ್ಗಳಾದ ನಮ್ಮ ಕೀಲುಗಳು ಎಣ್ಣೆಯಿಲ್ಲದ ಗೇಟಿನ ತರಹ ಕೀರ್ಲು ಶಬ್ಧಮಾಡಲು ಶುರು. ಜೊತೆಗೆ ಬೊಜ್ಜು ಬೇರೆ. 'ನಿಮ್ಮ ದೇಹಗಳು ಯದ್ವಾತದ್ವಾ ಬೆಳದಿದೆ. ಅದನ್ನು ಕೇಳವ್ರು ಯಾರೂ ಇರಲಿಲ್ಲ, ಹತೋಟಿ ಮೀರಿಹೋಗಿದೆ. ಅದಕ್ಕೇ ಕಾಡಾನೆ ಹಾಗೆ ಬೆಳೆದಿದ್ದೀರ... ಅದಕ್ಕೆ ನೀವು 'ಬಾಸ್' ಅಂತ ತೋರಿಸಬೇಕು. ನಾನು ಸರೀ ಮಾಡ್ತೀನಿ ಎಲ್ಲಾ ನನಗೆ ಬಿಡಿ.' ಒಂದಿಬ್ಬರು ಯುವಕರಿಗೆ ಕೈತಿರಿಗಿಸಿ ಯೋಗದ ಪೋಸನ್ನು ಕರೆಕ್ಟ್ ಮಾಡಿದಾಗ ಅವ್ರು ಜೋರಾಗಿ ಕಿರಿಚಿಕೊಂಡ್ರು. ಸೀನಿಯರ್ ಸಿಟಿಜನ್‌ಗಳಾದ ನಮಗೆ ಅದನ್ನು ನೋಡಿಯೇ ಮೈಝುಲ್ ಅಂತು. ಎಲ್ಲರಿಗೂ ಮೇಷ್ಟ್ರು ಹತ್ರ ಬಂದ್ರೇನೇ ಹೆದರಿಕೆ. ಆದ್ರೂ ದೂರದಿಂದ ನಮ್ಮ ಹೆಸರುಗಳನ್ನು ಆಗಾಗ ಕೂಗುವರು! ಅಂತೂ ಇಂತೂ ಮೊದಲನೇ ದಿನದ ಕ್ಲಾಸ್ ಶವಾಸನದಿಂದ ಮುಗಿಯಿತು.

ಮರುದಿನ ಬೆಳಿಗ್ಗೆ ಏಳುವುದಕ್ಕೇ ಆಗಲಿಲ್ಲ, ನಿಜವಾಗಿ ಶವವಾಗಿ ಹೋದೆನಾ ಅಂತ ಡೌಟ್. ಹಾಗೂ ಹೀಗೂ ಮಾಡಿ ಎದ್ದು ತಯಾರಾಗಿ ಹೋದೆ.

ಎರಡನೇ ದಿನ ಕ್ಲಾಸಿನಲ್ಲಿ ಬರೀ 20 ಜನ. ಕೈ ತಿರಿಗಿಸಿಕೊಂಡವರು ಮಿಸ್ಸಿಂಗ್! ನಾಲ್ಕನೇ ದಿನಕ್ಕೆ ಬರೀ ಹತ್ತು. 50% ಡ್ರಾಪೌಟ್. 'ಇನ್ನು ಮೇಲೆ ನಿಮಗೆ ಕೈಕಾಲು ನೋವಲ್ಲ, ನಿಜವಾದ




ಯೋಗ ಈಗಲಿಂದ ಶುರು. ನಿಮಗೆ ಯಾವಾಗ ವಜ್ರಾಸನದಲ್ಲಿ ಕೂತುಕೊಳ್ಳಲು ಆಗುತ್ತೋ ಆವಾಗಿನಿಂದ ಆರಾಮ ಇರುತ್ತೆ. ಯು ವಿಲ್ ಎಂಜಾಯ್ ಫ್ರಂ ನೌ ಆನ್.'

ಈ ಮಧ್ಯೆ ಕಾಲೇಜಿನಲ್ಲಿ ಓದುತ್ತಿದ್ದ ಮತ್ತು ಯೋಗದಲ್ಲಿ ಚುರುಕಾದ ಹುಡುಗನೊಬ್ಬ ನಾಲ್ಕೈದು ದಿವಸ ಬರಲಿಲ್ಲ. ಅವರ ಅಪ್ಪ ಬೆಂಗ್ಳೂರ್‌ನಿಂದ ಫೋನ್ ಮಾಡಿದರು. ಅವನ್ಗೆ ತಲೇಸುತ್ತುತ್ತೇಂತ ಅವನ ಸ್ನೇಹಿತರು ಅವನ ಹಾಸ್ಟಲ್ ಹತ್ತಿರವಿದ್ದ ಆಸ್ಪತ್ರೆಗೆ ಕರ್ಕೊಂಡೋದ್ರು. ಅವನ್ನ ಪರೀಕ್ಷೆ ಮಾಡಿ, ನಿನಗೆ ಏಂಜಿಯೋ- ಪಿಂಜಿಯೋ ಮಾಡಬೇಕಾಗುತ್ತೆ. ನಿಮ್ಮ ಮನೆಯವರಿಗೆ ಹೇಳಿ ಒಂದು ಲಕ್ಷ ರೂಪಾಯಿ ತೊಗೊಂಡು ಬಾ ಅಂದ್ರಂತೆ. ಏಂಜಿಯೋಗೆ ಅಂಜಿದ ಹುಡುಗ ಸೀದಾ ಮನೇಗೆ ಬಂದವ್ನೆ. ನಾನು ಸುಂಕೇನಹಳ್ಳಿ ಗಲ್ಲೀಲಿ ಪೈಲ್ವಾನ್ ಮಾಸ್ಟ್ರು. ಅವನಿಗೆ ಎರಡು ದಂಡೆಹೊಡೆಯಲು ಏಳ್ದೆ. ಸರಿಯಾಗೇ ಒಡ್ದ. ನಾಳೇನೆ ಬರ್ತಾನೆ ಕ್ಲಾಸ್ಗೆ. ಅವ್ನು ಕ್ಲಾಸ್ಗೆ ಚಕ್ಕರ್ ಆಕಿದ್ರೆ ನಂಗೆ ತಾವು ಒಸಿ ಫೋನ್ ಮಾಡಿ. ಅಲ್ಲೇ ಬಂದು ನಿಮ್ಮೆದಿರ್ಗೇ ಎರಡು ಬಿಗೀತೀನಿ ಅಂದ.

ನೆಕ್ಸ್ಟ್‌ಡೇ ಅವನು ಕ್ಲಾಸಿಗೆ ಬಂದಾಗ ಅವನೇ ಹೀರೋ. ಕ್ರಮೇಣ ಅವನ ತಲೆಸುತ್ತುವಿಕೆ, ನಮ್ಮ ಮೈ ಕೈ ನೋವು ಎಲ್ಲಾ ಹೋಯಿತು. ಹಾಗೂ ಏಂಜಿಯೋ, ಎಯೋಗಗಳು ನಮ್ಮ ಜೀವನಕ್ಕೆ ಒಬ್ಬ ಡಾಕ್ಟರ್ ಎಷ್ಟು ಬೇಗ ಬರಿಸಬಹುದು ಅಂತ ಕೂಡಾ ಅನ್ನಿಸ್ತು! ಒಂದೊಂದಾಗಿ ಆಸನಗಳು ಸುಲಭವಾಗಿ ಬರಲು ಶುರುವಾಯಿತು.

ನಾವು ಯೋಗ ಮಾಡುತ್ತಿರುವಾಗ ಮೇಷ್ಟ್ರು ಓಡಾಡುತ್ತಾ, 'ಹುಟ್ಟುವಾಗಲೇ ದೇವರು ನಮಗೆರೆಡು ಡಾಕ್ಟರ್‌ಗಳನ್ನು ಕೊಟ್ಟೇ ಕಳಿಸೀದಾನೆ, ಅವೇ ನಮ್ಮ ಎಡಗಾಲು ಮತ್ತು ಬಲಗಾಲು. ಅವುಗಳನ್ನು ಚೆನ್ನಾಗಿ ಉಪಯೋಗಿಸಿ. ಅವರಿಬ್ಬರು ನಮ್ಮ ಜೊತೆಯಿದ್ದರೆ ಹೊರಗಡೇ ಡಾಕ್ಟ್ರು ಬೇಡವೇಬೇಡ.' 'ಊಟ ಮಾಡುವಾಗ ಇದನ್ನು ಚೆನ್ನಾಗಿ ನೆನಪಿಡಿ. ಏನು

ತಿಂದರೂ ಅರ್ಧಹೊಟ್ಟೆ ತಿನ್ನಿ, ಕಾಲು ಭಾಗ ನೀರು ಕುಡೀರಿ. ಇನ್ನು ಕಾಲು ಭಾಗ ಹಾಗೇ ಬಿಡಿ.' 'ಹೊಟ್ಟೆ ದಿಂಬಿನ ಚೀಲವಲ್ಲ, ದಿನವಿಡೀ ಅದೂ ಇದೂ ಕಂಠದ ತನಕ ತುಂಬುವುದಕ್ಕೆ,' 'ಪಟ್ಟಾಭಿ ಜೋಯಿಸರು ಹೇಳಿದ ಹಾಗೆ, ಯೋಗ ಈಸ್ 1% ಥಿಯರಿ, 99% ಪ್ರಾಕ್ಟೀಸ್' ಇತ್ಯಾದಿ.

ಕೊನೆಯ ವಾರದಲ್ಲಿ ನಮಗೆ ಸರ್ವಾಂಗಾಸನ ಮಾಡಲು ಹೇಳಿಕೊಟ್ಟರು. ಅದು ಆಸನಗಳಲ್ಲಿ ಶ್ರೇಷ್ಠವೆಂದು ಪ್ರಸಿದ್ಧಿಯಾದದ್ದು. ಅದು ಮಾಡಿದಾಗ ಪ್ರತಿ ಅಂಗಕ್ಕೂ ವ್ಯಾಯಾಮ ಸಿಗುತ್ತೆ. ಒಂದು ದಿವಸ ಅದನ್ನು ಮಾಡುತ್ತಿರುವಾಗ ನನಗೆ ಗೊತ್ತಿದ್ದ ಡಾಕ್ಟರ್ ನಮ್ಮ ಮೇಷ್ಟ್ರೊಡನೆ ಒಳಗೆ ಬಂದರು. ಕ್ಲಾಸಾದ ಮೇಲೆ, ರೇಡಿಯಾಲಜಿಸ್ಟಾದ ಡಾಕ್ಟರ್, 'ನನಗೆ ನೀವೆಲ್ಲಾ ಈ ಆಸನ ಮಾಡ್ತಿರೋದು ನೋಡಿ ಹೆದರಿಕೆ ಆಯಿತು. ದಿನಕ್ಕೆ ಕಡಿಮೆ ಅಂದ್ರೆ ಹತ್ತು ಕೇಸಾದ್ರೂ ಸಿಟಿ, ಎಮ್ಆರ್ ಮಾಡಲು ನಮ್ಮ ಆಸ್ಪತ್ರೆಗೆ ಬರುತ್ತೆ..... ಕತ್ತು, ತಲೆಹತ್ರ ಮೂಳೇಮುರುಕೊಂಡವರ್ದು. ಕರೋಟೆಡ್ ಆರ್ಟರಿಗೆ ಸಂಭಂದಪಟ್ಟಿದ್ದು. ಅಲ್ಲಿಗೆ ಪೆಟ್ಟಾದರೆ ಬ್ರೈನ್ಗೆ ರಕ್ತಹರಿಯೋದು ನಿಂತು ಹೋಗುತ್ತೆ.' ಇದನ್ನು ಕೇಳುತ್ತಿದ್ದ ನಮ್ಮ ಮೇಷ್ಟ್ರು ನನಗಿಂತಲೂ ವಯಸ್ಸಾದವರನ್ನು ಕರೆದು ಸರ್ವಾಂಗಾಸನವನ್ನು ಮಾಡಲು ಹೇಳಿದರು. ಅವರು ಮಾಡಿದ್ದನ್ನು ನೋಡಿ ಡಾಕ್ಟರ್ ಅಲ್ಲೇ ಸುಸ್ತು. 'ಯೋಗವೂ ಎಲ್ಲಾ ವಿದ್ಯೆಯ ಹಾಗೆ; ಸರಿಯಾಗಿ ಮಾಡಲು ಕಲಿತರೆ ಏನೂ ಭಯವಿಲ್ಲ.' ಅಂದ್ರು ನಮ್ಮ ಮೇಷ್ಟ್ರು. ನೆಕ್ಸ್ಟ್ ಬ್ಯಾಚ್ಗೆ ಡಾಕ್ಟರೂ ಸೇರಿಕೊಂಡ್ರು!

ಒಂದು ತಿಂಗಳಾದ ಮೇಲೆ ಮತ್ತೆ ಹೊಸ ಬ್ಯಾಚ್ ಶುರು. ನನ್ನ ಹಳೇ ಸೋಂಬೇರಿತನ ಎಲ್ಲಿ ಮತ್ತೆ ವಕ್ರಿಸುವುದೋ ಎಂದು ಹೆದರಿ ಮತ್ತೆ ಕ್ಲಾಸಿಗೆ ಸೇರಲು ಅನುಮತಿ ಕೇಳಿದೆ. ಆಶ್ರಮದ ಗುರೂಜಿಯವರು 50% ಫೀಸ್ ಮಾಫಿ ಮಾಡಿ ಅನುಮತಿ ಕೊಟ್ಟರು. ಕ್ಲಾಸ್ ನಡೆಯುವಾಗ ನಾನು ಮೂಲೆಯಲ್ಲಿ ಫೇಲಾದ ಹುಡುಗನ ತರಹ ನನಗೆ ಕಲಿಸಿದ ಆಸನಗಳನ್ನು ಅಭ್ಯಾಸ ಮಾಡುತ್ತಿದ್ದೆ. ಟೀಚರ್ ಮಧ್ಯೆ ಮಧ್ಯೆ, 'ನೋಡಿ! ಇವರೇ ಮಾಡ್ತಾರಂತೆ. ನಿಮಗೆ ಆಗಲ್ವಾ' ಎಂದು ನನ್ನನ್ನು ತೋರಿಸಿ ಹೊಸ ಕ್ಲಾಸಿನವರನ್ನು ಹುರಿದುಂಬಿಸುತ್ತಿದ್ದರು. ಒಮ್ಮೆ ನನಗೆ ಯೋಗ ಯಾವರೀತಿ ಉಪಯೋಗವಾಗಿದೆಯೆಂದು ಕ್ಲಾಸಿಗೆ ಹೇಳಲು ಕೋರಿದರು. ನಮ್ಮ ಟೀಚರ್ಗಿಂತ ವಯಸ್ಸಿನಲ್ಲಿ ಹಿರಿಯವನಾದ ನನ್ನ ಮಾತು ಮತ್ತು ನಾನು ಹಾಕುವ ಆಸನಗಳು ಸ್ವಲ್ಪ ಮಟ್ಟಿಗೆ ಅವರ ಮೇಲೂ ಪ್ರಭಾವ ಬೀರಿತು.

ಎರಡು ಸರ್ತಿ 'ರಿಪೀಟ್' ಮಾಡಿದಮೇಲೆ 'ಇನ್ನು ಪರವಾಗಿಲ್ಲ.. ಸೋಂಬೇರಿತನದಿಂದ ಮುಕ್ತನಾಗಿದ್ದೇನೆ' ಅನ್ನುವ ಹೊತ್ತಿಗೆ ಆಶ್ರಮದಲ್ಲಿ ಯೋಗ ಕ್ಲಾಸ್ ಕೂಡ ನಿಂತು ಹೋಯಿತು.

ಈಗಲೂ ಮನೆಯಲ್ಲಿ ಯೋಗಾಭ್ಯಾಸ ಮಾಡುವಾಗ, 'ಅರ್ಧಹೊಟ್ಟೆ ತಿನ್ನಿ....., ಎರಡು ಕಾಲು ಡಾಕ್ಟರ್ಗಳು..., ಯೋಗ 99% ಪ್ರಾಕ್ಟಿಸ್' ನಮ್ಮ ಮೇಷ್ಟ್ರ ಮಾತು ಆಗಾಗ್ಗೆ ಕಿವಿಯಲ್ಲಿ ಗುಯ್ಗುಟ್ಟುತ್ತಿರುತ್ತೆ.

# 2012 – ಸಿಂಹಾವಲೋಕನ

• ಸಿ.ಆರ್. ಸತ್ಯ

**ಪ್ರ**ತಿ ಕ್ಯಾಲೆಂಡರ್ ವರ್ಷದ ಕೊನೆಯಲ್ಲಿ ನನ್ನ ಸೋದರ ಅಳಿಯ ಕೋದಂಡು ಆ ವರ್ಷದಲ್ಲಿ ಅವನಿಗೆ ಆದ ಕೆಲವು ಮಹತ್ತರ ಘಟನೆಗಳನ್ನು ಮೆಲಕು ಹಾಕುತ್ತಾನೆ. ಈ ಮೆಲಕು ಸೆಶನ್‌ಗೆ ಯಾವಾಗಲೂ ನಾನೇ ಆಡಿಯನ್ಸ್! ಈ ಸರ್ತಿ, ನನ್ನನ್ನು ಡಿಸೆಂಬರ್ ಮೊದಲನೇ ವಾರದಲ್ಲೇ ಕರೆದು ''ಬಾ ಮಾವ, 2012ರ ರಿವ್ಯೂ ಕೊಡ್ತೀನಿ'' ಅಂದಾಗ, ''ಇನ್ನೂ ಡಿಸೆಂಬರ್ ಮುಗಿದೇ ಇಲ್ಲವಲ್ಲ ಕೋದಂಡು? ಏನು ಅವಸರ?'' ಅಂತ ಪ್ರಶ್ನಿಸಿದೆ. ''ಅಯ್ಯೋ, ಇನ್ನು ಉಳಿದಿರೋ ದಿನಗಳಲ್ಲಿ ಏನಾಗುತ್ತೆ ಅಂತ ನನಗೆ ಗೊತ್ತು ಮಾವ. ಬಾ'' ಅಂತ ಒತ್ತಾಯಿಸಿದ. ಸರಿ ಹೋದೆ. ಅವನ ಹೆಂಡ್ತಿ ಮಾಡಿದ್ದ ಕೋಡುಬಳೆ, ಕಾಫಿಯೊಡನೆ ನಿರೂಪಣೆಗೆ ಇಳಿದ.

''1st January ಮಾವ, ಹಾರಿಬಲ್ ಆಗೋಯ್ತು!'' ಅಂದ

''ಯಾಕಪ್ಪ, ವರ್ಷದ ನಾಂದಿ ಅಂದರೆ ಎಲ್ಲಾ ಚೆನ್ನಾಗಿರಬೇಕಿತ್ತಪ್ಪಾ'' ಎಂದೆ.

''ಕಾವೇರಿ ಥಿಯೇಟರ್ ಮುಂದೆ ನನ್ನ ಟೂವ್ಹೀಲರ್‌ನಲ್ಲಿ ಹೋಗ್ತಾ ಇದ್ದೆ. ಬಲಗಡೆ ಪಕ್ಕದಿಂದ ಒಬ್ಬಳು – ಸ್ಮಾರ್ಟ್ ಹುಡುಗಿ – ಸ್ಕೂಟರ್ ಮೇಲೇ ಬಂದು ಹ್ಯಾಪಿ ನ್ಯೂ ಈಯರ್! ಅಂತ ವಿಶ್ ಮಾಡಿದ್ಲು. ನನಗೆ ಖುಷಿಯಾಗಿ ಹೆಚ್ಚುಕಮ್ಮಿ ಎರಡು ಕೈಗಳನ್ನೂ ಬಿಟ್ಟು ಇನ್ನೇನು ಹ್ಯಾಪಿ ನ್ಯೂ ಈಯರ್ ಟು ಯೂ ಅಂತ ಹೇಳ್ತಾ ಇದ್ದೆ ಮಾವ – ಅಷ್ಟರಲ್ಲೇ ನನ್ನ ಎಡಗಡೆ ಒಬ್ಬ ಮೋಟರ್ ಸೈಕಲ್ ಸವಾರ – ಸ್ಮಾರ್ಟ್ ಫೆಲ್ಲೋ – ಹ್ಯಾಪಿ ನ್ಯೂ ಈಯರ್ ಬೇಬೀ! ಅಂತ ಅವಳಿಗೆ ಉತ್ತರ ಕೊಟ್ಟ! ಆಗ ಅರ್ಥವಾಯ್ತು ಅವಳು ವಿಶ್ ಮಾಡಿದ್ದು ಅವನಿಗೇ ಅಂತ! ಅಷ್ಟೊತ್ತಿಗೆ ನನ್ನ ಬ್ಯಾಲೆನ್ಸ್ ತಪ್ಪಿ, ಕಾವೇರಿ ಥಿಯೇಟರ್ ಒಳಗೆ ನುಗ್ಗಿ, ಟಿಕೆಟ್ ಬೂತ್ ಮುಂದೆ ನಿಂತಿದ್ದ ಆರೇಳು ಪಡ್ಡೆ ಹುಡುಗರ ಮೇಲೆ ಗಾಡಿ ಏರಿಸ್ಬಿಟ್ಟೆ! ಮೈಯೆಲ್ಲಾ ಬಾಸುಂಡೆಗಳು ಬರೋ ಹಾಗೆ ಅವರು ನನಗೆ ತದುಕಿದರು ಮಾವ.''

''ಸಧ್ಯ, ಜನವರಿ ಮಧ್ಯದಲ್ಲಿ ಸಂಕ್ರಾಂತಿ ಹಬ್ಬದ ಹೊತ್ತಿಗೆ ಹುಷಾರಾದ್ಯಲ್ಲಾ!''

**ಅಲ್ಲೊಂದು ಸೈಟು**
**ಇಲ್ಲೊಂದು ಬಂಗಲೆ**
**ಹೆಂಡತಿಗೊಂದು ರೆಸಾರ್ಟ್**
**ಅವಳಿಗೊಂದು ಟೌನ್‌ಷಿಪ್**
**ಇವು ಅನೈತಿಕ ಗಳಿಕೆಗಳು**
**ಪಾಪದ ಪಳೆಯುಳಿಕೆಗಳು**



''ಹ್ದೂ ಮಾವ, ಆದ್ರೆ ಸಂಕ್ರಾಂತಿ ಮಾರನೇ ದಿನ ಇನ್ನೊಂದು ಎಡವಟ್ಟಾಯ್ತು.''

''ಏನಪ್ಪಾ...?''

''ಜಾಸ್ತಿ ಎಳ್ಳು ತಿನ್ಬುಟ್ಟೆ ಮಾವ. ಪ್ಲಗ್ ಓಪನ್ ಆಗೋಯ್ತು, ಕಂಟ್ರೋಲ್‌ಗೇ ಸಿಗ್ದೆ ಎರಡು ಮೂರು ಪ್ಲಂಬರ್‌ಗಳ ಹತ್ರ – I mean ಡಾಕ್ಟರ್ಸ್ ಹತ್ರ – ಹೋದಮೇಲೇ ಹದಕ್ಕೆ ಬಂತು. ಸರಿ, ಜನವರಿ 26ನೇ ತಾರೀಖು, ಗಣರಾಜ್ಯೋತ್ಸವ ಇತ್ತಲ್ಲ ಮಾವ, 25 ನೇ ತಾರೀಖು ಪೇಪರ್‌ನಲ್ಲಿ ನನಗೆ ರಿಪಬ್ಲಿಕ್ ಡೇ ಪ್ರಶಸ್ತಿ ಬಂತು ಅಂತ ಓದಿದೆ.''

''ಏ ಕೋದಂಡು, ಈ ವಿಷಯಾನಾ ನನಗೆ ನೀನೋ ನಿನ್ನ ಹೆಂಡ್ತೀನೋ ಬಾಯೇ ಬಿಡಲಿಲ್ಲವಲ್ಲೋ?''

''ಬಾಯಿ ಬಿಡಲಿಲ್ಲ ಒಪ್ಕೋತೀನಿ, ಆದರೆ ಬಾಯಿ ಬಡ್ಕೊಂಡೆ!''

''ಯಾಕೆ?''

''ಅದೇ ಸ್ಕೂಟರ್‌ನಲ್ಲೇ ಪೆರೇಡ್‌ನಲ್ಲೇ ಪೆರೇಡ್ ಗ್ರೌಂಡ್‌ಗೆ 26ನೇ ತಾರೀಖು ಹೋದೆ. ಆದರೆ ಪ್ರಶಸ್ತಿ ಬಂದಿದ್ದ ಕೋದಂಡೂ ಅವರ ಇನಿಷಿಯಲ್ಸೇ ಬೇರೆ ನನ್ನ ಇನಿಷಿಯಲ್ಸೇ ಬೇರೆ ಇತ್ತು. ಮನೇಗೆ ಬಂದಾಗ ಇವಳು ನನ್ನನ್ನ ಬಯ್ದಿದ್ದು ಜ್ಞಾಪಿಸಿಕೊಂಡರೆ ಈಗಲೂ ಮೈ ಜುಮ್ಮೆನ್ನುತ್ತೆ.''

''ಅಂದ್ಹಾಗೆ ಫೆಬ್ರವರಿಲೆಲ್ಲಾ ಹುಷಾರಾಗಿದ್ಯಾ?''

''ಇಲ್ಲ ಮಾವ, ಶಿವರಾತ್ರಿ ದಿವಸ ರಾತ್ರಿ ಜಾಗರಣೆ ಮಾಡ್ಬುಟ್ಟೆ. ನನ್ನ ಜೀವಮಾನದಲ್ಲೇ ಒಂದು ರಾತ್ರೀನೂ ನಿದ್ದೆ ಕೆಟ್ಟವನಲ್ಲ ನಾನು. ಮಾರನೆ ದಿನ ಆಫೀಸಿನಲ್ಲಿ ನನ್ನ ಬಾಸ್ ಬಡ್ಜೆಟ್ ರಿವ್ಯೂ ಮಾಡ್ತಿದ್ದರು. ನನಗೆ ಗೊತ್ತಿಲ್ಲದ್ಹಾಗೆ ಅವರ ಮುಂದೆ ನಿದ್ದೆ ಬಂದ್ಬುಟ್ತು ಮಾವ. ಕೋಪ ತಡ್ಕೋಳೋಕ್ಕೆ ಆಗ್ದೆ, ಅವರು ನನ್ನನ್ನು ಮೂರು ತಿಂಗಳಿಗೆ ಕೊಂಗನ್ನೂರಿಗೆ ಟ್ರಾನ್ಸ್‌ಫರ್ ಮಾಡ್ಬುಟ್ರು.''


''ಎಲ್ಲಿದೆಯಪ್ಪಾ ಈ ಕೊಂಗನ್ನೂರು?''

''ಈ ಭೂಮಿ ಮೇಲೇ ಇದೆ ಮಾವ, ಅಲ್ಲೇನಾಯ್ತು ಅಂತಿ? ಮಾರ್ಚ್ 8ನೇ ತಾರೀಖು 'ಹೋಳಿ' ಹಬ್ಬ ಅಂತ ಬೆಂಕಿ ಹಚ್ಚಿಸಿ ಒಂದು ಎತ್ತಿಗೆ ಅಲಂಕಾರ ಮಾಡಿ, ಬೆಂಕಿ ಮೇಲೆ ಓಡಿಸ್ತಿದ್ದರು. ಬೆಂಕಿ ಮೇಲೆ ನುಗ್ಗೋಕ್ಕೆ ಹೆದರಿಕೆ ಆಗಿ ನನ್ನ ಮೇಲೆ ಅದು ನುಗ್ಗೋದೇ?''

''ಯಾಕೆ, ಅದಕ್ಕೆ ನಿನ್ನ ಪರಿಚಯ ಇತ್ತೇನು?''

''....ಸರಿ, ಬಟ್ಟೆಬರೆ ಎಲ್ಲಾ ಹರೀತು, ಲೈಟ್ ಆಗಿ ನನ್ನ ಪಕ್ಕೇಗೂ ಕೊಂಬಿನಿಂದ ತಿವೀತು, ಎಂಥಾ ನೋವಾಯ್ತು ಅಂತೀ ಮಾವ. ನೀನು ಯಾವಾಗಲಾದರೂ ಎತ್ತಿನ ಕೈಲೋ, ಎಮ್ಮೆ ಕೈಲೋ ತಿವಿಸಿಕೊಂಡಿದ್ದೀಯಾ ಮಾವ?''

''ಇರಲಿ, ಯುಗಾದೀಲಿ ಏನು ಮಾಡಿದೆ?''




''ಪಕ್ಕದ ಮನೆ ಬಂಗಾರಪ್ಪನವರು ಊಟಕ್ಕೆ ಕರೆದಿದ್ರು. ಊಟಕ್ಕೆ ಮುಂಚೆ ಬೇವು ಬೆಲ್ಲ ಕೊಡ್ತೀನಿ ಅಂತ ಮನೆಯಾಕೆ ಒಂದು ಮರದ ತುಂಬಾ ಬೇವಿನ ಸೊಪ್ಪು ತಂದ್ರು. ಬೆಲ್ಲಾ ಎಲ್ಲಿ ಅಂದೆ. ಬೆಳಗ್ಗಿನಿಂದ ನಮ್ಮ ಸತೀಶ (ಅವರ ಮಗ!) ಹುಡುಕಿ ಹುಡುಕಿ ಬೆಲ್ಲಾ ಎಲ್ಲಾ ತಿಂದ್ಹಾಕಿದ್ದಾನೆ. ಶಾಸ್ತ್ರಕ್ಕೆ ತಾನೆ? ಬರೀ ಬೇವೇ ತಿನ್ನಿ ಪರವಾಗಿಲ್ಲ ಅಂದ್ರು. ಸಂಕೋಚ ಪಟ್ಕೋಬೇಡ ಅಂತ ಬೇರೆ ಹೇಳಿದ್ರು. ಅವರ ಬಲವಂತಕ್ಕೆ ಹೆಚ್ಚು ಕಮ್ಮಿ ಒಂದು ಮರದ ಟೊಂಗೇಲಿ ಇರೋ ಎಲೆಗಳೆಲ್ಲಾ ನಾನೊಬ್ಬನೇ ತಿನ್ಬೇಕಾಯ್ತು ಮಾವ!''

''ಏಪ್ರಿಲ್‌ನಲ್ಲಿ ಹೇಗಿದ್ಯಪ್ಪಾ?''

''6ನೇ ತಾರೀಖು ಗುಡ್ ಫ್ರೈಡೇ ಇತ್ತಲ್ಲ ಮಾವ? ಅದು God, Friday! ಆಗ್ಹೋಯ್ತು!''

''ಯಾಕೆ?''

''ಮನೆ ಹೊರಗೆ ಅವತ್ತು ಬಂದ್ನಲ್ಲ ಮಾವ, ಪಕ್ಕದ ಮನೆ ನಾಯಿ ಹೆಸರು Friday ಅಂತ. ಅದ್ಯೇನು ಆಯ್ತೋ ಏನೋ, ಗುರ್! ಅಂತ ಅಟ್ಟಿಸ್ಕೊಂಡು ಬಂದು, ನನ್ನ ಕಾಲಿಗೆ ಕಚ್ಚೇ ಬಿಡ್ತು. God, Friday! ಅಂತ ಬಡ್ಕೊಂಡೆ. ಆದರ ಹಲ್ಲುಗಳು ಪೂರ್ತಿ ನನ್ನ ಕಾಲಿನ ಒಳಗೆ ಹೊಕ್ಕ ಮೇಲೇ, ಮಾಲೀಕ ಬಂದು ವೆರಿ ಸಾರಿ ಅಂತ ನಾಯೀನ ಎಳ್ಕೊಂಡು ಹೋಗಿದ್ದು.''

''ನಾಯಿ ಹುಷಾರಾಗಿದ್ಯೇನಪ್ಪ?''

''ಅದಕ್ಕೇನು ಬರ ಮಾವ? ನನಗೇ–ಮೇ, ಜೂನ್, ಎರಡು ತಿಂಗಳುಗಳು ಬೇಕಾಯ್ತು ನಾರ್ಮಲ್ ಆಗೋಕೆ.''

''ಅಂದ್ಹಾಗೆ ಜುಲೈನಲ್ಲಿ ವರಮಹಾಲಕ್ಷ್ಮೀ ಹಬ್ಬ ಇತ್ತಲ್ಲವೆ?''

''ಹ್ಞೂ, ಪಾಪ ಇವಳಂತೂ ಲಕ್ಷ್ಮೀ ವ್ರತವನ್ನು ಎಷ್ಟು ಶ್ರದ್ಧೆಯಿಂದ ಮಾಡಿದಳು ಅಂತೀ. ಅಮ್ಮಾ ಲಕ್ಷ್ಮೀ, ನಮ್ಮ ಮನೆ ತುಂಬಿಸಮ್ಮಾ....'' ಅಂತ ಅಷ್ಟೊಂದು ಬೇಡ್ಕೊಂಡ್ಳು.

''ಯಾಕೆ.....?''

''ಮರೆತು ಹೋಯ್ತಾ ಮಾವ? ಅವತ್ತೇ ಅಲ್ಲವೆ ದೇವಸ್ಥಾನದಲ್ಲಿ ನನ್ನ ಪರ್ಸನ್ನ ಯಾರೋ ಪಿಕ್ ಪಾಕೆಟ್ ಮಾಡಿ ಎರಡು ಸಾವಿರ ರೂಪಾಯಿ ಕಳ್ಕೊಂಡು ರಾತ್ರಿ ನಿನ್ನ ಹತ್ತಿರ ಸಾಲ ಮಾಡಲಿಲ್ಲವೆ?''

''ಹ್ಹೂ! ಹ್ಹೂ!! ಅಂದ್ಹಾಗೆ ಆ ಸಾಲಾನ ಬೇಗ ತೀರುಸ್ಬುಡು ಕೋದಂಡು. ಬೈದವೇ, ಆಗಸ್ಟ್‌ನಲ್ಲಿ ಸ್ವಾತಂತ್ರ್ಯ ದಿನಾಚರಣೆ ಹೇಗಿತ್ತಪ್ಪಾ?''

''ಧ್ವಜಾರೋಹಣೆ ತನಕ ಭರ್ಜರಿಯಾಗಿ ನಡೀತು. ಆಮೇಲೇ ಕಷ್ಟ ಬಂದಿದ್ದು. ನಮ್ಮ ಅಸೋಸಿಯೇಶನ್‌ಗೆ ನಾನೇ ಸೆಕ್ರೆಟರಿ ಅಲ್ವಾ? ಬೆಳಿಗ್ಗೇನೇ ಕಂಬ ನಿಲ್ಲಿಸಿ, ಮೇಲಕ್ಕೆ ಹತ್ತಿ, ಕೊಕ್ಕೆ ಒಳಗೆ ತೂರಿಸಿ, ಬಾವುಟದಲ್ಲಿ ಹೂವಿಟ್ಟು ಹಗ್ಗ ಸುತ್ತಿ ಗಂಟು ಹಾಕಿದ್ದೆ. ಚೀಫ್ ಗೆಸ್ಟ್ ಗಂಟು ಬಿಚ್ಚಿ ಹಗ್ಗ ಎಳೆದಾಗ ಬಾವುಟ ಏನೋ ಮೇಲಕ್ಕೆ ಹಾರೋಕ್ಕೆ ಶುರುಮಾಡ್ತು. ಆದರೆ ಇದು ಬಾವುಟದ ತಪ್ಪಲ್ಲ. ಬಿಡು ಮಾವ.''

''ಯಾಕೆ, ಕಂಬ ಉರುಳಿಕೊಂಡ್ತೇನು?''

''ಇಲ್ಲ, ಬಾವುಟ ಪಟ ಪಟಾ ಅಂತ ಹಾರ್ತಾನೇ ಎಲ್ಲಾರೂ ಚಪ್ಪಾಳೆ ತಟ್ಟಿದ್ರು. ಐದು ಸೆಕೆಂಡುಗಳಾಗಿಲ್ಲ; ಪಟಾ ಪಟಾ ಅಂತ ನನ್ನ ಬೆನ್ನು ಮೇಲೆ, ತಲೆ ಮೇಲೇನೂ ಗುಮ್ಮಿದ್ರು. ಏನಾಗಿತ್ತು ಅಂದ್ರೆ, ಬೆಳಗ್ಗೆ ಬಾವುಟ ಹಗ್ಗಕ್ಕೆ ತೂರಿಸಿದಾಗ ಅದನ್ನ ಉಲ್ಟಾ ಪಲ್ಟಾ ತೂರ್‍ಸಿದ್ದೆ. ಈಗ ಹಸಿರು ಮೇಲಿತ್ತು, ಕೇಸರಿ ಕೆಳಗಿತ್ತು!''

''ಸಧ್ಯ ಚಕ್ರ ಮಧ್ಯದಲ್ಲೇ ಇತ್ತಲ್ಲಾ! ಅಂದ್ಹಾಗೆ ಈ ವರ್ಷ ಗಣೇಶನ ಹಬ್ಬ ಹೇಗಾಯ್ತು ಕೋದಂಡು?''

''ಓ್ಹ! ಆಗಲೇ ಸೆಪ್ಟೆಂಬರ್‌ಗೆ ಬಂದ್ಬಿಟ್ಯಾ ಮಾವ? ತುಂಬಾ ಚೆನ್ನಾಗಿ ನಡೀತು. ಈ ಸಲ ಸ್ವಲ್ಪ ದೊಡ್ಡ ಸೈಜ್ ಗಣೇಶಾನೇ ತಂದಿದ್ದೆ. ಅವತ್ತು ರಾತ್ರಿ ಸ್ಯಾಂಕಿಟ್ಯಾಂಕ್‌ಗೆ ಮೂರ್ತಿನ ವಿಸರ್ಜನೆ ಮಾಡೋಕ್ಕೆ ನಾನು ನನ್ನ ಹೆಂಡ್ತಿ ಹೋಗಿದ್ವಿ, ಅಲ್ಲಿ ಜನರೋ ಜನ. ನನ್ನ ಹೆಂಡ್ತಿ ಹುಷಾರು ರೀ, ಹುಷಾರು ರೀ ಅಂತ ಹೇಳ್ತಾನೇ ಇದ್ಳು.''

''ಯಾಕೆ ಕೈಯಿಂದ ಗಣೇಶ ಸ್ಲಿಪ್ ಆಗೋಯ್ತೇನು?''

''ಇಲ್ಲ ಮಾವ, ಗಣೇಶ ಮೆಟ್ಟಲು ಮೇಲೆ ಭದ್ರವಾಗಿ ಕೂತ್ತಿತ್ತು. ಸ್ಲಿಪ್ ಆದೋವ್ನು ನಾನು. ನಾನು ಮೂರು ಸಲ ಗುಳುಂ ಆದೆ. ಅದನ್ನ ನೋಡಿ ಅಲ್ಲಿದ್ದವರೆಲ್ಲಾ ಗಣೇಶ ಬಂದ ಕಾಯಿ ಕಡುಬು ತಿಂದ..... ಅಂತ ಚಪ್ಪಾಳೆ ತಟ್ಟೋಕೆ ಶುರುಮಾಡಿದ್ರು. ಇನ್ನೇನು ನಾನು ಕೊನೆ ಸಲಕ್ಕೆ

ಗುಡ್ ಬೈ ಅನ್ನೋದರಲ್ಲಿ, ಯಾರೋ ಪುಣ್ಯಾತ್ಮರು ನೀರಿಗೆ ಧುಮುಕಿ ನನ್ನನ್ನು ಹೊರಗೆಳೆದರು.''

''ಮುಂದಿನ ವರ್ಷ ಒಂದು ಚಿಕ್ಕ ಬಕೆಟ್‌ನಲ್ಲಿ ವಿಸರ್ಜನೆ ಮಾಡು. ಅದರಲ್ಲಿ ಬಿದ್ದರೂ ನೀನು ಸಾಯಲ್ಲ.''

''ಗುಡ್ ಐಡಿಯಾ ಮಾವ, ಅಂದ್ಹಾಗೆ ಅಕ್ಟೋಬರ್‌ನಲ್ಲಿ ನಾನು ಮೂರುದಿವಸ ICU ನಲ್ಲಿದ್ದೆ. ನೀನೂ ನೋಡೋಕ್ಕೆ ಬಂದಿದ್ಯಲ್ಲ ಮಾವ!''

''ಹ್ಞೂಂ, ಹ್ಞೂಂ. ಅಲ್ಲ ಕಣೋ ಕೋದಂಡು, ಗಾಂಧಿ ಜಯಂತಿ ದಿವಸ ನಿನಗೆ ಹಾಗೆ ಆಗಬಾರದಿತ್ತು ಕಣಯ್ಯ.''

''ಏನು ಮಾಡೋದು ಮಾವ, ಆ ಫಂಕ್ಷನ್ನೂ ನಾನೇ ಏರ್ಪಾಡು ಮಾಡಿದ್ದು. ಆದರೆ ಅವತ್ತು ಯಾವುದೋ ಘಳಿಗೇಲಿ ಮಹಾತ್ಮಗಾಂಧಿ ಅನ್ನೋಕಡೆ ಸೋನಿಯಾ ಗಾಂಧಿ ಅಂದ್ಬುಟ್ಟೆ. ಅದಕ್ಕೆ ಜನ ನನ್ನನ್ನು ಹಾಗೆ ಹೊಡೀಬೇಕೆ?''

''ನಿನ್ನ ಹಣೇ ಬರಹಾನೇ ಅಷ್ಟು. ನವರಾತ್ರಿ ಹೇಗಾಯ್ತಪ್ಪ?''

''ಆಯುಧ ಪೂಜೆ ದಿನಾನೇ ನನ್ನ ಸ್ಕೂಟರ್ ಕಳೆದು ಹೋಗಿದ್ದು. ಬಾಳೆ ಕಂಬಗಳನ್ನು ಕಟ್ಟಿ ಮನೆ ಮುಂದೆ ನಿಲ್ಲಿಸಿದ್ದೆ. ಯಾವನೋ ಬಂದು ಬಾಳೆಕಂಬ ಮಾರ್ತೀರಾ ಸಾರ್ ಮಾರ್ಕೆಟ್‌ನಲ್ಲಿ ಬಹಳ ಬೆಲೆ ಆಗಿದೆ ಅಂತ ಅಂದ. ನಾನು ಬಾಳೆ ಕಂಬದ ವ್ಯಾಪಾರಿ ಅಲ್ಲ, ಹೊರಡು ಇಲ್ಲಿಂದ ಅಂತ ಬೈದು ಕಳಿಸಿದೆ. ಕೋಪಕ್ಕೆ ಅಂತ ಕಾಣುತ್ತೆ, ಎರಡು ಬಾಳೆಕಂಬಗಳನ್ನೂ ಸ್ಕೂಟರ್ ಜೊತೆಗೇ ಹೊಡ್ಕೊಂಡು ಹೊರಟೋದ ಮಾವ, ಇದುವರೆಗೂ ಪೋಲಿಸ್ ಕೈಗೆ ಸಿಕ್ಕಿಲ್ಲ.''

''ಬಕ್ರಿದ್ ದಿವಸ ರಜ ಇತ್ತಲ್ಲ, ಹೇಗೆ ಕಳೆದೆ?''

''ಅಯ್ಯೋ ಅವತ್ತು ಟಿ.ವಿ. ಟವರ್ ಮುಂದೆ ಹೋಗ್ತಿದ್ದೆ ಮಾವ, ಹಬ್ಬಕ್ಕೆ ಕುರಿಗಳನ್ನು ಮಾರ್‍ತಾ ಇದ್ರು. ನನ್ನನ್ನು ನೋಡಿ ಯಾವನೋ ಒಬ್ಬ ಇನ್ನೊಂದು ಕುರಿ ಬಂತು ನೋಡು ಅಂತ ಅನ್ನೋದೇ! ಮನೆಗೆ ಬಂದು ಸುಮ್ನೆ ಕೂತು ಬಿಟ್ಟೆ!''

''ನೀನು ಕನ್ನಡ ಭಕ್ತ....''

''ಗೊತ್ತು ಗೊತ್ತು ಮಾವ, ಕನ್ನಡ ರಾಜ್ಯೋತ್ಸವ ಹೇಗಾಯ್ತು ಅಂತ ಕೇಳ್ತಿದೀ ಅಲ್ವೆ? ಅವತ್ತು ನಮ್ಮ ಅಸೋಸಿಯೇಷನ್ ಕಾರ್ಯಕ್ರಮ ಇತ್ತು. ಮೊದಲು ಕನ್ನಡ ತಾಯಿಗೆ ಎಣ್ಣೇದೀಪ ಬೆಳಗಿ ಆಮೇಲೆ ನಮ್ಮವರೇ ಹಚ್ಚೇವು ಕನ್ನಡದ ದೀಪ ಹಾಡಿದ್ರು. ಆಗಲೇ ದೀಪದ ಪಕ್ಕ ನಿಂತಿದ್ದ ನನ್ನ ಶರ್ಟ್‌ಗೆ ಬೆಂಕಿ ತಗಲಿದ್ದು. ಪಾಪ ಚೀಫ್ ಗೆಸ್ಟ್ ತಮ್ಮ ಮಿನರಲ್ ಬಾಟಲ್ ಓಪನ್‌ಮಾಡಿ ನನ್ನ ಮೇಲೆ ಬೆಂಕಿ ಆರಿಸಿದಕ್ಕೆ ಎಲ್ಲಾ ಸರಿಹೋಯಿತು.''

''ದೀಪಾವಳಿ......?''

''ನಮ್ಮ ಪಕ್ಕದ ಮನೇಲಿರೋರು ಇಸ್ರೋಲಿ ಇಂಜಿನಿಯರ್ ಅಂತೆ. ಅವರು ಮೇಲಕ್ಕೆ ಹಾರಿಸಿದ ರಾಕೆಟ್ ಪಟಾಕಿ, ನನ್ನನ್ನೇ ಹುಡುಕಿಕೊಂಡು ಬಂದು, ನನ್ನ ಪ್ಯಾಂಟ್‌ನಲ್ಲಿ ತೂತು

ಮಾಡ್ತು. ದೀಪಾವಳಿಗೆ ಅಂತಾನೇ ನನ್ನ ಮಾವನವರು ಆ ಪ್ಯಾಂಟ್ ಕೊಡಿಸಿದ್ದರು. ಹಾಕ್ಕೊಳ್ಳೋ ಭಾಗ್ಯ ನನಗಿಲ್ಲ ಅಷ್ಟೇ!''

ಈ ಘಟ್ಟಕ್ಕೆ ಬಂದಾಗ ನನಗೆ ಯಾಕೋ ಕೋದಂಡು ಮೇಲೆ ತುಂಬಾ ಅನುಕಂಪದ ಭಾವನೆ ಉಕ್ಕಿ ಬಂತು. ಎಷ್ಟಾದರೂ ನನ್ನ ಸೋದರ ಅಳಿಯ! ''2012ರ ಡಿಸೆಂಬರ್ ಮುಗಿಯೋದಕ್ಕೆ ಸ್ವಲ್ಪ ದಿನಗಳೇ ಇವೆ ಕೋದಂಡು, ಅಲ್ಲಿ ತನಕವಾದರೂ ಸ್ವಲ್ಪ ಹುಷಾರಾಗಿರಪ್ಪಾ'' ಅಂತ ಅಂದೆ.

''ಹ್ಞೂಂ ಮಾವ, ಆದರೆ ನನಗೆ ಒಂದೇ ಒಂದು ಹೆದರಿಕೆ ಅಂತ ರಾಗ ಎಳ್ದ.''

''ಏನಪ್ಪಾ .....?''

''ಕಾವೇರಿ ಥಿಯೇಟರ್ ಮುಂದೆ ಇನ್ನೊಂದ್ಸಲ ಅದೇ ಸ್ಮಾರ್ಟ್ ಹುಡುಗಿ ಹ್ಯಾಪಿ ನ್ಯೂ ಈಯರ್ ಅಂತ 2013ಕ್ಕೆ ವಿಶ್ ಮಾಡಿದ್ರೆ ಏನು ಮಾಡ್ಬೇಕು ಮಾವ? ಈಗ ಸ್ಕೂಟರ್ ಬೇರೆ ಹೊಸದಾಗಿ ತೊಗೊಂಡಿದೀನಿ'' ಅಂತ ಕೇಳಿದ.

''ಒಂದು ಕೆಲಸ ಮಾಡು. ಈ ಸಲ ಕೈ ಬಿಟ್ಟು ವಿಶ್ ಮಾಡೋಕ್ಕೆ ಹೋಗ್ಬೇಡ, ಕಾಲು ಎತ್ತಿ ಮಾಡು, ಅಷ್ಟೇ'' ಅಂದೆ.

''ಗುಡ್ ಐಡಿಯಾ ಮಾವ'' ಅಂತ ನಕ್ಕಿದ.

ಕೋದಂಡು ಹೆಂಡ್ತಿ ತಂದಿಟ್ಟಿದ ಇನ್ನೊಂದು ಪ್ಲೇಟ್ ಕೋಡಬಳೇನ ತಿಂದು, ಕಾಫಿ ಇನ್ನೂ ಸ್ವಲ್ಪ ಹೀರಿ, ಸ್ವಲ್ಪ ದಿನಗಳಿದ್ದರೂ ಅಡ್ವಾನ್ಸ್ ಆಗೇ, 2012ಕ್ಕೆ ವಿದಾಯ ಹೇಳಿದ್ವಿ!



# ಅನುಕರಣಾ ಪ್ರಿಯರು

● ಎಚ್. ಶಾಂತರಾಜ ಐತಾಳ್

**ಮು**ಲ್ಲಾ ನಾಸಿರುದ್ದೀನರು ಅಸಾಧಾರಣ ಬುದ್ಧಿಶಕ್ತಿಯನ್ನು ಹೊಂದಿದ್ದವರೂ, ಧರ್ಮಬೀರುಗಳೂ ಆಗಿದ್ದರು. ರಂಜಾನ್ ಮಾಸದುದ್ದಕ್ಕೂ ಉಪವಾಸ ಕೂತು, ಧರ್ಮಾಚರಣೆ ಮಾಡುತ್ತಿದ್ದರು. ಆದರೆ ಆಗಿನ ಕಾಲದಲ್ಲಿ ಕ್ಯಾಲೆಂಡರ್, ಪಂಚಾಂಗ ಯಾವುದೂ ಇರಲಿಲ್ಲ. ಮಾಸದ ಮೂವತ್ತು ದಿನಗಳ ಲೆಕ್ಕವಿಡೋದು ಹೇಗೆ ಎಂಬ ಆತಂಕ ಅವರನ್ನು ಸಹಜವಾಗಿ ಬಾಧಿಸಿರಬೇಕು. ಅದಕ್ಕಾಗಿ ಅವರೇ ಕಂಡುಕೊಂಡ ಪರಿಹಾರ ಮಾರ್ಗವೆಂದರೆ ಉಪವಾಸದ ಒಂದೊಂದು ದಿನ ಕಳೆದಾಗಲೂ ಒಂದು ಮಡಿಕೆಯೊಳಗೆ ಒಂದೊಂದು ಸಣ್ಣ ಕಲ್ಲಿನ ಹರಳನ್ನು ಹಾಕುವುದು. ಕಲ್ಲಿನ ಸಂಖ್ಯೆ ನೋಡಿ ಬಿಟ್ಟರೆ ದಿನಗಳ ಲೆಕ್ಕ ಸಿಕ್ಕುತ್ತಿತ್ತು. ಒಮ್ಮೆ ರಂಜಾನ್ ಮಾಸದಲ್ಲಿ ಅವರಲ್ಲಿಗೆ ಓರ್ವ ಅತಿಥಿಯ ಆಗಮನವಾಯಿತು. ಅದೂ ಇದೂ ಮಾತಾಡ್ತಾ ಅತಿಥಿಗಳು ಕೇಳಿದರು. 'ಮುಲ್ಲಾರವರೇ ಈ ಪವಿತ್ರ ಮಾಸದಲ್ಲಿ ಈಗ ಎಷ್ಟು ಉಪವಾಸಗಳ ದಿನಗಳು ಮುಗಿದಿವೆ?' ಎಂದು. ಅದಕ್ಕೆ ಮುಲ್ಲಾ – 'ನಿಲ್ಲಿ, ಈಗ ಹೇಳುತ್ತೇನೆ' ಎನ್ನುತ್ತಾ ತಾನು ಮಡಿಕೆಯನ್ನಿಟ್ಟಿದ್ದ ಕೋಣೆಗೆ ಹೋಗಿ ಸ್ವಲ್ಪ ಸಮಯದ ಬಳಿಕ ಬಂದು ಹೇಳಿದರು – 'ಬಹುಶಃ ಸುಮಾರು ಎಪ್ಪತ್ತು ದಿನಗಳು ಕಳೆದಿರಬೇಕು' ಎಂದು ಆಶ್ಚರ್ಯ ವ್ಯಕ್ತಪಡಿಸಿದ ಅತಿಥಿ ಕೇಳಿದರಂತೆ – 'ತಿಂಗಳಿಗಿರೋದೇ ಮೂವತ್ತು ದಿನ – ಅದು ಹೇಗೆ ನಿಮ್ಮ ಲೆಕ್ಕದಲ್ಲಿ ಎಪ್ಪತ್ತಾಯಿತು?' ಅಂತ.

'ಹೌದಲ್ಲ?' ಅಂದರಂತೆ ಮುಲ್ಲ. ಮನೆ ಮಂದಿಯನ್ನೆಲ್ಲ ವಿಚಾರಿಸಿದಾಗ ತಿಳಿದಿದ್ದೇನೆಂದರೆ ಮನೆಯ ಯಜಮಾನ ಒಂದೊಂದೇ ಕಲ್ಲುಗಳನ್ನು ಮಡಿಕೆಯೊಳಗೆ ಹಾಕುವುದನ್ನು ನೋಡಿದ ಅವರ ಬೀಬಿ ಸಹ ಇದೊಂದು ಧಾರ್ಮಿಕ ಕ್ರಮವಿರಬೇಕೆಂದುಕೊಂಡು, ತಾನೂ ಪ್ರತಿದಿನ ಒಂದೊಂದು ಕಲ್ಲು ಹಾಕುತ್ತಿದ್ದರಂತೆ. ಹಾಗೆಯೇ ಅವರ ಮಗ ಮತ್ತು ಅವರ ಸೇವಕ ಕೂಡಾ!

ಈ ರೀತಿ ಇನ್ನೊಬ್ಬರನ್ನು ಅನುಕರಣೆ ಮಾಡಿ ಫಜೀತಿ ಮಾಡಿಕೊಳ್ಳೋದರಲ್ಲಿ ನಾವೇನೂ ಹಿಂದಿಲ್ಲ. ಏಕೆಂದರೆ ಕುರಿಗಳು ಸಾರ್ ನಾವು ಕುರಿಗಳು!

ಪಚ್ಚಪ್ಪನ್ ನಮ್ಮೂರಿನ ಖಾಸಗಿ ಬಸ್ ಒಂದರ ಚಾಲಕ. ಮೂಲತಃ ಸೇಲಂ ಕಡೆಯ ತಮಿಳು ಭಾಷಿಗ. ಆತನ ಬಸ್‌ನಲ್ಲಿ ನಮ್ಮಿಂದ ಹಳ್ಳಿ ಮಾರ್ಗದಲ್ಲಿ ಹೋಗ್ತಾ ಇರುವಾಗ ನಾನು ಗಮನಿಸಿದ್ದೇನೆಂದರೆ ಬಸ್ಸಿನ ಟಾಪ್‌ಗೆ ತಾಗುವಷ್ಟು ಯಾವುದಾದರೂ ಮರದ ಗೆಲ್ಲು ಬಾಗಿದ್ದರೆ ಅದರಡಿಯಲ್ಲಿ ಬಸ್ ಚಲಾಯಿಸುವಾಗ ಪಚ್ಚಪ್ಪನ್ ತನ್ನ ತಲೆಯನ್ನು ಪೂರ್ತಿ ಬಗ್ಗಿಸುತ್ತಿದ್ದ. ಇದನ್ನು ಹಲವು ಸಲ ನೋಡಿದ ನಾನು ಒಮ್ಮೆ ಕುತೂಹಲ ತಾಳಲಾರದೆ ಕೇಳಿಯೇ ಬಿಟ್ಟೆ 'ನಿಮ್ಮ ತಲೆಗೇನೂ ಗೆಲ್ಲು ತಾಗುವುದಿಲ್ಲವಲ್ಲ, ಆದರೂ ನೀವು ತಲೆತಗ್ಗಿಸುವುದೇಕೆ' ಎಂದು.

ಅದಕ್ಕೆ ಪಚ್ಚಪ್ಪನ್ ಮೊದಲಿಗೆ 'ಇಲ್ಲ – ನಾನು ಹಾಗೆ ಮಾಡ್ತೇನಾ' ಅಂತ್ಲೇ ಕೇಳಿ ಕೊನೆಗೆ 'ಓ, ಹೋ, ಗೊತ್ತಾಯ್ತು ಬಿಡಿ – ನಾನು ಬಸ್ ಕಂಪೆನಿಗೆ ಸೇರುವ ಮೊದಲು ಆನೆ ಮಾವುತನ ಕೆಲಸ ಮಾಡ್ತಿದ್ದೆ. ಅದರ ಮೇಲೆ ಕೂತು ಸವಾರಿ ಮಾಡುವಾಗ ಮರದ ಗೆಲ್ಲು ಬಂತೂ ಅಂದ್ರೆ ಸಾಕು – ತಲೆತಗ್ಗಿಸಬೇಕಲ್ಲಾ. ಆ ಅಭ್ಯಾಸವೇ ಇರಬಹುದು' – ಅಂದರು. ಬರೋಬ್ಬರಿ – ಅಂದ್ಕೊಂಡೆ ನಾನು!

ಪಚ್ಚಪ್ಪನ್ ಮಗ ಪೆರುಮಾಳ್ ಒಳ್ಳೆ ಚೂಟಿ ಹುಡುಗನಾಗಿದ್ದ. ಫ್ರೀಶಿಪ್, ಸ್ಕಾಲರ್‌ಶಿಪ್ ಅಂತ ಪಡೆದು, ಒಳ್ಳೆ ಮಾರ್ಕನ್ನೂ ಗಿಟ್ಟಿಸಿ, ಇಂಜಿನಿಯರಿಂಗ್ ಕಾಲೇಜಿನಲ್ಲಿ ಓದುತ್ತಿದ್ದ. ಆದರೆ ಪಚ್ಚಪ್ಪನ್ ಆಗಲಿ ಆತನ ಮಡದಿ ಮಾರಿಮುತ್ತುವೇ ಆಗಲಿ – ಪೆರುಮಾಳ್ ಇನ್ನೂ ಬುದ್ಧಿವಂತನಾಗಬೇಕು – ಬೇರೆ ಹುಡುಗರನ್ನು ನೋಡಿ ಕಲಿಬೇಕು – ಎಂಬ ಉಪದೇಶವನ್ನು ಕೊಟ್ಟು ಕೊಟ್ಟು ಆತನ ತಲೆ ಚಿಟ್ಟು ಹಿಡಿಸುತ್ತಿದ್ದರು.

ಪೆರುಮಾಳ್‌ನ ಮೂರನೇ ಸೆಮಿಸ್ಟರ್ ಪರೀಕ್ಷೆ ಮುಗಿದು ಫಲಿತಾಂಶವೂ ಹೊರಬಿದ್ದಿತ್ತು. ರಾತ್ರಿ ಹೊತ್ತು ಬೃಹಸ್ಪತಿ ವಂಶದ ತನ್ನ ಹೆತ್ತವರಿಗೆ ಈ ವಿಷಯವನ್ನು ತಿಳಿಸಿ ನಾನು ಸೆಕೆಂಡ್ ರ್‍ಯಾಂಕ್ ಬಂದೆ ಅಪ್ಪಾ – ಅಂತಾನೆ. ತಕ್ಷಣ ಪಚ್ಚಪ್ಪನ್ – 'ಅದೇ ನಮ್ಮೂರಿನ ಪೆರಿಯಸ್ವಾಮಿಯ ಮಗಂದು ಏನಾಯ್ತೋ?' ಅಂತ ಕೇಳ್ತಾನೆ.

'ಅವನಿಗೆ ಆರ್ಡಿನೆನ್ಸ್ ಬಂತಪ್ಪಾ' ಅಂತಾನೆ ಮಗ.

'ನೀನೂ ಅಷ್ಟೇ – ಇನ್ನೂ ಸ್ವಲ್ಪ ಚೆನ್ನಾಗಿ ಓದಿದ್ದರೆ ನಿನಗೂ ಅದೇ ಬರ್ತಿತ್ತು ಹೌದಾ' – ಅಂತಾರೆ ಅಪ್ಪ ಅಮ್ಮ ಇಬ್ಬರೂ. ಪೆರುಮಾಳ್ ಅಂತೂ ಸುಸ್ತು!

ಈ ಅನುಕರಣೆ ಕಲೆಯನ್ನು ಅಳವಡಿಸಿಕೊಂಡವರು – ಹಿರಿಯಕ್ಕನನ್ನು ಅನುಕರಣೆ ಮಾಡುವ ತಂಗಿಯಂದಿರು. ಅಜ್ಜಿ ಹಾಗೆ ಬೆನ್ನು ಬಗ್ಗಿಸಿ ನಡೆಯುವ ಮೊಮ್ಮಕ್ಕಳು – ಶಾಲೆಯಲ್ಲಿ ಮೇಷ್ಟರು ಪಾಠ ಮುಗಿಸಿ ಹೋದ ತಕ್ಷಣ ಅವರ ಹಾಗೇ ಅಭಿನಯಿಸುವ 'ಏಕಲವ್ಯ'ರು, ರಾಜಕಾರಣಿಗಳ ಭಂಗಿಗಳನ್ನೂ, ಹಾವಭಾವಗಳನ್ನೂ ನಕಲು ಮಾಡುವ ಭಾವೀ ರಾಷ್ಟ್ರನಾಯಕರು – ಎಲ್ಲ ಕಡೆ ಕಾಣಲು ಸಿಕ್ತಾರೆ.

ನಮ್ಮ ಪಡುಕೆರೆ ನಾಗತ್ತೆ ಮೊಮ್ಮಗಳು ಶಮ್ಮಿಗೆ ಮುಂಬೈಯಲ್ಲಿ ಕೆಲಸ. ಅವಳ ಗಂಡ ರಾಹುಲ್ ಸಹ ಅಲ್ಲೇ ಸಾಫ್ಟ್‌ವೇರ್ ಇಂಜಿನಿಯರ್ – ಇಬ್ಬರ ಸಂಪಾದನೆಯಿಂದ ಮುಂಬೈಯಲ್ಲಿ ಫ್ಲಾಟ್ ಖರೀದಿ ಸುಲಭದಲ್ಲಿ ಆಯಿತು. ಈ ವಿವರಗಳನ್ನು ಕ್ಲಪ್ತ ಸಮಯದಲ್ಲಿ ಸಂಗ್ರಹಿಸುತ್ತಿದ್ದ ನಾಗತ್ತೆ, ಸೂಕ್ತ ಸಲಹೆ ಸೂಚನೆಗಳನ್ನು ನೀಡಲು ಮರೆಯುತ್ತಿರಲಿಲ್ಲ.

'ಹೊಸ ಮನೆ ಅಂದ್ಮೇಲೆ ಒಂದು ಗಣಹೋಮವನ್ನಾದ್ರೂ ಮಾಡ್ಸೋದಕ್ಕೆ ಶಮ್ಮಿಗೆ ಹೇಳು' ಅಂತ ಮಗನಿಗೆ ತಾಕೀತು ಮಾಡಿದ್ದರು ನಾಗತ್ತೆ. ಸಣ್ಣ ಪ್ರಾಯದಿಂದ್ಲೂ ಅಜ್ಜಿಯ ಅನುಕರಣೆ ಮಾಡೋದ್ರಲ್ಲಿ ಶಮ್ಮಿ ಎತ್ತಿದ ಕೈ. ಮನೆಯನ್ನೆಲ್ಲ ಗುಡಿಸೋ ಹಿಡಿಸೂಡಿ ಆಕೆಯ ಮಾತಲ್ಲಿ 'ಗುಡಿಸೂಡಿ' ಆಗಿತ್ತು. ಅಜ್ಜಿಯ ಹಾಗೇ ಬೆನ್ನು ಬಗ್ಗಿಸಿಕೊಂಡು ಅಂಗಳ ಗುಡಿಸಿ, ಕಸವನ್ನೆಲ್ಲ




ಚೆಲ್ಲಾಪಿಲ್ಲಿ ಮಾಡೋದು, ಹಾಳೆ ಕಡ್ಡಿ ತಗೊಂಡು ಊಟದ ಮನೆ ನೆಲದ ತುಂಬ ನೀರು ಚೆಲ್ಲಿ ಅದನ್ನು ಸಾರಿಸಲು ಹೋಗಿ, ಬೈಸಿಕೊಳ್ಳೋದು – ಅಂತೂ ತಾನೂ ಒಂದು ಮಿನಿ ಅಜ್ಜಿ ಅನ್ನೋ ಭಾವನೆ ಬರೋ ಹಾಗೆ ಮಾಡ್ತಿದ್ಲು.

ಈಗ ಅಜ್ಜಿಯ ಆದೇಶದ ಹಾಗೆ ಹೊಸ ಫ್ಲಾಟ್‌ನಲ್ಲಿ ಹೋಮ ಮಾಡಿಸಬೇಕಾದ್ರೆ ಅದಕ್ಕೆ ಏನೆಲ್ಲ ತಯಾರಿ ಆಗ್ಬೇಕು ಅಂತ ಯೋಚನೆ ಮಾಡೋ ಕೆಲಸ ಶಮ್ಮಿಯದಾಗಿತ್ತು. ಏಕೆಂದರೆ ರಾಹುಲ್ ಇದರಲ್ಲೆಲ್ಲ ಅನಾಸಕ್ತಿ ಯೋಗ ಪಾಲಿಸುವ ಗಿರಾಕಿ. ಫಳ ಫಳ ಮಿಂಚುವ ನೆಲಕ್ಕೆ ಹೋಲಿ ವಾಶ್ – ಶುದ್ಧೀಕರಣ ಎಲ್ಲಕ್ಕಿಂತ ಮೊದಲು ಆಗಬೇಕಿತ್ತು. ನಾಗತ್ತೆ ಅದನ್ನೇ ಮಾಡುತ್ತಿದ್ದರು. ಇದನ್ನು ನೆನಪಿಸಿಕೊಂಡವಳೇ ರಾಹುಲ್ ಹತ್ತಿರ – 'ನೀವು ಸಂಜೆ ಬರ್ತಾ ಮೋರ್‌ನಲ್ಲಿ ಸಿಗುತ್ತಲ್ಲಾ – ಡಾಬರ್‌ನವರ ಸೆಗಣಿ ಟ್ಯೂಬ್ – ಅದನ್ನು ತಗೊಂಡು ಬನ್ನಿ – ಮರೀಬೇಡಿ ಆಯ್ತಾ?' ಎಂದು ಹೇಳಿದಳು.

ಹೋಮಕ್ಕೆ ಇನ್ನೆರಡು ದಿನ ಇದೆ ಎನ್ನುವಾಗ ರಾಹುಲ್ ಕೆಂಪು ಬಣ್ಣದ ಟ್ಯೂಬ್ ಒಂದನ್ನು ಶಮ್ಮಿಗೆ ಕೊಟ್ಟ. ಸ್ಯಾಂಪಲ್ ನೋಡೋಣ ಅಂದ್ಕೊಂಡು ಮರುದಿನ ಬೆಳಿಗ್ಗೆಯೇ ಪ್ಲಾಸ್ಟಿಕ್‌ನ ಹಾಳೆಕಡ್ಡಿ ಒಂದನ್ನು ತಯಾರಿಸಿ, ಟ್ಯೂಬ್‌ನಿಂದ ಸ್ವಲ್ಪ ಸ್ವಲ್ಪ ಪೇಸ್ಟ್ ತೆಗೆದು ನೆಲಕ್ಕೆ ಹಚ್ಚುವಾಗ ಸೆಗಣಿಯ ಮಧುರ ವಾಸನೆಯೇ ಬರ್ತಾ ಇಲ್ಲ! ಅಜ್ಜಿಯ ಅನುಕರಣೆ ಮಾಡಿ ಬೆನ್ನು ಬಗ್ಗಿಸಿದಾಗ ಶಮ್ಮಿಗೆ ನೆಲದಿಂದ ಬಂದ ಘಾಟಿನಿಂದ ತಿಳಿಯಿತು. ಅದು ಸೆಗಣಿ ಪೇಸ್ಟ್ ಅಲ್ಲ, ಮಾವಿನಕಾಯಿ ಚಟ್ನಿಯ ಪೇಸ್ಟ್ ಅಂತ! ರಾಹುಲ್‌ಗೆ ವಿಷಯ ತಿಳಿದಾಗ ಆತ ಸಮಾಧಾನದಿಂದಲೇ ಹೇಳಿದ – 'ಡೋಂಟ್ ವರಿ ಶಮ್ಮಿ! ಟ್ಯೂಬಲ್ಲಿ ಉಳಿದದ್ದನ್ನು ಚಟ್ನಿಗೇ

ಉಪಯೋಗಿಸು. ಅಲ್ಲೇ ಇನ್ನೊಂದು ಕೌಂಟರಿನಲ್ಲಿ ಸೆಂಟ್ ಬಾಟ್ಲಿಯ ಹಾಗೇ ಇರುವ ಬಾಟ್ಲಿಯಲ್ಲಿ ಸೆಗಣಿ ಸ್ಪ್ರೇ ಕೂಡ ಇದೆ. ಆ ಬಾಟ್ಲಿ ಮೇಲೆ ಪುಣ್ಯಕೋಟಿಯ ಚಿತ್ರ ಕೂಡಾ ಇದೆ. ಅದನ್ನೇ ತಂದು ನೆಲಕ್ಕೆಲ್ಲ ಸ್ಪ್ರೇ ಮಾಡಿದರಾಯ್ತು. ಸುಲಭವೇ ಆಯ್ತಲ್ಲ' – ಎಂದು.

ಶಮ್ಮಿ ಒಮ್ಮೆ ಒಪ್ಪಿದ ಹಾಗೆ ನಟಿಸಿದ್ರೂ, ಮನಸ್ಸಿನಲ್ಲಿ ಮಾತ್ರ – 'ಅಜ್ಜಿ ಮಾಡಿದ ಹಾಗೆ ಸೆಗಣಿ ಬಳಿದು ಬಗ್ಗಿ ಇಡೀ ನೆಲವನ್ನು ಸಾರಿಸದೇ ಇದ್ದರೆ, ಅದು ಎಷ್ಟರ ಮಟ್ಟಿಗೆ ಸರಿ?' ಎಂಬ ಶಂಕೆ ಕಾಡುತ್ತಲೇ ಇತ್ತು. ಅಂತೂ ಪುರೋಹಿತರು ಬಂದು 'ಒಳ್ಳೇ ಸೆಗಣಿ ತಂದು ನೆಲವನ್ನೆಲ್ಲ ಶುದ್ಧ ಮಾಡಿದ್ದೀರಿ – ಬಹಳ ಒಳ್ಳೇದಾಯ್ತು' – ಎಂಬ ಶಹಬಾಸ್‌ಗಿರಿ ಕೊಟ್ಟಾಗ ಶಮ್ಮಿ ಅಜ್ಜಿಯ ಅನುಕರಣೆಗೊಂದು 'ಗುಡ್‌ಬೈ' ಹೇಳಿದಳು – ಸ್ಪ್ರೇ–ಗೆ ಥ್ಯಾಂಕ್ಸ್ ಹೇಳಿದಳು.

## ಹೇಗಿರಬಹುದು?

ಒಂದು ದಿನ ಒಬ್ಬ ಬಿಕ್ಷುಕ ನಾಣಿಗೆ ತಗಲಿಕೊಂಡ. ಏನು ಮಾಡಿದರೂ ಹೋಗಲಿಲ್ಲ. ಆದರೆ ನಾಣಿಯ ಬಳಿ ದುಡ್ಡಿರಲಿಲ್ಲ. ಅವನನ್ನು ಮಾತಿಗೆಳೆಯುವ ಉದ್ದೇಶದಿಂದ ಅವನನ್ನು ಕೇಳಿದ: ನಿನಗೆ ಹಣ ಕೊಟ್ಟರೆ ಅದನ್ನು ಹೇಗೆ ಬಳಸುವೆ?

ಒಂದು ಕಪ್ ಚಾ ಕುಡಿಯುವೆ ಎಂದ ಅವನು.

ಸಾರಿ. ನನ್ನ ಬಳಿ ಹಣ ಇಲ್ಲ. ಆದರೆ ನಿನಗೆ ಒಂದು ಸಿಗರೇಟ್ ಕೊಡಬಲ್ಲೆ ಎಂದು ನಾಣಿ ಜೇಬಿನಿಂದ ಪ್ಯಾಕ್ ತೆಗೆದು ಒಂದು ಸಿಗರೇಟ್ ಅವನ ಮುಂದೆ ಹಿಡಿದ.

ಸಿಗರೇಟ್ ಸೇದುವುದು ಆರೋಗ್ಯಕ್ಕೆ ಹಾನಿಕರ. ನಾನು ಸೇದುವುದಿಲ್ಲ ಎಂದ ಬಿಕ್ಷುಕ.

ಸರಿ ಹಾಗಿದ್ದರೆ ಒಂದು ಪೆಗ್ ವಿಸ್ಕಿ ಕೊಡಲಿ ಎಂದು ನಾಣಿ ಬಾಟಲ್ ತೆಗೆದ.

ಛೆ! ಹೆಂಡದಿಂದ ಲಿವರ್ ಹಾಳಾಗುತ್ತದೆ ಎಂದು ನಿಮಗೆ ತಿಳಿಯದೆ? ಎಂದು ಕೇಳಿದ.

ಹಾಗಿದ್ದರೆ ನನ್ನ ಜತೆ ರೇಸಿಗೆ ಬಾ. ಅಲ್ಲಿ ಒಂದಿಷ್ಟು ಹಣಕ್ಕೆ ವ್ಯವಸ್ಥೆ ಮಾಡುವೆ. ನೀನು ಗೆದ್ದರೆ ಇಡೀ ಮೊತ್ತ ನಿನಗೇ ಎಂದ ನಾಣಿ.

ಸಾರಿ ಸರ್. ರೇಸ್ ಚಟ ಒಳ್ಳೆಯದಲ್ಲ ಎಂದು ಬಿಕ್ಷುಕ.

ಆಗ ನಾಣಿ ತುಂಬಾ ಖುಷಿಯಿಂದ ಹಾಗಿದ್ದರೆ ನಮ್ಮ ಮನೆಗೆ ಹೋಗೋಣ ಬಾ ಎಂದು ಅವನನ್ನು ಕರೆದ.

ಮನೆಯಲ್ಲಾದರೂ ಇವನು ನನಗೆ ಏನಾದರೂ ಕೊಡಬಹುದು ಎಂದು ಭಿಕ್ಷುಕನಿಗೆ ಖುಷಿ ಆಯಿತು. ಆದರೂ ಏನೋ ಸಂದೇಹ. ನಿಮ್ಮ ಮನೆಗೆ ಏಕೆ ಬರಬೇಕು ನಾನು? ಎಂದು ಕೇಳಿದ.

ನಾಣಿ ಉತ್ತರಿಸಿದ: ಯಾವುದೇ ಕೆಟ್ಟ ಅಭ್ಯಾಸಗಳಿಲ್ಲದ ಒಬ್ಬ ಮನುಷ್ಯನ ಸ್ಥಿತಿ ಏನಾಗುತ್ತದೆ ಎಂದು ನನ್ನ ಹೆಂಡತಿಗೆ ತೋರಿಸಲು ಆಸೆ. ಅದಕ್ಕೇ....

# ಆಲಿಸು ರಾಧೆಯಾ ಕೊಳಲಿನಾ ಕರೆ

**ಕಮಲ** : ಹೇಗಿದ್ದೀರಿ ಶಾಂತ? ನೀವು ಮುಂಬೈನಿಂದ ಮೈಸೂರಿಗೆ ಬಂದು ಬಿಟ್ಟಿದ್ದೀರೆಂದು ತಿಳಿಯಿತು. ನಿಮ್ಮ ವಿಳಾಸ ತಿಳಿದುಕೊಂಡು, ಮನೆ ಹುಡುಕಿಕೊಂಡು ಬಂದೆ.

ಶಾಂತ : ಓಹೋ! ಕಮಲಾ, ಬನ್ನಿ ಬನ್ನಿ ಇದೇನು ಆಶ್ಚರ್ಯ. ನಾನೇ ಬಂದು ನಿಮ್ಮನ್ನ ನೋಡಬೇಕಿತ್ತು. ನೀವೇ ಅಡ್ರೆಸ್ ಹುಡುಕಿಕೊಂಡು ಬರುವ ಹಾಗಾಯಿತು. ನಾವಿಬ್ಬರೂ ಒಬ್ಬರನ್ನೊಬ್ಬರು ನೋಡಿ ಎಷ್ಟು ವರ್ಷಗಳಾಯಿತಲ್ಲವಾ? ಕುಳಿತುಕೊಳ್ಳಿ ಮಾತಾಡೋಣ.

ಕಮಲ : ಮನೆ ಚೆನ್ನಾಗಿದೆ. ನೀವು ಮುಂಬೈನಲ್ಲಿರುವಾಗಲೇ ಕಟ್ಟಿದ್ದಲ್ಲವಾ? ಇಲ್ಲಿಗೆ ಬಂದು ಎಷ್ಟು ದಿವಸಗಳಾಯಿತು? ಎಲ್ಲ ಅಡ್ಜೆಸ್ಟ್ ಆಯಿತಾ? ಹೊಸ ಜನ, ಹೊಸ ವಾತಾವರಣ?

ಶಾಂತ : ಹೂಂ. ನಿಧಾನವಾಗಿ ಆಗುತ್ತಿದೆ. ಅಲ್ಲಿಯ ವೇಗದ ಜೀವನಕ್ಕೂ, ಮೈಸೂರಿನ ವಿಶ್ರಾಂತಿ ಜೀವನಕ್ಕೂ ಅಜಗಜಾಂತರ ವ್ಯತ್ಯಾಸ. ಹಾಗೆಯೇ ಸರಿ ಹೊಂದಿಸಿಕೊಳ್ಳುತ್ತಿದ್ದೇವೆ. ಏನು ತೆಗೋತೀರ? ಹಾಲು? ಕಾಫಿ?

ಕಮಲ : ಯಾವುದಾದರೂ ಸರಿ, ಮುಂಚೆ ಮನೆ ನೋಡಬೇಕು? ಅದರಲ್ಲೂ ನಮ್ಮ territory ಆದ ದೇವರ ಕೋಣೆ, ಅಡುಗೆ ಕೋಣೆ ಮೊದಲು ನೋಡಬೇಕಮ್ಮ.

(ಅಡುಗೆ ಕೋಣೆಯಲ್ಲಿ ಎಲ್ಲ ನೋಡುತ್ತಿರುವಾಗ)

ಕಮಲ : ಅದೇನದು? ಅಡುಗೆ ಕಟ್ಟೆಯ ಪಕ್ಕದ shelf ನಲ್ಲಿ ಕೊಳಲಿನ ತರಹ ಏನೋ ಇಟ್ಟಿದ್ದೀರಲ್ಲ? ಏನದು?

ಶಾಂತ : ಕೊಳಲಿನ ತರಹ ಅಲ್ಲಮ್ಮಾ. ಕೊಳಲೇ ಅದು.


ಕಮಲ : ಹೌದಾ? ಕೊಳಲು ಯಾಕೆ ಅಡುಗೆ ಮನೆಯಲ್ಲಿ? ನೀವು ಕಲಿತಿರುವುದು ವೀಣೆ ಮತ್ತು ವೋಕಲ್ ಮ್ಯೂಸಿಕ್ ಅಲ್ಲವಾ? ಆಮೇಲೆ ಕೊಳಲು ಸಹಾ ಕಲಿತಿರೇನು?

ಶಾಂತ : ಸದ್ಯ, ಇಲ್ಲಮ್ಮಾ ಇಲ್ಲ. ಈ ಕೊಳಲು ಇಲ್ಲಿ ಏಕೆ ಇದೆ ಎನ್ನುವುದಕ್ಕೆ ಒಂದು ಪುಟ್ಟ ಕಥೆಯೇ ಇದೆ.

ಕಮಲ : ಕೊಳಲಿಗೆ ಕಥೆಯೇ? ಏನದು? ಯಾಕೋ ಕುತೂಹಲ ತಡೆಯಲು ಆಗುತ್ತಿಲ್ಲ.

ಶಾಂತ : ನೋಡು ಕಮಲಾ, ಮುಂಬೈನಲ್ಲಿ ನಮ್ಮದು 4 ಕೋಣೆಗಳ apartment ಅಡುಗೆ ಮನೆಯಿಂದ ಮಾತನಾಡಿದರೆ ಎಲ್ಲ ಕೋಣೆಗಳಿಗೂ ಕೇಳಿಸುತ್ತಿತ್ತು.

ಅದಲ್ಲದೇ ಒಂದು bed room ಮತ್ತು drawing room ಸಹಾ ಕಣ್ಣಳತೆಯಲ್ಲೇ ಇತ್ತು.



ಕಮಲ : ಸರಿ, ಅದಕ್ಕೂ ಈ ಕೊಳಲಿಗೂ ಏನು ಸಂಬಂಧ?

ಶಾಂತ : ಸ್ವಲ್ಪ ತಾಳಿ. ಇಲ್ಲಿ ಕೇಳೀ. ಮೈಸೂರಿಗೆ ಬಂದ ಮೇಲೆ ಆರಾಮದ ಜೀವನ. ನನ್ನ ಯಜಮಾನರು ತೋಟ, ಗಿಡ, ಗಂಟೆ ಎಂದು ಹೊರಗಡೆ ಗೇಟಿನ ಆಚೆ ಈಚೆ, ಮಹಡಿ ಮೇಲೆ ಓಡಾಡುತ್ತಲೇ ಇರುತ್ತಾರೆ. ಪ್ರತಿ ದಿನ ಬೆಳಿಗ್ಗೆ walking ಮುಗಿಸಿ ಬಂದ ನಂತರ ಸ್ನಾನ ಮಾಡಿ, ಆ ಕಾಫಿ ಲೋಟ ಹಿಡಿದುಕೊಂಡು ಇವರನ್ನು ಹುಡುಕುತ್ತಾ ಒಂದು ಕೋಣೆಯಿಂದ ಮತ್ತೊಂದು ಕೋಣೆಗೆ ಓಡಾಡಬೇಕು. ಬಂಗಲೆ ವಾಸ ನಮಗೆ ಹೊಸದು. ಇರುವ ಮೂರೂ ಕೋಣೆಗಳಲ್ಲಿ ಇವರು ಇಲ್ಲ ಎಂದಾದಾಗ ಕಿಟಿಕಿಯ ಬಳಿ ನಿಂತು ಕರೆಯುವುದು ವಾಡಿಕೆ ಆಯ್ತು. ಏಕೆಂದರೆ ಇವರು ಗಿಡ, ಬಳ್ಳಿ, ಹೂಗಳೊಡನೆ ಸಂವಾದ ಮಾಡುತ್ತಾ ನಡೆದಾಡುತ್ತಿದ್ದರು. ತೋಟ, ತೋಟಗಾರಿಕೆ ಎಂದರೆ ಇವರಿಗೆ ಅಪಾರ ಪ್ರೀತಿ.

ಕಮಲ : ಸರಿ, ಹಾಗಾದರೆ, ಪ್ರತಿದಿನಾ ಅವರಿಗೆ ತೋಟದಲ್ಲಿ ಕಾಫಿ supply ಆಗುತ್ತಿತ್ತೇನು?

ಶಾಂತ : ಅಯ್ಯೋ, ಸುಮ್ಮನಿರಮ್ಮ. ಕೆಲವು ಸಲ ಬಿಸಿಲು ಮಚ್ಚಿನ ಮೇಲೆ ಹೋಗಿ ಬಡಾವಣೆಯ ಅವಲೋಕನ ನಡೆಸುತ್ತಿದ್ದುದೂ ಉಂಟು. ನನ್ನ ಕೈಲಿದ್ದ ಕಾಫಿ ಆರಿಹೋಗುವ ಪರಿಸ್ಥಿತಿ ಉಂಟಾಗುತ್ತಿತ್ತು. ಆದ್ದರಿಂದ ಇದಕ್ಕೊಂದು ಉಪಾಯ ಕಂಡು ಹಿಡಿದೆ.

ಕಮಲ : ಏನದು?

ಶಾಂತ : ನಾನು ನಮ್ಮೆಜಮಾನ್ರ ಹತ್ತಿರ ಪ್ರೀತಿಯಿಂದ ಹೀಗೆ ಹೇಳಿದೆ, 'ನೋಡಿ, ಪ್ರತಿದಿನಾ ಕಾಫಿ ಲೋಟ ಹಿಡಿದು ನಿಮ್ಮನ್ನು ಹುಡುಕುವುದೇ ಆಗಿದೆ. ಆದ್ದರಿಂದ ಈ ದೇವರ ಗಂಟೆ ಇದೆಯಲ್ಲಾ ಇದನ್ನು ಕಾಫಿ ಮಾಡಿದ ತಕ್ಷಣ ಬಾರಿಸುತ್ತೇನೆ. ನೀವು ಎಲ್ಲಿದ್ದರೂ ಬಂದು, ನಿಮ್ಮ ಹಬೆಯಾಡುವ ಕಾಫಿಯನ್ನು ತೆಗೆದುಕೊಳ್ಳಬೇಕು. ಸರಿ ತಾನೇ?' ಎಂದೆ. ಅದಕ್ಕವರು ಸ್ವಲ್ಪ ಹೊತ್ತು ಯೋಚಿಸಿ ಅನಂತರ 'ಸರಿ' ಎಂದರು.

ಕಮಲ : ಮತ್ತೆ ಆಮೇಲೇನಾಯಿತಮ್ಮ? ಗಂಟೆಗೂ ಕೊಳಲಿಗೋ ಯಾವ ಸಂಬಂಧ?

ಶಾಂತ : ಸ್ವಲ್ಪ ತಾಳು, ಇಲ್ಲಿದೆ ಮುಖ್ಯವಾದ ವಿಷಯ. ಸ್ವಲ್ಪ ದಿವಸಗಳವರೆಗೆ ಈ ಒಪ್ಪಂದ ಸರಾಗವಾಗಿ ನೆರವೇರಿತು. ನಾನು ಗಂಟೆ ಬಾರಿಸುವುದೂ ಇವರು

ಕಾಫಿ ತೆಗೆದುಕೊಳ್ಳಲು ಬರುವುದೂ ಸಮರ್ಪಕವಾಗಿ ನಡೆಯಿತು.

ಕಮಲ : ಆದರೂ ನಿಮ್ಮದು ಅತಿಯಾಯಿತು. ಹೀಗೂ ಉಂಟೆ?

ಶಾಂತ : ಹೂಂ, ಇಷ್ಟೇ ಅಲ್ಲ, ಸ್ವಲ್ಪ ಧೈರ್ಯ ಬಂದ ನಾನು ಅವರಲ್ಲಿ ವಿನಂತಿಸಿಕೊಂಡೆ: 'ನೋಡಿ ನಾನು ಕಾಫಿ ಲೋಟಕ್ಕೆ ನಿಮ್ಮನ್ನು ಕರೆಯಲು ನುಡಿಸುವ ಘಂಟಾನಾದಕ್ಕಿಂತ ವ್ಯತ್ಯಾಸವಾಗಿ, ಬೇರೆ ರೀತಿಯಲ್ಲಿ ಎಡೆಬಿಡದೆ ಗಂಟೆ ಬಾರಿಸಿದರೆ ನೀವು ಎಲ್ಲಿದ್ದರೂ ಬೇಗ ಬರಬೇಕು ಎಂದರರ್ಥ; ನನಗೆ ಮೇಲಿರುವ ಡಬ್ಬವೋ, ಮತ್ತಿನ್ನೇನನ್ನೋ ಎತ್ತಿ ಕೊಡಬೇಕು, emergency ಎಂದು ಅರ್ಥ!' ಎಂದೆ.

ಕಮಲ : ಬಹಳ ಚೆನ್ನಾಗಿದೆ? ಯಾರಾದರೂ ಹೀಗೆಲ್ಲಾ ಆಟ ಆಡಿಸುತ್ತಾರೇನು?

ಶಾಂತ : ಮುಂದಕ್ಕಿದೆ ಸ್ವಾರಸ್ಯ. ಅದೊಂದು ದಿನ ನಾನು ತೆಂಗಿನಕಾಯಿ ತುರಿಯುತ್ತಾ, ಯಾವುದೋ ಹಾಡನ್ನು ಗುಣುಗುಣಿಸುತ್ತಾ ಕುಳಿತಿದ್ದೆ. ಹಿತ್ತಲ ಕಡೆಯಿಂದ ಧಡ ಧಡ ಒಳಗೆ ಬಂದ ಇವರು ''ಈಗೆನಾಗಬೇಕಿತ್ತಮ್ಮ? ಕಾಫಿ ಆಯ್ತು, ದೊಡ್ಡ ಸಕ್ಕರೆ ಡಬ್ಬಿ ಕೆಳಗಿಳಿಸಿದ್ದೂ ಆಯ್ತು. ನನ್ನ ಪಾಡಿಗೆ ನಾನಿರಲು ಯಾಕೆ ನೀನು ಬಿಡುವುದಿಲ್ಲ?'' ಎಂದು ಕೂಗಾಡುವುದೇ?

ಕಮಲ : ಯಾಕೆ ಹಾಗಾಯ್ತು? ಅವರು ಯಾತಕ್ಕೆ ಕೋಪಿಸಿಕೊಂಡರು?

ಶಾಂತ : ಆ ದಿನ ನಡೆದ ವಿಷಯವೇ ಬೇರೆ, ಕಮಲ. ಬೆಳಗಿನ ತಿಂಡಿ ಎಲ್ಲಾ ಮುಗಿದ ಸಮಯ. ನಮ್ಮ ಮನೆ ಪಕ್ಕದಲ್ಲಿಯೆ H.S. ಕೃಷ್ಣಸ್ವಾಮಿ ಅಯ್ಯಂಗಾರರು ವಾಸವಾಗಿದ್ದಾರೆ. ಸಂಪ್ರದಾಯಸ್ತರು, ದೈವಭಕ್ತರು, ಪ್ರತಿದಿನವೂ ಪೂಜೆ, ಆರಾಧನೆ, ಮಂಗಳಾರತಿ ನಡೆಯುತ್ತಿತ್ತು. ಅವರ ಎಡೆಬಿಡದ ಘಂಟಾನಾದವನ್ನು ನನ್ನವರು, ನನ್ನ ಗಂಟೆಯ ಶಬ್ಧ ಎಂದು ತಿಳಿದುಕೊಂಡುಬಿಟ್ಟರು. ಅದಕ್ಕೇ ಕೋಪ!

ಕಮಲ : ಹಹ್ಹಹ್ಹಾ! ಒಳ್ಳೆಯ ದಾಂಪತ್ಯ ನಿಮ್ಮದು. ಹಾಗಾದರೆ ಮಹಾಚತುರೆಯಾದ ನಿಮ್ಮ plan 'ಟುಸ್' ಆಯಿತು ತಾನೆ?

ಶಾಂತ : ನಾನು ಒಂದು ಕ್ಷಣ ಪೆಚ್ಚಾದದ್ದಂತೂ ನಿಜ. ಇದೇನಿದು? ನನ್ನ ಯೋಚನೆ ಫಲಕಾರಿಯಾಗದೇ ಮಣ್ಣು ಮುಕ್ಕಿತಲ್ಲ, ಈಗೇನು ಮಾಡುವುದು? ಎಂದು ತಲೆಯ ಮೇಲೆ ಕೈ ಹೊತ್ತೆ.

ಕಮಲ : ಸರಿ, ಮರುದಿನದಿಂದ ಕಾಫಿ ಲೋಟ ಕೈಯಲ್ಲಿ ಹಿಡಿದು 'ಏನ್ರೀ, ಏನ್ರೀ' ಎನ್ನುತ್ತಾ ಮನೆ ಎಲ್ಲಾ ಓಡಾಡಿದಿರಿ; ಅಷ್ಟೇ ತಾನೇ?

ಶಾಂತ : ಊಹೂಂ, ಹಾಗೇನಿಲ್ಲ, ನಾನು ಅಷ್ಟು ಬೇಗ ಸೋಲನ್ನು ಒಪ್ಪಿಕೊಳ್ಳುವವಳಲ್ಲ.

ಯಾವುದೋ ಒಂದು exhibitionಗೆ ಹೋಗಿದ್ದೆ. ಅಲ್ಲಿ ಕಾಣಿಸಿದ ಈ ಕೊಳಲನ್ನು ಕೊಂಡುತಂದೆ.

ಕಮಲ : ಏನು ಕೊಳಲೆ? ಅದೇನಾ ಇಲ್ಲಿಟ್ಟಿರುವುದು?

ಶಾಂತ : ಹೂಂ. ಬಹಳ ಪ್ರೀತಿಯಿಂದ ನಮ್ಮೆಜಮಾನರಿಗೆ ಹೇಳಿದೆ; ''ನೋಡಿ, ವಾಡಿಕೆಯಂತೆ ಕಾಫಿಯಾದ ತಕ್ಷಣ ನಾನು ಕೊಳಲನ್ನು ಊದುತ್ತೇನೆ. ನೀವು ಬಂದು ಬಿಡಿ. ಸರೀನಾ? ಅಡುಗೆ ಮನೆಯಲ್ಲಿ ನಿಮ್ಮ ತುರ್ತು ಸಹಾಯ ಬೇಕು ಎನ್ನಿಸಿದಾಗ ನಾನು ಕೊಳಲು ನಾದವನ್ನು ಸ್ವಲ್ಪ ವ್ಯತ್ಯಾಸವಾಗಿ, ಬೇರೆ ಬೇರೆ ರೀತಿಯಲ್ಲಿ ಊದುತ್ತೇನೆ. ಆಗ ನಿಮಗೆ ತಕ್ಷಣ ಬರಲು ಅನುಕೂಲ ಆಗುತ್ತದೆ'' ಎಂದೆ.

ಕಮಲ : ಶಾಂತ, ಇದೇನಿದು? ನೀನು ಹೇಳುವ ಈ ಚಿತ್ರ, ವಿಚಿತ್ರ ಯೋಜನೆಗಳಿಗೆಲ್ಲ ಅವರು ಒಪ್ಪಿಕೊಳ್ಳುತ್ತಾರೇನು? ನನಗೇನೋ ಹಾಗನ್ನಿಸುವುದಿಲ್ಲಮ್ಮ.

ಶಾಂತ : ಹೌದು ಕಮಲ. ಅವರು ಮೊದಲು ಬಡಪೆಟ್ಟಿಗೆ ಇದಕ್ಕೆಲ್ಲಾ ಒಪ್ಪಲಿಲ್ಲ. ನನ್ನನ್ನು ಅನುಮಾನಾಸ್ಪದವಾಗಿ ನೋಡಿದರು. ನನ್ನ ದೈನ್ಯ ತುಂಬಿದ ಮುಖ ನೋಡಿ ಅವರಿಗೇನನ್ನಿಸಿತೋ ಸುಮ್ಮನೇ ಹೊರಟು ಹೋದರು. 'ಮೌನಂ ಸಮ್ಮತಿ ಲಕ್ಷಣಂ' ಅಲ್ಲವೇ? ನಾನು ಅಂದಿನಿಂದಲೇ ಕೊಳಲು ವಾದನವನ್ನು ಪ್ರಾರಂಭಿಸಿದೆ.

ಕಮಲ : ಒಳ್ಳೆ ಮಹರಾಯಿತಿ ಕಣಮ್ಮ ನೀವು; ಅದೇನು ಅನ್ಯೋನ್ಯ ದಾಂಪತ್ಯ ನಿಮ್ಮದು? ನಿನ್ನ ಯೋಜನೆಗಳು ವಿಘ್ನವಿಲ್ಲದೇ ನಡೆಯುತ್ತಿರಲಿ. ನಾನೂ ನಮ್ಮ ಮನೆಯಲ್ಲಿ, ನನ್ನ ಯಜಮಾನರ ಮೇಲೆ, ಈ ರೀತಿಯ ಯಾವುದಾದರೊಂದು ಪ್ರಯೋಗವನ್ನು ಮಾಡಲು ಸಾಧ್ಯವೇ? ನೋಡುತ್ತೇನೆ. ಬರಲಾ?

ಶಾಂತ : (ಕೊಳಲನ್ನೆತ್ತಿ ನುಡಿಸುವಳು. ಅಡುಗೆ ಮನೆಯ ಕಿಟಿಕಿಯಲ್ಲಿ ಶಾಂತಳ ಯಜಮಾನರ ಮುಖ ಕಂಡಿತು. ಅವಳು, ಅವರಿಗೆ ಮೃದು, ಮಧುರವಾಗಿ ''ಏನೊಂದ್ರೆ, ನಾಲ್ಕು ವೀಳ್ಯದೆಲೆ ಕಿತ್ತು ಕೊಡುತ್ತೀರಾ? ಕಮಲಾಗೆ ಎಲೆ ಅಡಕೆ ಕೊಡಬೇಕು''.

ಕಮಲ : (ಉಕ್ಕಿ ಬಂದ ನಗುವನ್ನು ತಡೆದುಕೊಳ್ಳುತ್ತಾ) ಇದೆಲ್ಲಾ ಏನಮ್ಮ, ಸರಿ ಬರ್ತಿನಿ.......

# ಪರಿಚಾಯಣ

● ಅನಿತಾ ನರೇಶ್ ಮಂಚಿ

**ನ**ಮ್ಮ ಪರಿಚಯದ ಪ್ರಪಂಚದಲ್ಲಿ ಎಷ್ಟೆಲ್ಲಾ ಮಂದಿ ಇದ್ದರೂ ಅವರಲ್ಲಿ ಕೆಲವರು ಮಾತ್ರ ಆಪ್ತರೂ, ಇನ್ನು ಕೆಲವೇ ಕೆಲವರು ಪರಮಾಪ್ತರೂ ಆಗುತ್ತಾರೆ. ಮತ್ತೆ ಕೆಲವರು ನಗೆ ಸೂಸುವಷ್ಟಕ್ಕೆ ಸೀಮಿತಗೊಂಡರೆ, ಮತ್ತೂ ಹಲವರು ಕುತೂಹಲದ ದೃಷ್ಟಿ ಬೀರುವಷ್ಟರಲ್ಲೇ ಮರೆತು ಹೋಗಿರುತ್ತಾರೆ. ಯಾಕೆ ಹೀಗೆ?

ಈ ಸಮಸ್ಯೆಗೆ ಉತ್ತರ ವಿಜ್ಞಾನಿಗಳಲ್ಲಿ ನಾವಾಗಿ ಕೇಳದಿದ್ದರೂ, ಅವರೇ ನಮ್ಮನ್ನು ಕೂರಿಸಿಕೊಂಡು ನಮ್ಮ ನಾಲಗೆಯಲ್ಲಿ ಹೊರಳದಂತಹ ಯಾವು ಯಾವುದೊ ಹಾರ್ಮೋನ್‌ಗಳ ಹೆಸರುಗಳನ್ನು ಹೇಳಿ, ಅವುಗಳ ಸ್ರವಿಸುವಿಕೆಯೇ ಕಾರಣ. ನೀವಂದುಕೊಂಡಂತೆ ಇದಕ್ಕೇನು ಭಾವನಾತ್ಮಕ ಮಹತ್ವವಿಲ್ಲ ಎಂದು ಹೇಳಿ ನಮ್ಮ ಬಾಯಿ ಮುಚ್ಚಿಸುತ್ತಾರೆ.

ಆದರೆ ಅಷ್ಟು ಸುಲಭವಾಗಿ ಒಪ್ಪಲಿಕ್ಕೆ ನಾವೇನು ಪೆಕರರೇ..? ಅವರನ್ನು ಇಂತಹ ವಿಷಯದಲ್ಲಿ ತಲೆ ಹಾಕಿಕೊಂಡು ಬರಬೇಡಿ ಎಂದು ಮೊದಲೇ ಎಚ್ಚರಿಕೆ ನೀಡಿ ಬಿಡೋದೆ ವಾಸಿ.

ಆದರೆ ಈ ವಿಷಯ ನಮ್ಮನ್ನು ಸದಾ ಕಾಡುವುದಂತೂ ಸತ್ಯ.

> **ಈ ಪರಿಚಯ ಎಂಬುದರೊಂದಿಗೆ ಮರೆವು ಎಂಬುದು ಯಾವತ್ತೂ ಸೇರಿಕೊಂಡೇ ಇರುತ್ತದೆ.**

ಈ ಪರಿಚಯ ಎಂಬುದರೊಂದಿಗೆ ಮರೆವು ಎಂಬುದು ಯಾವತ್ತೂ ಸೇರಿಕೊಂಡೇ ಇರುತ್ತದೆ. ನೀವೇ ಯೋಚಿಸಿ ನೋಡಿ. ಶಾಲಾ ಕಾಲೇಜಿನ ದಿನಗಳಲ್ಲಿ ಪ್ರತಿ ತರಗತಿಯಲ್ಲೂ ಕಡಿಮೆ ಎಂದರೆ ಐವತ್ತು ವಿಧ್ಯಾರ್ಥಿಗಳಾದರೂ ಇರುತ್ತಾರೆ. ಒಂದಿಪ್ಪತ್ತೈದು ವರ್ಷ ಕಳೆದು ನೆನಪಿಸಿಕೊಳ್ಳಿ! ಎಷ್ಟು ಮುಖಗಳು ನಿಮ್ಮೆದುರಿಗೆ ನಿಲ್ಲುತ್ತವೆ? ಬೆರಳಲ್ಲಿ ಲೆಕ್ಕ ಮಾಡುವಷ್ಟು ಮಾತ್ರ..! ಕೆಲವರಂತೂ ಕೇವಲ ಹೆಸರುಗಳಾಗಿಯೆ ನೆನಪಾಗುತ್ತಾರೆ. ಎಷ್ಟು ತಿಣುಕಾಡಿದರೂ ಅವರ ಚಿತ್ರ ನಿಮ್ಮ ಕಣ್ಣೆದುರು ಮೂಡುವುದೇ ಇಲ್ಲ. ಮತ್ತುಳಿದ ಮಂದಿ ಯಾವುದೇ ನೆನಪಿನ ಕೋಶದಲ್ಲೂ ದಾಖಲಾಗದೇ ನೇಪಥ್ಯಕ್ಕೆ ಸರಿದು ಹೋಗಿರುತ್ತಾರೆ.

ನೆನಪು ಅಂದಾಗ ನೆನಪಿಗೆ ಬಂತು ನೋಡಿ. ಯಾರಾದರೂ ನೆನಪಾಗಿ ಕಾಡಬೇಕಾದರೆ ಪರಿಚಯ ಅನಿವಾರ್ಯವೇನಲ್ಲ.

ಕೆಲವೊಮ್ಮೆ ಬಸ್ ನಿಲ್ದಾಣದಲ್ಲೋ, ರಸ್ತೆ ಬದಿಯಲ್ಲೋ ಅಥವಾ ಯಾವುದೋ ಮನೆಗಳ ತೆರೆದ ಕಿಟಕಿಯ ಸಂದಿನಲ್ಲೋ, ದುತ್ತೆಂದು ಸುಳಿದು ಮಾಯವಾಗುವ ಮುಖಗಳು

ಹಲವಾರು ದಿನ ನಮ್ಮ ನೆನಪಿನ ಮಡಿಕೆಯೊಳಗೆ ತಣ್ಣಗೆ ಕುಳಿತು ಬಿಡುತ್ತಾರೆ. ಅವರಿಂದೇನೂ ಹಾನಿಯಿಲ್ಲ ಬಿಡಿ.

ಆದ್ರೆ ಈ ಎಲ್ಲೋ ನೋಡಿದಂತಿದೆ, ಪರಿಚಯ ಇದ್ದ ಹಾಗೆ ಇದೆ, ಎಂದೆನಿಸುವವರನ್ನು ಗುರುತಿಸಲು ಆಗದೆ ಅವಾಂತರಗಳು ಸಂಭವಿಸುವುದುಂಟು. ಹೆಚ್ಚಾಗಿ ಇಂತಹ ತೊಂದರೆಗಳು ಹುಟ್ಟಿಕೊಳ್ಳುವುದು ಸಭೆ ಸಮಾರಂಭಗಳಲ್ಲಿ!

ಈಗ ಯಾವುದೊ ಮದುವೆಗೋ, ಮುಂಜಿಗೋ ಹೋಗಿರುತ್ತೀರಿ ಅಂದುಕೊಳ್ಳಿ. ಯಾರಾದರು ಹತ್ತಿರ ಬಂದು, ಪರಿಚಯ ಆಯಿತೋ? ಎಂದು ಕೊಶ್ಚನಿಸಿದಾಗ, ಇಲ್ಲ ಎಂದು ಹೇಳಿದರೆ ಅವರಿಗೆಲ್ಲಿ ಬೇಸರವಾಗುವುದೊ ಎಂಬ ಆತಂಕದಲ್ಲಿ ಕೋಲೆ ಬಸವನಂತೆ ಕುತ್ತಿಗೆ ಅಲುಗಿಸಿದಿರೊ, ನಿಮ್ಮ ತಲೆಯ ಮೇಲೆ ನೀವೇ ಚಪ್ಪಡಿ ಕಲ್ಲು ಎಳೆದುಕೊಂಡಂತಾಗುವುದು ಗ್ಯಾರಂಟಿ! ಯಾಕೆ ಅಂತೀರಾ..? ಮತ್ತೆ ವಕೀಲರ ಪಾಟೀ ಸವಾಲಿನಂತೆ ಒಂದರ ಮೇಲೊಂದರಂತೆ ಬಂದು ಅಪ್ಪಳಿಸುವ ಪ್ರಶ್ನೆಗಳಿಗೆ ಉತ್ತರಿಸಬೇಕಾದ ತುರ್ತು ಅಥವಾ ದುಃಖ ನಿಮ್ಮ ಪಾಲಿಗೊದಗುತ್ತದೆ. ಈಗಿನ ಪ್ರಶ್ನೆ ಪತ್ರಿಕೆಗಳಲ್ಲಿದ್ದಂತೆ ಆರಿಸಿಕೊಳ್ಳಲು ನಾಲ್ಕು ಉತ್ತರಗಳೇನೂ ಇರುವುದಿಲ್ಲ, ನೀವೇ ನಿಮ್ಮ ತಲೆಯನ್ನು ಉಪಯೋಗಿಸಬೇಕಾಗುತ್ತದೆ.

ಮೊದಲಿಗೆ 'ಹಾಗಿದ್ದರೆ ಯಾರು ಹೇಳು ನೋಡೋಣ' ಎಂಬ, ಲಕ್ಷ ರೂಪಾಯಿ ನಿಮಗೆ ಕೊಡುತ್ತೇನೆಂದರೂ, ನೀವು ಉತ್ತರಿಸಲಾರದ ಪ್ರಶ್ನೆ ಅಪ್ಪಳಿಸುತ್ತದೆ. ಆಗಲೇ ಸೋಲೊಪ್ಪಿಕೊಂಡು ಸುಮ್ಮನಾಗುವುದು ಒಳ್ಳೆಯದು. ಇಲ್ಲದಿದ್ದರೆ ಎಲ್ಲರೆದುರು ನಿಮ್ಮ ನೆನಪಿನ ಶಕ್ತಿಯ ಮಾನ ಹರಾಜಾಗುವುದು ಖಂಡಿತ.

ಕೆಲವೊಮ್ಮೆ ನೀವು ಅನ್ಯಮನಸ್ಕರಾಗಿ ಮಾರ್ಕೆಟ್‌ನಲ್ಲೋ, ಪಾರ್ಕಿನಲ್ಲೋ ಹೆಜ್ಜೆ ಹಾಕುತ್ತಿರುತ್ತೀರಿ. ಅಷ್ಟರಲ್ಲಿ ಹಿಂದಿನಿಂದ ನಿಮ್ಮ ಮೂಳೆ ಶಾಶ್ವತವಾಗಿ ಜಖಂ ಆಗುವಂತಹ ಹೊಡೆತ ಬಿದ್ದು, ನೀವು ಮುಗ್ಗರಿಸಿ ಬೀಳದೆ ಹೇಗೋ ಸಾವರಿಸಿಕೊಂಡು ಹಿಂದೆ ತಿರುಗಿ ನೋಡಿದರೆ ಯಾವುದೋ ಅಪರಿಚಿತ ಮುಖ ಪೆಚ್ಚಾಗಿ ಸ್ಸಾರಿ ರೀ.. ನನ್ನ ಸ್ನೇಹಿತರೊಬ್ಬರು ಹಿಂದಿನಿಂದ ನಿಮ್ ತರನೇ ಕಾಣಿಸ್ತಾರೆ, ಅಲ್ಲದೆ ನೀವು ಹಾಕಿದ ಶರ್ಟು ಕೂಡಾ ಅದೇ ತರ ಇತ್ತು ಅಂತ ತಪ್ಪನ್ನೆಲ್ಲ ನಿಮ್ಮ ಮೇಲೆ ವರ್ಗಾಯಿಸಿ ಅಲ್ಲಿಂದ ಕಾಲು ಕೀಳುತ್ತಾರೆ.

ಹಲವು ಬಾರಿ ನಾವೇ ಕೆಲವರನ್ನು ಪ್ರಯತ್ನ ಪೂರ್ವಕವಾಗಿ ಮರೆಯಬೇಕೆಂದುಕೊಳ್ಳುತ್ತೇವೆ. ಆದರೆ ಅಂತವರು ಸದಾ ನೆನಪಲ್ಲೇ ಉಳಿಯುತ್ತಾರೆ. ಈಗ ನೀವೇ ನೋಡಿ, ನಿಮಗೆ ಯಾರಾದರೂ ಸಾಲ ಕೊಟ್ಟಿರುತ್ತಾರೆ. ಅವರನ್ನು ಅವರು ನೀಡಿದ ಸಾಲವನ್ನು ಶತಾಯ ಗತಾಯ ಮರೆಯಬೇಕೆಂಬ ಪ್ರಯತ್ನದಲ್ಲಿರುತ್ತೀರಿ. ಆದರೆ ಅದೆಲ್ಲಿ ಸಾಧ್ಯವಾಗುತ್ತದೆ ಅಲ್ಲವೇ?! 'ನೀ ಮರೆತೇನೆಂದರೂ, ನಾ ಹ್ಯಾಂಗ ಮರೆಯಲಿ ನಿನ್ನ' ಎಂದು ಹಾಡುತ್ತಾ ಕೈಗೆ ಬಂದ ಸಂಬಳ ಎಣಿಸುವ ಮೊದಲೇ ಕಿತ್ತುಕೊಳ್ಳಲು ಹಾಜರಾಗುತ್ತಾರೆ.

ಅವರನ್ನು ಬಿಡಿ. ಈಗ ನನಗೆ ಒಬಾಮಾ, ಒಸಾಮಾ, ಎಲ್ಲ ತುಂಬಾ ಪರಿಚಯದವರು ಅಂದರೆ ನಾನ್ಯಾವಾಗ ಅವರ ಮನೆಗೆ ಹೋಗಿ ಚಹಾ ಕುಡಿದು, ಅವಲಕ್ಕಿ ತಿಂದು ಬಂದಿದ್ದೆ ಅಂತ ನನ್ನನ್ನು ಕಣ್ಣು ಕೆಕ್ಕರಿಸಿ ನೋಡಬೇಡಿ. ಸುದ್ದಿ ವಿಪ್ಲವದ ಈ ದಿನಗಳಲ್ಲಿ ಇದೂ ಒಂದು ರೀತಿಯ ಪರಿಚಯವೆ.

ಇನ್ನು ಈ ಸೆಲಬ್ರೆಟಿಸ್, ರಾಜಕಾರಿಣಿಗಳು ಇವರೆಲ್ಲ ನಮಗೆ ನಿತ್ಯವೂ ಮಾಧ್ಯಮಗಳ ಮೂಲಕ ಮುಖ ತೋರಿಸಿ ತೋರಿಸಿ ಜನ್ಮ ಜನ್ಮಾಂತರಕ್ಕೂ ಮರೆಯದಂತಾಗಿರುತ್ತಾರೆ. ಆದರೆ ಅವರಿಗೆ ನಮ್ಮ ಪರಿಚಯ ಎಲ್ಲಿದೆ ಅನ್ನಬೇಡಿ. ಅವರಿಗೂ ನಾವು ಪರಿಚಿತರೇ.. ಇಲ್ಲದಿದ್ದರೆ ರಾಜಕಾರಿಣಿಗಳು ಭೀಷಣವಾಗಿ ಭಾಷಣ ಶುರು ಮಾಡುವಾಗ ನಮ್ಮನ್ನೆಲ್ಲ ನನ್ನ ಪ್ರೀತಿಯ.. ಅಂತ ಸಂಭೋದಿಸುವ ಔಚಿತ್ಯವೇನಿದೆ ಅಲ್ಲವೇ? ಚಿತ್ರ ತಾರೆಯರಂತೂ ಗಾಳಿಯಲ್ಲೇ ಸಿಹಿ ಮುತ್ತುಗಳನ್ನು ತೂರಿ ಬಿಟ್ಟು ತಮ್ಮ ಆತ್ಮೀಯತೆಯನ್ನು ಪ್ರದರ್ಶನ ಮಾಡುತ್ತಾರೆ. ಹಾಗಂತ ನಾವೆಲ್ಲಾದರೂ ಹತ್ತಿರ ಹೋಗಿ ಮಾತನಾಡಲೆತ್ನಿಸಿದರೆ ನಮ್ಮನ್ನು ಯಾವುದೋ ಲೋಕದ ಕ್ಷುದ್ರ ಜೀವಿಯಂತೆ ನೋಡಿದರೂ ಅಚ್ಚರಿಯಿಲ್ಲ.

ಅಂದ ಹಾಗೆ ಇತ್ತೀಚೆಗೆ ಪತ್ರಿಕೆಯಲ್ಲಿ ಓದಿದ ವರದಿಯೊಂದರ ಪ್ರಕಾರ ನಮ್ಮ ಮೆದುಳು ಗರಿಷ್ಟ ನೂರೈವತ್ತರಿಂದ ಮೇಲ್ಪಟ್ಟು ಹೆಚ್ಚಿನ ಜನರೊಂದಿಗೆ ಆತ್ಮೀಯ ಸಂಬಂಧಗಳನ್ನು ನಿಭಾಯಿಸುವ ಸಾಮರ್ಥ್ಯವನ್ನು ಹೊಂದಿಲ್ಲವಂತೆ. ಅಮೆರಿಕಾದ ಆಕ್ಸ್‌ಫರ್ಡ್ ಯೂನಿವರ್ಸಿಟಿಯಲ್ಲಿ, ಪ್ರೊ. ರಾಬಿನ್ ಡಂಬಾರ್ ಎಂಬುವರು ಈ ಬಗೆಗೆ ಆಳವಾದ ಅಧ್ಯಯನ ಮಾಡಿದ್ದಾರಂತೆ. ಹಾಗಾಗಿ ಲಕ್ಷಗಟ್ಟಲೆ ಅಭಿಮಾನಿಗಳನ್ನು ನೆನಪಿಟ್ಟುಕೊಳ್ಳುವುದು ಯಾವ ಸೆಲಬ್ರೆಟಿಗಳಿಂದಲೂ ಸಾಧ್ಯವಿಲ್ಲವೆಂದು ಅವರನ್ನು ಕ್ಷಮಿಸಿ ಬಿಡೋಣಾ ಆಗದೇ..?

ಮತ್ತೆ ಈಗ ನೀವು ಮಾಡಬೇಕಾದ ಕೆಲಸ ಇಷ್ಟೆ. ನಿಮಗೆ ನೆನಪಿರುವ ನೂರೈವತ್ತು ಜನ ಯಾರೆಲ್ಲ ಎಂದು ಲೆಕ್ಕ ಹಾಕುತ್ತಾ ನನ್ನನ್ನು ಸದ್ಯಕ್ಕೆ ಮರೆತು ಬಿಡಿ.

---

**ದುಡ್ಡು ಎಲ್ಲ ಕೆಲಸ ಮಾಡಿಸುತ್ತದೆ**
**ರಾಜಕಾರಣದಲ್ಲಿ**
**ಭ್ರಷ್ಟ ಸತ್ಯವಂತನಾಗುತ್ತಾನೆ**
**ಸತ್ಯವಂತ ಭ್ರಷ್ಟನಾಗುತ್ತಾನೆ**
**ದುಡ್ಡಿನ ಮುಂದೆ ಸತ್ಯ ಕೂಡಾ**
**ಬಾಯಿ ಮುಚ್ಚಿಕೊಂಡಿರುತ್ತದೆ**

– ಬೇಲೂರು ರಾಮಮೂರ್ತಿ

# ಕರೆಗಳ ಕರಕರೆ

● ಸೂರಿ ಹಾರ್ದಳ್ಳಿ

**ಅ**ಳುತ್ತಿರುವ ಮಗುವನ್ನು ವಿಚಾರಿಸಲು ಎರಡು-ಮೂರು ನಿಮಿಷಗಳು ತಡವಾದರೂ ಚಿಂತೆಯಿಲ್ಲ, ಆದರೆ ಮೊಬೈಲ್ ಕರೆಯನ್ನು ನಿರ್ಲಕ್ಷಿಸುವಂತಿಲ್ಲ. ಆ ದೂರವಾಣಿಯು 'ಕರೆದರೂ ಕೇಳದೇ, ಏಕೆ ನನ್ನಲ್ಲಿ ಈ ಕೋಪ..' ಎಂದು ಶೋಕಪೂರಿತವಾಗಿ ಕೂಗಿದಂತೆ ಅನಿಸುತ್ತದೆ. ಓಡಿ ಎತ್ತಿಕೊಂಡರೆ ಯಾವುದೋ 'ಒಂದು ಟೆಲಿ ಮಾರ್ಕೆಟಿಂಗ್‌ದೋ, ಕ್ರೆಡಿಟ್ ಕಾರ್ಡ್ ಕೊಡುವ ಬ್ಯಾಂಕಿನದೋ, ಸಿನೆಮಾ ಹಾಡನ್ನು ಡೌನ್‌ಲೋಡ್ ಮಾಡಿಕೊಳ್ಳಿ' ಎಂದೋ ಆಗಿಬಿಟ್ಟರೆ ಎಲ್ಲರಿಗೂ ಶಾಪ ಹಾಕಿಕೊಂಡರೂ ಫೋನ್ ಮೇಲಿನ ಪ್ರೀತಿ ಕಡಿಮೆ ಆಗುವುದಿಲ್ಲ. ಯಾಕೆಂದರೆ ಅದು ದೇಹದ ಅವಿಭಾಜ್ಯ ಅಂಗಗಳಲ್ಲೊಂದಾಗಿಬಿಟ್ಟಿದೆ. ಹೊಸ ಸಂಶೋಧನೆಯಂತೆ ಸಿಮ್ ಕಾರ್ಡನ್ನು ದೇಹದೊಳಗೇ ಸೇರಿಸಿಕೊಳ್ಳಬಹುದಂತೆ. ಆಗ ದೇಹ ಎಂದರೆ ಎರಡು ಕೈ, ಎರಡು ಕಾಲುಗಳು, ಕಣ್ಣು, ಮೂಗು ಮಾತ್ರವಲ್ಲ, ದೇಹದ ಒಂದು ಅವಿಭಾಜ್ಯ ಅಂಗವೇ ಆಗಿಬಿಟ್ಟಿದೆ ಈಗ. ಪುಟ್ಟ ಗಾತ್ರದ, ಇಡೀ ಪ್ರಪಂಚವನ್ನೇ ತನ್ನೊಡಲಿನಲ್ಲಿ ತುಂಬಿಕೊಂಡಿರುವ ಆ ಮೊಬೈಲ್ ಫೋನ್ ಕಂಡಾಗ ನನಗೆ ಎಂದಿಗೂ ಅಚ್ಚರಿಯೇ.

ನಂಬಿದರೆ ನಂಬಿ, ಬಿಟ್ಟರೆ ಬಿಡಿ, ಇದಾಗೋದೇ ಹೀಗೆ. ನೀವು ಬೇರೆ ರಾಜ್ಯಗಳಿಗೆ ಹೋದಾಗಲೇ ಮಿಸ್ ಕಾಲ್‌ಗಳು ಬಂದು ನೀವು ವೃಥಾ ಟೆಲಿಫೋನ್ ಬಿಲ್‌ಗಳನ್ನು ಕೊಡಬೇಕಾಗಿ ಬರುವುದು. ನಿಮ್ಮ ಊರಿನಲ್ಲಿ ನೀವಿದ್ದಾಗ ನಿಮ್ಮನ್ನು ನೆನಸಿಕೊಳ್ಳದವರು ನೀವು ಪ್ರವಾಸದಲ್ಲಿದ್ದಾಗಲೇ ನಿಮಗೆ ಕರೆ ಮಾಡಿ ಕರಕರೆ ಮಾಡುವುದು. ಅಷ್ಟು ಮಾತ್ರವಲ್ಲ, ನೀವು ಸ್ನಾನ ಮಾಡುತ್ತಿರುವಾಗಲೋ, ಅಡುಗೆ ಮನೆಯಲ್ಲಿಯೋ, ಮೀಟಿಂಗಿನಲ್ಲಿಯೋ ಇದ್ದಾಗಲೇ ನಿಮ್ಮ ದೂರವಾಣಿ ಗುಣುಗುಣಿಸುವುದು ಹೆಚ್ಚು. ದೂರದಲ್ಲಿ ಎಲ್ಲಿಯೋ ಫೋನ್ ಇಟ್ಟು ಬಂದಾಗಲೇ ರಿಂಗಿಸಿ, ನೀವು ಬರಬರ ಓಡಿಹೋಗಿ ಅದನ್ನು ಸ್ವೀಕರಿಸಿದರೆ ಅದು ರಾಂಗ್ ನಂಬರ್ ಆಗಿದ್ದಾಗ ಮೈ ಉರಿಯುವುದಿಲ್ಲವೇ? ಒಳ್ಳೆಯ ನಿದ್ರೆಯ ಉತ್ತುಂಗದಲ್ಲಿದ್ದಾಗ ನಿಮ್ಮ ದೂರವಾಣಿ ನಿಮಗೆ ತೊಂದರೆ ಕೊಡುವುದೇ ಹೆಚ್ಚು.

ತಂತ್ರಜ್ಞಾನಗಳೇ ಹಾಗೆ, ಒಳ್ಳೆಯದರ ಬಾಲವಾಗಿ ತೊಂದರೆಯೂ ಬರುತ್ತದೆ, ನಾಯಿ ಹಿಂದೆ ಬಾಲ ಬಂದ ಹಾಗೆ, ಮದುವೆಯ ಹಿಂದೆ ಸಾಲ ಬಂದ ಹಾಗೆ, ವಸ್ತುವಿನ ಕೆಳಗೆ ನೆರಳಿರುವ ಹಾಗೆ!

ಅದೆಲ್ಲಕ್ಕಿಂತ ಮಾರ್ಕೆಟಿಂಗ್ ಕರೆಗಳು ಬಂದು ನಿಮ್ಮ ಮಿದುಳನ್ನು ಕೆಡಿಸುವುದು ಮಾಮೂಲು. ಅವು ಸುಮಾರಾಗಿ ಶುರುವಾಗುವುದೇ ಹೀಗೆ, 'ಗುಡ್ ಮಾರ್ನಿಂಗ್ ಸರ್... ಮೇ ಐ ಸ್ಪೀಕ್ ಟು ಯು ಫಾರ್ ಟು ಮಿನಿಟ್ಸ್?'. ಬಹುತೇಕ ಬಾರಿ ಅದು ಹೆಣ್ಣಿನ ಸ್ವರವಾಗಿರುತ್ತದೆ ಮತ್ತು ಹೈ ಪ್ರೊಫೈಲ್ ಇಂಗ್ಲಿಷ್ ಭಾಷೆಯಲ್ಲಿಯೇ ಇರುತ್ತದೆ.


ಮೊದಮೊದಲು ಇಂತಹ ಕರೆಗಳನ್ನು ಸ್ವೀಕರಿಸುವ ಮನಸ್ಸಾದರೂ ನಂತರವಂತೂ ರೇಗಿ ಹೋಗುತ್ತದೆ. ಹಾಗಂತ ಕರೆ ಮಾಡಿದವರನ್ನು ಬೈಯಲು ಆಗುತ್ತದೆಯೇ? ಅದು ಅವರು ಹೊಟ್ಟೆ ಪಾಡಿಗಾಗಿ ನಡೆಸುವ ವೃತ್ತಿ. ಆಗ ನಾವು ಅವರ ಮೇಲೆ ಬೈಗುಳದ ಪ್ರವಾಹ ಹರಿಸಬಾರದು. ಮತ್ತೆ ಇನ್ನೇನು ಮಾಡುವುದು? ನನ್ನ ಸಲಹೆಗಳನ್ನು ಪರಾಂಬರಿಸಿ.

ಮೊನ್ನೆ ಮೊನ್ನೆ ದೆಹಲಿಯಿಂದೊಂದು ಕರೆ ಬಂದಿತ್ತು, ಯಾವುದೋ ಒಂದು ಚಾರಿಟಿ ಹಣ ಕೇಳುವ ಸಂಸ್ಥೆಯಿಂದ. ಮೇಲೆ ಹೇಳಿದಂತೆ ಉಭಯಕುಶಲೋಪರಿ ಸಾಂಪ್ರತಗಳ ನಂತರ ನವಿರಾದ ಉಲಿಯೊಂದು ಹರಿದು ಬಂತು. ಸುಮ್ಮನೆ ಹೂಂ.. ಹೂಂ ಎನ್ನುತ್ತಾ ಕೇಳುತ್ತಾ ಹೋದೆ. ಸುಮಾರು ಮೂರು ನಿಮಿಷಗಳ ನಂತರ 'ಎನಕೆ ಇಂಗ್ಲಿಷ್ ತೆರಿಯಾದು. ತಮಿಳಿಲೇ ಪೇಸಂಗೋ' ಎಂದೆ. ಆಕೆ ಫೋನ್ ಕಟ್ ಮಾಡಿದಳು. ಅವಳ ಸಮಯವನ್ನು ಮೂರು ನಿಮಿಷಗಳ ಕಾಲ ವ್ಯರ್ಥ ಮಾಡಿದ್ದಕ್ಕೆ ಎಷ್ಟು ಶಾಪ ಹಾಕಿಕೊಂಡಳೋ ಕಾಣೆ.

ಕರೆ ಮಾಡುವವರು ಇಂಗ್ಲಿಷಿನಲ್ಲಿಯೇ ಮಾತನಾಡುತ್ತಾರೆ. ಕನ್ನಡದಲ್ಲಿ ಮಾತನಾಡಿ ಎಂದರೆ ಇದಾವುದೋ ಓಬೀರಾಯನ ಕಾಲದ ಪ್ರಾಣಿ ಇರಬಹುದು ಎಂದು ಭಾವಿಸಿ ಮಾತನ್ನು ಮುಂದುವರಿಸದವರೇ ಜಾಸ್ತಿ.

ಕ್ರೆಡಿಟ್ ಕಾರ್ಡ್ ಕೊಡುತ್ತೇವೆ ಎಂಬ ಕರೆಗಳಂತೂ ಬಹು ಅಧಿಕ. ನಾನು ಕರೆಗಳಿಗೆ ಪ್ರತಿಕ್ರಿಯಿಸಿದ್ದು ಹೀಗೆ: ನೋಡಿ, 'ನನಗೆ ಕ್ರೆಡಿಟ್ ಕಾರ್ಡ್ ಅವಶ್ಯಕ ಬೇಕು. ನಾನೀವಾಗಲೇ ಎರಡು ಕಾರ್ಡ್ ಕಂಪನಿಗಳಿಗೆ ಡಿಫಾಲ್ಟರ್ ಆಗಿದ್ದೇನೆ. ನಾನು ಸುಳ್ಳು ಹೇಳುವುದಿಲ್ಲ, ನನ್ನ ಸತ್ಯಸಂಧತೆಗೆ(ಹಾನೆಸ್ಟಿ)ಗಾಗಿ ನೀವು ನನಗೆ ಕಾರ್ಡ್ ಅನ್ನು ಕೊಡಬೇಕು' ಎಂದು. ನೀವಂದುಕೊಂಡಂತೆ ಮರುಪಾವತಿಸದ ಸಾಲಗಾರನಿಗೆ ಯಾವ ಕಂಪನಿಯೂ ಸಾಲ ಕೊಡುವುದಿಲ್ಲ, ಕಾರ್ಡನ್ನೂ ನೀಡುವುದಿಲ್ಲ.

ಇನ್ನೊಂದು ಬಾರಿ ಇಂತಹದೇ ಕರೆ ಬಂದಿತ್ತು. 'ಅಯ್ಯೋ, ಕೊಡಿ, ಕೊಡಿ' ಎಂದೆ. 'ಸರ್, ನೀವೇನು ಉದ್ಯೋಗ ಮಾಡುತ್ತಿದ್ದೀರಿ' ಕೇಳಿದಳಾಕೆ. 'ಸ್ವಂತ ಬಿಸನೆಸ್ ಇದೆ. ಬಸ್ಸುಗಳಲ್ಲಿ



ಪಿಕ್ ಪಾಕೆಟ್ ಮಾಡೋದು' ಎಂದೆ. 'ಸಾರಿ ಸರ್, ಸೆಲ್ಫ್ ಎಂಪ್ಲಾಯ್‌ಮೆಂಟಿರುವವರಿಗೆ ಕಾರ್ಡು ಕೊಡೋಲ್ಲ' ಎಂದು ಉಲಿದಳಾಕೆ.

ಒಂದು ರಾಂಗ್ ಕಾಲ್, ತಪ್ಪು ಕರೆ ಬಂದಿತ್ತು. 'ಮುನಿಸ್ವಾಮಿ ಅವ್ರಾ?'

ನನಗೆ ಅದು ರಾಂಗ್ ನಂಬರ್ ಎಂದು ಗೊತ್ತಾಯಿತು. ಕೇಳಿದೆ, 'ನೀವು ಮುನಿಸ್ವಾಮಿಯವರಿಗೆ ಏನಾಗಬೇಕು?'

'ಫ್ರೆಂಡು' ಇದು ಬೆಂಗಳೂರಿನ ಕನ್ನಡ. ಗೆಳೆತನಕ್ಕಿಂತ ಫ್ರೆಂಡ್‌ಶಿಪ್ಪೇ ಒಂದು ಕೈ ಮೇಲೆ.

'ಗೆಳೆಯ, ಅಂದರೆ ತುಂಬಾ ಹತ್ತಿರದ ಗೆಳೆಯನೋ ಅಥವಾ ಅಷ್ಟಕ್ಕಷ್ಟೇ ಗೆಳೆಯನೋ?' ಕೇಳಿದೆ. ಏನೋ ಹೇಳಿದ.

'ಇವತ್ತು ಬೆಳಗ್ಗೆ ಏನಾಯ್ತೂಂದ್ರೆ... ನಿಮಗೆ ವಿಲ್ಸನ್ ಗಾರ್ಡನ್ ಹತ್ತನೇ ಕ್ರಾಸ್ ಗೊತ್ತಲ್ಲ, ಹೊಂಬೇಗೌಡ ನಗರ ಎಂದು ಹೆಸರು ಬದಲಾಯಿಸಿದ್ರೂ ಈ ವಿಲ್ಸನ್ ಗಾರ್ಡನ್ನೇ ನೆನಪಿನಲ್ಲಿರೋದು. ಅಲ್ಲಿಂದ ಎಡಕ್ಕೆ ತಿರುಗಿದರೆ ಹೊಸೂರು ರಸ್ತೆಗೆ ಸೇರುತ್ತದೆ. ಆ ಹತ್ತನೇ ಕ್ರಾಸ್ ಒನ್‌ವೇ. ಮುನಿಸ್ವಾಮಿ ಬೈಕಿನಲ್ಲಿ ಬರುತ್ತಿರುವಾಗ...' ನಾನು ಹೇಳತೊಡಗಿದೆ.

'ಏನಾಯ್ತು ಸರ್?' ಕುತೂಹಲಿ ಅವನು. ನಾನು 'ತುಸು ಇರಿ, ಹೇಳ್ತೀನಿ' ಎನ್ನುತ್ತಾ ಫೋನ್ ಕೆಳಗಿಟ್ಟೆ. ಘೋಸ್ಟ್ ವ್ಯಕ್ತಿಯೊಬ್ಬನೊಂದಿಗೆ ಮಾತನಾಡಿದ್ದು ಅವನಿಗೆ ಕೇಳಿಸುತ್ತಿತ್ತು, 'ಪೋಸ್ಟ್ ಮಾರ್ಟಂ ರಿಪೋರ್ಟ್ ಬಂತೇನ್ರೀ?' ಸ್ವಲ್ಪ ಕೈ ಬಿಸಿ ಮಾಡಿದ್ರೆ ಬೇಗ ಬರುತ್ತೆ. ಹಾಗೆ ಕಂಪನಿಯ ನೊಟೀಸ್ ಬೋರ್ಡಿನಲ್ಲಿ ಒಬಿಚುವ್ಯರಿ ಸೂಚನೆ ಹಾಕಬೇಕು, ಯಾವತ್ತು ಕಂಪನಿಗೆ ಸೇರಿದ್ದು, ಈ ತನಕ ಎಷ್ಟು ಕಾಲ ದುಡಿದಿದ್ದಾನೆ, ಎಷ್ಟು ವಯಸ್ಸು, ಎಲ್ಲಾ ಇರಲಿ. ಇತ್ತೀಚಿನ ಫೊಟೋನೇ ಹಾಕಿ, ಹಳೇದು ಬೇಡ, ತಡಮಾಡಬೇಡಿ' ಎಂದವನು ಫೋನ್ ಎತ್ತಿಕೊಂಡು, 'ಹಲೋ' ಎಂದೆ.

ಕರೆ ಮಾಡಿದವನ ದನಿಯಲ್ಲಿ ದಿಗಿಲು ಗೋಚರವಾಗುತ್ತಿತ್ತು. 'ಏನಾಯ್ತು ಸರ್ ಮುನಿಸ್ವಾಮಿಗೆ?'

'ಅದೇ ಹೇಳಿದೆನಲ್ಲ, ಹತ್ತನೆ ಕ್ರಾಸಿನಿಂದ ಎಡಕ್ಕೆ ತಿರುಗಿ ಅಲ್ಲಿಂದ ನಿಮ್ಹಾನ್ಸ್ ಆಸ್ಪತ್ರೆ ಕಡೆಗೆ ಹೋಗುತ್ತಿದ್ದಾಗ..' ಮಾತು ನಿಲ್ಲಿಸಿ, 'ಒಂದು ನಿಮಿಷ, ಹೇಳ್ತೀನಿ' ಎಂದವನು ಮತ್ತೆ ಮುಂದೆ ಇಲ್ಲದವನೊಂದಿಗೆ ಮಾತನಾಡಿದೆ, 'ಮೊದಲು ಅವನ ಮನೆಗೆ ಹೋಗಿ ವಿಷಯ ತಿಳಿಸಿ, ಇದು ಬಲು ಡೆಲಿಕೇಟ್ ಕೇಸು. ಹಾಗೆಯೇ ಶವಸಂಸ್ಕಾರಕ್ಕೆ ಹಣವನ್ನೂ ಕೊಡಿ. ಒಳ್ಳೆಯ ಬೊಕೆಗೆ ಆರ್ಡರ್ ಮಾಡಿ. ಕಂಪನಿಯ ಟ್ಯಾಕ್ಸಿ ತೆಗೆದುಕೊಂಡು ಈಗಲೇ ಹೋಗಿಬಿಡಿ' ಎಂದವನು ಮತ್ತೆ ಫೋನ್ ಎತ್ತಿಕೊಂಡೆ. 'ಹಲೋ'

ಆ ವ್ಯಕ್ತಿ ಮುನಿಸ್ವಾಮಿಯು ಸತ್ತೇ ಹೋಗಿರಬೇಕೆಂದು ಭಾವಿಸಿಬಿಟ್ಟಿದ್ದ. 'ಹೇಳಿ ಸರ್, ಏನಾಯ್ತು ಮುನಿಸ್ವಾಮಿಗೆ?'

‘ನಿಮ್‌ಹಾನ್ಸ್ ಗೊತ್ತಲ್ಲ, ಅದರ ಎದುರು ಅವನ ಹಳೇ ಫ್ರೆಂಡ್ ಒಬ್ಬ ಸಿಕ್ಕಿಬಿಟ್ಟ, ಮುನಿಸ್ವಾಮಿ ಫೋನ್ ಮಾಡಿ ಇವತ್ತು ಆತ್ಮೀಯ ಗೆಳೆಯ ಸಿಕ್ಕಿದ್ದಾನೆ, ರಜಾಬೇಕೆಂದು ಹೇಳಿದ. ಅವನು ಇವತ್ತು ಕೆಲಸಕ್ಕೆ ಬಂದಿಲ್ಲ’ ಎಂದವನೇ ಫೋನ್ ಇಟ್ಟ. ನಂತರ ಸುಮಾರು ಹೊತ್ತು ನಗುತ್ತಲೇ ಇದ್ದೆ ಬಿಡಿ.

ಬ್ಯಾಂಕಿನಿಂದ ಬಂದ ಒಂದು ಕರೆಗೆ ನಾನು ಪ್ರತಿಕ್ರಿಯಿಸಿದ್ದು ಹೀಗೆ, ‘ನಾನು ಈಗ ತುಂಬಾ ಬಿಸಿ ಇದ್ದೀನಿ. ದಯವಿಟ್ಟು ಎರಡು ವರ್ಷಗಳ ನಂತರ ಕರೆ ಮಾಡಿ’ ಎಂದು. ಫೋನಿಸಿದಾಕೆ ನಕ್ಕಳು. ಬಹುಶಃ ಅಂತಹ ನಗು ಅವಳಿಗೆ ಎಲ್ಲರಿಂದ ದೊರಕಿರಲಿಲ್ಲವೇನೋ.

ಮತ್ತೊಂದು ದಿನ, ಇಂತಹದೇ ಕರೆಗೆ ನಾನು ಹೇಳಿದ್ದು ಹೀಗೆ, ‘ಈಗ ನಾನು ಶೌಚಾಲಯದಲ್ಲಿದ್ದೇನೆ. ಎರಡು ದಿನಗಳ ನಂತರ ಫೋನ್ ಮಾಡಿ.’

ದುರಂತವೇನೆಂದರೆ ನನ್ನ ಜೋಕು ಆಕೆಗೆ ಅರ್ಥವಾಗಲಿಲ್ಲವೇನೋ. ಎರಡು ದಿನಗಳ ನಂತರ ಅವಳಿಂದಲೇ ಕರೆ ಬಂತು...

ಪಾಪ. ನಾನು ಬರೀ ನಕ್ಕೆ ಅಷ್ಟೆ. ಇದು ಅವಳಿಗಾಗಿ ಅಲ್ಲ, ಅವಳಿಗೆ ಅರ್ಥವಾಗದ ಜೋಕನ್ನು ಹೇಳಬೇಕಾಗಿ ಬಂದ ನನ್ನ ಬಗ್ಗೆ.

ಅದೊಂದು ಕಾಲವಿತ್ತು, ಸಾಲ ಬೇಕಾದರೆ ಮೂರು ಲೋಕಗಳನ್ನು ಒಂದು ಮಾಡುವಷ್ಟು ಕಷ್ಟವಿತ್ತು. ಆದರೆ ಈಗಲ್ಲ, ಈಗ ಸಾಲ ಬೇಕೇ ಎಂದು ದೂರವಾಣಿ ಮಾಡುತ್ತಾರೆ. ಈಗ ಅನೇಕ ಬ್ಯಾಂಕುಗಳು ಅಥವಾ ಹಣಕಾಸು ಕಂಪನಿಗಳು ನಮ್ಮನ್ನು ಸಾಲದ ಬಲೆಗೆ ಸಿಲುಕಿಸಲು ಇಚ್ಛಿಸುತ್ತವೆ. ನಮ್ಮ ಚರ ದೂರವಾಣಿ ರಿಂಗಿಸುತ್ತದೆ. ‘ಸರ್, ನಿಮಗೆ ನಾವು ತುಂಬಾ ಕಡಿಮೆ ಬಡ್ಡಿಯಲ್ಲಿ ಸಾಲ ಕೊಡುತ್ತೇವೆ’ ಎಂಬ ಮಾತಿನಿಂದ ಸುಮಾರಾಗಿ ಕರೆ ಆರಂಭವಾಗುತ್ತದೆ. ಸಾಲ ಎಂದಾಗ ಕಿವಿ ನಿಮಿರಿಕೊಂಡು ಕೇಳುವ ಸ್ಥಿತಿಯಲ್ಲಿ ನಾನಿಲ್ಲ. ಹಾಗಾಗಿ ನಾನು ಪ್ರತಿಕ್ರಿಯಿಸಿದ್ದು ಹೀಗೆ, ಹೌದಾ? ವೆರಿ ಗುಡ್. ಐ ಆ್ಯಮ್ ಆಲ್ಸೋ ಇನ್ ವೆರಿ ಬ್ಯಾಡ್ ರಿಕ್ವಯರ್‌ಮೆಂಟ್ ಆಫ್ ಲೋನ್. ಯಾವಾಗ ಕೊಡ್ತೀರಿ, ಎಷ್ಟು ಕೊಡ್ತೀರಿ? ಬರೆದುಕೊಳ್ಳಿ, ನನ್ನ ಮನೆ ವಿಳಾಸ. ನನಗೆ ಚೆಕ್ ಬೇಡ, ಎನ್‌ಕ್ಯಾಷ್ ಆಗೋದು ಡಿಲೇ ಆಗುತ್ತದೆ. ಕ್ಯಾಷೇ ತಂದುಕೊಡಿ.’

‘ಸರ್.. ಫಾರ್ಮಾಲಿಟೀಸ್..’

‘ನೀವು ನನ್ನನ್ನ ನಂಬ್ತೀರಿ, ನಾನು ನಿಮ್ಮನ್ನ ನಂಬ್ತೀನಿ. ಮನುಷ್ಯ ಮನುಷ್ಯರಲ್ಲಿ ನಂಬಿಕೆಯೇ ಮುಖ್ಯ. ಹಾಗಾಗಿ ಈ ಪತ್ರ ವ್ಯವಹಾರಗಳನ್ನೆಲ್ಲಾ ನಿಧಾನವಾಗಿ ಮಾಡಿಕೊಂಡರಾಯಿತು. ಮೊದಲು ನಗದನ್ನು ಕಳಿಸಿ’ ಎಂದು ನಾನು ಅನ್ನುವಷ್ಟರಲ್ಲಿ ಕರೆ ಕಡಿತಗೊಂಡಿತ್ತು.

ಇನ್ನೊಂದು ಕರೆ ಬಂದಾಗ ನಾನು ಪ್ರತಿಕ್ರಿಯಿಸಿದ್ದು ಹೀಗೆ: ‘ಸರ್, ನಾನು ಈ ಬ್ಯಾಂಕಿನಿಂದ ಕರೆ ಮಾಡುತ್ತಿದ್ದೇನೆ. ನಿಮಗೆ ಸಾಲ ಕೊಡುತ್ತೇವೆ.’

ನಾನು ಕೇಳಿದೆ, ‘ಎಷ್ಟು?’

'ಸರ್, ಹತ್ತು ಲಕ್ಷ, ಇಪ್ಪತ್ತು ಲಕ್ಷ...'

'ನೋಡಿ ಮೇಡಂ. ನಾನು ಈಗ ಇರುವ ಮನೆಯ ಬೆಲೆ ಎಂಟು ಕೋಟಿ ರೂಪಾಯಿ. ಮೂರು ಮರ್ಸಿಡಿಸ್ ಕಾರುಗಳು ನನ್ನಲ್ಲಿ ಇವೆ. ಮೊನ್ನೆ ನನ್ನ ಮೂರನೆಯ ಹೆಂಡತಿಗೆ.. ಥರ್ಡ್ ವೈಫ್‌ಗೆ ಮೂರು ಕೋಟಿ ಬೆಲೆಯ ಮನೆ ಕೊಟ್ಟಿದ್ದೇನೆ. ನಾನು ನಿಮಗೇ ಸಾಲ ಕೊಡುತ್ತೇನೆ, ಬೇಕಾದರೆ ಕೇಳಿ' ಎಂದೆನ್ನುವಷ್ಟರಲ್ಲಿ ಆಕೆಯಿಂದ ಒಂದೇ ಒಂದು ಪದ, 'ಸಾರಿ' ಬಂದ ನಂತರ ಕರೆ ಕತ್ತರಿಸಲ್ಪಟ್ಟಿತು.

ಯಾವುದೋ ಒಂದು ಚಾರಿಟಿ ಕರೆ, ನಾವು ಇಂತಹ ಸಂಸ್ಥೆಯವರು, ಇಷ್ಟಿಷ್ಟು ಜನ ಸೇವೆ ಮಾಡುತ್ತಿದ್ದೇವೆ, ಎಂದೆಲ್ಲಾ ಹೇಳಿದಳು ಆಕೆ. ನಾನು ಉತ್ತರಿಸಿದೆ, 'ನೋಡಿ ಮೇಡಂ, ನಾನೂ ತುಂಬಾ ಬಡವ. ನನ್ನ ಹೆಂಡತಿಗೆ ಆರೋಗ್ಯ ಚೆನ್ನಾಗಿಲ್ಲ. ಆಪರೇಶನ್ ಆಗಬೇಕು, ಲಕ್ಷಗಟ್ಟಲೆ ಹಣ ಬೇಕು. ನನ್ನ ಮಗ ಸೋಮಾರಿ, ಉಡಾಫೆಯವನು. ನನ್ನಿಂದ ಎಲ್ಲಾ ಆಸ್ತಿ ಬರೆಸಿಕೊಂಡು ನನ್ನನ್ನು ಬೀದಿಗೆ ತಳ್ಳಿದ್ದಾನೆ. ನನ್ನ ವಯಸ್ಸೂ ಎಂಭತ್ತೈದು. ದಯವಿಟ್ಟು ನೀವೆಲ್ಲಾ ಸೇರಿ ನನಗೆ ಹಣ ಸಹಾಯ ಮಾಡಬೇಕು. ನಿಮ್ಮನ್ನೆಲ್ಲಾ ದೇವರು ಚೆನ್ನಾಗಿಟ್ಟಿರಲಿ.'

ಇಷ್ಟು ಹೇಳುವಷ್ಟರಲ್ಲಿ ಆಕೆ ಏನೂ ಉತ್ತರಿಸದೇ ಕರೆ ಕಟ್ ಮಾಡಿದಳು.

ಒಂದಿಷ್ಟು ನಗುವ ಹವ್ಯಾಸ ಬೆಳೆಸಿಕೊಂಡರೆ ಕರಕರೆ ಮಾಡುವ ಕರೆಗಳಿಂದಲೂ ಹಾಸ್ಯ ಹೊಮ್ಮಿಸಬಹುದು, ಅಲ್ಲವೇ?

**ಮೂಲಾ ನಕ್ಷತ್ರದ ಹುಡುಗಿಯೊಬ್ಬಳಿಗೆ ಮದುವೆ ಆಗುವುದು ಕಷ್ಟವಾಗಿತ್ತು. ಹುಡುಗಿಯ ಚಿಕ್ಕಪ್ಪ ಬುದ್ಧಿವಂತ, ಗಟ್ಟಿಗ ಮತ್ತು ಒಳ್ಳೆಯ ಮಾತುಗಾರ. ಹೇಗೋ ಮಾಡಿ ಒಂದು ಒಳ್ಳೆಯ ಸಂಬಂಧ ಕುದುರಿಸಿದರು. ಮದುವೆಯೂ ಆಗಿ ಹೋಯಿತು. ಸುಖ ಸಂಸಾರ, ಇನ್ನೇನು ಸ್ವರ್ಗ ಮೂರೇ ಗೇಣು ಎನ್ನುವಷ್ಟರಲ್ಲಿ ಹುಡುಗಿಯ ಅತ್ತೆ ಹೃದಯಾಘಾತದಿಂದ ತೀರಿ ಹೋದರು. 'ಹುಡುಗಿಯ ಕಾಲ್ಗುಣ ಸರಿ ಇಲ್ಲ ಅದಕ್ಕೇ ಹೀಗಾಯಿತು' ಅಂತ ಹುಡುಗನ ಮನೆಯವರು ಕಿರಿಕಿರಿ ಶುರು ಮಾಡಿ, ಮದುವೆ ಮಾಡಿಸಿದ ಹುಡುಗಿಯ ಚಿಕ್ಕಪ್ಪನನ್ನು ಕರೆಸಿ ಕ್ಯಾತೆ ತೆಗೆದರು. ಹುಡುಗಿಯ ಚಿಕ್ಕಪ್ಪ ಸ್ವಲ್ಪವೂ ವಿಚಲಿತನಾಗದೆ - 'ಈಗೇನಾಯಿತು? ಒಳ್ಳೆಯದೇ ಆಗಿದೆಯಲ್ಲ? ಹುಡುಗಿಯ ಕಾಲ್ಗುಣದಿಂದ ಹುಡುಗಿಯ ಅತ್ತೆಗೆ ಮುತ್ತೈದೆ ಸಾವು ಬಂದಿದೆ! ಇದಕ್ಕಿಂತ ಪುಣ್ಯ ಬೇಕೇ?' ಎಂದು ಬಾಂಬ್ ಹಾಕಿ ಎಲ್ಲರ ಬಾಯಿ ಮುಚ್ಚಿಸಿದರಂತೆ.**

# ಬಣ್ಣದ ಕಡ್ಡಿ – ಹಾಸ್ಯಕ್ಕಿಲ್ಲ ಅಡ್ಡಿ

## ಅನಿತಾ ನರೇಶ್ ಮಂಚಿಯ ಪುಸ್ತಕ ಪರಿಚಯ

ಅನಿತಾ ನರೇಶ್ ಮಂಚಿ 'ಬ್ಲಾಗಿನೊಳು ಮೌಸ್ ಹಿಡಿದು ಬಳಿಗೆ ಬಂದ ಲೇಖಕಿಯು' ಫೇಸ್ ಬುಕ್ ಈಕೆ ದಿನನಿತ್ಯವೂ ಬಳಸುವ ಬ್ಲ್ಯಾಕ್‌ಬೋರ್ಡ್, ಮೌಸೇ ಚಾಕ್‌ಪೀಸು. ಮಂಚಿ ಗ್ರಾಮದ ಖ್ಯಾತ, ಅಷ್ಟೇ ಅಲ್ಲದೆ ಶ್ರೇಷ್ಠ ಛಾಯಾಚಿತ್ರಗಾರರಾದ (ಖ್ಯಾತರೆಲ್ಲರೂ ಶ್ರೇಷ್ಠರೇ ಆಗಬೇಕಿಲ್ಲವಲ್ಲವೇ) ನರೇಶ್ ಹಾಗೂ ಅವರ ಕೃಷಿಕ ಕುಟುಂಬದ ಛಾಯೆಯಲ್ಲಿ ಮೂಡಿಬಂದ ಈ ನವೋಲ್ಲಾಸದ ಲೇಖಕಿ ಆ ಮನೆಗೆ ಮುದ್ದಿನ ಸೊಸೆಯಾಗಿ, ನಾಡಿಗೆ ಒಳ್ಳೆಯ ಬರಹಗಾರ್ತಿಯಾಗಿ ಮೂಡುತ್ತಿದ್ದಾರೆ. ಹಿರಿಯ ಲೇಖಕಿ ಶ್ರೀಮತಿ ಭುವನೇಶ್ವರಿ ಹೆಗಡೆಯವರು ಈ ಲೇಖಕಿಯನ್ನು ತಮ್ಮ 'ಉತ್ತರಾಧಿಕಾರಿ' ಎಂದು ಘೋಷಿಸಿರುವುದು ಲೇಖಕಿಯ ಅಂತಃಸತ್ವಕ್ಕೆ ಹಿಡಿದ ದರ್ಪಣವಾಗಿದೆ.

ಅನಿತಾರವರು ಬರೆದ 'ಬಣ್ಣದ ಕಡ್ಡಿ' ಅವರ ಚೊಚ್ಚಲ ಕಥಾಸಂಕಲನ. ಇತ್ತೀಚೆಗೆ ಬಿಡುಗಡೆಗೊಂಡ ಈ ಪುಸ್ತಕದಲ್ಲಿ ಇರುವ ಎಲ್ಲಾ ಲೇಖನಗಳೂ ಸರಸಮಯ, ಹಾಸ್ಯಮಯ ಹಾಗೂ ಚುರುಕುಗತಿಯುಳ್ಳವಾಗಿವೆ. ಹೆಣ್ಣೊಂದು ಚಿಕ್ಕಂದಿನಲ್ಲಿ ಅನುಭವಿಸುವ ಎಲ್ಲಾ ಭಾವಗಳು ಹಾಸ್ಯದ ಹೂರಣಕ್ಕೆ ಭಾಷೆಯ ಕಣಕ ಸೇರಿ ರುಚಿಯಾದ ಒಬ್ಬಟ್ಟುಗಳಾಗಿ ಮೂಡಿವೆ. ಅಪ್ಪನ ಲಡಕಾಸಿ ಸ್ಕೂಟರ್, ಅಮ್ಮ ತೆಗೆದಿರಿಸಿಕೊಂಡ ಬಣ್ಣದ ಕಡ್ಡಿ, ನಡುರಾತ್ರಿಯಲ್ಲಿ ಒಬ್ಬಳೇ ಬರಬೇಕಾದಾಗಿನ ತಲ್ಲಣ, ಅಪ್ಪ-ಮಗ ಸೇರಿ ಅಡಿಗೆ ಮಾಡಿದ ಅವಾಂತರ ಎಲ್ಲವೂ ಪಕ್ಕೆ ಹಿಡಿದು ನಗುವಂತಾಗಿಸದಿದ್ದರೂ ನಗೆ ಚಿಮ್ಮಿಸಿ, ಪುಸ್ತಕ ಓದಿ ಮುಗಿಸಿದ ನಂತರವೂ ಚಪ್ಪರಿಸುವ ರುಚಿ ಉಳಿದಿರುವಂತಾಗಿಸುವ ಲೇಖನಗಳು. ಅಶೋಕ್ ಭಾಗಮಂಡಲ ಅವರ ನಿರಂತರ ಒತ್ತಾಸೆ, ಭುವನೇಶ್ವರಿ ಹೆಗಡೆಯವರ ಪ್ರೋತ್ಸಾಹ, ಎಲ್ಲವೂ ಅವರಿಗೆ ಶ್ರೀರಕ್ಷೆ. ಒಂದೇ ಕೊರತೆ - ಓದುಗರದು. ನೀವು ಕೊಂಡು ತಪ್ಪದೆ ಓದುವಿರಲ್ಲವೇ...?

ಪುಸ್ತಕದ ಪ್ರಕಾಶಕರು - ತೇಜು ಪಬ್ಲಿಕೇಷನ್ಸ್. ಪ್ರತಿಗಳು ಅಂಕಿತ, ಸಪ್ನ ಮತ್ತು ಇತರ ಮಳಿಗೆಗಳಲ್ಲಿ ಲಭ್ಯ.

# ಇವೆಲ್ಲಾ ಏಪ್ರಿಲ್ ಒಂದನೇ ತಾರೀಖೇ ಆಗುತ್ತೆ – ಯಾಕೆ ಗೊತ್ತಾ? ಓದಿ ನೋಡಿ

● ಬೇಲೂರು ರಾಮಮೂರ್ತಿ

**ಹು**ಡುಗಿಗೆ ಪ್ರಪೋಸ್ ಮಾಡೋಕೆ ಒಳ್ಳೇ ದಿನ ಏಪ್ರಿಲ್ 1 – ಯಾಕೆ ಗೊತ್ತಾ
ಅವಳು ಓಕೆ ಅಂದ್ರೆ ಒಳ್ಳೇದೇ ಆಯ್ತು
ಇಲ್ಲದಿದ್ರೆ ಏಪ್ರಿಲ್ ಫೂಲ್ ಕಣೆ ಅಂದುಬಿಡಿ

★★ ★★ ★★

ಏಪ್ರಿಲ್ ಫೂಲ್ ದಿನ ನಾನು ನಿನಗೆ ವಿಷ್ ಮಾಡಲ್ಲ – ಯಾಕೆ ಗೊತ್ತಾ
ನಿನಗೆ ಯಾವತ್ತು ವಿಷ್ ಮಾಡಿದ್ರೂ ಒಂದೇ
ಎನಿವೇ ನೀನು ಎಲ್ಲಾ ದಿನಾನೂ ಫೂಲೇ

★★ ★★ ★★

ಯಾರೋ ಒಬ್ಬರು ನಿನ್ನನ್ನು ಮಿಸ್ ಮಾಡ್ಕೊತಾ ಇದಾರೆ
ಯಾರೋ ಒಬ್ಬರು ನಿನ್ನನ್ನು ನೆನೆಸುತ್ತಿದ್ದಾರೆ
ಯಾರೋ ಒಬ್ಬರು ನಿನ್ನನ್ನು ಆರಾಧಿಸುತ್ತಿದ್ದಾರೆ – ಯಾರು ಗೊತ್ತಾ
ಝೂನಲ್ಲಿರೋ ಕೋತಿ

★★ ★★ ★★

ಬೇಗ ಬಾ ನಿನ್ನ ಗ್ರೂಪಿನ ರಕ್ತ ಬೇಕಾಗಿದೆ
ಒಬ್ಬರ ಜೀವ ಉಳಿಸಬೇಕಾಗಿದೆ – ಯಾರು ಅಂದ್ಯಾ
ರಸ್ತೇಲಿ ಒಂದು ಕತ್ತೆಗೆ ಅಪಘಾತವಾಗಿದೆ

★★ ★★ ★★

ನೀನು 60 ಜೇಮ್ಸ್ ಬಾಂಡ್‌ಗೆ ಸಮ
ಖುಷಿಯಾಯ್ತ – ಹೇಗೇಂತ ಕೇಳೋದಿಲ್ವಾ

ಬಾಂಡ್ ಅಂದ್ರೆ 007 ತಾನೇ

007 ಅನ್ನು 60ರಿಂದ ಗುಣಿಸು

ಎಷ್ಟು ಬಂತು 420

ನಾ ಹೇಳಿದ್ದು ಸರಿಯಲ್ವಾ

★★ ★★ ★★

ನೀನು ಬರೋ ಮೊದಲು ನನ್ನ ಬದುಕು ಕತ್ತಲಾಗಿತ್ತು

ನೀನು ಬಂದ ಮೇಲೆ ಬೆಳಕಾಯಿತು – ಯಾಕೆ ಗೊತ್ತಾ

ನೀನೊಂದು ಟ್ಯೂಬ್ ಲೈಟು

★★ ★★ ★★

ಟ್ರಾಫಿಕ್ ಪೋಲೀಸಿಗೆ ನಾನು ಬೆನ್ನ ಮೇಲೆ ಹೊಡೆದೆ

ಅವನು ನಕ್ಕ – ಯಾಕೆ ಗೊತ್ತಾ

ಅವನು ನನ್ನ ಸೋದರ ಮಾವ

★★ ★★ ★★

ಏಪ್ರಿಲ್ 1 ಮಾತ್ರ ಮೂರ್ಖರ ದಿನಾಚರಣೆ ಅಂತ ಯಾಕೆ ಆಚರಿಸುತ್ತಾರೆ

ಬೇರೆ ದಿನಗಳಲ್ಲೂ ನಮ್ಮನ್ನು ಮೂರ್ಖರನ್ನಾಗಿಸ್ತಾನೆ ಇದಾರೆ

ರಾಜಕಾರಿಣಿಗಳು – ತಮ್ಮ ಪೊಳ್ಳು ಆಶ್ವಾಸನೆಗಳಿಂದ

ಮಾಲ್‌ಗಳವರು – ತಮ್ಮ ರಿಯಾಯಿತಿ ದರಗಳಿಂದ

ಹೋಟೆಲಿನವರು – ತಮ್ಮ ಹೊಸ ರುಚಿಯಿಂದ

★★ ★★ ★★

ಬೇರೆ ಯಾರೋ ಮೋಸ ಮಾಡಿದ್ರೆ ನನಗೆ ಅಷ್ಟು ಬೇಜಾರಾಗ್ತಿರಲಿಲ್ಲ

ನೀನು ಮೋಸ ಮಾಡಿದ್ರಿಂದ ಬೇಜಾರಾಯ್ತು – ಯಾಕೇಂದ್ರೆ

ಒಂದು ಕತ್ತೆಗೂ ಮೋಸ ಮಾಡೋಕೆ ಬರುತ್ತಲ್ಲ ಅಂತ

★★ ★★ ★★

ನಿಮ್ಮ ನಾಲಿಗೆಯಿಂದ ನಿಮ್ಮ ಕೆಳತುಟಿಯನ್ನು ಸವರೋಕೆ ಆಗಲ್ಲ

ನಾನು ಹೀಗಂದ ತಕ್ಷಣ ಕಡೇಪಕ್ಷ ನೂರು ಜನ ಪ್ರಯತ್ನ ಪಡ್ತಿರ್ತಾರೆ

ಅದರಲ್ಲಿ ನೀವೂ ಒಬ್ಬರು ತಾನೇ

★★ ★★ ★★

ಏಪ್ರಿಲ್ 1ನೇ ತಾರೀಖು
ನಿನ್ನನ್ನು ಸ್ಟಾರ್ ಹೋಟೆಲಿಗೆ ಕರ್ಕೊಂಡು ಹೋಗೋಣ
ಅಂತ ಪ್ಲಾನ್ ಹಾಕಿದ್ದೆ
ಹಾಳಾದೋರು ಎಲ್ಲ ಕೆಡಿಸಿಬಿಟ್ರು
ಅಲ್ಲಿ ಬೋರ್ಡ್ ಹಾಕಿದ್ದು ಏನು ಗೊತ್ತಾ
ಯಾರೂ ತಮ್ಮ ಸಾಕು ಪ್ರಾಣಿಗಳನ್ನು
ಕರ್ಕೊಂಡು ಬರಬಾರದು ಅಂತ

★★ ★★ ★★

ಬದುಕಿಗೆ ಒಳ್ಳೆ ಸಂಬಂಧಗಳು ಮುಖ್ಯ
ಅದಕ್ಕೆ ನಾವಿಬ್ಬರೂ ಸಂಬಂಧ ಬೆಳೆಸೋಣ
ನಾನು ಗಂಡ ಆಗ್ತೀನಿ - ನೀನು ನನ್ನ
ಮಕ್ಕಳಿಗೆ ತಾಯಿ ಆಗು

★★ ★★ ★★

ಅವನು ನನಗೆ ದಾವಣಗೆರೆ ಬೆಣ್ಣೆ ಮಸಾಲೆ ಕೊಡಿಸ್ತೀನಿ ಅಂದಿದ್ದ
ಸರಿಯಾಗಿ ಮೂರು ಗಂಟೆಗೆ ಬಸ್ ಸ್ಟಾಂಡಿಗೆ ಬಂದುಬಿಡು ಅಂದ
ನಾನು ಅಲ್ಲಿ ಹೋದರೆ
ದಾವಣಗೆರೆಗೆ ಎರಡು ಬಸ್ ಟಿಕೆಟ್ ಕೊಂಡಿದ್ದ
ಯಾಕೋ ಅಂದ್ರೆ
ದಾವಣಗೆರೆಲಿ ಬೆಣ್ಣೆ ದೋಸೆ ತಿನ್ನೋಕೆ ಅಂದ

★★ ★★ ★★

ನನ್ನ ಹುಡುಗ ಶ್ರೀಮಂತನಾಗಿರಬೇಕು
ಹಾಗೂ ತುಂಬಾ ಸಿಗರೇಟ್ ಸೇದುವವನಾಗಿರಬೇಕು
ಅಂದಳು ಸಿಂಗಾರಿಯೊಬ್ಬಳು
ಯಾಕೆ ಅಂತ ಕೇಳಿದರೆ
ತುಂಬಾ ಸಿಗರೇಟ್ ಸೇದುವವರು
ಬೇಗ ಸಾಯುತ್ತಾರಂತೆ ಅಂದು
ಕಣ್ಣು ಮಿಟುಕಿಸಿದಳು

# ಕಟ್ಟೆ ಪ್ಲಾನ್

• ಡಾ|| ರುಕ್ಮಿಣಿ ರಘುರಾಮ್

**ಬು**ಧವಾರ ಸಂಜೆ ಎಂದಿನಂತೆ ಎಲ್ಲ ಐದು ಸ್ನೇಹಿತರ ಸವಾರಿ ಯಥಾ ಪ್ರಕಾರ ಅವರ ಮಾಮೂಲಿ ಕಟ್ಟೆಯ ಮೇಲೆ ಸ್ಥಾಪನೆಯಾಯಿತು. ಈ ಕಟ್ಟೆಯ ಮೆಂಬರ್ಸ್ ದಿನಕ್ಕೆ ಒಂದು ಬಾರಿ ಕಟ್ಟೆಯ ಮೇಲೆ ಕುಳಿತು ಹತ್ತು ನಿಮಿಷವಾದರೂ ಹರಟೆ ಹೊಡೆಯದೆ ಇದ್ದರೆ ಏನೋ ಕಳಕೊಂಡ ಭಾವನೆ. ಯಾವುದೇನೇ ಆಗಲಿ ಕಟ್ಟೆ ಮೀಟಿಂಗ್ ಮಾತ್ರ ದಿನಕ್ಕೊಮ್ಮೆ ಸಾಗಲೇಬೇಕು. ಅಂದ ಹಾಗೇ ಹೇಳೋದೇ ಮರೆತೆ, ಇವರ ಮೀಟಿಂಗ್‌ಗೆ ಬೇರೆ ಮೀಟಿಂಗಿನ ಹಾಗೆ ಕೋರಮ್ಮು ಗೀರಮ್ಮುಗಳ ಹಂಗಿಲ್ಲ, ಇಬ್ಬರೇ ಆದರೂ ಸರಿ, ಟೈಂ ಅಂತ ಏನೂ ಇಲ್ಲ, ಬೆಳಗ್ಗೆ ಆರರಿಂದ ರಾತ್ರಿ ಹನ್ನೆರೆಡರವರೆಗೂ ಯಾವಾಗಲಾದರೂ ಆಗಬಹುದು. ಆ ಟೈಮಿನ ಮೇಲೆ ಡಿಪೆಂಡ್ ಆಗೋದು ಕಾಫಿ ತಿಂಡಿನೋ, ಊಟಾನೋ, ಪಾನಿಪುರಿನೋ, ಏನು ತಿನ್ನುವುದು ಎಂಬುದು. ಇವರೆಲ್ಲರೂ ಚಿಕ್ಕವಯಸ್ಸಿನಿಂದಲೂ ಸ್ನೇಹಿತರೇ, ಆದ್ದರಿಂದ ಇಲ್ಲಿ ಬರೀ ಏಕವಚನ ಪ್ರಯೋಗವೇ, ಇವರ discussionಗೆ ಬರದೆ ಇರುವ ವಿಷಯಗಳೇ ಇಲ್ಲ ಎನ್ನಬಹುದು. ರಾಜಕೀಯ ಬೆಳವಣಿಗೆ, ಕರೆಂಟು, ಬೆಲೆ, ಪಕ್ಕದ ಮನೆಯವರ ಮದುವೆ ವಿಷಯ, ಮುಂದಿನ ರೋಡಿನಲ್ಲಿ ಕಟ್ಟುತ್ತಿರುವ Apartmentನ ಬೆಲೆಗಳು, ವಾಕಿಂಗು, ಜಾಗಿಂಗು ಯಾವುದು bestಉ, ಹಾಗಲಕಾಯಿ ರಸದಿಂದ ಶುಗರ್ ಕಡಿಮೆ ಆಗುತ್ತದೆಯೇ, ಹೊಸ ಹೊಸ businessಗಳು ಹೀಗೆ ವೈವಿಧ್ಯಮಯ Topicಗಳು.

ಈ ನಡುವೆ ನಮ್ಮ ಬೆಂಗಳೂರು ಪೋಲೀಸರು ಬಂದು ಬಹಳ ಉತ್ತಮವಾದ ಕೆಲಸವನ್ನು ಮಾಡುತ್ತಿದ್ದಾರೆ. ಅದೇನಪ್ಪ ಅಂದ್ರೆ ಕುಡಿದು ವಾಹನ ಚಲಾಯಿಸುವವರನ್ನು ಹಿಡಿದು ನಿರ್ದಾಕ್ಷಿಣ್ಯವಾಗಿ fine ಹಾಕ್ತಾ ಇದಾರೆ. ಇದು ನಿಮಗೂ ಗೊತ್ತು. ಕೆಲವರು ಈಗಾಗ್ಲೆ ಬೈಕೊಂಡು fine ಕಟ್ಟಿರಲೂಬಹುದು. ಅದನ್ನೆಲ್ಲ ಜ್ಞಾಪಿಸಕ್ಕಲ್ಲ ನಾನು ಈ ಲೇಖನ ಬರೀತಾ ಇರೋದು. ತಪ್ ತಿಳ್ಕೋಬೇಡಿ. ಬೆಂಗಳೂರಿನಂಥ ಮಹಾನಗರದಲ್ಲಿ ಇಂಥ fine ಹಾಕದೆ ಇದ್ದರೆ ಈ ಜನರನ್ನು ನಿಭಾಯಿಸೋಕ್ಕಾದರೂ ಆಗತ್ತಾ? ನೀವೇ ಹೇಳಿ. ಯಾರೋ ಪರಲೋಕದ ಧ್ಯಾನದಲ್ಲಿ ವಾಹನ ಚಲಾಯಿಸಿ ನಿರ್ದೋಷಿಗಳಾದ ಪಾದಚಾರಿಗಳನ್ನು ಸುಲಭವಾಗಿ ಯಮಲೋಕಕ್ಕೆ ಕಳಿಸಿಬಿಟ್ಟರೆ ಬೇರೆಯವರು ಸುಮ್ಮನೆ ಇರ್ತಾರಾ? ಆದರೆ ಜನರ ಬುದ್ಧಿ ನೋಡಿ, ಮೂರು ಸಲ ನಾಲ್ಕು ಸಲ fine ಹಾಕಿದ್ರೂ, ಸ್ಕೂಲು ಮಕ್ಕಳ ಹಾಗೆ ತಿದ್ದಿಕೊಳ್ಳದೆ ಇದ್ದರೆ ಸುಮ್ಮನೆ ಬಿಡ್ತಾರಾ ಪೋಲಿಸಿನವರು. ನಮ್ಮ ಆತಿಥ್ಯವನ್ನು ಸ್ವಲ್ಪ ಸ್ವೀಕರಿಸಿ ಅಂತ ಕರೀತಾರೆ.

ಆದರೆ ದೊಡ್ಡ ದೊಡ್ಡ ಹುದ್ದೆಗಳನ್ನು ಅಲಂಕರಿಸಿಕೊಂಡಿರುವ ಈ VIPಗಳಿಗೆ ಅವರು ಕರೆದರೆ, ಅವಮಾನ ಅಲ್ಲವಾ? ಹಾಗೂ ಹೀಗೂ ಮಾಡಿ, ಸಿಗದೆ ಓಡಾಡಿಕೊಂಡಿರ್ತಾರೆ.

ಕಟ್ಟೆಯಲ್ಲಿ ಆಗ ತಾನೇ ಒಬ್ಬ ಸ್ನೇಹಿತ ಪೋಲೀಸಿನವರ ಕೈಗೆ ಸಿಕ್ಕಿ fine ಕಟ್ಟಿದ್ದು ಎಲ್ಲರಿಗೂ ಗೊತ್ತಾಗಿದೆ. ಇದು ಹೀಗೆ ಆದರೆ ಎಷ್ಟು fineಉ ಅಂತ ಕಟ್ಟೋದು. ಹಂಗೇ ಮಾತಾಡ್ತಾ ಕೂತಿದ್ದಾಗ ಕಟ್ಟೆ ಚೂಡಿಗೆ ಒಂದು Idea ಹೊಳದೇ ಬಿಟ್ಟಿತು.

''ನೋಡ್ರೋ ಈಗ ಎಲ್ಲದಕ್ಕೂ Insurance Compulasary ಅಲ್ವ'' ಹೌದು ಅಂದ ಮಂಜು.

''ಈಗ ನೋಡಪ್ಪ ಗಾಡಿ accident ಆದರೆ Insurance Company ನವರು ಎಲ್ಲ ಅಂದಾಜು ಮಾಡಿ, ರಿಪೇರಿಗೆ ಅಂತದುಡ್ಡು ಕೊಡ್ತಾರಲ್ವ.'' ಮುಂದುವರೆಸುತ್ತ ''ನಂಗೊಂದು Idea ಕಣೋ, ಈ drankun driving ಅಂತ ಪೋಲಿಸಿನವರು ಹಿಡ್ಕೋತಾರಲ್ಲ, ಆಗೆಲ್ಲ fine ಕಟ್ಟಬೇಕಲ್ವಾ, ಅದಕ್ಕೂ ಒಂದು Insurance Company ಮಾಡಿದ್ರೆ ಹೇಗೆ?''

ಈ ಮಾತು ಕೇಳಿದ್ದೇ ತಡ ನಾಣಿ ಹೇಳ್ದ ''ಅದಕ್ಕ್ಯಾರೋ Insurance company ಮಾಡ್ತಾರೆ, ಉಗಿದು ಉಪ್ಪಾಗ್ತಾರೆ ಅಷ್ಟೆ' ಅಂದ.

ಅಷ್ಟರಲ್ಲಿ ಮಂಜು ''ಸ್ವಲ್ಪ ಇರೋ, ಅವನು ಏನು ಹೇಳ್ತಾನೆ ಕೇಳೋಣ'' ಅಂದಿದ್ದೇ ಸರಿ, full support ಬಂದಂಗಾಗಿ ಚೂಡಿ Start ಮಾಡಿದ. ''ನೋಡಪ್ಪ Insurance Company ಇದೇ Pourpose ಅಂತ ಮಾಡಬೇಕು. ಎಲ್ಲ members ಅಂದ್ರೆ benefit ಬೇಕಾದವ್ರು ತಿಂಗಳು ತಿಂಗಳೂ ನೂರು ರೂಪಾಯಿಕಟ್ಟಬೇಕು. ಆಯಾ membersಗೆ police fine ಹಾಕ್ದಾಗ, Insurance Company ಕಟ್ಟತ್ತೆ.'' ''ಎಷ್ಟು ಜನ ಕಟ್ಟಬೋದಪ್ಪ'' ಅಷ್ಟರಲ್ಲೇ ಮಂಜುಗೆ urgent.

ಅದಕ್ಕೆ ನಾಣಿ ''ಇರೋ ಸ್ವಲ್ಪ, full discussion ಮಾಡಾಣ, ಆತುರ ಮಾಡ್ಬೇಡ'' ಅಂದ. ತಿರುಗಿ ಚೂಡಿ ವಿವರವಾಗಿ ಪ್ಲಾನ್ ಹೇಳಕ್ಕೆ ಪ್ರಾರಂಭ ಮಾಡಿದ. ''ನೋಡಪ್ಪ ನೂರು ಜನ Policy ತೊಗೊಂಡ್ರು ಅಂತಿಟ್ಕೋ, ಇಪ್ಪತ್ತು ಜನ claim ಮಾಡಬಹುದು. ಮಿಕ್ಕ ಎಂಬತ್ತು ಜನರ ದುಡ್ಡಿರತ್ತಲ್ಲ, ಆದರೆ ಒಂದು ಕಂಡೀಷನ್ ಹಾಕಬೇಕು. ಅವರೆಲ್ಲ ತಿಂಗಳು ತಿಂಗಳೂ Correct ಆಗಿ ಕಟ್ಟಿದರೆ ಮಾತ್ರ benefit ಬರತ್ತೆ ಅಂತ.'' ''ಅದೂ ಸರಿ, ಜೊತೆಗೆ fine ಎಷ್ಟೆಷ್ಟು, ಎಷ್ಟು ಸಲ ಅಂತ full detail ತಿಳ್ಕೋ ಬೇಕಾಗತ್ತೆ, ಆಮೇಲೆ ನೀಟಾಗಿ work out ಮಾಡಬಹುದು'' ಎಂದ ಮಂಜು.

ಇದೊಂದು ದೊಡ್ಡ business planನ ರೂಪ ತೊಗೊಳ್ತಾ ಇತ್ತು.

ಕಟ್ಟೆ ಮೆಂಬರ್ಸ್‌ದು ಯಾವಾಗಲೂ democracy. ಅವರು ಎಲ್ಲರೂ ಸೇರಿ, ಚರ್ಚೆ ಮಾಡಿ, ಯಾವುದಾದ್ರೂ ನಿರ್ಧಾರ ಕೈಗೊಳ್ತಾ ಇದ್ದದು. ಅಷ್ಟೊತ್ತಿಗೆ ಮತ್ತೊಬ್ಬ ಕಟ್ಟೆಯ ಮೆಂಬರ್ ಪಾರಿನ್ ಆಗಮನವಾಯಿತು. ಇವರುಗಳ ಮುಖ ನೋಡಿ ಏನೋ serious discussion ಅನ್ಕೊಂಡು ''ಏನ್ರೋ ಅದು ಅಷ್ಟು deep ಆಗಿ ಯೋಚನೆ ಮಾಡ್ತಾ ಇದೀರ, ಯಾವುದಾದರೂ ಹೊಸಾ plan'' ಅಂದದ್ದಕ್ಕೆ ಚೂಡಿ ತಲೆ ಅಂದ್ರೆ business

ತಲೆ, ಒಳ್ಳೆ proposal ಕಣೋ. ಒಂದೇನಪ್ಪ ಅಂದ್ರೆ ನನ್ನ ಪ್ರಕಾರ ಒಂದು policy holderಗೆ 2 ಸಲ ಮಾತ್ರ Insurance ಇಂದ ದುಡ್ಡು ಕೊಡ್ತೀವಿ ಅಂತ ಹೇಳಬೇಕು. Higher Paymentಗೆ ಬೇರೆ Policy ಮಾಡಬೇಕು. ಹಾಗಾದ್ರೆನೇ work out ಆಗೋದು. ಇಲ್ಲದೆ ಇದ್ರೆ, ದಿನ ಬೆಳಗಾದ್ರೆ Fine ಹಾಕಿಸಿಕೊಂಡು ಬಂದ್ರೆ, ನಾವು ಪೂರೈಸಕ್ಕಾಗಲ್ಲ, ಏನೇನೂ ಗಿಟ್ಟಲ್ಲ ಅದ್ರಿಂದ.'' ಅಂದಾಗ ಎಲ್ಲರಿಗೂ ಅದು ಸ್ವಲ್ಪ ಒಪ್ಪಿಗೆ ಆದ ಹಾಗಾಯಿತು. ನಾಳೆ ಇದರ ಬಗ್ಗೆ ಇನ್ನೂ ಚರ್ಚೆ ಮಾಡಿ, details ಎಲ್ಲ ತಿಳಕೊಂಡು ಬೇಗ execute ಮಾಡಬೇಕು ಅಂತ ಮಾತಾಡಿಕೊಂಡು ಎಲ್ಲರೂ ಮನೆ ಕಡೆ ಹೊರಟರು. ಹೊಟ್ಟೆ ತಾಳ ಹಾಕ್ತಾ ಇತ್ತಲ್ಲ.

ಮಾರನೆಯ ದಿನ ಸಂಜೆ ಮಾಮೂಲಾಗಿ ಎಲ್ಲರೂ ಕಟ್ಟೆಯಲ್ಲಿ ಕೂತಾಗ, ಈ ವರ್ಷ ಗಣೇಶನ್ನ ಕೂಡಿಸೋಣ, grand ಆಗಿ ಪೂಜೆ ಮಾಡೋಣ ಅಂತ ಪ್ಲಾನ್ ಮಾಡಕ್ಕೆ ಶುರು ಮಾಡಿದ್ರು ಕಟ್ಟೆ ಗೆಳೆಯರು.



# ವಿವಿಧ ಶಾಸ್ತ್ರ, ವಿವಿಧ ಉಪಚಾರ!

● ನಂದಿನಿ ಕಾಪಡಿ

**ಸು**ಮಾರು ಆರು ತಿಂಗಳ ಹಿಂದೆ, ಡಾಕ್ಟರ ಕ್ಲಿನಿಕ್‌ನಲ್ಲಿ ಕೂತಿದ್ದೆ. ಒಳಗಡೆ ಯಜಮಾನರ ಬೆನ್ನಿಗೆ, ಫಿಸಿಯೋಥೆರಪಿ ಉಪಚಾರ ನಡೆಯುತ್ತಿತ್ತು. ಅಲ್ಲಿದ್ದ ಎಲ್ಲಾ ಮ್ಯಾಗಜಿನ್‌ಗಳನ್ನೂ ಒಂದು ಸಲ ಓದಿ ಮುಗಿಸಿದ್ದಾಗಿತ್ತು. ನಾನೇ ತಂದಿದ್ದ ನ್ಯೂಸ್ ಪೇಪರ್ ಕೂಡ ಓದಿ ಆಗಿತ್ತು. ಬಾಗಿಲನ್ನು ತೆಗೆದು ಒಬ್ಬ ಮಹಿಳೆ ಒಳಗೆ ಬಂದವಳೇ, ತುಂಬಾ ಆತುರದಿಂದ ಹೊರಗಡೆ ಕೂತಿದ್ದ receptionistನ ಹತ್ತಿರ ''ನಿಮ್ಮ ಕ್ಲಿನಿಕ್‌ನಲ್ಲಿ ಸ್ಪಾಂಡಿಲೈಟಿಸ್‌ಗೆ ಉಪಚಾರ ನೀಡುತ್ತೀರಾ'' ಎಂದು ಪ್ರಶ್ನಿಸಿದಳು.

''ಹೌದು. ದೇಹದ ಯಾವುದೇ ಭಾಗಕ್ಕೆ ಇಲ್ಲಿ ಉಪಚಾರ ನೀಡಲಾಗುತ್ತದೆ. ಒಂದೇ ನಿಮಿಷ, ನಮ್ಮ ಜೂನಿಯರ್ ಡಾಕ್ಟರ್ ಅವರನ್ನು ಕರೆಯುತ್ತೇನೆ'' ಎಂದವಳೇ ಇಂಟರ್ಕಾಮ್ ಮೂಲಕ ಹೊರಗಡೆ ಪೇಷಂಟ್ ಒಬ್ರುಕಾಯ್ತಿದ್ದಾರೆ ಎಂದು ಬಿತ್ತರಿಸಿದಳು. ತಕ್ಷಣವೇ, ಒಳಗಿನಿಂದ ತುಂಬಾ ಚಿಕ್ಕವರಾಗಿ ಕಾಣುತ್ತಿದ್ದ, ತುಂಬಾ ಸ್ಮಾರ್ಟ್ ಆಗಿದ್ದ ಡಾಕ್ಟರ್ ಬಿಜು ಅವರ ಆಗಮನವಾಯಿತು. ನನ್ನ ಕಡೆ ನೋಡಿ ನಕ್ಕು ''ಹಲೋ ಮೇಡಂ, ನೀವು ಕುಳಿತಿರುವ posture ಸರಿಯಾಗಿಲ್ಲ, ನಿಮಗೆ ಹೇಳಿ ಕೊಟ್ಟಿರುವ ಎಲ್ಲವನ್ನು ಮರೆತು ಬಿಟ್ಟಿದ್ದಿರ ಎಂದು ನನ್ನ ಹಿಂದೆ ಬಂದು ನನ್ನ ಬೆನ್ನನ್ನು ನೆಟ್ಟಗೆ ಮಾಡಿ, ಎಸ್ ಮೇಡಂ ವೆಲ್ಕಮ್ ಟು ಅವರ್ ಕ್ಲಿನಿಕ್ ಎನ್ನುತ್ತಾ, ಆ ಮಹಿಳೆಯ ಹತ್ತಿರ ಹೋದರು!''

ಮಹಿಳೆ : ''ಡಾಕ್ಟರ್, ಸುಮಾರು ಒಂದು ವರ್ಷದಿಂದ ಕುತ್ತಿಗೆ, ಬೆನ್ನು ಮತ್ತು ಎರಡೂ ಕೈಗಳಲ್ಲಿ ಚುಮ ಚುಮ ನೋವಾಗುತ್ತದೆ. ಇದ್ದಕ್ಕಿದ್ದ ಹಾಗೆ ತಲೆ ಸುತ್ತು ಬಂದ ಹಾಗೆ ಅನಿಸುತ್ತದೆ. ಏನಾದರೂ ಸಹಾಯ ಮಾಡುವಿರ?''

ಡಾಕ್ಟರ್ ಬಿಜು : ''ಸರಿಯಾದ ಕಡೆ ಬಂದಿದ್ದೀರಾ.''

ಮಹಿಳೆ : ಡಾಕ್ಟರ್, ನಾನು ಈಗಾಗಲೇ ಆಯುರ್ವೇದಾಚಾರ್ಯರ ಹತ್ತಿರ ಹೋಗಿ ಬಂದಿದ್ದೀನಿ. ಲೇಹ್ಯ, ಚೂರ್ಣ, ಆಸವ, ಕಷಾಯ ಹೀಗೆ ನಾನಾ ತರಹ ಉಪಚಾರ ಮಾಡಿದರು. ಊಹು ಪರಿಣಾಮವೇನು ಕಾಣಬರಲಿಲ್ಲ. ನನ್ನ ಕುತ್ತಿಗೆ ನೋವು ಇನ್ನೂ ಸರಿಯಾಗಿಲ್ಲ.

ಡಾಕ್ಟರ್ ಬಿಜು : ಪರವಾಗಿಲ್ಲ, ಈಗಲಾದರೂ ಸರಿಯಾದ ಕಡೆ ಬಂದಿದ್ದೀರ. ಅಂದ ಹಾಗೆ Xray ರಿಪೋರ್ಟ್ ಎಲ್ಲಿ? ಇಲ್ಲದೆ ಹೋದರೂ ಪರವಾಗಿಲ್ಲ, ಇಲ್ಲೇ Xray, ಸೊನೋಗ್ರಫಿ ಎಲ್ಲವೂ ಮಾಡಿಬಿಡೋಣ ಒಳಗೆ ಬನ್ನಿ ಎನ್ನುತ್ತಾ ಎದ್ದರು.

ಮಹಿಳೆ : ಡಾಕ್ಟರ್, ನನ್ನ ಎಲ್ಲ ರಿಪೋರ್ಟುಗಳೂ ನನ್ನ ಹತ್ತಿರ ಇವೆ. ಇಲ್ಲಿ ನೋಡಿ. ನನ್ನ ಎಲ್ಲ ಟೆಸ್ಟ್‌ಗಳ ಮಾಹಿತಿ ಈ pendriveನಲ್ಲಿವೆ. ನಿಮ್ಮ laptop ಬಹುಶಃ ವೈರಸ್‌ನಿಂದ ಮುಕ್ತವಾಗಿದೆಯೋ ಇಲ್ಲವೋ ಗೊತ್ತಿಲ್ಲ. ಅದಕ್ಕೇ, ನನ್ನ laptop ತಂದಿದ್ದೀನಿ, ನೋಡಿ.

ಡಾಕ್ಟರ್ ಬಿಜು : ನೋಡಿ ಮೇಡಂ ನೀವು ತುಂಬಾ ಕಂಪ್ಯೂಟರ್ savvy ನಿಜ. ನೀವು ತಂದಿರುವಂತಹ ರಿಪೋರ್ಟ್ಸ್ ನಾವು ಸುಮ್ಮನೆ ನೋಡಬಹುದು. ಆದರೆ, ನಮ್ಮ ಹತ್ತಿರ ನೀವು ಮತ್ತೊಂದು ಸಲ ಇವೆಲ್ಲ testsಗಳನ್ನೂ ಮಾಡಿಸಿಕೊಂಡರೆ ಸರಿ. ನಾವು ಬರೀ ನಮ್ಮ machinesಗಳನ್ನೇ ನಂಬುತ್ತೀವಿ.

ಮಹಿಳೆ : ಡಾಕ್ಟರ್, ನಿಮ್ಮ machinesಗಳು ಯಾವ ಕಂಪನಿಯವು? ಅವುಗಳಿಗೆ certification ಇದೆಯೇ? ನಾನು ಒಮ್ಮೆ ಗೂಗಲ್ ನೋಡಿ ನಿಮ್ಮ machinesಗಳು ಸರಿಯಾಗಿವೆ ಎಂದು ಖಚಿತ ಪಡಿಸಿಕೊಂಡು ಆಮೇಲೆ testಗಳಿಗೆ ಸಿದ್ಧವಾಗುತ್ತೇನೆ.

ಡಾಕ್ಟರ್ ಬಿಜು : ಖಂಡಿತವಾಗಿ ಖಾತ್ರಿಪಡಿಸಿಕೊಳ್ಳಿ. ಸರಿ, ನನ್ನ ಪೇಷಂಟ್ ಒಳಗೆ ಕಾಯುತ್ತಿದ್ದಾರೆ. ನೀವು ದಯವಿಟ್ಟು ಸ್ವಲ್ಪ ಹೊತ್ತು ಕಾಯಬೇಕು. ನನ್ನ ಸಹೋದ್ಯೋಗಿ ಡಾಕ್ಟರ್ ಮೀನಲ್ ನಿಮ್ಮ ಕೇಸ್ ಹಿಸ್ಟರಿ ತೆಗೆದುಕೊಳ್ಳುತ್ತಾರೆ.

ಡಾಕ್ಟರ್ ಬಿಜು ಅವರ ನಿರ್ಗಮನ.

ಮಹಿಳೆ ಈಗ ನನ್ನ ಕಡೆ ನೋಡುತ್ತಾ : ನೀವು ಇಲ್ಲಿಗೆ treatment ಗೆಂದು ಯಾವಾಗಿನಿಂದ ಬರುತ್ತಿದ್ದೀರ?

ನಾನು : ನನಗೆ ಎರಡು ವರ್ಷಗಳಾದವು. ಈಗ ನನ್ನ ಯಜಮಾನರ ಟ್ರೀಟ್ಮೆಂಟ್ ನಡೆಯುತ್ತಿದೆ.

ಮಹಿಳೆ : ನಿಮಗೆ ಎರಡು ವರ್ಷಗಳಿಂದ ಗುಣವಾಗಿಲ್ಲವೇ?

ನಾನು : ಹಾಗೇನು ಇಲ್ಲ, ವಯಸ್ಸಿಗನುಗುಣವಾಗಿ ಮೂಳೆಗಳು ಸವೆಯುತ್ತಿರುತ್ತವೆ. ಅದಕ್ಕೆ ಆಗಾಗ ಉಪಚಾರ ನಡೆಸಬೇಕು.

ಮಹಿಳೆ : ನಿಮ್ಮನ್ನು ನೋಡಿದರೆ ಅಷ್ಟೇನೂ ವಯಸ್ಸು ಕಾಣುವುದಿಲ್ಲ, ನೀವು glucosamine ಮಾತ್ರ ಬಿಡದೇ ತೆಗೆದುಕೊಳ್ಳಿ.

ನಾನು (ಸ್ವಲ್ಪ ಬೇಜಾರಿನಿಂದಲೇ) : ಡಾಕ್ಟರ್ ಹೇಳಲಿ ಬಿಡಿ.

ಅಷ್ಟರಲ್ಲಿ ಡಾಕ್ಟರ್ ಮೀನಲ್ ಅವರ ಆಗಮನವಾಯಿತು.

ಡಾ. ಮೀನಲ್ : ಯಾರು ಪೇಷಂಟ್? ಒಹ್! ನಂದಿನಿ ಆಂಟಿ ಹೇಗಿದ್ದೀರಿ? ಅಂಕಲ್ ಭಾರಿ ಖುಷಿಯಿಂದ ಕುತ್ತಿಗೆಗೆ traction ಮಾಡಿಸಿಕೊಳ್ಳುತ್ತಿದ್ದಾರೆ.

ಮಹಿಳೆ : ಡಾಕ್ಟರ್, ನಾನು ಪೇಷಂಟ್. ಇಲ್ಲಿಯವರೆಗೂ ನಿಮ್ಮ ಸಹೋದ್ಯೋಗಿ ನನ್ನ ಕೇಸ್ ಬಗ್ಗೆ ವಿಚಾರಿಸಿದರು.

ಡಾ. ಮೀನಲ್ : ಸರಿ, ನಿಮ್ಮ ಕಂಪ್ಲೇಂಟ್ ಏನು ಹೇಳಿ.

ಮಹಿಳೆ : ಕತ್ತಿನಿಂದ ಪ್ರಾರಂಭವಾಗಿ ನೋವು ಎರಡೂ ಕೈಗಳ ತುದಿ ತನಕ ಹರಡುತ್ತದೆ. ಆಗಾಗ ತಲೆ ಸುತ್ತು! ನಿಮ್ಮ ಸಹೋದ್ಯೋಗಿಗೆ ಎಲ್ಲ complaints ಹೇಳಿ ಮುಗಿಸಿದ್ದೀನಿ. ಈಗೊಂದು ವಿಚಾರ... ಹೇಳಲು ಮರೆತಿದ್ದೆ, ಬಾಬಾ ರಾಮದೇವ್ ಅವರ ಯೋಗಾಭ್ಯಾಸ ಕೂಡ ಮಾಡಿದ್ದೀನಿ. ಆದರೂ....

**ಜೈಲಿಗೆ ಹೋಗಿ ಬಂದರೆ ಅದೃಷ್ಟ ಖುಲಾಯಿಸುತ್ತೆ ಅಂತ ಜ್ಯೋತಿಷಿ ಎಂದರೆ ಸಾಕು**
**ಜೈಲಿಗೆ ಹೋಗಲು ಸರತಿ ಸಾಲಿನಲ್ಲಿ ನಿಲ್ಲುತ್ತಾರೆ ನಮ್ಮ ಜನಪ್ರತಿನಿಧಿಗಳು**



ಡಾ. ಮೀನಲ್ : ಬಹುಶಃ ನೀವು ಬರೀ ನಾಲ್ಕೈದು ದಿವಸ ಮಾಡಿ ಬಿಟ್ಟಿರಬೇಕು. ಹೌದು ತಾನೇ?

ಮಹಿಳೆ : ನಾನೇನೋ ಸರಿಯಾಗಿ ಮಾಡುತ್ತಿದ್ದೆ. ಅಷ್ಟರಲ್ಲಿ, ನನ್ನ ತಂಗಿ ಟಿಬೆಟನ್ ಮೆಡಿಸಿನ್ ತೆಗೆದುಕೊಳ್ಳೋಣ ಎಂದಳು. ಸರಿ, ಯೋಗಾಭ್ಯಾಸ ಬಿಟ್ಟು ಹೋಯಿತು.

ಡಾ. ಮೀನಲ್ : ಇದೆಲ್ಲಾ ವಯಸ್ಸಿಗೆ ಸಹಜ. ಇಲ್ಲಿ ನಾವು ನಿಮ್ಮ ಪೂರ್ತಿ ಶರೀರಕ್ಕೆ ಉಪಚಾರ ನೀಡುತ್ತೀವಿ.

ಮಹಿಳೆ : ಈಗಾಗಲೇ ಆಯುರ್ವೇದಾಚಾರ್ಯರು ಪಂಚಕರ್ಮ ಉಪಚಾರ ಮಾಡಿಯಾಗಿದೆ. ಅಷ್ಟೇ ಅಲ್ಲದೆ, ಯುನಾನಿ ಔಷಧವೂ ತಿಂದಾಗಿದೆ. ಆದರೂ....

ಡಾ. ಮೀನಲ್ : ಎಲ್ಲ ಸಿಸ್ಟಮ್ಸ್ ಬೇರೆ. ನಾವು ಇಲ್ಲಿ ಫಿಸಿಯೋಥೆರಪಿ ಕೊಡುತ್ತೇವೆ. ನೋಡಿ ಮೇಡಂ, ನೀವು ಎಲ್ಲಾ ಬಾವಿಗಳ ನೀರು ಕುಡಿದೇ ಇಲ್ಲಿ ಬಂದಿರುವ ಹಾಗಿದೆ. ಪರವಾಗಿಲ್ಲ ಇನ್ನೊಂದೈದು ನಿಮಿಷ ಒಳಗೆ ಹೋಗೋಣ, ಸರಿಯಾಗಿ ಪರೀಕ್ಷೆ ಮಾಡೋಣ.

ಡಾ. ಮೀನಲ್ ನಿರ್ಗಮನ.

ಮಹಿಳೆ ನನ್ನನ್ನು ಉದ್ದೇಶಿಸಿ : ಇವರೆಲ್ಲ ಎಳೆ ನಿಂಬೆಕಾಯಿಗಳು. ಅದು ಸರಿ. ಹೋದ ವರ್ಷ ನಾವೆಲ್ಲಾ ಥೈಲ್ಯಾಂಡ್‌ಗೆ ಪ್ರವಾಸಕ್ಕೆ ಹೋಗಿದ್ದೆವು. ಅಲ್ಲಿನ ಥೈ ಮಸಾಜ್ ತುಂಬಾ ಚೆನ್ನಾಗಿರುತ್ತದೆ.

ನಾನು : ನಾನೂ ಅಲ್ಲಿನ ಫುಟ್ ಮಸಾಜ್ ಮಾಡಿಸಿಕೊಂಡಿದ್ದೀನಿ. ತುಂಬಾ ಚೆನ್ನಾಗಿರುತ್ತದೆ.

ಮಹಿಳೆ : ಅಲ್ಲಿಂದ ಒಂದಷ್ಟು ಥೈ ಮಸಾಜ್ creamಗಳನ್ನೂ ತಂದಿದ್ದೆ. ಮುಗಿದು ಹೋದವು. ಈಗ, ಮತ್ತೆ ತರಿಸಬೇಕು. ಇಂಟರ್ನೆಟ್‌ನಲ್ಲಿ ಯಾವ Supplier ಸಿಗುತ್ತಾರೆಂದು ನೋಡಬೇಕು.

ಇಲ್ಲಿಯವರೆಗೂ, ತನ್ನ ಪಾಡಿಗೆ ತಾನು ಏನನ್ನೋ ಓದುತ್ತಾ, ಬರೆಯುತ್ತಾ ಕುಳಿತಿದ್ದ receptionist ಚುರುಕಿನಿಂದ ''ಮೇಡಂ, ಯೋಚನೆ ಮಾಡಬೇಡಿ. ನನ್ನ ಪಕ್ಕದ ಮನೆಯ ಹುಡುಗ, ಇಲ್ಲಿನ ಥೈ Restaurantನಲ್ಲಿ waiter ಆಗಿ ಕೆಲಸ ಮಾಡ್ತಾನೆ. ಅಲ್ಲಿನ ಹೆಡ್ ಚೆಫ್ ಪ್ರತಿ ಎರಡು ತಿಂಗಳಿಗೆ ಆಹಾರದ ಸಾಮಾನು ತರಲೆಂದು Thailandಗೆ ಹೋಗುತ್ತಾನೆ. ಅವನ ಮೂಲಕ ಬೇಕಾದರೆ ನಿಮ್ಮ ಔಷಧಿ ತರಿಸಬಹುದು.

ನಾನು ಮುಂಬೈ ಮಹಾನಗರದ ವ್ಯವಹಾರಿಕ ಜ್ಞಾನಕ್ಕೆ ತಲೆ ತೂಗಿದೆ.

ಅಷ್ಟರಲ್ಲಿ ನನ್ನ ಪತಿದೇವರ ಆಗಮನವಾಯಿತು. ನಾವಿಬ್ಬರೂ ಹೊರಬಂದೆವು...

ಮಾರನೆಯ ದಿನ ಮತ್ತೆ ಅಲ್ಲಿಗೆ ಹೋದೆವು. ಯಜಮಾನರು ಒಳಗೆ ಹೋದರು. ನಾನು ಅಲ್ಲೇ ಪೇಪರ್ ಓದುತ್ತಾ ಕುಳಿತೆ. ಹತ್ತು ನಿಮಿಷಗಳಲ್ಲಿ ನಮ್ಮ ಕಥಾ ನಾಯಕಿಯ ಆಗಮನವಾಯಿತು.

ನನ್ನ ಕಡೆ ನೋಡಿ ನಕ್ಕು ''ನಿಮಗೆ ಮಸಾಜ್ ಬಗ್ಗೆ ಆಸಕ್ತಿಯಿದೆ ಎಂದು ತಿಳಿಯಿತು. ನಾನು Reflexology ಬಗ್ಗೆ ಓದುತ್ತಿದ್ದೆ. ನಿಮಗೆ ಗೊತ್ತೇ?''

ನಾನು : ಸ್ವಲ್ಪ ಸಾಮಾನ್ಯ ಜ್ಞಾನವಷ್ಟೆ. ನಿಮಗೆ ಫಿಸಿಯೋಥೆರಪಿ ಟ್ರೀಟ್ಮೆಂಟ್ ಶುರುವಾಯಿತೆ?

ನನ್ನ ಹಣೆಬರಹ. ಗೂಳಿಯ ಮುಂದೆ ಕೆಂಪು ವಸ್ತ್ರವನ್ನು ತೋರಿಸಿದ್ದೆ...

ಮಹಿಳೆ : ''ನಿನ್ನೆಯೇ ಪ್ರಾರಂಭವಾಯಿತು. ಇನ್ನೂ ಗುಣವಾಗಿಲ್ಲ. ಅಂದ ಹಾಗೆ, ಜಪಾನಿನಲ್ಲಿ shiatsu ಎಂಬ ಮಸಾಜ್ ಇದೆಯಂತೆ. ಅದು ತುಂಬಾ ಪರಿಣಾಮಕಾರಿಯಂತೆ. ಇಲ್ಲಿ ಎಲ್ಲಿ ಅಂತಹ treatment ಸಿಗುವುದು ಎಂದು ಹುಡುಕಬೇಕಾಗಿದೆ. ಅಷ್ಟೇ ಅಲ್ಲ, acupuncture ಕೂಡ ತುಂಬಾ ಪರಿಣಾಮಕಾರಿಯಂತೆ. ನನ್ನ ಮಗಳಿಗೆ ಹೇಳಿ ನೋಡಬೇಕು.

ನನ್ನ ತಲೆ ಚಿಟ್ಟು ಹಿಡಿದು ಹೋಗಿತ್ತು. ಸುಮ್ಮನೆ ಒಳಗಿನಿಂದ ನನ್ನ ಮಿದುಳನ್ನು ಆಫ್ ಮಾಡಿ ಬಿಟ್ಟೆ. ಆಕೆಯ ಮಾತು ಗಂಭೀರ ಗತಿಯಲ್ಲಿ ಸಾಗೇ ಇತ್ತು. ಸದ್ಯ ನನ್ನ ಪುಣ್ಯಕ್ಕೆ ಡಾಕ್ಟರ್ ಮೀನಲ್ ಅವರನ್ನು ಒಳಗೆ ಕರೆದರು.

ನನ್ನ ಯಜಮಾನರ treatment ಮುಗಿಯಿತು. ನಾವು ಮತ್ತೆ ಆ ಕ್ಲಿನಿಕ್‌ಗೆ ಹೋಗುವ ಪ್ರಸಂಗ ಬರಲಿಲ್ಲ.

ಹೋದ ವಾರ, ಮಾರ್ಕೆಟ್ಟನಲ್ಲಿ ಆಕೆ ಸಿಕ್ಕರು. ಈಗ ಅವರು ಚೀನಾ ದೇಶದ ತಾಯಿಚಿ ಎಂಬ ಕಸರತ್ತನ್ನು ಮಾಡುತ್ತಿದ್ದಾರಂತೆ. ಫಿಸಿಯೋಥೆರಪಿ ಬಿಟ್ಟು ಬಿಟ್ಟರಂತೆ. ಡಾಕ್ಟರ್ ಬಿಜು ಮತ್ತು ಡಾಕ್ಟರ್ ಮೀನಲ್ ಇವರನ್ನು ಸೂಕ್ಷ್ಮವಾಗಿ ಗೇಲಿ ಮಾಡಿದರಂತೆ. ಅದಕ್ಕೋಸ್ಕರ treatment ಬಿಟ್ಟರಂತೆ. ಮುಂದಿನ ತಿಂಗಳು ಅವರು ಕೇರಳಕ್ಕೆ ಹೋಗಿ ಅಲ್ಲಿ ಆಯುರ್ವೇದ ಟ್ರೀಟ್ಮೆಂಟ್ ತೆಗೆದುಕೊಳ್ಳುವರಂತೆ...





# ಮರೆಯಾದ ಮರೆವಿರದ ಪ್ರೊಫೆಸರ್ ವಿ.ಕೆ.ದೊರೆಸ್ವಾಮಿಯವರನ್ನು ಮರೆಯುವ ಮುನ್ನ......

ಎತ್ತರದ ನಿಲುವು, ಆಕರ್ಷಕ ವ್ಯಕ್ತಿತ್ವ, ೯೦ ದಾಟಿದರೂ ಬಾಗದ ಬೆನ್ನು, ಆ ವಯಸ್ಸಿನಲ್ಲೂ ದೊಡ್ಡ ತರಗತಿಯ ಲಾಸ್ಟ್ ಬೆಂಚ್‌ನವನ ಕಿವಿಗೂ ಅಪ್ಪಳಿಸುವಷ್ಟು ಹಿರಿದಾದ ಕಂಠ, ಮಾತಿನಲ್ಲಿ ಸ್ಪುಟತೆ, ಎತ್ತರದ ನಿಲುವಿಗೆ ತಕ್ಕಂತೆ ಹಿರಿಯದೇ ಆದ ವ್ಯಕ್ತಿತ್ವ. "ಈ ಜೋಕು ತುಂಬಾ ಚೆನ್ನಾಗಿದೆ. ನೀವು ಯಾರಾದರೂ ಇದನ್ನ ಕಲಿತು ಮುಂದಿನ ಜನಾಂಗಕ್ಕೆ ಹೇಳಿದ್ರೆ ಬಹಳ ಸಂತೋಷ ಪಡ್ತಾರೆ" ಎನ್ನುತ್ತಾ ಪುಂಖಾನುಪುಂಖವಾಗಿ ಜೋಕುಗಳ ಸರಮಾಲೆಯನ್ನೇ ಮುಂದಿಡುತ್ತಿದ್ದ ಅಸ್ಖಲಿತ ವಾಣಿ ಎಂದರೆ ನಮ್ಮ ನಿಮ್ಮ ಮೆಚ್ಚಿನ ಪ್ರೊಫೆಸರ್ ವಿ.ಕೆ. ದೊರೆಸ್ವಾಮಿ. ಅವರು ಹೇಳುತ್ತಿದ್ದ "ಟೇಕ್ ದಿಸ್ ಆರೆಂಜ್" ಈಗ ವಿಧಾನಸೌಧದ ಮಿತ್ರ ದ್ವಾರಕಾನಾಥರಲ್ಲಿ ಮಾತ್ರ ಲಭ್ಯ! ಕೈಲಾಸಂ ರಚಿಸಿದ ಸಿಗರೇಟ್ ಮಂತ್ರವನ್ನು "ತಂಬಾಕು ಪತ್ರಂ ನಿದಾಯ, ಮುಖೇ ನಿಕ್ಷಿಪ್ಯ..." ಎಂದು ಯಾವ ಅರ್ಚಕನೂ ನಾಚುವಷ್ಟು ಶ್ರೀಕಂಠದಿಂದ ಹೇಳುತ್ತಾ ಅಭಿನಯಪೂರ್ವಕವಾಗಿ ಶ್ಲೋಕವನ್ನು ಮಂಡಿಸಿ ನಗೆದೆರೆಗಳನ್ನು ಎಬ್ಬಿಸುವುದರಲ್ಲಿ ಈ ಪ್ರೊಫೆಸರರು ನಿಷ್ಣಾತರು. ಗಣಿತದ ಪ್ರೊಫೆಸರ್ ಆದ ಇವರು ಗಣಿತದಲ್ಲಿ ವಿನೋದ, ಹಾಸ್ಯಗಳನ್ನು ಗುರುತಿಸಿ ಬಹಳ ಸುಂದರವಾಗಿ ಅವುಗಳನ್ನು ಮಂಡಿಸಿ ಶ್ರೋತೃಗಳಿಗೆ ಮುದ ನೀಡುತ್ತಿದ್ದುದು ಈಗ ಇತಿಹಾಸ.

ಶ್ರೀಯುತ ವೈ.ಎಂ.ಎನ್. ಮೂರ್ತಿಯವರ ಹ್ಯೂಮರ್ ಕ್ಲಬ್ ಇಂಟರ್‌ನ್ಯಾಷನಲ್‌ಗೆ ಮೂರು ಆಧಾರಸ್ಥಂಭಗಳು - ಸ್ವಯಂ ಮೂರ್ತಿಯವರು, ಡಾ. ಎಂ.ಹೆಚ್. ಶ್ರೀಕಂಠಯ್ಯನವರು ಮತ್ತು ಪ್ರೊಫೆಸರ್ ವಿ.ಕೆ. ದೊರೆಸ್ವಾಮಿಯವರು. ಪ್ರತಿ ವಾರ ನಡೆಯುತ್ತಿದ್ದ ಹ್ಯೂಮರ್ ಕ್ಲಬ್‌ನ ಕಾರ್ಯಕ್ರಮಗಳಿಗೆ ಇವರು ಹಲವಾರು ವರ್ಷಗಳ ಕಾಲ ತಪ್ಪದೆ ಭೇಟಿ ನೀಡುತ್ತಿದ್ದರು. ಬಸವನಗುಡಿಯ ಇಂಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್‌ಗೆ ಅಪಾರವಾದ ಸೇವೆ ಸಲ್ಲಿಸಿದ ಇವರು ಕನ್ನಡದ ಹಬ್ಬದ ಮಾಸವಾದ ನವೆಂಬರ್‌ನಲ್ಲಿ ತಮ್ಮ ೯೪ರ ಹರೆಯದಲ್ಲಿ ಲೈಫ್ ಈಸ್ ನಾಟ್ ಎ ಜೋಕ್ ಎಂದು ನೆನಪಿಸಲೋ ಎಂಬಂತೆ ಅಸುನೀಗಿ ಕನ್ನಡ ಹಾಸ್ಯಜಗತ್ತನ್ನು ಬಡವಾಗಿಸಿದರು. "ವಾಟ್ ಈಸ್ ಆನ್ ದಿ ಅದರ್ ಸೈಡ್ ಆಫ್ ಹಿಮಾಲಯಾಸ್?" ಎಂದರೆ "ದ ಆನ್ಸರ್ ಡಿಪೆಂಡ್ಸ್ ಆನ್ ವಿಚ್ ಸೈಡ್ ಆಫ್ ದಿ ಹಿಮಾಲಯಾಸ್ ದ ಎಕ್ಸಾಮಿನರ್ ಈಸ್ ಸ್ಟ್ಯಾಂಡಿಂಗ್" ಎನ್ನುತ್ತಿದ್ದರು. "ವಾಟ್ ಈಸ್ ಆನ್ ದ ಅದರ್ ಸೈಡ್ ಆಫ್ ಡೆತ್?" ಎಂದರೆ ಈ ಪ್ರೊಫೆಸರ್‌ರೂ ನಿರುತ್ತರರು... ಸ್ವರ್ಗದಲ್ಲೂ ಸಭೆ ಇರಲಿ, ಅಲ್ಲಿಯೂ ಇವರು ಹಾಸ್ಯ, ಸರಸದಿಂದ ಮಾತನಾಡುತ್ತಾ ಚೆನ್ನಾಗಿರಲಿ ಎಂದು ಆಶಿಸೋಣ.

# ಕೂಲಿಟ್ಟು

• ಪ್ರೊ. ಶ್ಯಾಮಲ ರವಿಶಂಕರ್

**ಎ**ಷ್ಟೋ ದಶಕಗಳ ಹಿಂದೆ ನನ್ನ ಇಂಗ್ಲೀಷ್ ಟೀಚರ್ 'ಬಿಸಿ' ಅನ್ನೋ ಶಬ್ದಕ್ಕೆ ಇಂಗ್ಲೀಷ್‌ನಲ್ಲಿ ಏನಂತಾರೆ. ಅದರ ಉತ್ತರ ಹೇಳಿದವರು ಅದರ opposite ಶಬ್ದವನ್ನು ಬೋರ್ಡಿನ ಮೇಲೆ ಬರೆಯಿರಿ ಎಂದಾಗ ಬಲಿಪಶು ನಾನಾಗಬೇಕಾಯಿತು. ಅನುಮಾನಿಸಿಕೊಂಡು ಬೋರ್ಡ್‌ವರೆಗೂ ಹೋಗಿ ನಾನು ಬರೆದದ್ದು "Cool"! ಅದೇ ಸನ್ನಿವೇಶವನ್ನು ಇಂದಿನ ದಿನಗಳಲ್ಲಿ 'ಕೂ ಊ ಊ...ಲ್' ಎಂಬ ಉದ್ಗಾರ ಚೀತ್ಕಾರಗಳ ಗಲಭೆಗಳನ್ನು ಹೊರಡಿಸುತ್ತಿದ್ದೀವೇನೋ? ಆ ದಿನ ನೆನೆಸಿಕೊಂಡಾಗ ಈಗಲೂ ನಾಚಿಕೆ ಅಲ್ಲ, ನಗು ಬರುತ್ತದೆ.

ಆಗ ಈ 'ಕೂಲ್' ಶಬ್ದಕ್ಕೆ ಇದ್ದ ಅರ್ಥ ಒಂದೇ ಒಂದು. ಹಾಗಾಗಿ ನಮಗೆ ತಲೆಬಿಸಿಯಾಗುವಂಥ ಸಂದರ್ಭ ಬರುತ್ತಿರಲಿಲ್ಲ. ಯಾಕೆ ಅಂತೀರಾ? 'ಕೂಲ್ ಡ್ರಿಂಕ್ಸ್' ಅನ್ನೋ ಬೋರ್ಡುಗಳೂ ಕೂಡ ಇರುತ್ತಿರಲಿಲ್ಲ. ಆದ್ದರಿಂದ ಆ ಬೋರ್ಡುಗಳು ಗಾಳಿಗೆ ಅಥವಾ ಇನ್ನೆಂಥದ್ದೋ ಕಾರಣಕ್ಕಾಗಿ ಕೆಳಗೆ ಬಿದ್ದು, ಅಲ್ಲೇ ಠಳಾಯಿಸುತ್ತಿರುವ ಪಡ್ಡೆ ಹುಡುಗರ ತಲೆ ಮೇಲೆ ಬಿದ್ದು ಅವರು 'ಅಚ್ಛಾ ತೋ ಹಮ್ ಚಲ್ತೇ' ಅಂತ ಪರಲೋಕ ಪ್ರವೇಶಕ್ಕೆ ಹೋಗುವ ಪ್ರಸಂಗಗಳು ಇರುತ್ತಿರಲಿಲ್ಲ.' 'ಇದೆಲ್ಲಾ ಯಾಕಿಷ್ಟು ಬುರುಡೆ, ಕೂಲ್ ಡ್ರಿಂಕ್ಸ್ ಇರಲಿಲ್ಲವಾ ಆಗ, ಅಥವಾ ನೀನು ಅಂಥಾ ಕಾಲದಿಂದಲೂ ಚಿರಂಜೀವಿಯಾಗಿದ್ದು ಇನ್ನೂ ಬದುಕೆ ಇದ್ದೀಯಾ?' ಎನ್ನಬೇಡಿ. ಆಗೆಲ್ಲಾ ತಂಪಾದ ಪಾನೀಯಕ್ಕೆ ''ಕ್ರಷ್'' ಎನ್ನುತ್ತಿದ್ದರು. ಈಗ 'ಕ್ರಷ್' ಅಂದರೆ ಇನ್ನೂ ಏನೇನೋ ಗೂಢಾರ್ಥಗಳಿವೆ ಬಿಡಿ.

ಕ್ರಮೇಣ 'ಕೋಕಾ ಕೋಲಾ' ಒಂದು 'ಕೂಲ್' ಅನ್ನೋಪದಕ್ಕೆ ವಿಶೇಷವಾದ ಮನ್ನಣೆಯನ್ನೂ ತದುಪರಿ ಅಂತಸ್ತನ್ನೂ ಹೆಚ್ಚಿಸಿತು. ಬೆಂಗಳೂರಿನ ಬೇಸಿಗೆಯಲ್ಲಿ ಹೆಚ್ಚಿನ ಸೆಖೆ ಇರುತ್ತಿರಲಿಲ್ಲವಾದ್ದರಿಂದ ಮಳೆ ಬಂದಾಗ ಕೂಡ 'ಕೂಲ್' ಆಯ್ತು ಎನ್ನುವ ಪದ ಹೆಚ್ಚಾಗಿ ವಾಡಿಕೆಯಲ್ಲಿರಲಿಲ್ಲ.

ನನ್ನ ತಂದೆಯವರು ನಾನು ಪರೀಕ್ಷೆ ಬರೆಯಲು ಹೊರಟಾಗ 'ಪ್ರಶ್ನೆ ಪತ್ರಿಕೆಯನ್ನು ಓದುವಾಗ ಸ್ವಲ್ಪ ಕೂಲಾಗಿ ಓದು, ಸರಿಯಾಗಿ ಯೋಚನೆ ಮಾಡಿ ಉತ್ತರಿಸು, ಆಯ್ತಾ?' ಅನ್ನೋವ್ರು. ಆಗೆಲ್ಲಾ ನನಗನ್ನಿಸ್ತಿದ್ದಿದ್ದು: 'ಕೂಲಾಗಿ ಓದುವುದಕ್ಕೂ ಹಾಟಾಗಿ ಓದುವುದಕ್ಕೂ ಏನು ವ್ಯತ್ಯಾಸ? ಹಾಗೂ ಅದು ಹೇಗೆ?' ಎನ್ನುವ ಪ್ರಶ್ನೆಗಳು ಇದೆಲ್ಲಗಳ ಮಧ್ಯೆ ನಾನು ಬಹಳ ನಿಧಾನಸ್ಥೆ. ನಾನು ಉತ್ತರ ಬರೆಯುವುದು ಮಾತ್ರ ಆಮೆ ವೇಗದಲ್ಲಿ (ಜೆನ್ "X" ಈಗ ಕೂ...ಲ್ ಅನ್ನಬಹುದು). ಮೂರು ಗಂಟೆಗಳ ಅವಧಿಯಲ್ಲಿ ಉತ್ತರಿಸಬೇಕಾದ ಐದು ಪ್ರಶ್ನೆಗಳಲ್ಲಿ ಮೂರಕ್ಕೋ ಅಥವಾ ಮೂರೂವರೆ ಪ್ರಶ್ನೆಗಳಿಗೋ ಉತ್ತರಿಸುವಷ್ಟರಲ್ಲಿ ಮೂರೂ

ಗಂಟೆಗಳು ಓಡಿ ಹೋಗುತ್ತಿದ್ದುವು. 'ಹಾಟ್' ಆಗಿ ಪುಸ್ತಕ ಓದದಿದ್ದರೂ 'ಕೂಲಾ'ಗಿ ಪ್ರಶ್ನೆಪತ್ರಿಕೆ ಓದಿ ಉತ್ತರಿಸಲಾರದ ಪ್ರಶ್ನೆಗಳನ್ನು ಇನ್ನೂ 'ಕೂಲಾ'ಗಿ ಬಿಟ್ಟು ಬರುತ್ತಿದ್ದೆ. ಮನೆಗೆ ಬಂದ ಮೇಲೆ ಯಥಾ ಪ್ರಕಾರ ಅಕ್ಷತೆ ಬೀಳುವ ಸಮಯದಲ್ಲಿ ನನ್ನ ಉತ್ತರ. "ಬಹುಶಃ ಅವರು ಗಂಟೆ ಬೇಗ ಬಾರಿಸಿದರೇನೋ." ಈ ಉತ್ತರ ಗೊತ್ತಿದ್ದರೂ ನಮ್ಮ ಹಿರಿಯರು ಯಾಕೆ ಕೇಳ್ತಿದ್ರೋ, ದೇವರೇ ಬಲ್ಲ. (ಇದನ್ನ ಮೊನ್ನೆ ಮೊನ್ನೆ ತಿಳಿದುಕೊಂಡ ನನ್ನ ಎರಡೂ ವಂಶದ ಅನುಜಾನುಜರೆಲ್ಲರೂ 'ಕೂ ಊ ಊ ಲ್' ಎಂದರು, ಚಪ್ಪಾಳೆ ತಟ್ಟಿದರು, ನನ್ನನ್ನ ಅನಾಮತ್ತು ಎತ್ತಿ ಮೆರವಣಿಗೆಯನ್ನೇ ಮಾಡಿಬಿಟ್ಟರು! ಅಷ್ಟು ಗರ್ವ ನನ್ನ ಮೇಲೆ ಅವರೆಲ್ಲರಿಗೆ!)

ಹೀಗೇ ಕೂಲಾಗಿ ಬೆಳೆದು ಕೂಲ್ ಬೆಂಗಳೂರನ್ನು ಬಿಟ್ಟು ಹಾಟ್ ಹೈದರಾಬಾದಿನಲ್ಲಿ ನೆಲೆಸಿದೆ. ಅಲ್ಲಾದರೂ ಈ ಪದಕ್ಕೆ ಹೆಚ್ಚು ಅರ್ಥಗಳು ಆಗ ಇರಲಿಲ್ಲ. ದೊಡ್ಡ ರಸ್ತೆಗಳ ಸಣ್ಣ ಮೂಲೆಗಳಲ್ಲಿ ಕಬ್ಬಿನ ರಸದ ಗಾಡಿಗಳು ಕೂಲ್ ಪದವನ್ನು ಉಪಯೋಗಿಸಿದ್ದರು. ಅದರಲ್ಲಿ ವಿಶೇಷವೇನು, ಮಹಾ! ಒಮ್ಮೆ ಎಳೆ ಬೇಸಿಗೆಯಲ್ಲಿ ದೆಹಲಿಗೆ ಹೋಗಬೇಕಾಯಿತು. ಅಲ್ಲಿ ರಸ್ತೆ ಬದಿಗಿದ್ದ (ಕಬ್ಬಿನ ರಸದ ಬಂಡಿಗಳ ತರಹದ) ಬಂಡಿಗಳ ಮೇಲಿದ್ದ ಬರಹ ಹೀಗಿತ್ತು! 'ಮಶೀನ್ ಕಾ ಠಂಡಾ ಪಾನೀ' ನಾಲ್ಕಾರು ಬಂಡಿಗಳ ಮೇಲೆ ಇದರ ಭಾಷಾಂತರ: "Machines Cul Waiter!" ಇದನ್ನ ನೋಡಿದರೆ ನಾವೆಲ್ಲರೂ ಹಿರಿಯರೂ ಕಿರಿಯರ 'ಕೂ...ಲ್'ಗೆ ಧ್ವನಿ ಗೂಡಿಸುವುದಿಲ್ಲವೇ?

ನಮ್ಮ ನೆರೆಮನೆಯ ಕಿಟ್ಟನಿಗೆ 16 ವರ್ಷ ವಯಸ್ಸು. ಅವನಿಗೆ ಯಾವಾಗಲೂ ಏನಾದರೊಂದಕ್ಕೆ ಅವಸರ. ಓಡಾಡಲಿ, ಮಾತಾಡಲಿ ಸದಾ ಸರ್ವಕಾಲ ಪರಿಸರಗಳಲ್ಲೂ ಅವನಿಗೆ ಏನೋ ಮುಳುಗಿ ಹೋಗೋ ಹಾಗೆ ಅವಸರ ಪಡ್ತಾ ಇರ್ತಾನೆ. ಹೀಗಾಗಿ ಮಾತಾಡೋವಾಗ ಏನೇನೋ ವದರಿ ಬಿಡ್ತಾನೆ. ಅದೂ ಪಟ ಪಟಾಂತ ಇಂಗ್ಲೀಷಿನಲ್ಲಿ, ಅದೂ ಹೋಗಲಿ ಅಂದ್ರೆ ಅವರಮ್ಮ ತುಂಬಾ ನಿಧಾನಸ್ತರು. ಜೊತೆಗೆ ತೆಲುಗು ಬಿಟ್ಟು ಇನ್ನೇನೂ ಅರ್ಥ ಆಗೋಲ್ಲ, ಇಂಗ್ಲೀಷೂ ಕೂಡ! ಆಕೆ, 'ಏನೋ ನೀನು ಬಡಬಡ್ಸಿದ್ದುದು?' ಅಂತ ಐದಾರು ನಿಮಿಷಗಳು ಸುಧಾರಿಸಿಕೊಂಡ ನಂತರ ಕೇಳ್ತಾರೆ. ಆಗೆಲ್ಲಾ ಅವನದು ಒಂದೇ ಉತ್ತರ 'ಓ, ಮಮ್, ಕೂಲಿಟ್, ಕೂಲಿಟ್!' ಮೊನ್ನೆ ಆಕೆ ನನ್ನ ಬಳಿಗೆ ಬಂದು 'ಕೂಲಿಟ್ ಕೂಲಿಟ್ಟು' ಅಂತಂದ್ರೆ ಏನೆಂದು ತಿಳಿ ಹೇಳ್ತೀಯಾ ನನಗೆ ಅಂದಾಗ ನಾನೇನು ತಾನೆ ಹೇಳಲಿ. 'ಅದಾ, ಅದು ತಂಬಿಟ್ಟು' ಅಂತ ಅನ್ನಬೇಕೆನಿಸಿದರೂ ಅದನ್ನು ಅಡ್ಡ ತಡೆದಿದ್ದು ಆಕೆಯ ಮುಗ್ಧತೆ!

ಈ 'ಕೂಲ್' ರೋಗ ಅಂಟು ಜಾಡ್ಯವಾಗಿ ನಮ್ಮ ಕಾಲೇಜು ಮೆಟ್ಟಲು ಹತ್ತಿತು. ಎಲ್ಲರ ಬಾಯಲ್ಲೂ ಎಲ್ಲಾದಕ್ಕೂ ಈ ಶಬ್ದ ಎಲ್ಲರ ನಾಲಿಗೆಯ ಮೇಲೆ ಬೀಜಾಕ್ಷರ ಉಪದೇಶವೇನೋ ಎಂಬಂತೆ ತಾಂಡವವಾಡುತ್ತಿದೆ. ಹೊಸ ಸೀರೆ ಉಟ್ಕೊಂಡ ದಿನವೊಮ್ಮೆ ಲ್ಯಾಬ್ ಆಗಲಿ ಲೆಕ್ಚರ್ ಹಾಲ್ ಆಗಲಿ 'ಕೂಲ್' ಎಂದು ಮೆಚ್ಚುಗೆ ಸೂಸಿದರು. 'ಹಾಗಿದ್ದಲ್ಲಿ ಫ್ಯಾನ್ ಆರಿಸಿ' ಎಂದು ಪ್ರವಚನ ಶುರು ಮಾಡಿದಾಗ 'ಕೂಲ್' ಎಂಬ ಪ್ರತ್ಯುತ್ತರ ಬಂತು ಶಿಷ್ಯ ಕೋಟಿಯಿಂದ!

ಶಿಕಾಗೋದಿಂದ ಮುಂಬೈಗೆ ಹಾರುತ್ತಿದ್ದ ವಿಮಾನ ಲಂಡನ್‌ನ ಹೀಥ್ರೋ ನಿಲ್ದಾಣದಲ್ಲಿ ನಿಂತಾಗ ನನ್ನ ಎರಡೂ ಪಕ್ಕಗಳಲ್ಲಿದ್ದವರು ಇಳಿದು ಹೋಗಲಾಗಿ ಮೂರೂ ಸೀಟುಗಳ ಮೇಲೆ ನಾನು ಪವಡಿಸುವ ಸದವಕಾಶವನ್ನು ಪಡೆದೆ. ನಿದ್ದೆ ಮಂಪರಿನಲ್ಲಿದ್ದ ನನ್ನನ್ನು ಎಚ್ಚರಿಸಿದ್ದು, 'ಇನ್ನು ಕೆಲವೇ ನಿಮಿಷಗಳಲ್ಲಿ ನಾವು ಮುಂಬೈನ ಛತ್ರಪತಿ ಶಿವಾಜಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನು ತಲುಪಲಿದ್ದೇವೆ' ಎಂಬ ಧ್ವನಿವರ್ಧಕ ಯಂತ್ರ! 'ಅಯ್ಯೋ, ಇಷ್ಟು ಬೇಗಾ ನಾ? ಇನ್ನೂ ನಿದ್ದೇನೇ ಹತ್ತಿಲ್ಲ' ಅಂತ ಗೊಣಗಿದರೂ ಏಳಬೇಕಾದ ಪರಿಸ್ಥಿತಿ! ಲಗೇಜ್‌ಗೆ ಕಾಯುತ್ತಿದ್ದಾಗ ಒಬ್ಬ ಸಹ ಯುವ ಪ್ರಯಾಣಿಕ, 'ನೀವು ವಿಮಾನ ಬೋರ್ಡ್ ಆದ ನಂತರ ಕಾಣಸಿಗಲಿಲ್ಲ?' ಪ್ರಯಾಣ ಆರಾಮವಾಗಿತ್ತಾ ಎಂದು ವಿಚಾರಿಸಿದ. ನನ್ನ ಆರಾಮದ ವಿಷಯ ತಿಳಿದ ನಂತರ 'ಕೂ ಊ ಊ ... ಲ್' ಅನ್ನಬೇಕಾ ಅವನು? 'ಅಯ್ಯೋ' ಅಂತ ಮಧ್ಯರಾತ್ರೀಲೂ ಬೆವರುತ್ತಾ (ಏ.ಸಿ.ಗಳನ್ನು ಸ್ವಿಚ್ ಆಫ್ ಮಾಡಿ, ಬಾಗಿಲುಗಳನ್ನು ತೆಗೆದಿದ್ದ) ಡೊಮೆಸ್ಟಿಕ್ ಟರ್ಮಿನಲ್‌ನಲ್ಲಿ ಹೈದರಾಬಾದ್ ವಿಮಾನಕ್ಕೆ ಕಾದುಕುಳಿತೆ!

ನಮ್ಮ ಮನೆ ಮಂದಿಯೆಲ್ಲಾ ಡಿನ್ನರೊಂದಕ್ಕೆ ಹೋದಿವಿ. ಆ ಮಾತು ಈ ಮಾತಿನ ಮಧ್ಯೆ 'ಇವತ್ತು ಎಲ್ಲರೂ ಒಪ್ಪಿ ಬಂದಿದ್ದರಿಂದ ಬೇಗ ಬರಲಾಯಿತು, ಅಡಿಗೆ ಮಾಡುವ ಪ್ರಸಂಗವಿರಲಿಲ್ಲ ನೋಡಿ' ಎಂದೆ. ಇದನ್ನು ಕೇಳಿದ ವೇಯಿಟರ್ 'ಕೂಲ್' ಅಂದ! ಅಲ್ಲಾ, ಇಲ್ಲಿ ಬಿಸಿ ಊಟ ಅಂದ್ಕೊಂಡು ಬಂದ್ವಿ, ನೀನೇನು ತಂಗಳು ಬಡಿಸ್ತೀಯಾ? ಅಂತ ಅವನನ್ನ ಮೆಲ್ಲಗೆ ಆಕ್ಷೇಪಿಸಿದ.

ತನ್ನ ಮಗುವನ್ನು ತನ್ನ ಆಫೀಸಿಗೆ ಕರೆದುಕೊಂಡು ಹೋದ ಹುಡುಗಿ ನನ್ನ ಬಳಿ 'ಆಂಟೀ, ಇವನಿಗೆ ನನ್ನ ಆಫೀಸು 'ಕೂಲ್' ಆಗಿ ಕಾಣಿಸ್ತು. ನನಗೂ ಹಾಗಿದ್ದಿದ್ರೆ...' ಅಂತ ಹಲುಬಿದಳು.

ಉದ್ದ ಜಡೆ ಬೋರು, ಫ್ಯಾಶನ್ನೂ ಅಲ್ಲ, ಮಣ್ಣಂಗಟ್ಟೇನೂ ಅಲ್ಲಾಂತ ಹೋಗಿ ಸ್ಟೆಪ್ ಕಟ್ ಮಾಡಿಸಿಕೊಂಡು ಬಂದ ಅಕ್ಕನಿಗೆ ತಮ್ಮ 'ಕೂಊಊಲ್' ಮಂತ್ರೋಚ್ಚಾರಣೆ ಮಾಡಿದ!

ಈ ತರಹದ ಸಂದರ್ಭಗಳು ಅನಂತಾನಂತ ವಿಮರ್ಶೆ ಮಾಡಿದರೆ ಈ 'ಕೂಲ್' ಅನ್ನೋ ಪದಕ್ಕೆ ಈಚೀಚೆಗೆ ಇಂಥದ್ದೇ ಅನ್ನೋ ಅರ್ಥ ಇಲ್ಲ ಎಂಬುವ ನಿರ್ಧಾರಕ್ಕೆ ಬಂದಿದ್ದೇನೆ. ಯಾವಾಗ, ಹೇಗೆ, ಎಲ್ಲಿ ಬೇಕಾದರೂ, ಏನು ಹೇಳಬೇಕಾದರೂ, ಈ ಪದದಿಂದ ಆಶ್ಚರ್ಯ, ಅಸಹಾಯಕತೆ, ಅಸೂಯೆ, ಅಭಿನಂದನೆ ಮತ್ತಿನ್ನೇನ್ನಾದರೂ ವ್ಯಕ್ತಪಡಿಸಬಹುದು. ಏನೂ ತೋಚದೆ, ಅಥವಾ ಮೆದುಳಿನಲ್ಲಿ ಭಾವನೆಗಳು ಸಿಕ್ಕುಬಿದ್ದಾಗ, ಏನೂ ಹೇಳಲೂ ಮಾತು ಹೊರಡದಾಗ, ಕೆಲಸಕ್ಕೆ ಬರುವ ಪದ ಇದು. ಆಗ ಯಾರೂ ತಿದ್ದುವ ಯತ್ನ ಮಾಡುವುದಿಲ್ಲ. ಈ ಪದಕ್ಕೆ ಅರ್ಥ ಹುಡುಕಲು ಹೋಗಬೇಡಿ. ನಿಮ್ಮದೇ ಆದ ಸ್ಟೈಲ್‌ನಲ್ಲಿ ಧಾರಾಳವಾಗಿ ಉಪಯೋಗಿಸಿ. ನನ್ನ ಅಭ್ಯಂತರವೇನೂ ಇಲ್ಲ. ಒಟ್ಟಿನಲ್ಲಿ ಕೂಲಾಗಿ ಇರಿ, ನವ ಪೀಳಿಗೆಯವರ ಕೈಲಿ ಆಗಾಗ 'ಕೂ ಊ ಊ..ಲ್' ಅಂತ ಬಿರುದು ಪಡೀತಿರಿ!

# ಮಾ(ವ)ನವರ ಮೇಲೆ ಗ್ರಹಗಳ ಪರಿಣಾಮ ಉಂಟೆ?

**● ನೀರಗುಂದ ಕೇಶವಮೂರ್ತಿರಾವ್**

**ಪ್ರ**ತಿನಿತ್ಯ ದೂರದರ್ಶನದ ಯಾವುದೇ ವಾಹಿನಿಯನ್ನು ವೀಕ್ಷಿಸಿದಾಗ ಕಂಡು ಬರುವ ಜ್ಯೋತಿಷ್ಯ+ಭವಿಷ್ಯ=ಗ್ರಹಗತಿಗೆ ಸಂಬಂಧಿಸಿದಂತೆ ಆಕಾಂಕ್ಷಿಗಳ ಪ್ರಶ್ನೆಗಳಿಗೆ ಹುಟ್ಟಿದ ದಿನಾಂಕ, ರಾಶಿ, ಗ್ರಹಗಳ ಚಲನವಲನಗಳ ಕುರಿತು ಹೇಳುವ ಭವಿಷ್ಯಕಾರರನ್ನು ಕಾಣಬಹುದು.

ಶೇಕಡ ಬಹಳಷ್ಟು ಮಂದಿ ಬೆಳಗ್ಗೆ ಎದ್ದ ಕೂಡಲೆ ಪತ್ರಿಕೆಗಳಲ್ಲಿ ಬರುವ ತಮ್ಮ ನಿತ್ಯ ಭವಿಷ್ಯ ತಿಳಿದುಕೊಂಡ ನಂತರವೇ ಆ ದಿನದ ಮುಂದಿನ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳುವವರೂ ಇದ್ದಾರೆ. – ಇರಲಿ.

ನಾನೀಗ ಹೇಳ ಹೊರಟಿರುವುದು ''ಮಾ(ವ)ನವರ ಮೇಲೆ ಗ್ರಹಗಳ ಪರಿಣಾಮ ಉಂಟೆ?'' ಎಂಬುದರ ಬಗ್ಗೆ ಕೆಲವು ಅನಿಸಿಕೆಗಳು. ಅನಾದಿ ಕಾಲದಿಂದಲೂ ಗ್ರಹಗಳು, ನಕ್ಷತ್ರಗಳು, ಅವುಗಳ ಫಲಾಫಲಗಳನ್ನು, ಪಂಚಾಂಗ ಕರ್ತೃಗಳು, ಜ್ಯೋತಿಷಿಗಳು, ರಸ್ತೆ ಬದಿಯ ಗಿಳಿಶಾಸ್ತ್ರಜ್ಞರು ತಮ್ಮ ಅಭಿಮಾನಿಗಳಿಗೆ ತಿಳಿಸುವ ಕಾಯಕವನ್ನು ಮುಂದುವರೆಸಿಕೊಂಡು ಬಂದಿದ್ದಾರೆ.

ಮಾನವನ ಮೇಲೆ ಅಥವಾ ಮಾವನ ಮೇಲೆ ಪ್ರಭಾವ ಬೀರುವ ಗ್ರಹಗಳು ಒಂದೆರಡಲ್ಲ. ಇವುಗಳಿಂದ ಬಿಡುಗಡೆ ಹೊಂದ ಬೇಕಾದರೆ ತಕ್ಕ ಶಾಂತಿಯಾಗಲೇಬೇಕು. ಕರಾರುವಾಕ್ಕಾಗಿ ಕವಡೆ ಹಾಕಿ, ಪಂಚಾಗ ಮುಂದಿಟ್ಟುಕೊಂಡು ಅಂಕಿ ಸಂಖ್ಯೆಗಳನ್ನು ಗುಣಿಸಿ ಭಾಗಿಸಿ ಭವಿಷ್ಯ ಹೇಳುವ ಪಂಡಿತ ಹೋರಾರತ್ನರುಗಳಿಗೇನು ಕೊರತೆ ಇಲ್ಲ. ಹೈಟೆಕ್ ಜ್ಯೋತಿಷಿಗಳ ಕುರಿತು ಮಾತನಾಡುವುದೇ ಕಷ್ಟ ದಿನನಿತ್ಯದ ಮುಂಜಾನೆಯಲ್ಲಿ ದೂರದರ್ಶನದ ವಾಹಿನಿಯೊಂದನ್ನು ಗಮನಿಸಿದಾಗ ಭವಿಷ್ಯಾಕಾಂಕ್ಷಿಗಳಿಗೆ ಬ್ರಹ್ಮಾಂಡವನ್ನೇ ತೋರಿಸುವ ಅವರುಗಳ ವಾಗ್ವೈಖರಿಯನ್ನು ಕೇಳಿಯೇ ಸವಿಯಬೇಕು.

**ನನಗೆ ಮುಖ್ಯಮಂತ್ರಿ ಪದವಿ**
**ನನ್ನ ಹೆಂಡತಿ ಎಂ.ಎಲ್.ಎ.**
**ನನ್ನ ಮಗನಿಗೆ ಎಂ.ಎಲ್.ಸಿ.**
**ನನ್ನ ಅಳಿಯ ಎಂ.ಪಿ.**
**ಮಗಳಿಗೊಂದು ಕೈಗಾರಿಕೆ**
**ಇದು ಇಂದಿನ ರಾಜಕಾರಣಿಯ**
**ಇಂದಿನ ಆಡಳಿತದ ರೀತಿ**

ಮಾನವರ ಮೇಲಿನ ಗ್ರಹಗತಿಯ ಪ್ರಭಾವ ಒಂದು ರೀತಿಯಾದರೆ, ಮಾವನ ಮೇಲಿನ ಗ್ರಹಗಳ ಕಾಟ ಅಷ್ಟಿಷ್ಟಲ್ಲ. ಮಾವನಿಗೆ ಸದಾ ವಕ್ಕರಿಸುವ 'ದಶಮಗ್ರಹ'ವೆಂದು ಬಿರುದು ಪಡೆದ

ಅಳಿಯನ ಕಾಟ ಹೇಳ ತೀರದು. ಅಳಿಯದೇವರೇನಾದರೂ ಮುನಿಸಿಕೊಂಡಿದ್ದಾದರೆ ಮಾವನವರ ಗ್ರಹಚಾರ ಏಳರಾಟ ಶನಿಕಾಟಕ್ಕಿಂತ ಕಡಿಮೆಯೇನಿರುವುದಿಲ್ಲ.

ಮಾವನ ಮನೆಯಿಂದ ಈ 'ದಶಮಿ ಗ್ರಹ' ಅಳಿಯಂದಿರ ಕಾಟವನ್ನು ನಿವಾರಿಸಿಕೊಳ್ಳಲು ಪ್ರಯಾಸ ಪಡುವ ಚಿತ್ರಣವನ್ನು ಕನ್ನಡದ ನಗೆ ನಾಟಕಕಾರ ದಾಶರಥಿ ದೀಕ್ಷಿತ್‌ರವರ 'ಅಳಿಯ ದೇವರು' ನಾಟಕವನ್ನು ನೋಡಿದವರು ಮರೆತಿರಲಾರರು.

ಮಾನವನ ಜೀವಿತಾವಧಿಯಲ್ಲಿ ಯಾವಾಗಲಾದರೊಮ್ಮೆ ಅಥವಾ ಸದಾ ಅನುಭವಿಸುವ ಕಷ್ಟ ಕೋಟಲೆಗಳಿಗೆಲ್ಲಾ 'ಶನಿಕಾಟ'ವೆಂದು ಹೇಳುವುದುಂಟು. ಅನಿಷ್ಟಕ್ಕೆಲ್ಲಾ ಶನೀಶ್ವರನೇ ಗುರಿಯಲ್ಲವೆ?

ಯಾವ ಯಾವ ಗ್ರಹಗಳಿಗೆ ಯಾವ ರೀತಿ ಶಾಂತಿ, ದಾನ, ಜಪತಪ ಮಾಡಬೇಕೆಂದು ಪಂಚಾಗದಲ್ಲಿಯೇ ಸೂಚಿಸಿರುತ್ತಾರೆ. ಹುಟ್ಟಿನಿಂದ ಸಾವಿನವರೆಗೂ ಈ ಪರಿಹಾರ ಇದ್ದೇ ಇರುತ್ತದೆ.

ದೊಡ್ಡ ಊರಿನ ಪೆದ್ದ ಗೌಡನ ಮನೆಯ ನಾಯಿ 'ಪಂಚ' ಕುನ್ನಿಗಳನ್ನು ಪ್ರಸವಿಸಿದ್ದಕ್ಕಾಗಿ, ಮೂಲಾನಕ್ಷತ್ರ (ಬೋರ್ಡ್ ಬಿದ್ದಾಗ) ಪಥನೋತ್ಫಲ ಮಹಾಯಾಗ.... ಹೀಗೆ ಹೇಳುತ್ತಾ ಹೊರಟರೆ ಬಹಳಷ್ಟು ಸ್ವಾರಸ್ಯಕರ ಸಂಗತಿಗಳನ್ನು ಕಾಣಬಹುದು.

ಜ್ಯೋತಿಷ್ಯ+ಭವಿಷ್ಯಗಳನ್ನು ಕುರಿತಂತೆ ''ಚಿಂತನ ಶೀಲರ'' ಅಂಬೋಣಗಳು ಹೀಗಿವೆ.

ಕನ್ನಡದ ಹಾಸ್ಯ ಸಾಹಿತಿ, ಉತ್ತರ ಭೂಪ 'ಬೀಚಿ'ಯವರು ಕೇಳುಗರ ಪ್ರಶ್ನೆಗೆ ಕೊಟ್ಟ ಉತ್ತರಗಳನ್ನು ನೋಡಿ–

ಪ್ರಶ್ನೆ : ಸಾಮಾನ್ಯವಾಗಿ ಜ್ಯೋತಿಷ್ಯಗಾರರು ಹೆಣ್ಣಿನ ಎಡಗೈಯನ್ನು, ಗಂಡಿನ ಬಲಗೈಯನ್ನು ನೋಡುತ್ತಾರೆ ಅದೇಕೆ ಸ್ವಾಮಿ?

ಉತ್ತರ : ಅವರು ಮೇಲು ಇಲ್ಲೊಬ್ಬ ಜ್ಯೋತಿಷಿಗಳಿದ್ದಾರೆ. ಅವರು ಗಂಡಿನ ಜೇಬನ್ನು ಹೆಣ್ಣಿನ ಮುಖವನ್ನು ನೋಡುತ್ತಾರೆ.

★★★

ಭವಿಷ್ಯವನ್ನು ಕುರಿತು ಓದುಗನೊಬ್ಬ ಕೇಳಿದ.

ಪ್ರಶ್ನೆ : ನೀವು ವಾರ ಭವಿಷ್ಯವನ್ನು ನಂಬುತ್ತೀರಾ ಸಾರ್?

ಉತ್ತರ : ಚೆನ್ನಾಗಿದ್ದರೆ ಮಾತ್ರ!

★★★

ಅನರ್ಥ ಕೋಶದ ನಾ. ಕಸ್ತೂರಿಯವರು ಪತ್ರಿಕೆಗಳಲ್ಲಿ ಪ್ರಕಟವಾಗುವ ಭವಿಷ್ಯದ ಬಗ್ಗೆ ''ಜನಪ್ರಿಯವಾಗಲು ಪತ್ರಿಕೆಗಳು ತುಂಬಾ ಶ್ರಮವಹಿಸಿ ಅಚ್ಚು ಮಾಡುವ ಭವಿಷ್ಯ ಭಾಗ – ಮೋಸ ಭವಿಷ್ಯ'' ಎಂದು ಹೆಸರಿಸುತ್ತಾರೆ.

ಮರೆತ್ತಿದ್ದೆ – ಗ್ರಹಗಳ ಪರಿಣಾಮದ ಬಗ್ಗೆ ಒಂದು ಪ್ರಸಂಗ. ಬಹಳ ವರ್ಷಗಳ ಹಿಂದೆ ನಡೆದದ್ದು.

ಬೆಂಗಳೂರು ವಿಶ್ವವಿದ್ಯಾಲಯದ ''ಮಾನವನ ಮೇಲೆ ಗ್ರಹಗಳ ಪರಿಣಾಮ ಉಂಟೆ?'' ಎಂಬ ಪುಸ್ತಕವನ್ನು ಪ್ರಕಟಿಸಿತ್ತು. ಡಾ|| ಎಚ್. ನರಸಿಂಹಯ್ಯನವರು ಇದರ ಲೇಖಕರೆಂದು ನೆನಪು. ಪುಸ್ತಕ ಖರೀದಿಸಿದ ನಾನು ಮಾರನೆಯ ದಿವಸ ವಿರಾಮ ವೇಳೆಯಲ್ಲಿ ಓದಲು ಆಫೀಸಿಗೆ ಒಯ್ದೆ. 'ಲಂಚ್' ಪೂರೈಸಿ (ಕ್ಯಾರಿಯರ್ ಆದ್ದರಿಂದ ಕೆಲಸದ ಜಾಗದಲ್ಲೇ ಊಟ) ಓದಲು ಪುಸ್ತಕ ತೆಗೆದೆ. ಇದೇ ವೇಳೆ ನನ್ನ ಗೆಳೆಯ 'ಎಕ್ಸ್' ಪುಸ್ತಕ ನೋಡಿ ''ಮೂರ್ತಿ, ಒಂದ್ನಿಮಿಷ ಕೊಡಿ ನೋಡ್ಕೊಡ್ತೀನಿ ಅಂತ'' ತಗೊಂಡು ಸಾಟಿಗೆ ಹೋದ್ರು. ಓದಿನಲ್ಲಿ ಲಂಚ್ ವೇಳೆ ಕಳೆದದ್ದು ಗೊತ್ತಾಗಲ್ಲ. ಗ್ರಹಚಾರ ಒಕ್ಕರಿಸಿತ್ತು. 'ಬಾಸ್' ಬಂದು ಹಿಂದುಗಡೆ ನಿಂತಿದ್ದಾರೆ. ಅಕ್ಕ–ಪಕ್ಕ ಕುಳಿತ ಸಹೋದ್ಯೋಗಿಗಳು ಎದ್ದು ನಿಂತಾಗ ''ಮಿ. ಎಕ್ಸ್''ಗೆ ಎಚ್ಚರ. ಬಾಸ್ ಎದುರಿಗೆ ಬಂದು ''ಮಿ. ಎಕ್ಸ್'' ಕೆಲಸದ ವೇಳೆಯಲ್ಲಿ ಪುಸ್ತಕ ಓದ್ತಿದೀರಾ? ಬನ್ನಿ ನನ್ನ ಕ್ಯಾಬಿನ್ನಿಗೆ'' ಎಂದು ಪುಸ್ತಕ ಕಿತ್ತುಕೊಂಡು ಗತ್ತಿನಿಂದ ಕ್ಯಾಬಿನ್ನಿಗೆ ತೆರಳಿದರು. ಅವರ ಹಿಂದೆ ''ಮಿ. ಎಕ್ಸ್''.

''ಮಾನವನ ಮೇಲೆ ಗ್ರಹಗಳ ಪರಿಣಾಮ ಉಂಟೆ?'' ಎಂಬ ಪುಸ್ತಕದ ಪ್ರಭಾವವೇ ಈ ಪರಿ ಇದ್ದರೆ ಇನ್ನೂ ಗ್ರಹಗಳ ಕಾಟ ಎಷ್ಟಿರ ಬೇಡ.''

ಬಾಸ್ ಕೊಠಡಿಯಿಂದ ''ಮಿ. ಎಕ್ಸ್'' ಹೊರ ಬಂದಾಗ ಅವರ ಕೈಯಲ್ಲಿ "Explanation" (ಸ್ಪಷ್ಟೀಕರಣದ) ಲೆಟರ್ ಇತ್ತು. ಮುಖ ಪೆಚ್ಚಾಗಿತ್ತು. ಸಮೀಪ ಬಂದು 'ಮೂರ್ತಿ, ಪುಸ್ತಕ ಬಾಸ್ ಹತ್ತಿರವೇ ಇದೆ. Sorry' ಎಂದರು. ''ಮಿ. ಎಕ್ಸ್'' ಕೆಲವು ತಿಂಗಳ ಹಿಂದೆ ಇದೇ 'ಬಾಸ್'ನಿಂದ ಯಾವುದೋ Prosectನಲ್ಲಿ ಚೆನ್ನಾಗಿ ಕೆಲಸ ಮಾಡ್ತೀರಾಂತ ಬೆನ್ನು ತಟ್ಟಿಸಿಕೊಂಡು "Appreciation Letter" ಪಡೆದಂತಹ ವ್ಯಕ್ತಿ! 'ಗ್ರಹಗಳ' ಏರಿಳಿತ ಹೇಗಿರುತ್ತದೆನ್ನುವುದಕ್ಕೆ ಇದೇ ಸಾಕ್ಷಿ. ಈ ಘಟನೆಯ ನಂತರ 'ಮಿ. ಎಕ್ಸ್' ನನ್ನ ಹತ್ತಿರ ಬಂದು ''ಮೂರ್ತಿ, ನಿಮ್ಮ ಪುಸ್ತಕ ನಾನು ಓದಲಿಕ್ಕೆ ಆಗಲಿಲ್ಲ. ಆದ್ರೆ ನೆನ್ನೆ ದಿವಸ ಬಾಸ್ ಕೊಠಡಿಗೆ ಕರೆದಿದ್ರು. ಏನೋ ಗ್ರಹಚಾರಾಂತ ಒಳಗೆ ಹೋದೆ. ಸಾರಿ, ಮಿ. ಎಕ್ಸ್ ಪುಸ್ತಕ ಚೆನ್ನಾಗಿದೆ. ಪೂರ್ತಿ ಓದಿ ಕೊಡ್ತೀನಿ'' ಎಂದ್ರು.

''ಮಾ(ವ)ನವರ ಮೇಲೆ ಗ್ರಹಗಳ ಪ್ರಭಾವ''ದ ಕುರಿತು ಪಾಶ್ಚಾತ್ಯರ ಕೆಲವು ಹೇಳಿಕೆಗಳನ್ನು ಈ ರೀತಿ ಇವೆ –

ಜೇಮ್ಸ್ ಟ್ರುಸ್ಲೊ ಆಡಮ್ಸ್ ಎಂಬುವನು ''ಜ್ಯೋತಿಷ್ಯ ಅಂದರೆ'' ಸಂಜೆ ಇಷ್ಟು ಹೊತ್ತಿಗೆ ಯಾವ ಗ್ರಹಗಳು ಎಲ್ಲಿವೆಯೆಂದು ಕರಾರುವಾಕ್ಕಾಗಿ ಹೇಳಬಲ್ಲ, ಆದರೆ ಅದೇ ಹೊತ್ತಿನಲ್ಲಿ ತನ್ನ ಮಗಳು ಎಲ್ಲಿರುವಳೆಂದು ಜ್ಯೋತಿಷ್ಯಿ ಹೇಳಲಾರ'' ಎನ್ನುತ್ತಾನೆ.

ಭವಿಷ್ಯದ ಬಗ್ಗೆ ಕನ್‌ಫ್ಯೂಷಿಯಸ್ ಭವಿಷ್ಯವನ್ನು ತಿಳಿಯಬೇಕಾದರೆ ''ಕಳೆದು ಹೋದುದನ್ನು ಪರಿಶೀಲಿಸು'' (Study the past, If you would divine the feature) ಎನ್ನುತ್ತಾನೆ.

ಬಹಳಷ್ಟು ಜನ ಜ್ಯೋತಿಷ್ಯ+ಭವಿಷ್ಯವನ್ನು ಗಂಭೀರವಾಗಿಯೂ - ಲಘುವಾಗಿಯೂ ಪರಿಗಣಿಸುವುದುಂಟು.

ಮಹಾ ವಿಜ್ಞಾನಿ ಆಲ್ಬರ್ಟ್ ಐನ್‌ಸ್ಟೈನ್ ''ನಾನೆಂದಿಗೂ ಭವಿಷ್ಯವನ್ನು ಯೋಚಿಸುವುದೇ ಇಲ್ಲ, ಅಷ್ಟು ಬೇಗನೆ ಅದೇ ಬಂದು ಬಿಡುತ್ತದೆ'' (I never think of the feature. It comes soon enough) ಎನ್ನುತ್ತಾರೆ.

ಕನ್ನಡದ ದಾರ್ಶನಿಕ ಕವಿ ಡಿ.ವಿ.ಜಿ.ಯವರು ತಮ್ಮ ''ಉಮರನ ಬಸಗೆ''ಯಲ್ಲಿ (ಪುಟ 122, ಪದ್ಯ 103)

''ಬರಲಿರುವುದೇನೆಂದು ಮೊದಲೆ ಬರೆದಿರಿಸಿಹುದು

ಒಳಿತನೋ ಕೆಡುಕನೋ ವಿಧಿಯ ಲೆಕ್ಕಣಿಕೆ

ನಮ್ಮ ಚಿಂತೆಗಳು ಯತ್ನಗಳೆಲ್ಲ ನಿಷ್ಫಲವೋ

ಲಭ್ಯವನ್ ಅದೃಷ್ಟ ಗೊತ್ತಿರಿಸಿಹುದು ನಿನಗೆ'' ಎನ್ನುತ್ತಾರೆ.

''ಮಾ(ವ)ನವರ ಮೇಲೆ ಗ್ರಹಗಳು ಬೀರುವ ಪ್ರಭಾವ'' ಇದೆಯೋ ಇಲ್ಲವೊ? ಅನುಭವಕ್ಕೆ ಬಂದಾಗ ಅರಿವಾಗುತ್ತದೆ.



# ಬೀchiಯೊಡನೆ ಒಂದು ಸಂದರ್ಶನ

● ಎನ್. ರಾಮನಾಥ್

**ಈ** ನಿದ್ರಾದೇವಿಯೇ ಹಾಗೆ. ಹಾಸಿಗೆಯ ಮೇಲೆ ಬಿದ್ದು ಹೊರಳಾಡಿದರೂ ಬರುವುದಿಲ್ಲ, ಸಭೆ, ಸಮಾರಂಭ, ತರಗತಿ, ಸಂಗೀತ ಕಚೇರಿ, ಹಾಸ್ಯೋತ್ಸವಗಳಲ್ಲಿ ಆಸಕ್ತಿಯಿಂದ ಕುಳಿತಿದ್ದರೆ ತಕ್ಷಣ ವಕ್ಕರಿಸಿಬಿಡುತ್ತಾಳೆ. ಇಂದೂ ಅಷ್ಟೆ; ಗಡದ್ದಾಗಿ ಊಟ ಸವಿದು ಈಸಿಛೇರ್‌ನಲ್ಲಿ ಹಾಗೇ ಹಿಂದಕ್ಕೆ ಒರಗಿದ್ದೆ. ನಿದ್ರಾದೇವಿ ಅರಿವೇ ಆಗದಂತೆ ಬಂದು ಆವರಿಸಿದ್ದಳು.

''ಗಸಗಸೆ ಪಾಯಸಕ್ಕೇ ಫುಲ್ ಟೈಟ್ ಏನೋ?'' ಕಿವಿಯಲ್ಲೇ ಮೊಳಗಿತು ಪ್ರಶ್ನೆ.

ನಾನು ಮಗ್ಗುಲು ಬದಲಿಸಿದೆ.

''ಎಲೈ ಜಗತ್ತೇ ಒಂದು ಬೆಡ್‌ರೂಮ್, ಕುಳಿತ ಕುರ್ಚಿಗಳೆಲ್ಲಾ ಮಂಚ ಎಂದು ತಿಳಿದಿರುವ ಮಂತ್ರಿಬುದ್ಧಿಯವನೇ, ಏಳುವಂಥಾತ್ತನಾಗು.''

ದನಿಯಲ್ಲಿ ಎಷ್ಟು ಅಧಿಕಾರ ಇದೆಯೋ ಅಷ್ಟೇ ಆರ್ದ್ರತೆ. ಅಂತೂ ಇಂತೂ ಎಡ್ಯೂರಪ್ಪನವರು ಕುರ್ಚಿ ಬಿಟ್ಟಾಗ ಪಟ್ಟಷ್ಟೇ ಸಂಕಟದಿಂದ ನಾನೂ ಕಣ್ಣುಬಿಟ್ಟೆ.

ಹೌಹಾರಿ ಎದ್ದು ಕುಳಿತೆ.

ಎದುರಿಗೆ ನಿಂತಿದ್ದವರು ಸ್ವಯಂ, ಸಾಕ್ಷಾತ್, ಖುದ್ದು ಬೀchiಯೇ! ಅದೇ ಜುಬ್ಬ, ಅದೇ ಪೈಪ್, ಅದೇ ಗಡ್ಡ, ಅದೇ ವಿಡಂಬನೆ!

''ಸಾರ್! ನೀವು!!!?''

''ಮತ್ತೆ ಮೂರ್ಛೆ ಹೋಗಬೇಡವೋ! ಏಪ್ರಿಲ್ ಒಂದು ನಿನ್ನ ಹುಟ್ಟುಹಬ್ಬವಲ್ಲವೇ, ವಿಷ್ ಮಾಡಕ್ಕೆ ಬಂದೆ.''

''ನನ್ನ ಡೇಟ್ ಆಫ್ ಬರ್ತ್ ನಿಮಗೆ ಹೇಗೆ ಗೊತ್ತು?''

''ಎಲ್ಲಾ ಮೂರ್ಖರೂ ಏಪ್ರಿಲ್ ಒಂದರಂದೇ ಹುಟ್ಟಿದ್ದು.''

ಒಪ್ಪಿದೆ. ಬೀchiಯಿಂದ ಮೂರ್ಖ ಎನ್ನಿಸಿಕೊಳ್ಳುವುದು ಅಪ್ಲಿಕೇಶನ್ ಮೂಲಕ ಪಡೆದ ರಾಜ್ಯಪ್ರಶಸ್ತಿಗಿಂತಲೂ ಶ್ರೇಷ್ಠವಾದ ಪ್ರಶಸ್ತಿ!

''ಎಲೈ ಶಿಷ್ಯೋತ್ತಮಾ, ಐಶ್ವರ್ಯ ರೈಳನ್ನು ಕಂಡ ಪ್ರೊಫೆಸರ್ ಕೃಷ್ಣೇಗೌಡರಂತೆ ಸುಮ್ಮನೆ ಮಿಕಿಮಿಕಿ ನೋಡಬೇಡ. ನನ್ನ ಸಂದರ್ಶನ ಬೇಕೆಂದಿದ್ದೆಯಲ್ಲಾ, ಅದೇನು ಕೇಳ್ತೀಯೋ ಕೇಳು'' ಆದೇಶಿಸಿದರು ನೀವು ಕೇಳಿದಿರಿ?ಯ ಉತ್ತರಭೂಪ!

''ನಿಮ್ಮನ್ನು ಕಂಡು ನನಗೆ ಆನಂದ, ಸಂತೋಷ, ಖುಷಿ, ಅಷ್ಟೇ ಅಲ್ಲದೆ ಸಂತಸವೂ ಆಗುತ್ತಿದೆ. ನೀವು ಸ್ವರ್ಗವನ್ನು ಬಿಟ್ಟು ಭೂಮಿಗೆ ಬರಲು ಕಾರಣವೇನು?''



''ಬ್ರೇಕಿಂಗ್ ನ್ಯೂಸ್''

''ಬ್ರೇಕಿಂಗ್ ನ್ಯೂಸೇ? ಅದು ಹೇಗೆ?''

''ಸ್ವರ್ಗದಲ್ಲಿ ಏನಿದೆಯಯ್ಯಾ? ಅದೇ ಊರ್ವಶಿ, ಅದೇ ರಂಬೆ, ಅದೇ ಕೊಂಬೆ. ಇಲ್ಲಾದರೆ ಕ್ಷಣಕ್ಷಣಕ್ಕೂ ಬ್ರೇಕಿಂಗ್ ನ್ಯೂಸ್, ಕ್ಷಣಕ್ಷಣಕ್ಕೂ ರೋಮಾಂಚನ.''

''ನಿಮ್ಮ ಕಾಲದಲ್ಲಿ ಬ್ರೇಕಿಂಗ್ ನ್ಯೂಸ್ ಇರಲಿಲ್ಲವೇ?''

''ಇತ್ತಲ್ಲಾ... ಹುಡುಗಿಯನ್ನು ಚುಡಾಯಿಸಿದ ಕಾಮಣ್ಣನ ಕಾಲು ಹುಡುಗಿಯ ಅಣ್ಣನಿಂದ ಬ್ರೇಕ್ ಆದುದೇ ಆಗಿನ ಕಾಲದ ಬ್ರೇಕಿಂಗ್ ನ್ಯೂಸ್.''

''ಈಗ?''

''ನಟಿ ಗರ್ಭಿಣಿಯಾದರೆ ಬ್ರೇಕಿಂಗ್ ನ್ಯೂಸ್! ತೆಂಡೊಲ್ಕರ್ ಸೊನ್ನೆ ಹೊಡೆದರೆ ಬ್ರೇಕಿಂಗ್ ನ್ಯೂಸ್! ಅಲ್ಲಯ್ಯಾ, ಇವೆಲ್ಲಾ ಬ್ರೇಕಿಂಗ್ ನ್ಯೂಸ್ ಅಲ್ಲ, ಹಾರ್ಟ್ ಬ್ರೇಕಿಂಗ್ ನ್ಯೂಸ್ ಎಂದು ತಿಳಿಯಬಾರದೇನಯ್ಯಾ?''

''ಹಾರ್ಟ್ ಬ್ರೇಕಿಂಗ್? ಏಕೆ?''

''ನಟಿಗೆ ಮಗುವಾಗದಿದ್ದರೆ ಅವಳ ಡೈವೋರ್ಸ್‌ಗೆ ಕಾದು ಮದುವೆ ಆಗುವ ಕನಸು ಕಾಣುವ ಭೂಪರಿದ್ದಾರಯ್ಯಾ. ಅವರ ಹಾರ್ಟ್ ಬ್ರೇಕ್ ಆಗುತ್ತದಲ್ಲಾ.''

''ತೆಂಡುಲ್ಕರ್ ಸೊನ್ನೆಗೆ?''

''ಜಾಹಿರಾತುದಾರರು, ಪ್ರಾಯೋಜಕರ ಹಾರ್ಟ್ ಬ್ರೇಕಿಂಗ್.''

''ಬೀchiಯವರೇ, ಆಗಿನ ಕಾಲದ ಸುದ್ದಿಗಳಿಗೂ ಈಗಿನ ಕಾಲದ ಸುದ್ದಿಗಳಿಗೂ ಏನು ವ್ಯತ್ಯಾಸ?''

''ಆಗ ಲಂಚ ಹೊಡೆದವನನ್ನು ಅಯೋಗ್ಯ ಎನ್ನುತ್ತಿದ್ದರು. ಈಗ ಲಂಚ ಪಡೆಯದವನನ್ನು 'ಒಮ್ಮೆ ನಿಮ್ಹಾನ್ಸ್‌ನಲ್ಲಿ ಟೆಸ್ಟ್ ಮಾಡಿಸಿ' ಎನ್ನುತ್ತಾರೆ.''

''ನಿಮ್ಮ ಸಾಹಿತ್ಯದಲ್ಲಿ ಅದೆಂತಹ ಮೊನಚು, ಅದೆಂತಹ ವಿಡಂಬನೆ. ನಿಮ್ಮ 'ಅಂದನಾ ತಿಂಮ' ಸಾಹಿತ್ಯ ಲೋಕದ ಮೈಲಿಗಲ್ಲು.''

''ಹಾಗಾದರೆ ಮಿಕ್ಕವು ಮೈಲಿಗೆ ಮತ್ತು ಗಲ್ಲು ಎನ್ನು''

''ಅದೇಕೆ ಹಾಗೆನ್ನುವಿರಿ?''

''ದಾಸಕೂಟ ಜನಿವಾರಕ್ಕೆ ಮೈಲಿಗೆ, ಖಾದಿಸೀರೆ ಶಿವದಾರಕ್ಕೆ ಮೈಲಿಗೆ. ಇನ್ನು ಎಷ್ಟೋ ಬರಹಗಳು ವಿವಿಧ ವರ್ಗಗಳ ಜನಕ್ಕೆ ಮೈಲಿಗೆ ಅಥವಾ ಗಲ್ಲು'' ಎನ್ನುತ್ತಾ ನಗತೊಡಗಿದರು ಬೀಚಿ. ಅದೇನು ನಗೆ! ರೆಕಾರ್ಡ್ ಮಾಡಿಕೊಂಡಿದ್ದಿದ್ದರೆ ನಾಲ್ಕಾರು ಚಾನಲ್‌ಗಳಿಗೆ ಲಾಫ್ ಟ್ರ್ಯಾಕ್ ಆಗಿ ಮಾರಬಹುದಿತ್ತು!

''ಅದೇಕೆ ಅಷ್ಟು ಮೊನಚಾಗಿ ಬರೆಯುತ್ತಿದ್ದಿರಿ?''

''Poet is an ambassador to the world ಕಣಯ್ಯಾ. ಜಗತ್ತಿಗೇ ರಾಯಭಾರಿ ಅವನು. ಇಡೀ ಜಗತ್ತನ್ನು ಸರಿಪಡಿಸುವ ಜವಾಬ್ದಾರಿ ಕವಿಗೆ ಇರುತ್ತದೆ.''

''ಈಗಿನ ಕವಿಗಳು ಹಾಗಿದ್ದಾರೇನು?''

''ಪಾಪ! ಈಗಿನ ಹಲವಾರು ಕವಿಗಳು ಒಳ್ಳೆಯ ಟೈಲರ್‌ಗಳಾಗಬಹುದಿತ್ತು.''

''ಅದು ಹೇಗೆ?''

''ಗದ್ಯವನ್ನು ಅಳತೆಗೆ ತಕ್ಕಂತೆ ಕತ್ತರಿಸಿ, ಒಂದರ ಕೆಳಗೆ ಒಂದನ್ನಿಟ್ಟು ಸೊಗಸಾಗಿ ಹೊಲಿಗೆ ಹಾಕುತ್ತಾರೆ.''

''ಅಂದಿನ ಕನ್ನಡಕ್ಕೂ ಇಂದಿನ ಕನ್ನಡಕ್ಕೂ ಏನು ವ್ಯತ್ಯಾಸ ಕಂಡಿರಿ?''

''ನಾನು ಬಳಸಿದ್ದು ನಡುಗನ್ನಡ.''

''ಈಗಿನದು?''

''ನಡುವಿನ ಕೆಳಗಿನ ಕನ್ನಡ!''

''ನೀವು ರಾಜಕಾರಣವನ್ನು ಹತ್ತಿರದಿಂದ ಕಂಡು ಟೀಕಿಸಿದವರು. ಈಗಿನ ರಾಜಕಾರಣದ ಬಗ್ಗೆ...?''

''ಈಗಿನದೇ ಬೆಸ್ಟ್ ಕಣಯ್ಯಾ. ಎಂತೆಂತಹ ಕಲಾವಿದರಿದ್ದಾರಯ್ಯಾ ಈಗ! ಬಟ್ಟೆ ಹರಿದುಕೊಂಡು ಕಿರುಚುವನೊಬ್ಬ, 'ಏನೇ ಬರಲಿ ಕುರ್ಚಿ ಇರಲಿ' ಎಂದು ಕೀರಲುವನೊಬ್ಬ, 'ಇಳಿದು ಬಾ ಸಿಎಂ ಇಳಿದು ಬಾ' ಎಂಬ ಒಂದೇ ರಾಗ ಹಾಡುವವನೊಬ್ಬ... ಆಗಿನವರು ಒಬ್ಬರೂ ಸರಿ ಇರಲಿಲ್ಲವಯ್ಯಾ, ಮರ್ಯಾದೆಗೆ ಅಂಜುತ್ತಿದ್ದ ದಡ್ಡರು ಅವರು!''

''ಈಗಿನವರು?''

''ಈಗಿನವರ ದೃಷ್ಟಿಕೋನವೇ ಬೇರೆ. ಅಧಿಕಾರ ಇರುವವವರೆಗೆ ಮಜ, ಕಳೆದುಕೊಂಡಾಗ ಸಜ. ಈ ಸಜ ಮತ್ತು ಮಜದ ಕೊಲಾಬೊರೆಷನ್ನನ್ನೇ ಸಮಾಜ ಎಂದುಕೊಂಡಿದ್ದಾರೆ!'' ಎನ್ನುತ್ತಾ ತಮ್ಮ ಪೈಪ್‌ನಿಂದ ಹೊಗೆ ಎಳೆದೆಳೆದು ಬಿಟ್ಟರು.

''ಈಗ ನನ್ನ ಬಗ್ಗೆ ಪುಸ್ತಕ ಬರೆದರೆ ಪುಸ್ತಕದ ಹೆಸರೇನಿಡುತ್ತಾರೆ ಗೊತ್ತೇನಯ್ಯಾ?'' ಕೇಳಿದರು ಬೀಚಿ.

''ಏನು?''

''ಹುಕ್ಕಾ... ಬುಕ್ಕಾ...?''

''ಹಹ್ಹಹ್ಹ! ಗುರುಗಳೇ, ನೀವೇ ಈಗ ಬರೆದರೆ ಮತ್ತೊಮ್ಮೆ 'ಅಂದನಾ ತಿಂಮ' ಬರೆಯುವಿರಾ?''

''ನೊಂದನಾ ತಿಂಮ ಬರೆಯುತ್ತೇನೆ.''

''ಏಕೆ?''

''ನೋವು, ಗಲಭೆ, ವಂಚನೆಗಳಿದ್ದರೆ ಸೀರಿಯಲ್ ನಿರ್ಮಾಪಕರು ಒಳ್ಳೆಯ ರೇಟ್ ಕೊಡುತ್ತಾರೆ. ಪುಸ್ತಕವೂ ಹೆಚ್ಚು ಮಾರಾಟವಾಗುತ್ತದೆ.''

''ನೀವು ಹಾಸ್ಯ ಸಾಹಿತಿಗಳೆಂದೇ ಖ್ಯಾತಿ ಪಡೆದಿದ್ದೀರಿ. ಕರ್ನಾಟಕದಲ್ಲಿ ಹಾಸ್ಯದ ಅಲೆ ಹುಟ್ಟಿದ್ದೇ ನೀವು, ಕೈಲಾಸಂರಿಂದ ಎನ್ನಬಹುದು. ಈಗಿನ ಕಾಲದ ಹಾಸ್ಯ ಭಾಷಣದ ಬಗ್ಗೆ ನಿಮ್ಮ ಅಭಿಪ್ರಾಯವೇನು?''

''ಆಗ ಹಾಸ್ಯ ಹಾಸ್ಯದಂತಿತ್ತು. ಈಗ ಹಾಸ್ಯ ಸಂಗೀತದಂತಿದೆ.''

''ಸ್ವಲ್ಪ ಬಿಡಿಸಿ ಹೇಳಿ ಸರ್, ಪ್ಲೀಸ್....''

''ತಥಾಸ್ತು. ಕೇಳುವಂಥಾತ್ತನಾಗು. ಸಂಗೀತಗಾರರು ಯಾರೋ ಬರೆದದ್ದನ್ನು ಹಾಡುತ್ತಾರೆ. ಹಾಸ್ಯ ಭಾಷಣಗರೂ ಅಷ್ಟೆ. ಅವರೂ ಹೇಳಿದ್ದನ್ನೇ ಹೇಳುತ್ತಾರೆ, ಇವರೂ ಅಷ್ಟೆ. ಅವರೂ ಕೊರೆತಕ್ಕೆ ತೊಡಗಿದರೆ ಗಂಟೆಗಟ್ಟಲೆ, ಇವರೂ ಅಷ್ಟೆ ಇಬ್ಬರಲ್ಲೂ ಸ್ವಂತಿಕೆ ಮಳೆ ಸೀನ್ ಚಿತ್ರನಟಿಯ ಬಟ್ಟೆಯಂತಿದೆ.''

''ಎಂದರೆ?''

''ಇದೆ ಎಂದರೆ ಇದೆ, ಇಲ್ಲ ಎಂದರೆ ಇಲ್ಲ!''

''ಹಾಸ್ಯದ ಬಾಬ್ತನ್ನು ಅತ್ತ ಇಟ್ಟು ಧರ್ಮದ ವಿಷಯಕ್ಕೆ ಬರೋಣ. ನಿಮ್ಮ ಕಾಲದ ಮಠಾಧೀಶರಿಗೂ ಈಗಿನ ಹಲವು ಮಠಾಧೀಶರಿಗೂ ಏನು ವ್ಯತ್ಯಾಸ?''

''ಆಗ ಎಲ್ಲವನ್ನೂ ತ್ಯಜಿಸಿದವರು ಮಾತ್ರ ಮಠದಯ್ಯಗಳಾಗುತ್ತಿದ್ದರು. ಈಗ ಎಲ್ಲವನ್ನೂ ತ್ಯಜಿಸುವ ಬದಲಿಗೆ ಕೇವಲ ಮೂರು ಬಿಟ್ಟವರು ಸಹ ಮಠಾಧೀಶರಾಗಬಹುದು.''

''ಇಂದಿನ ಯುವಕರು ಎತ್ತ ಸಾಗಿದ್ದಾರೆ?''

''ಅಂದಿನ ಯುವಕರಂತೆಯೇ ಯುವತಿಯರತ್ತ ಸಾಗಿದ್ದಾರೆ.''

''ಇಂದಿನ ಚಿತ್ರಗಳ ಬಗ್ಗೆ ಏನು ಹೇಳುವಿರಿ?''

''ಅದ್ಭುತ ಸಾಹಿತ್ಯ ಕಣಯ್ಯಾ. ನಮಗಾರಿಗೂ ಕತ್ತಲಲ್ಲಿ ಕರಡಿಗೆ ಜಾಮೂನು ತಿನ್ನಿಸಬಾರದು ಎಂದು ತಿಳಿದೇ ಇರಲಿಲ್ಲ! ಅಪ್ಪ ಲೂಸಾ, ಅಮ್ಮ ಲೂಸಾ ಎಂದು ಕೇಳುವುದೂ ಸಾಹಿತ್ಯ ಎಂದು ತಿಳಿದಿರಲಿಲ್ಲ, ಇರುವುದೆಲ್ಲವ ಬಿಟ್ಟು ಇರದುದರ ಕಡೆಗೆ ತುಡಿಯುವುದೇ

ಜೀವನ ಎನ್ನುತ್ತಾರೆ. ಇವರೂ ಅಷ್ಟೆ ಇರುವ ಬುದ್ಧಿಯನ್ನೆಲ್ಲಾ ಬಿಟ್ಟು ಅನರ್ಥದ ಕಡೆಗೇ ವಾಲಿದ್ದಾರೆ. ಭೇಷ್ ಕಣಯ್ಯಾ.''

''ನಾಟಕ?''

''ಮಂತ್ರಿಗಳ ಮುಂದೆ ಅದಾವ ನಾಟಕಕಾರರಿದ್ದಾರಯ್ಯಾ? ಲೈಟು, ಪರದೆ, ಮೈಕು, ಸೈಡ್‌ವಿಂಗ್ಸ್, ವೇದಿಕೆ ಏನೂ ಇಲ್ಲದೆ ನಾಟಕ ಆಡುವುದರಲ್ಲಿ ಅವರೇ ಅಗ್ರಗಣ್ಯರು. ಅವರ ಮುಂದೆ ನಮ್ಮ ಕಾಲದ ನಟರು ತೀರಾ ಸಪ್ಪೆ.''

''ಭ್ರಷ್ಟಾಚಾರ ವಿರೋಧ ಚಳುವಳಿಯ ಬಗ್ಗೆ ಏನು ಹೇಳುವಿರಿ?''

''ಶುದ್ಧ ತಪ್ಪು; ರಾಜಕಾರಣ ಇಂದಿನ ದಿನಗಳಲ್ಲಿ ಒಂದು ವ್ಯಾಪಾರ. ಬಂಡವಾಳ ಹೂಡಿದವರಿಗೆ ಲಾಭ ಗಳಿಸುವ ಅಧಿಕಾರ ಇರಲೇಬೇಕು!''

''ಹಾಗಾದರೆ ಲಂಚ ನಿರ್ಮೂಲನೆ?''

''ನಿನ್ನ ಲಂಚದ ಹಣವನ್ನು ನಾನು ಮುಟ್ಟುವುದಿಲ್ಲ ಎಂದು ಹೆಂಡತಿ ಹೇಳಲಿ. ಪ್ರತಿ ಮನೆಯಲ್ಲೂ ಹೀಗೆ ಆದರೆ ಲಂಚ ನಿರ್ಮೂಲನೆ ತಾನಾಗೇ ಆಗುತ್ತದೆ.''

''ಹಾಗೆ ಆಗುವುದು ಸಾಧ್ಯವೆ?''

''ಹೆಣ್ಣಿಗೆ ಚಿನ್ನದ ಆಸೆ ಇರುವವರೆಗೆ ಅಸಂಭವ.''

''ಗುರುಗಳೇ, ನೀವು ಮತ್ತೆ ಹುಟ್ಟುವುದಾದರೆ ಎಲ್ಲಿ ಹುಟ್ಟಬಯಸುವಿರಿ?''

''ಅಮ್ಮನ ಗರ್ಭದಲ್ಲೇ... ಏಕೆ? ಈಗ ಬೇರೆಲ್ಲೋ ಹುಟ್ಟುವಂತಹ ವೈಜ್ಞಾನಿಕ ಬೆಳವಣಿಗೆ ಆಗಿದೆಯೇನು?''

''ಬೀchiಯವರೇ, ಈಗಿನ ಜನಗಳನ್ನು ಆಕರ್ಷಿಸುವ ಸಲುವಾಗಿ ಅಶ್ಲೀಲ ಸಾಹಿತ್ಯ ಬರೆಯಬೇಕೆಂದಿದ್ದೇನೆ. ಏನು ಹೇಳುವಿರಿ?''

ಬೀchiಯ ವದನದಲ್ಲಿ ಅಸಹನೆ ಮೂಡಿತು. ಹುಕ್ಕಾ ಅತ್ತ ಇಟ್ಟು ಒಂದೇ ಹಾರಿನಲ್ಲಿ ನನ್ನತ್ತ ಜಿಗಿದು ನನ್ನ ಕೊರಳನ್ನು ತಮ್ಮ ಕೈಗಳಲ್ಲಿ ಬಳಸಿ ಹಿಡಿದು ''ಇನ್ನೊಮ್ಮೆ ಹೇಳು ನೋಡೋಣ'' ಎಂದರು. ಧ್ವನಿ ಗಡುಸಾಗಿತ್ತು.

ಅವರ ಕೈಯಿಂದ ತಪ್ಪಿಸಿಕೊಳ್ಳಲು ಕೊರಳನ್ನು ಅತ್ತಿತ್ತ ಅಲ್ಲಾಡಿಸುತ್ತಾ ಹೊರಳಿದೆ.

ಹೊರಳಿದ ರಭಸಕ್ಕೆ ಈಸಿಛೇರ್‌ನಿಂದ ಕೆಳಕ್ಕೆ ಬಿದ್ದೆ.

ಕನಸು ಹಾರಿತ್ತು.

ಆದರೆ...

ಈಸಿಛೇರ್‌ನ ಪಕ್ಕದಲ್ಲಿ ಇರುವ ಈ ಪೈಪ್......?

## ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

**- ದಂಆ**

- ಕೇಜ್ರಿವಾಲ್ ಪಕ್ಷ ಅಧಿಕಾರಕ್ಕೆ ಬಂದರೆ ಆ ಸರ್ಕಾರವನ್ನು ಗವರ್ನಮೆಂಟ್ ಆಫ್ ಮ್ಯಾಂಗೊ ಪೀಪಲ್, ಗವರ್ನಮೆಂಟ್ ಫಾರ್ ಮ್ಯಾಂಗೊ ಪೀಪಲ್ ಮತ್ತು ಗವರ್ನಮೆಂಟ್ ಬೈ ಮ್ಯಾಂಗೊ ಪೀಪಲ್ ಎಂದು ಧಾರಾಳವಾಗಿ ಕರೆಯಬಹುದು.
- ಕರ್ಜೂರ ತಿಂದಾದ ಮೇಲೆ ಬೀಜವನ್ನು ಡೇಟ್‌ಲೆಸ್ ಸೀಡ್ ಎಂದು ಹೇಳಬಹುದಲ್ಲವೆ?
- ಫೇಸ್ ಇದೆ ಎಂದು ಮುಖಭಂಗ ಆಗಬಾರದು; ಬುಕ್ ಇದೆ ಎಂದು ತೋಚಿದ್ದನ್ನು ಗೀಚಬಾರದು.
- *What you think of me none of my business.*
- ಸತ್ಯವನ್ನೇ ಹೇಳಿ ಇಲ್ಲದಿದ್ದರೆ ಆ ಸತ್ಯವನ್ನು ಬೇರೆ ಯಾರಾದರು ಬಂದು ನಿಮಗೇ ಹೇಳಿಬಿಡಬಹುದು.

**ಮೆಲುಕು ಹಾಕುವಂತಹ ಮಾತುಗಳ ಗುಚ್ಛ**

- ನನ್ನ ರಕ್ತವನ್ನೇ ಹೀರುವುದಾದರೆ ಶೇಖರವಾಗಿರುವ ಒಂದಿಷ್ಟು ಕೊಬ್ಬನ್ನೂ ಹೀರು!
- *On the keyboard of life always keep one finger on Escape.*
- ಸಮಸ್ಯೆಗೂ ಪರಿಹಾರಕ್ಕೂ ಇರುವ ಒಂದೇ ಒಂದು ವ್ಯತ್ಯಾಸ ಎಂದರೆ ಜನಗಳಿಗೆ ಪರಿಹಾರ ಅರ್ಥವಾಗುತ್ತದೆ.
- ಸಿನಿಮಾ ನಾಯಕನ ಕೈಯಲ್ಲಿ ಮದ್ಯದ ಬಾಟಲಿ ಇದೆ ಎಂದರೆ ಆತನ ಪ್ರೇಮ ವೈಫಲ್ಯವಾಗಿದೆ ಎಂದೇ ಅರ್ಥ.
- *Humans like tame(d) creatures.*
- ಎಲ್ಲಾ ತಿನ್ನುವವರೇ ಆದರೆ ಸವಿಯುವವರು ಕೆಲವರು ಮಾತ್ರ.
- **ಅತ್ತೆಗೆ ಸೊಸೆಯ ಉವಾಚ:** ನನ್ನ ಮಕ್ಕಳನ್ನು ಹೇಗೆ ಬೆಳೆಸಬೇಕು ಎಂದು ನನಗೆ ಹೇಳಿಕೊಡಲು ಬರಬೇಡಿ. ನೀವು ಬೆಳೆಸಿದ ಒಂದು ಮಗುವಿನೊಂದಿಗೆ ನಾನೀಗ ಬಾಳುತ್ತಿದ್ದೇನೆ. ಅದು ತುಂಬಾ ಸುಧಾರಿಸಬೇಕಾಗಿದೆ.
- ಆಶಾವಾದಿ ವಿಮಾನವನ್ನು ಕಂಡು ಹಿಡಿದ. ನಿರಾಶವಾದಿ ಪ್ಯಾರಾಚೂಟ್ ನಿರ್ಮಿಸಿದ.
- ಕಾಫಿ ಇದ್ದರೆ ಎಕ್ಸ್‌ಪ್ರೆಸ್ಸೊ ಇಲ್ಲದಿದ್ದರೆ ಡಿಪ್ರೆಸ್ಸೊ.
- *There is only one way to be born but many ways to die.*

*

# ವೀಕ್ಷಕ ದೇವರುಗಳೇ,
# ಇದೋ ನಿಮಗೆ ನಮನ!

**• ಕೃಷ್ಣ ಸುಬ್ಬರಾವ್**

**It** is a director's play ಎಂದನೊಬ್ಬ, ಇಲ್ಲ ಇದು Actor's Play ಎಂದ ಇನ್ನೊಬ್ಬ, ಮಾತಿನ ಮಧ್ಯೆ ನುಗ್ಗಿದ ವೈ.ಎನ್.ಕೆ. ''ಎರಡೂ ಅಲ್ಲ, ಇದು ಆಡಿಯನ್ಸ್ ಪ್ಲೆ, ಏಕೆಂದರೆ They Play a very important role'' ಎಂದು ಹೇಳಿದರೆಂದು ನೆನಪು.


ಈ ಮೇಲಿನ ಮಾತು ಈಗ ನಾಟಕಕ್ಕೆ ಸೀಮಿತವಾಗದೆ, ಸಿನಿಮಾಕ್ಕೆ ಅದರಲ್ಲೂ ಹೆಚ್ಚಾಗಿ ಟಿ.ವಿ. ಮಾಧ್ಯಮಕ್ಕೆ ಹೆಚ್ಚು ಪ್ರಸ್ತುತ. ದಿನಚರಿಯ ಮುಖ್ಯ ಭಾಗವಾಗಿರುವ ಸೀರಿಯಲ್‌ಗಳು, ಅದರ ಪಾತ್ರಗಳು, ಘಟನೆಗಳು ಎಲ್ಲದರಲ್ಲೂ ಸಕ್ರಿಯವಾಗಿ ಭಾಗವಹಿಸುವ ನಮ್ಮ ವೀಕ್ಷಕರಿಗೆ ಸಮಯದ ಅಭಾವ ಬಿಟ್ಟರೆ ಇನ್ಯಾವುದರಲ್ಲೂ ಕೊರತೆಯಿರುವುದಿಲ್ಲ. ಅಕ್ಕಪಕ್ಕದವರ ಜೊತೆ, ನೆಂಟರಿಷ್ಟರ ಜೊತೆ ಮಾತ್ರ ಚರ್ಚಿಸುತ್ತಿದ್ದ ಜನಗಳಿಗೆ ಈಗ ನಿರ್ದೇಶಕರ ಜೊತೆ, ನಟನಟಿಯರ ಜೊತೆ ತಾಂತ್ರಿಕವರ್ಗದವರ ಜೊತೆ ನೇರವಾಗಿ ಚರ್ಚಿಸುವ ಸೌಭಾಗ್ಯ! ತಮ್ಮ ಸಲಹೆಯನ್ನೇ ಮುಂದಿನ ಕಥೆಯನ್ನಾಗಿ ಕಾಣಬಿಡಬಹುದಾದ ಭ್ರಮೆ ಹುಟ್ಟಿಸುವ ಆಸೆ, ಏನಿಲ್ಲದಿದ್ದರೂ ತಮ್ಮ ಪ್ರಶ್ನೆಗಳ ಮೂಲಕ ತಾವೇ ಮೇಲೇಳುವ ಸುಯೋಗ.

'ಇವನು ಬಾರನ್ ಈಡಿಯಟ್' ಎಂದು ತನ್ನ ಮಗನನ್ನು ನನ್ನ ಸ್ನೇಹಿತನೊಬ್ಬ ಯಾವಾಗಲೂ ಪರಿಚಯಿಸುತ್ತಾನೆ. ಕಾರಣ, ಹುಟ್ಟಿದ ಆರನೇ ತಿಂಗಳಿಂದ ಟಿ.ವಿ.ಯನ್ನು ಯಾವುದೇ ಕಾರ್ಯಕ್ರಮವಿರಲಿ, ನೋಡಿ ಅಳು ನಿಲ್ಲಿಸುವ ಭೂಪನೆಂದು ಹೆಸರು ಪಡೆದ ಹಾಟ್ ಮಗ! ಇತ್ತಿಚಿಗೆ 'ಈಡಿಯಟ್' ಎನ್ನುವುದು. ಬೈಗುಳ ಪದದಿಂದ ಹೊಗಳಿಕೆ ಪದವಾಗಿರೋದು ಎಲ್ಲರಿಗೂ ತಿಳಿದ ವಿಷಯವೆ. ನಮಗೆ ಬೆಳಿಗ್ಗೆಯಿಂದಲೇ ಯಾವುದಾದರೂ ಫೋನು ಬರುತ್ತಲೇ ಇರುತ್ತೆ. ಅದರಲ್ಲಿ ಶೇಕಡ 75ರಿಂದ 80ಕರೆಗಳು ಎಚ್ಚರಿಕೆಯ ಗಂಟೆಗಳೇ ಆಗಿರುತ್ತವೆ.

ಇಷ್ಟೊತ್ತಿಗೆ 'ಈ ಚಾನೆಲ್ ಹಾಕಿ, ಆ ಚಾನೆಲ್ ಹಾಕಿ ಅಲ್ಲಿ ನಾನು, ನನ್ನ ಯಜಮಾನ್ರು ಕಾಣಿಸಿಕೊಳ್ಳುತ್ತೇವೆ. ನಮ್ಮ ಬಡಾವಣೆಯ ಮಠವನ್ನು ತೋರಿಸುತ್ತಾರೆ. ಗುಂಪಿನಲ್ಲಿ ಗುರುತು ಹಿಡಿಯಲು ಕಷ್ಟವಾಗಬಹುದೆಂದು ಮೆರೂನ್ ಕಲರ್, ಮೈಸೂರು ಸಿಲ್ಕ್ ಸೀರೆ ಉಟ್ಟಿದ್ದೇನೆ. ಹೊಸದಾಗಿ ತಗೊಂಡೆ 7,500/–ರೂಪಾಯಿ. ನಮ್ಮವರು ಕೆಂಪು ಕಲರ್, ರೇಷ್ಮೆ ಪಂಚೆ, ಶಲ್ಯ ಹೊದ್ದಿದ್ದಾರೆ. ಕಾರ್ಯಕ್ರಮ 8–30ರಿಂದ 9ರ ತನಕ ಹೊತ್ತಾಯಿತು. ಇನ್ನೂ ಬಹಳ ಜನಕ್ಕೆ ಫೋನ್ ಮಾಡಬೇಕು ಫೋನ್ ಇಡ್ತೀನಿ ಅಂತ ಅಭ್ಯಾಸ ಬಲದಿಂದ ಮೊಬೈಲ್ ಫೋನಾದರೂ ಹೇಳಿ ನಮ್ಮನ್ನು ಮುಕ್ತಿಗೊಳಿಸುತ್ತಾರೆ.' ಮಧ್ಯಾಹ್ನದ ಹೊತ್ತು ''ಹೊಸ

ರುಚಿ''ಯಲ್ಲಿ, ಚಿಣ್ಣರ ಕಾರ್ಯಕ್ರಮದಲ್ಲಿ ಕಾಣಿಸಿಕೊಳ್ಳುವ ಅವರ ಮಕ್ಕಳು, ಮೊಮ್ಮಕ್ಕಳು, ಪಕ್ಕದ್ಮನೆಯವರ ಮಕ್ಕಳು ಅಥವಾ ಮನೆ ಓನರ್ ಮಕ್ಕಳು, ಇಲ್ಲ ಬಾಡಿಗೆದಾರರ ಮಕ್ಕಳು ಹೀಗೆ ಅಷ್ಟೊಂದು ಮಕ್ಕಳ ಕಾರ್ಯಕ್ರಮಗಳು ನೋಡದೇ ಇರಕ್ಕಾಗುತ್ತದೆಯೇ? ನಾವು ನೋಡದಿದ್ದರೆ ನಾಳೇ ನಮ್ಮ ಮಕ್ಕಳ ಸ್ಕೂಲ್‌ಡೇ ಕಾರ್ಯಕ್ರಮ ಅವರು ನೋಡುವುದಾದರೂ ಹೇಗೆ? ಇಷ್ಟೆಲ್ಲದರ ನಡುವೆ ನಮ್ಮ ಮನೆಯ ಹಾಳು ಕೆಲಸ, ಊಟ, ತಿಂಡಿ ಮಾಡಿಕೊಳ್ಳಬೇಕು, ಅಷ್ಟರಲ್ಲಿ ಸೀರಿಯಲ್‌ಗಳು ಶುರುವಾಗಿಬಿಟ್ಟಿರುತ್ತೆ.

ರೊಟೀನ್ ದಿನಗಳೇ ಬಿಡುವಿಲ್ಲದಿರುವಾಗ ಯಾರಾದರೂ ಜನಪ್ರಿಯ ನಟರು ಸತ್ತರೆ ಮುಗೀತು. ನಮ್ಮ ಮನೆಗೆ ಸೂತಕದ ವಾತಾವರಣ ರವಾನೆಯಾಗುತ್ತೆ. ನಮ್ಮ ಮನೆಯಲ್ಲೇ ಸಾವು ಸಂಭವಿಸಿದಂತಾಗುತ್ತದೆ. ಅಂತ್ಯ ಸಂಸ್ಕಾರದಿಂದ ಹಿಡಿದು ಅಸ್ತಿ ವಿಸರ್ಜನೆ, ವೈಕುಂಟ ತಲುಪಿಸುವ ಜವಾಬ್ದಾರಿಯೂ ಎಲ್ಲರ ಮೇಲೂ ಇರುತ್ತದೆ. ಸಂತೈಸಲು ಬರುವ ನೆಂಟರಿಷ್ಟರೆಲ್ಲರಿಗೂ ಚಾನೆಲ್ ತನ್ನ ಕ್ಯಾಮರಾ ಹಿಡಿಯುತ್ತದೆ. ನಿಜವಾದ ಸಾವಿರಲಿ, ಕಥೆಯ ಪಾತ್ರವೊಂದರ ಸಾವಾದರೂ ಇದೇ. 'ಸಂಸ್ಕಾರ' ಒಂದು ಸಾವನ್ನು ಎಷ್ಟು ದಿನ ಬೇಕಾದರೂ ಜೀವಂತವಾಗಿ ಉಳಿಸುವ ತಾಕತ್ತು ಸೀರಿಯಲ್ ನಿರ್ಮಾಪಕ, ನಿರ್ವಾಹಕರಿಗೆ ಇರುತ್ತೆ. ಎಷ್ಟೋ ವೇಳೆ ಸತ್ತ ವ್ಯಕ್ತಿಯ ಮುಖ ತೋರಿಸದೆ ಅಂತಿಮ ಸಂಸ್ಕಾರ ಮಾಡಿಸುವುದು ಇತ್ತೀಚಿನ



ಫ್ಯಾಶನ್. ಇದ್ದಕ್ಕಿದ್ದ ಹಾಗೆ ಬಿಟ್ಟು ಹೋಗುವ ಪಾತ್ರಗಳಿಗೆ 'ಎಳ್ಳು ನೀರು ಬಿಡುವ' ವಿಧಾನ! ಹೆಣದ ಮುಖವನ್ನು ಒಮ್ಮೊಮ್ಮೆ ಬೇಕೆಂದೇ ತೋರಿಸುವುದಿಲ್ಲ. ನಿರ್ಮಾಪಕರಿಗೆ ಮತ್ತೊಂದು ದಿನ ಆ ಪಾತ್ರಧಾರಿ ಸೀರಿಯಲ್‌ಗೆ ವಾಪಸ್ಸಾಗುವ ಭರವಸೆ/ಭ್ರಮೆ ಇದ್ದಾಗ ಹಾಗಾಗುತ್ತೆ. ಒಂದು ವೇಳೆ ರಿ ಎಂಟ್ರಿ ಕೊಟ್ಟರೆ, ಸತ್ತ ವ್ಯಕ್ತಿ ಅವನಲ್ಲ ಎಂದು ಇನ್ನೊಂದು ಟ್ವಿಸ್ಟ್ ಕೊಡಬಹುದಲ್ಲವೆ?

ಕ್ರಿಯಾಶೀಲ ವೀಕ್ಷಕರೆಂದರೆ, ಮಹಿಳೆಯರೆಂಬ ವಿಶೇಷಾರ್ಥ ಕಲ್ಪಿಸುವ ಅವಶ್ಯಕತೆಯಿಲ್ಲ. ಅವರು ಕೇವಲ ಹೋಮ್-ಮೇಕರ್ಸ್ ಅಲ್ಲಿ ಟಿ.ಆರ್.ಪಿ. ನಿರ್ಮಾಪಕರು ಕೂಡ ಕುಳಿತಲ್ಲಿಯೇ ಅನೇಕ ಉದ್ಯೋಗ ಉದ್ಯಮಗಳನ್ನು ಸೃಷ್ಟಿಸುತ್ತಾರೆ. ಮೇಕಪ್ ಜನ, ತಂಡದವರಿಗೆ ಊಟ-ತಿಂಡಿ ಕೊಡುವ ಕೇವರಿಂಗ್ ಉದ್ಯಮ, ದೃಶ್ಯವನ್ನು ಮನೆಗೆ ತಲುಪಿಸುವ ಕೇಬಲ್ ಹುಡುಗರು, ಸಣ್ಣಪುಟ್ಟ ಪಾತ್ರ ಮಾಡುವ ಲೈಟ್ ಬಾಯ್ಸ್, ವಾಹನ ಚಾಲಕರು ಹೀಗೆ ಸಾವಿರಾರು ಜನಗಳ ಜೀವನೋಪಾಯ ನೋಡಿಕೊಳ್ಳುವ ಜವಾಬ್ದಾರಿ ವೀಕ್ಷಕ ಪ್ರಭುಗಳದ್ದು. ಗೇಮ್ಸ್ ಶೋಗಳಲ್ಲಿ ಇಡೀ ಕುಟುಂಬದವರನ್ನ, ಅವರ ನೆಂಟರಿಷ್ಟರನ್ನು ಕರೆಸುವ ಚಾನೆಲ್‌ಗಳು ಚಿಲ್ಲರೆ ಬಹುಮಾನಗಳನ್ನು ಕೊಡುತ್ತಾರೆ. ತೆರೆಯ ಮೇಲೆ ಬರುವುದೆಂದರೆ ಸುಲಭವೇ? ಹೊಸ ಬಟ್ಟೆ ಹೊಸ ಒಡವೆ ವಸ್ತುಗಳನ್ನು ಖರೀದಿಸಬೇಡವೆ? ಹೀಗಾಗಿ ವ್ಯಾಪಾರ ಹೆಚ್ಚಿಸುತ್ತಾರೆ. ಅದರಲ್ಲೇ ಒಂದು ಅಲ್ಪಭಾಗ ಪ್ರಾಯೋಜನೆ ರೂಪದಲ್ಲಿ ಕೆಲವರಿಗೆ ಬರುತ್ತದೆಯಷ್ಟೆ. ಭಾನುವಾರದಂದು ಮನೆಯಲ್ಲಿ ತಿಂಡಿ ಊಟದಲ್ಲಿ ಯಾವುದಾದರೂ ಒಂದನ್ನು ಮಾಡಲು ಮನೆಯಾಕೆಗೆ ಪುರುಸೊತ್ತು ಇರುತ್ತೆ. ಆಯ್ಕೆ ಮಾಡಿಕೊಳ್ಳುವುದು ಯಜಮಾನನ ಸ್ವಾತಂತ್ರ. ಖರ್ಚು ಕಮ್ಮಿಯೆಂದು ಸಾಧಾರಣವಾಗಿ ಬೆಳಗಿನ ತಿಂಡಿಯನ್ನು ದರ್ಶಿನಿಯಿಂದ ತರುವುದಾಗಿ ಒಪ್ಪಿ ಹೆಲ್ಮೆಟ್ ಧರಿಸಿ ಚಕ್ರಧಾರಿಯಾಗಿ ಮನೆ ಬಿಡುತ್ತಾನೆ. ಹೋಟೆಲ್‌ನವರಿಗೂ ಟಿ.ವಿ.ಯಿಂದಲೇ ಹೆಚ್ಚು ವ್ಯಾಪಾರ ಹಾಗೂ ವಾಹನಕ್ಕಾಗಿ ಪೆಟ್ರೋಲ್‌ನ ಹೆಚ್ಚಿನ ಬೇಡಿಕೆ. ಇನ್ನೂ ಟೆಲಿಫೋನ್ ಹಾಗೂ ಮೊಬೈಲ್ ಕಂಪನಿಗಳಿಗಂತು ವೀಕ್ಷಕ ದೇವರುಗಳೇ ನಿಜವಾದ ಅನ್ನದಾತರು.

''ಇಷ್ಟೆಲ್ಲಾ ಕಾರ್ಯಕ್ರಮಗಳನ್ನು ನೋಡುತ್ತಾ ಕುಳಿತಿರುತ್ತೀರಲ್ಲಾ, ರಿಟೈರ್ (ವಯಸ್ಸಿನಿಂದ ಅಥವಾ ಸ್ವಯಂ ನಿವೃತ್ತಿಯಿಂದ) ಆದ ನಿಮ್ಮ ಯಜಮಾನ್ರು ಸುಮ್ಮನಿರುತ್ತಾರಾ?'' ಎಂದು ಕೆಲವು ಮಹಿಳಾಮಣಿಗಳಿಗೆ ಕೇಳಿದಾಗ ''ಅಯ್ಯೋ ಅವರಿಗೆಲ್ಲಿ ಪುರುಸೊತ್ತು ಅವರು ನಮಗಿಂತ ಹೆಚ್ಚಾಗಿ ತಮ್ಮ ರೂಂನಲ್ಲಿ ಕಂಪ್ಯೂಟರ್ ಮುಂದೆ ಕುಳಿತು ಸಾಯಂಕಾಲದವರೆಗೂ ಆಟವಾಡುತ್ತಾ ಕೂತಿರುತ್ತಾರೆ. ಅವರಿಗಿಂತ ನಾವೇ ವಾಸಿ, ಸ್ವಲ್ಪ ಹೊತ್ತಾದರೂ ಬೇರೆ ಕೆಲಸ ಮಾಡಿಕೊಳ್ಳುತ್ತೇವೆ'' ಎಂದರು. 'ಛೆ, ಎಳೆ ಮಕ್ಕಳ ಹಾಗೆ ಕಂಪ್ಯೂಟರ್ ಗೇಮ್ ಆಡ್ತಾರಾ?' ಅಂತ ಕೇಳಿದ್ದಕ್ಕೆ ''ಇಲ್ಲಾ ಅವರದು ಆನ್‌ಲೈನ್ ಆಟ. ಷೇರುಪೇಟೆ ಸರ್ಕಸ್.'' ಸ್ವಲ್ಪ ಇಳಿದರೆ ಕೊಳ್ಳೋದು ಸ್ವಲ್ಪ ಏರಿದರೆ ಮಾರುವುದು. ಒಂದು ರೀತಿಯ ''ಹಾವು-ಏಣಿಯ ಆಟ'' ಎಂದರು. ಹೀಗೆ ಮನೆಯಲ್ಲಿ ಯಾರು ಸುಮ್ಮನೆ ಕೂರದೆ ಸದಾ ಕ್ರಿಯಾಶೀಲರಾಗಿರುತ್ತಾರೆ.

ಅಲ್ಪಸಂಖ್ಯಾತರು ಎಲ್ಲಾ ಕ್ಷೇತ್ರದಲ್ಲೂ ಇರುವ ಹಾಗೆ ಟಿ.ವಿ.ಯನ್ನೇ ನೋಡದ ಅಥವಾ ಹಾಗೆ ಹೇಳಿಕೊಳ್ಳುವ ಜನರೂ ಇರುತ್ತಾರೆ. ನೀವು ನಂಬಬೇಕು. ಮತ್ತೆ ಕೆಲವರು ಕೆಲವು ಕಾಲದಲ್ಲಿ ಮಾತ್ರ ಟಿ.ವಿ. ವೀಕ್ಷಕರಾಗಿ ಅರೆಕಾಲಿಕ ವೀಕ್ಷಕರಾಗುತ್ತಾರೆ. ಮಕ್ಕಳ ಪರೀಕ್ಷಾ ಕಾಲದಲ್ಲಿ ಅಥವಾ ಮಕ್ಕಳ ವಿದ್ಯಾಭ್ಯಾಸದ ನಿರ್ಣಾಯಕ ಘಟ್ಟದಲ್ಲಿ – S.S.L.C. ಹಾಗೂ ದ್ವಿತೀಯ ಪಿ.ಯು.ಸಿ. ಸಮಯದಲ್ಲಿ ತಮ್ಮ ಮನರಂಜನೆಯನ್ನು ತ್ಯಾಗ ಮಾಡಿ ಟಿ.ವಿ. ಪೆಟ್ಟಿಗೆಯನ್ನು ಅಂಗವಿಕಲವನ್ನಾಗಿ ಮಾಡುತ್ತಾರೆ. ಆದರೆ ಮಕ್ಕಳು, ಮನೆಯಲ್ಲಿ ಲಭ್ಯವಿರುವ ಅಥವಾ ಅಕ್ಕಪಕ್ಕದಲ್ಲಿರುವ ಇಲ್ಲಾ ಲೈಬ್ರರಿಯಲ್ಲಿರುವ ಸಿ.ಡಿ./ಡಿ.ವಿ.ಡಿ.ಯನ್ನು ತಂದು ಮನೆಯಲ್ಲಿ ಹೇಗೊ ಬಿಡುವು ಮಾಡಿಕೊಂಡು ನೋಡುತ್ತಾರೆ. ನಿಷೇಧವಿರುವುದು ಕೇವಲ ಟಿ.ವಿ.ಗೆ ತಾನೆ!

ಪುಣ್ಯವಂತರೆಂದರೆ ಕರೆಂಟ್ ಇಲ್ಲದಿದ್ದರೂ ಟಿ.ವಿ. ನೋಡುವ ಅದೃಷ್ಟವಂತರು ಅರ್ಥಾತ್ ಯು.ಪಿ.ಎಸ್. ಸೌಲಭ್ಯವಿರುವವರು. ಆದಿದ್ದರೆ ನಿಮಗೆ ಸಮಾಜ ಸೇವೆ ಮಾಡುವ ಸದಾವಕಾಶ. ನಾನು ಭಾಗವಹಿಸುವ 'ಹೈಕ್ಲಾಸ್ ಫ್ಯಾಮಿಲಿ' ಇಂತಹ ಟಿ.ವಿ.ಲಿ ಬರುತ್ತೆ. ನಮ್ಮ ಮನೇಲಿ ಕರೆಂಟ್ ಇಲ್ಲ, ನಿಮ್ಮನೇಲಿ ಕರೆಂಟ್ ಯೋಚನೆ ಇಲ್ಲವಲ್ಲ, ''ನಾನು, ನಮ್ಮ ಅತ್ತೆ, ಅತ್ತಿಗೆ, ನಾದಿನಿ ಹಾಗೂ ನಮ್ಮಪ್ಪ, ಯಜಮಾನ್ರು ಬರುತ್ತೇವೆ'' ಅಂತ ಒಮ್ಮೆ ನನ್ನ ಹೆಂಡತಿಯ ಸಮಾಜದ ಸ್ನೇಹಿತೆ ಫೋನ್ ಮಾಡಿದಳು. ಇಲ್ಲಾ ಅನ್ನಕ್ಕಾಗುತ್ಯೆ? ಎಲ್ಲರೂ ಕಾರಿನಲ್ಲಿ ಬಂದಿಳಿದರು. ನಮ್ಮನೆಯ ಫರ್ನೀಚೆಲ್ಲ ಸಾರ್ಥಕತೆ ಪಡೆಯಿತು. ವೀಕ್ಷಣೆ ಮಾಡುತ್ತಿದ್ದಾಗ ಸರಸ್ವತಿ ''ನಿಮ್ಮ ಟಿ.ವಿ. ಬಹಳ ಹಳೆದಾಯಿತಲ್ಲವಾ? ಬೇರೆ ತೆಗೆದುಕೊಳ್ಳಬಾರದೇ?'' ಎಂದಳು. ಕಾರಣ ಕೇಳಿದಾಗ 'ಇಮೇಜ್ ಕುಳ್ಳದಾಗಿ ಕಾಣಿಸುತ್ತೆ' ಎಂದಳು. ತಾನು ಇನ್ನೂ ಚೆನ್ನಾಗಿ ಇರುವ ಭ್ರಮೆ! ''ಕುಣಿಯೊಕ್ಕೆ ಬಾರದವಳು..'' ಎಂಬ ಗಾದೆ ಈಗ ಬದಲಾಯಿಸುವ ಅಗತ್ಯವಿದೆ. ''ಚೆಂದವಾಗಿ ಕಾಣಿಸದವಳು ಟಿ.ವಿ./ಚಾನೆಲ್ ಬಿಟ್ಟಳಂತೆ'' ಎಂಬ ಹೊಸಗಾದೆ ಉಪಯೋಗಿಸಬಹುದು.

ಇಷ್ಟೆಲ್ಲಾ ಬಿಸಿಯಾಗಿರುವಾಗ ಮನೆಯ ಮಕ್ಕಳು 'ಕಾರ್ಟೂನ್ ನೆಟ್‌ವರ್ಕ್' ಹಾಕು, 'ಪೋಗೊ' ಹಾಕು ಎಂದು ಹಠ ಹಿಡಿದರೆ ''ಸದಾ ಟಿ.ವಿ. ನೋಡಬೇಡ ಅಂದರೆ ಕೇಳೊಲ್ಲಾ ಈ ಹಾಳು ಮಕ್ಕಳು'' ಅಂತ ಅವರಿಗೆ ಹೊಡೆಯೋದಕ್ಕೆ ಹೋಗುತ್ತೇವೆ ನಾವು ಹಿರಿಯರು.

---

| | |
|---|---|
| **ರೋಗಿ :** | **ಡಾಕ್ಟರ್ ನನ್ನ ಗಂಟಲಿನಲ್ಲಿ ಎಲ್ಲೋ ಗಾಜಿನ ಚೂರು ಚುಚ್ಕೊಂಡಿದೆ ಎಲ್ಲಿಂತ ಗೊತ್ತಾಗಿಲ್ಲ** |
| **ಡಾಕ್ಟರ್ :** | **ಈ ಒಂದು ಲೋಟ ನೀರು ಕುಡಿ** |
| **ರೋಗಿ :** | **ನೀರು ಕುಡಿದ್ರೆ ಗೊತ್ತಾಗುತ್ತಾ** |
| **ಡಾಕ್ಟರ್ :** | **ಹೌದು. ನೀರು ಎಲ್ಲಿಂದ ಲೀಕ್ ಆಗ್ತಾ ಇರುತ್ತೋ ಅಲ್ಲಿ ಗಾಜು ಚುಚ್ಕೊಂಡಿದೆ ಅಂತ** |

# ಸಂಕೇತಗಳು

• ಅಣ್ಣಾಸ್ವಾಮಿ ಮೊದಲಿಯಾರ್

**ಕ**ಲ್ಲೇಶಿ ಹಂಪಿನಗರದ ಆಫೀಸರ್ಸ್ ಕ್ಲಬ್ ಪ್ರವೇಶ ಮಾಡಿದ. ಹಂಪಿನಗರದ ಆಫೀಸರ್ಸ್ ಕ್ಲಬ್ ಒಂದು ಪ್ರತಿಷ್ಠಿತ ಕ್ಲಬ್. ಇದರ ಅಧ್ಯಕ್ಷರು ನಿವೃತ್ತ ಹೈಕೋರ್ಟ್ ಛೀಫ್ ಜಸ್ಟಿಸ್ ಸುಗ್ರೀವ ಅವರು. ಪ್ರಧಾನ ಕಾರ್ಯದರ್ಶಿ ನಿವೃತ್ತ ಛೀಫ್ ಸೆಕ್ರೆಟರಿ ಹಯಘ್ರೀವ ಅವರು. ವ್ಯವಸ್ಥಾಪಕ ಕಾರ್ಯದರ್ಶಿ ನಿವೃತ್ತ ಐ.ಪಿ.ಎಸ್. ಆಫೀಸರ್ ಡಿ.ಐ.ಜಿ. ಭೋನ್ಸ್ಲೆ ಅವರು. ಪದಾಧಿಕಾರಿಗಳು ಎಲ್ಲರೂ ಐ.ಪಿ.ಎಸ್. ಅಥವಾ ಐ.ಎ.ಎಸ್. ಅಧಿಕಾರಿಗಳು. ಹೀಗಾಗಿ ಹಂಪಿನಗರ ಕ್ಲಬ್ ಎಲ್ಲರ ಬಾಯಲ್ಲಿ ಹಂಪಿನಗರ ಆಫೀಸರ್ಸ್ ಕ್ಲಬ್ ಆಗಿದೆ. ಇಲ್ಲಿ ಸದಸ್ಯನಾಗಿ ಅವಕಾಶ ಸಿಗುವುದೇ ಕಷ್ಟ. ಪ್ರತಿವರ್ಷ ಐದು ಅಥವಾ ಹತ್ತು ಮಂದಿಯನ್ನು ಮಾತ್ರ ಸದಸ್ಯರಾಗಿ ತೆಗೆದುಕೊಳ್ಳುತ್ತಾರೆ. ಸಿ.ಇ.ಟಿ. ಸೆಲೆಕ್ಷನ್ ಇದ್ದ ಹಾಗೆ!

ಈ ಕ್ಲಬ್‌ನಲ್ಲಿ ಒಂದು ದೊಡ್ಡ ಆಡಿಟೋರಿಯಂ ಇದೆ. ಇಲ್ಲಿ ಅನೇಕ ಕಾರ್ಯಕ್ರಮಗಳು ನಡೆಯುತ್ತಿರುತ್ತವೆ. ಬಿಲಿಯರ್ಡ್ಸ್, ಚೆಸ್, ಟೇಬಲ್ ಟೆನ್ನಿಸ್, ಮೊದಲಾದ ಗೇಮ್‌ಗಳ ಕೋರ್ಟ್‌ಗಳಿವೆ. ಮುಖ್ಯವಾಗಿ ಕ್ರಿಕೆಟ್ ಸ್ಟೇಡಿಯಂ, ಟೆನ್ನಿಸ್ ಕೋರ್ಟ್, ಸ್ವಿಮ್ಮಿಂಗ್ ಪೂಲ್, ಬ್ಯಾಡ್‌ಮಿಂಟನ್ ಕೋರ್ಟ್ ಹೀಗೆ ಸ್ಪೋರ್ಟ್ಸ್‌ಗೆ ಪ್ರಾಮುಖ್ಯತೆ ಕೊಟ್ಟಿದ್ದಾರೆ. ಮಹಿಳೆಯರಿಗೆ – ಮಕ್ಕಳಿಗೆ ಪ್ರತ್ಯೇಕ ವಿಭಾಗಗಳಿವೆ. ಇವರಿಗೆ ಸಂಗೀತ, ನೃತ್ಯ, ನಾಟಕ, ಕೋಲಾಟ ಮೊದಲಾದ ಕಾರ್ಯಕ್ರಮಗಳಿರುತ್ತೆ. ಜಿಮ್, ಯೋಗ ತರಗತಿಗಳೂ ಇವೆ. ರೀಡಿಂಗ್ ರೂಂ – ಲೈಬ್ರರಿ ಸಹ ಇವೆ. ಇದೊಂದು ಪ್ರತ್ಯೇಕ ಲೋಕ. ವೃದ್ಧರಿಗೆ ಇಸ್ಪೀಟು ಆಡುವ ಬೋರ್ಡ್ ಇದೆ. ಕ್ಯಾಂಟೀನ್, ಬಾರ್ ಸಹ ಇವೆ.

ನಾನು ರೀಡಿಂಗ್ ರೂಂ – ಲೈಬ್ರರಿ – ಸಾಂಸ್ಕೃತಿಕ ಚಟುವಟಿಕೆಗಳ ಇನ್‌ಚಾರ್ಜ್. ಹೀಗಾಗಿ ಕ್ಲಬ್ ನನ್ನ ದೈನಂದಿನ ಚಟುವಟಿಕೆಗಳ ಹಾಸು ಹೊಕ್ಕಾಗಿದೆ. ಕಲ್ಲೇಶಿ ಫ್ರೀಲಾನ್ಸ್ ಜರ್ನಲಿಸ್ಟ್, ಅವನು ಅನೇಕ ವಿಷಯಗಳ ಬಗ್ಗೆ ಪತ್ರಿಕೆಗಳಲ್ಲಿ ಲೇಖನ ಬರೆಯುತ್ತಿದ್ದ. ಜೊತೆಗೆ ಹಾಸ್ಯಲೇಖನಗಳ ಬರಹಗಾರ ಒಂದು ನಗೆ ಕ್ಲಬ್ ನಡೆಸುತ್ತಿದ್ದ. ಅದರಲ್ಲಿ ಒಳ್ಳೆಯ ಸಂಪಾದನೆಯಿತ್ತು. ''ಬಾಯ್ಬಿಟ್ಟು ನಗುವುದರಿಂದ ದೇಹ ಹಗುರವಾಗುತ್ತೆ. ಮಾನಸಿಕ ಒತ್ತಡ ಕಡಿಮೆಯಾಗುತ್ತೆ!'' ಎಂದು ಇತ್ತೀಚೆಗೆ ದೇಶ–ವಿದೇಶಗಳ ವೈದ್ಯರು ಹೇಳುತ್ತಿರುವುದರಿಂದ ಅನೇಕ ಮಂದಿ ಡಯಾಬಿಟಿಕ್, ಬ್ಲಡ್‌ಪ್ರಸರ್ ರೋಗಿಗಳು ನಗೆ ಕಬ್ಲ್ ಸೇರುತ್ತಿದ್ದಾರೆ.

ಅವನು ಹೇಳಿಕೊಡುವುದಿಷ್ಟೇ. ಒಂದಿಷ್ಟು ವ್ಯಾಯಾಮ ಜೊತೆಗೆ ಹಹ್ಹಹಾ! ಹಿಹ್ಹಿಹೀ! ಹೆಹ್ಹೆಹೇ! ಹೊಹ್ಹೊಹೋ! ಎಂದು ಜೋರಾಗಿ ಅರಚುತ್ತಾ ನಗುವುದು. ಇಷ್ಟಕ್ಕೆ ತಿಂಗಳಿಗೆ ಒಬ್ಬರಿಗೆ ಐದುನೂರು ಫೀಸು! ನಗೆಹಬ್ಬ ತಂಡ ನಡೆಸುತ್ತಾನೆ. ರಾಜ್ಯೋತ್ಸವ, ದೀಪಾವಳಿ, ಉಗಾದಿ, ಯಾರಿಗಾದರೂ ಸನ್ಮಾನ, ದೇವರ ಉತ್ಸವ ಜಾತ್ರೆ, ಸಾಹಿತ್ಯ ಕಾರ್ಯಕ್ರಮ,

ರಾಜಕೀಯ ಚುನಾವಣೆ ಮೊದಲಾದ ಸಂದರ್ಭಗಳಲ್ಲಿ ನಗೆ ಕೂಟದ ಸದಸ್ಯರೊಡನೆ ರಾಜ್ಯದಾದ್ಯಂತ ಕಾರ್ಯಕ್ರಮಗಳಿಗಾಗಿ ಸಂಚರಿಸುತ್ತಾನೆ. ದುಡ್ಡೋದುಡ್ಡು! ಇನ್ನೇನು ಬೇಕು? ಒಂದೆರಡು ಸಾರಿ ವಿದೇಶಕ್ಕೂ ಹೋಗಿ ಬಂದ!

ಕಲ್ಲೇಶಿ ಹಂಪಿನಗರ ಆಫೀಸರ್ಸ್ ಕ್ಲಬ್ ಸದಸ್ಯನಲ್ಲದಿದ್ದರೂ ಅವನಿಗೆ ಮುಕ್ತ ಪ್ರವೇಶವಿತ್ತು. ಕ್ಲಬ್‌ನ ಚಟುವಟಿಕೆಗಳನ್ನು ಟಿ.ವಿ. ಸುದ್ದಿಯಲ್ಲಿ ಪ್ರಸಾರ ಮಾಡಿಸುವುದು – ಪತ್ರಿಕೆಗಳಲ್ಲಿ ಫೋಟೋ ಸಮೇತ ಸುದ್ದಿ ಪ್ರಕಟಣೆ ಅವನು ನೋಡಿಕೊಳ್ಳುತ್ತಿದ್ದ.

ಒಂದು ಪ್ರಸಿದ್ಧ ದಿನ ಪತ್ರಿಕೆಯಲ್ಲಿ ಒಂದು ಲೇಖನ ಸ್ಪರ್ಧೆ ಏರ್ಪಡಿಸಿದ್ದರು. ಮೊದಲ ಬಹುಮಾನ ಪಡೆದವರಿಗೆ ಹತ್ತು ಸಾವಿರ ನಗದು ಹಣ ಮತ್ತು ಸಿಂಗಪೂರ್ ಟ್ರಿಪ್! ಯಾರಿಗುಂಟು ಯಾರಿಗಿಲ್ಲ?!

ವಿಷಯ: ''ಸಂಕೇತಗಳು'' ಅವನು ಅನೇಕ ಮಂದಿಯನ್ನು ಭೇಟಿಯಾಗಿ ವಿಷಯ ಸಂಗ್ರಹ ಮಾಡಲು ನಿರ್ಧರಿಸಿ ಕ್ಲಬ್‌ಗೆ ಬಂದಿದ್ದ.

''ಬಾರಯ್ಯ ನನಗೆ ಹೆಲ್ಪ್ ಮಾಡು!'' ಎಂದು ನನ್ನನ್ನು ಕೇಳಿದ.

''ನಾನೇನಪ್ಪಾ ಮಾಡಬೇಕು?'' ಎಂದೆ. ''ಸ್ವಲ್ಪ ನನ್ನ ಜೊತೆಯಲ್ಲಿ ಬಾ ಯಾರ ಹತ್ರ ಮಾತಾಡ್ಬೇಕು? ಏನು ಕೇಳ್ಬೇಕು ಗೈಡ್ ಮಾಡು'' ಎಂದು ದುಂಬಾಲು ಬಿದ್ದ. ''ನಿನಗೆ ಟ್ರೀಟ್ ಕೊಡಿಸ್ತೀನಿ!'' ಎಂದು ಲಂಚದ ಆಸೆ ಬೇರೆ ತೋರಿಸಿದ. ''ಸರಿ, ಕಳೆದುಕೊಳ್ಳುವುದೇನು?!'' ಎಂದು ಮನಸ್ಸಿನಲ್ಲಿ ಯೋಚಿಸಿ ಅವನ ಜೊತೆ ಹೊರಟೆ.

ಆ ದಿನ ಶುಕ್ರವಾರ. ಪ್ರತಿ ಶುಕ್ರವಾರ ಕ್ಲಬ್‌ನಲ್ಲಿ ಲಕ್ಷ್ಮೀ ಪೂಜೆ ಮಾಡುವುದು ವಾಡಿಕೆ. ಖಜಾಂಚಿ ನಿವೃತ್ತ ಅಕೌಂಟ್ಸ್ ಜನರಲ್ ಕುಬೇರಪ್ಪನವರು ಲಕ್ಷ್ಮೀಪೂಜೆಗೆ ಧಾರಾಳವಾಗಿ ಖರ್ಚು ಮಾಡಿ ಎರಡು ಮೂರು ತರಹ ಪ್ರಸಾದ ಮಾಡಿಸಿರುತ್ತಾರೆ. ಹಣ್ಣುಗಳು ಹೆಚ್ಚಿ ಹಾಕಿದ ರಸಾಯಣ (ಫ್ರೂಟ್ ಸಾಲಡ್), ಸಿಹಿ ಪೊಂಗಲ್, ಪುಳಿಯೋಗರೆ ಹೀಗೆ ಒಂದೊಂದು ವಾರ ಒಂದೊಂದು ಬಗೆ. ಪ್ರಸನ್ನ ವೆಂಕಟರಮಣಸ್ವಾಮಿ ಆಲಯದ ಅರ್ಚಕರು, ಮಾರುತಿ ಮಂದಿರದ ಅರ್ಚಕರು, ಕೋದಂಡರಾಮ ಸ್ವಾಮಿ ಅರ್ಚಕರು ಹೀಗೆ ವಾರಕೊಬ್ಬರು ಬಂದು ಪೂಜೆ ಮಾಡುತ್ತಾರೆ.

ಆದಿನ ಪ್ರಸನ್ನ ವೆಂಕಟರಮಣಸ್ವಾಮಿ ಅರ್ಚಕರು ಬಂದಿದ್ದರು. ಭರ್ಜರಿ ಪೂಜೆ ಮಾಡಿದರು. ಪ್ರಸಾದ ವಿನಿಯೋಗವೂ ಆಯಿತು. ಅರ್ಚಕರು ಸಾಂಸ್ಕೃತಿಕ ಕಾಲೇಜಿನ ಪ್ರೊಫೆಸರು. ಪಿ.ಹೆಚ್.ಡಿ. ಮಾಡಿದ್ದರು. ಇವರನ್ನು ಯಾಕೆ ಸಂದರ್ಶನ ಮಾಡಬಾರದು? ಎಂದು ಯೋಚಿಸಿ ಕಲ್ಲೇಶಿಯೊಂದಿಗೆ ಅವರ ಬಳಿಗೆ ಹೋದೆ. ಅವರು ಹೊರಡುವ ಸಿದ್ಧತೆಯಲ್ಲಿದ್ದರು. ''ಅರ್ಚಕರೇ! ಒಂದು ಹತ್ತು ನಿಮಿಷ ಬಿಡುವು ಮಾಡಿಕೊಳ್ಳಿ ನಿಮ್ಮ ಜೊತೆ ಮಾತಾನಾಡುವುದಿದೆ!'' ಎಂದೆ. ಅವರು ಆಶ್ಚರ್ಯದಿಂದ ನಮ್ಮನ್ನು ನೋಡಿದರು.

''ಇದೇನು ಸಾಹಿತಿಗಳೂ – ಪತ್ರಕರ್ತರೂ ಒಟ್ಟಾಗಿ ಬಂದಿದ್ದೀರಿ! ಯಾವ ಗ್ರಹಚಾರವೋ?'' ಎಂದರು. ''ಹೆದರ್ಕೋಬೇಡಿ! ನಾವು ರಾಹು–ಕೇತು ತರಹ ಬಂದಿಲ್ಲ''

ಎಂದೆ. ಅವರು ''ಸರಿ ನಡೀರಿ!'' ಎಂದರು ಮೂವರೂ ಲೈಬ್ರರಿಗೆ ಬಂದು ಕುಳಿತುಕೊಂಡೆವು. ಅಲ್ಲಿ ಯಾರೂ ಇರಲಿಲ್ಲ. ನಾನು ಅವರಿಗೆ ವಿಷಯ ತಿಳಿಸಿ ''ಸಂಕೇತಗಳ ಬಗ್ಗೆ ನಿಮ್ಮ ಅಭಿಪ್ರಾಯವೇನು?'' ಎಂದೆ.

''ಬ್ರಹ್ಮಾಂಡದ ತುಂಬ ಸಂಕೇತಗಳು ತುಂಬಿಕೊಂಡಿವೆ. ನೋಡುವ ಕಣ್ಣುಗಳು ಬೇಕು. ಈ ಸಂಕೇತಗಳು ಅನಾದಿ ಕಾಲದಿಂದಲೂ ಇವೆ. ನೀವು ಬಿಗ್ ಬ್ಯಾಂಗ್ ಅಂತೀರಲ್ಲ ಘಟಸ್ಫೋಟ ಆದಾಗ 'ಓಂ'! ಕಾರ ಉತ್ಪತ್ತಿಯಾಯಿತು. ಇಂದಿಗೂ ಜಗತ್ತನ್ನು ಓಂ ಕಾರ(ಓಂ)ವನ್ನು ಅಡ್ಡವಾಗಿ ಬರೆದರೆ (ψ)ನನ್ನ ಹಣೆಯ ಮೇಲಿರುವ ನಾಮವಾಗುತ್ತದೆ. ಇದು ದೇವರ ಪಾದ ಸ್ವಾಮಿ. ದೇವಾಲಯದಲ್ಲಿ ಗಂಟೆ ಸದ್ದು ಕೇಳಿದರೆ ಮಹಾಮಂಗಳಾರತಿ ನಡೀತಿದೆ ಅನ್ಕೋತೀವಿ. ಛತ್ರದಲ್ಲಿ ಜೋರಾಗಿ ವಾಲಗದ ಸದ್ದು ಕೇಳಿದರೆ ಮಾಂಗಲ್ಯಧಾರಣೆ ಆಗ್ತಿದೆ ಅನ್ಕೋತ್ತೀವಿ! ಇವೆಲ್ಲಾ ಸಂಕೇತಗಳು. ಶ್ರೀರಾಮ ಮಗುವಾಗಿದ್ದಾಗ ಆಕಾಶದಲ್ಲಿರೋ ಚಂದ್ರಬೇಕು ಅಂದನಂತೆ! ಬೇಬಿ ಆಂಜನೇಯ ಉದಯ ಸೂರ್ಯನನ್ನು ನೋಡಿ ಹಣ್ಣು ಎಂದು ಗಗನಕ್ಕೆ ನೆಗೆದನಂತೆ! ಇವೆಲ್ಲಾ ಮಹಾಪುರುಷರ ಲಕ್ಷಣಗಳು ಅರ್ಥಾತ್ ''ಸಂಕೇತಗಳು'' ಎಂದು ಹೇಳಿ ಜೇಬಿನಿಂದ ನಶ್ಯದ ಡಬ್ಬಿ ತೆಗೆದು ಮೂಗಿಗೆ ನಶ್ಯ ಏರಿಸಿ ಮತ್ತೆ ಹೇಳತೊಡಗಿದರು.



''ಈ ಭೂಕಂಪಗಳು-ಸುನಾಮಿಗಳು-ಅಗ್ನಿ ಪರ್ವತ ಸ್ಫೋಟ-ಧೂಮಕೇತು ಇವೆಲ್ಲಾ ಜಗತ್ತಿನಲ್ಲಿ ಪಾಪಿಗಳು ಜಾಸ್ತಿ ಆಗ್ತಿದ್ದಾರೆ ಅನ್ನೋ ಸಂಕೇತಗಳು. ಈಗ ಮಾತಿಗೆ ಹೇಳ್ತೀನಿ ಇದ್ದಕ್ಕಿದ್ದ ಹಾಗೆ ಯಾರಾದರೂ ತಲೆ ಬೋಳು ಮಾಡಿಕೊಂಡರೆ ನಾವು ಮೊದಲು ಕೇಳುವುದು. ಏನಪ್ಪಾ ತಿರುಪತೀನಾ - ಧರ್ಮಸ್ಥಳಾನೋ! ಅಂತೀವಿ ಹೌದೋ ಅಲ್ಲವೋ? ಈಗೀಗ ಕೆಲವರು ಮಂತ್ರಾಲಯದಲ್ಲೂ ಕೂದಲು ಕೊಡ್ತಾರಂತೆ. ಕೆಲವರು ಅವರ ಮನೆದೇವರು, ನಂಜನಗೂಡು ಅಥವಾ ಮುಡುಕುತೊರೆಗೆ ಹೋಗಿ ಬಂದರೂ ಬೋಳುತಲೆ ನೋಡ್ಬಹುದು. ಬೋಳುತಲೆ ಯಾತ್ರೆಗೆ ಹೋಗಿದ್ದ ಸಂಕೇತ! ''ಕೆಟ್ಟದ್ದು ಬಿಡಿ ಗೊತ್ತಾಗಿ ಹೋಗುತ್ತೆ. ಕೊನೇದಾಗಿ ಒಂದ್ಮಾತು ಹೇಳಿ ಬಿಡ್ತೀನಿ. ಮುದ್ರೆ ಮಾಧ್ವರ ಸಂಕೇತ, ನಾಮ ವಿಶಿಷ್ಟಾದ್ವೈತರ ಸಂಕೇತ, ವಿಭೂತಿ ಸ್ಮಾರ್ತರ, ಶೈವರ ಸಂಕೇತ. ಹೌದೋ ಅಲ್ವೋ. ಹೇಳ್ತಾ ಹೋದ್ರೆ ಬೇಕಾದಷ್ಟಿದೆ. ದೇವಾಸ್ಥಾನದ ಪೂಜೆಗೆ ಲೇಟಾಯ್ತು ಬರ್ತೀನಿ ಅಂತ ಹೊರಟೇ ಬಿಟ್ಟರು. ಕಲ್ಲೇಶಿ ಎಲ್ಲಾ ಬರೆದು ಕೊಳ್ತಿದ್ದ.

ಮಾಜಿ ಶಾಸಕರಾದ ಭೀಮಣ್ಣನವರು ಲೈಬ್ರರಿಗೆ ಬಂದರು. ಅವರು ಕನ್ನಡ ಪುಸ್ತಕಗಳನ್ನು ಮನೆಗೆ ತೆಗೆದುಕೊಂಡು ಹೋಗಿ ಓದಿ ವಾಪಸ್ಸು ಕೊಡುವುದು ವಾಡಿಕೆ. ''ಏನ್ರೀ ಸಾಹಿತಿಗಳೇ ಹೊಸ ಪುಸ್ತಕ ಯಾವುದು ಬಂದಿದೆ?'' ಎನ್ನುತ್ತಾ ಲೈಬ್ರರಿಯೊಳಗೆ ಬಂದರು. ಕಲ್ಲೇಶಿಯನ್ನು ನೋಡಿ ''ಇದೇನು ಡಾಕ್ಟರ್ ಕಲ್ಲೇಶಿಯವರು ಇಷ್ಟು ದೂರ!'' ಎಂದರು. ''ಇದೇನು ಭೀಮಣ್ಣನವರೇ ಇವನ್ಯಾವಾಗ ಡಾಕ್ಟರ್ ಆದ?'' ಎಂದೆ.

''ನಿಮಗೆ ವಿಷಯ ಗೊತ್ತಿಲ್ವೇ? ಸರ್ಕಾರ ಚಿಕ್ಕಬಳ್ಳಾಪುರದ ಬಳಿ ಹಾಸ್ಯ ವಿಶ್ವವಿದ್ಯಾಲಯ ಸ್ಥಾಪಿಸುತ್ತಿದೆ. ಹಾಸ್ಯಾಸ್ಪದ ವಿಶ್ವವಿದ್ಯಾನಿಲಯ ಅಲ್ಲ ತಪ್ಪು ತಿಳ್ಕೋಬೇಡಿ! ಶಂಕು ಸ್ಥಾಪನೆ ಆಯ್ತು ಅಂತ ಕಾಣ್ಸತ್ತೆ! ಏನೇ ಇರ್ಲಿ ಹಾಸ್ಯ ಪ್ರವೀಣರಾದ ಇವರಿಗೆ ಒಂದು ಡಾಕ್ಟರೇಟ್ ಕೊಡ್ಸಿ ಬಿಡೋಣ! ಏನಂತೀರಿ?'' ಎಂದರು. ನಾನು ಜೋರಾಗಿ ನಗ ತೊಡಗಿದೆ. ಕಲ್ಲೇಶಿ ಪೆಚ್ಚಾದ.

ಇವರನ್ನ ಯಾಕೆ ಸಂದರ್ಶನ ಮಾಡಬಾರದೆಂದು ಯೋಚಿಸಿ, ಅವರಿಗೆ ವಿಷಯ ತಿಳಿಸಿ. ''ಸಂಕೇತಗಳ ಬಗ್ಗೆ ನೀವೇನು ಹೇಳ್ತೀರಿ'' ಎಂದೆ.

''ನೋಡಿ ರಾಜಕಾರಿಣಿಗೆ ತಿಳಿದಿರಬೇಕಾದ ಮೊದಲ ಸಂಕೇತ ಅಂಗೈನ ಮೂರು ಬೆರಳುಗಳನ್ನು ಮಡಚಿ ಎರಡು ಬೆರಳುಗಳನ್ನು ಎತ್ತಿ. ಇಂಗ್ಲೀಷ್‌ನ 'ವಿ' ಆಕಾರದಲ್ಲಿ ತೋರಿಸುವುದು. ಚುನಾವಣೆಯಲ್ಲಿ ಗೆಲ್ಲಲಿ - ಸೋಲಲಿ, ಜೈಲಿಗೆ ಹೋಗುವಾಗ - ಜೈಲಿನಿಂದ ಬರುವಾಗ, ಅಧಿಕಾರ ಸ್ವೀಕರಿಸಿದಾಗ - ಅಧಿಕಾರ ಕಳೆದುಕೊಂಡಾಗ 'ವಿ' ಆಕಾರದಲ್ಲಿ ಬೆರಳು ತೋರಿಸಬೇಕು. ಇದು ರಾಜಕಾರಣದ ಸಂಕೇತ. ಇನ್ನು ಬಾವುಟ, ಬಾವುಟದಲ್ಲಿ ಚಿನ್ಹೆ ಪಕ್ಷದ ಸಂಕೇತ. ಯಾರಾದರೂ ಸಾಕ್ಷಿ ಸಮೇತ ತಪ್ಪು ಮಾಡಿ ಸಿಕ್ಕಿ ಹಾಕಿಕೊಂಡರೂ ನಾನು ತಪ್ಪು ಮಾಡಿಲ್ಲವೆಂದು ಸಮರ್ಥಿಸಿಕೊಳ್ಳಬೇಕು. ನಾಯಕನಾಗುವ ಸಂಕೇತವದು. ಗೊತ್ತಿದೆಯೋ - ಗೊತ್ತಿಲ್ವೋ ಎಲ್ಲಾ ವಿಷಯಗಳ ಬಗ್ಗೆ ಎಲ್ಲಾ ತಿಳಿದವನ

ಹಾಗೆ ಮಾತಾಡ್ಬೇಕು - ಕೆಲ್ಸ ಆಗುತ್ತೋ ಬಿಡುತ್ತೋ ಭರವಸೆಯ ಮಾತುಗಳನ್ನಾಡಬೇಕು. ಪಕ್ಷದಲ್ಲಿ ಭಿನ್ನಾಭಿಪ್ರಾಯವಿದ್ದರೂ ನಾವೆಲ್ಲಾ ಒಂದು! ಎಂದು ಒಬ್ಬರ ಕೈ ಒಬ್ಬರು ಹಿಡಿದು ಫೋಟೋಗೆ ಫೋಜ್ ಕೊಡಬೇಕು! ಇವೆಲ್ಲಾ ರಾಜಕಾರಣದ ಸಂಕೇತ.

**ಒಂದು ದಿನ ಅಧಿಕಾರ ಸಿಕ್ಕರೆ**
**ಒಂದು ವರ್ಷಕ್ಕಾಗುವಷ್ಟು**
**ಒಂದು ವರ್ಷ ಅಧಿಕಾರ ಸಿಕ್ಕರೆ**
**ಹತ್ತು ವರ್ಷಕ್ಕಾಗುವಷ್ಟು**
**ಹತ್ತು ವರ್ಷ ಅಧಿಕಾರ ಸಿಕ್ಕರೆ**
**ಇಡೀ ಜನುಮಕ್ಕಾಗುವಷ್ಟು**
**ಕೂಡಿಡುವುದೇ**
**ಇಂದಿನ ರಾಜಕಾರಣ**

''ನಾನು ಮೀಟಿಂಗ್‌ಗೆ ಹೋಗ್ಬೇಕು ಬರ್ತೀನಿ'' ಎಂದು ಹೊರಟೇ ಬಿಟ್ಟರು. ನಾನು ಕಲ್ಲೇಶಿ ಕ್ಯಾಂಟೀನ್ ಕಡೆಗೆ ಹೋದೆವು. ಎರಡು ಕಪ್ ಬಿಸಿಬಿಸಿ ಕಾಫಿ ತೆಗೆದುಕೊಂಡೆವು. ಅವನೊಂದು ಕಪ್ಪು-ನಾನೊಂದು ಕಪ್ಪು ಕುಡಿಯುತ್ತಾ ಕುಳಿತೆವು. ನಮ್ಮ ಟೇಬಲ್ಲಿಗೆ ಕಾಲೇಜು ಹುಡುಗ ಜೋಸೆಫ್ ಬಂದು ಕುಳಿತುಕೊಂಡ. ಅವನ ಕೈಯಲ್ಲಿ ಬಿಯರ್ ಬಾಟಲಿತ್ತು. ''ಷಿಡ್ನಿಸೆಲ್ಡನ್ - ಹ್ಯಾಡ್ಲಿಚೇಸ್ - ಗ್ರಿಷ್ಮ ಇವರ ಕಾದಂಬರಿಗಳು ಬಂದಿವೆಯೇ?'' ಎಂದು ಕೇಳಿದ. ''ಲೈಬ್ರರಿಗೆ ಬನ್ನಿ ಸಿಗುತ್ತೆ!'' ಎಂದೆ. ಲೋಕಾಭಿರಾಮವಾಗಿ ಅವನ ಬಳಿ 'ಸಂಕೇತಗಳು' ವಿಷಯ ಪ್ರಸ್ತಾಪ ಮಾಡಿ 'ನಿಮ್ಮ ಅನಿಸಿಕೆಗಳೇನು?' ಎಂದು ಕೇಳಿದೆ.

''ಕ್ಲಾಸಿನಲ್ಲಿ ನಿದ್ರೆ - ಸ್ಟೇಡಿಯಂನಲ್ಲಿ ಕೂಗಾಟ ಇವು ಸ್ಟೂಡೆಂಟ್ ಸಂಕೇತ.'' ಬ್ಯೂಟಿಫುಲ್ ಹುಡಿಗೀರ್ನ ನೋಡಿದರೆ 'ಫ್ರೋಕಿಸ್' ಮಾಡುವುದು, ಷೀಟಿ ಹೊಡೆಯುವುದು ರೋಮಾನ್ಸ್ ಸಂಕೇತ. ಹೆಣ್ಣು ಕಣ್ಣು ಹೊಡೆದರೆ ಕಣ್ಣಿಗೆ ಧೂಳು ಬಿದ್ದಿದೆ ಅಂತಾರೆ - ಗಂಡು ಕಣ್ಣು ಹೊಡೆದರೆ 'ಪೋಲಿ, ರ್‍ಯಾಸ್ಕಲ್, ಹಾಕಿ ನಾಲ್ಕೇಟು' ಅಂತಾರೆ ಇದು ಇಂದಿನ ಸಮಾಜದ ಸಂಕೇತ. ಮೈದಾನದ ಬಳಿ ಜಲ್ಲಿಕಲ್ಲು - ಮರಳುರಾಶಿ ಹಾಕಿದ್ದರೆ ಅಲ್ಲಿ ಕಟ್ಟಡ ಕಟ್ಟುವ ಸಂಕೇತ ಆ ಮೈದಾನದಲ್ಲಿ ರಾಜಕಾರಣಿ ಭಾಷಣ ಮಾಡಬಾರದು - ಆಪತ್ತಿನ ಸಂಕೇತ! ಬಚ್ಚಲು ಮನೆಯಲ್ಲಿ ಗಾನಬಜಾನ ನಡೀತಿದ್ರೆ - ಅಕ್ಕಪಕ್ಕದ ಮನೇಲಿ ಮದುವೆಯಾಗದ ಚೆಂದದ ಹುಡುಗಿ ಇದ್ದಾಳೆ ಅನ್ನೋ ಸಂಕೇತ! ನನ್ನ ಬಾಟಲು ಖಾಲಿಯಾಯ್ತು ಬರ್ತೀನಿ!'' ಎಂದು ಹೇಳಿ ಬಾರ್ ಕಡೆಗೆ ಹೊರಟ.

ಕ್ಲಬ್ಬಿನ ಗುಮಾಸ್ತ ನಂಜಪ್ಪ ಬಂದು ನಮಗೆ ನಮಸ್ಕಾರ ಮಾಡಿ ಕುಳಿತುಕೊಂಡ. ಮೆಣಸಿನಕಾಯಿ ಬಜ್ಜಿ, ಕಾಫಿಗೆ ಆರ್ಡರ್ ಮಾಡಿದೆ. ''ಅಯ್ಯೋ! ನಿವ್ಯಾಕೆ ಆರ್ಡರ್ ಮಾಡಿದ್ರಿ?''

ಎಂದ. 'ಪರ್ವಾಗಿಲ್ಲ ತಗೊಳ್ಳಿ ನಂಜಪ್ಪ!' ಎಂದೆ. ಅವನು ಬಜ್ಜಿ ತಿಂದು ಕಾಫಿ ಕುಡಿದು ಮುಗಿಸುವವರೆಗೆ ಸುಮ್ಮನಿದ್ದು. ಕ್ಲಬ್ ಬಗ್ಗೆ ಮಾತನಾಡುತ್ತಾ ಸ್ವಲ್ಪ ಹೊತ್ತಾದ ಮೇಲೆ ''ನಂಜಪ್ಪ! ಸಂಕೇತಗಳ ಬಗ್ಗೆ ನಿಮ್ಮ ಅಭಿಪ್ರಾಯ ಏನು?'' ಎಂದು ಕೇಳಿದೆ... ಬಜ್ಜಿ ಕಾಫಿ ಮುಲಾಜಿಗಾದ್ರೂ ಏನಾದ್ರೂ ಹೇಳಬೇಕೆಂದು ಸ್ವಲ್ಪ ಯೋಚಿಸಿ ಹೇಳತೊಡಗಿದ.

''ನಾವು ಮನೇಗೆ ಹೋಗ್ತೀವಿ. ಅಡಿಗೆ ಮನೇಲಿ ಪಾತ್ರೆಗಳು ಟನ್-ಟನ್ ಶಬ್ದ ಮಾಡಿದ್ರೆ ಹೆಂಡ್ತೀಗೆ ನಮ್ಮ ಮೇಲೆ ಕೋಪ ಬಂದಿರುವ ಸಂಕೇತ. ಸ್ನೇಹಿತರನ್ನು ಮನೇಗೆ ಕರ್ಕೊಂಡು ಹೋಗ್ತೀವಿ ಅಡಿಗೆ ಮನೇಲಿ ಪಾತ್ರೆ ಎತ್ತಿ ಹಾಕಿದರೆ – ಕಾಫಿ ಟಿಫನ್ ಕೇಳಬೇಡ ಅನ್ನೋ ಸಂಕೇತ ಹಸಿವೆಯಿಂದ ಮನೆಗೆ ಹೋದ್ರೆ ಹಿಡಿ ಅನ್ನ – ಒಂದು ಸೌಟು ತಿಳಿಸಾರು ಬಡಿಸಿದರೆ ಮನೇಲಿ ರೇಷನ್ನು ತರಕಾರಿ ಖಾಲಿ ಅನ್ನೋ ಸಂಕೇತ.''

ಮೈ ಹುಷಾರಿಲ್ಲ ಅಂತ ಆಸ್ಪತ್ರೆಗೆ ಹೋದರೆ, ಡಾಕ್ಟ್ರು ಟೆಸ್ಟ್ ಮಾಡಿ ಮೊದಲೇ ದುಡ್ಡು ಕಟ್ಟಿಸಿಕೊಂಡು ವಾರ್ಡ್‌ಗೆ ಅಡ್ಮಿಟ್ ಮಾಡಿದ್ರೆ ಪೇಷಂಟ್ ಬದುಕೋದು ಗ್ಯಾರಂಟಿಯಿಲ್ಲ ಅಂತ ಅರ್ಥ! ಯಾವಾಗ್ಲೂ ಸಿಡುಕೋ ಹೆಂಡ್ತಿ ಯಾವತ್ತಾದ್ರೂ ಪ್ರೀತಿಯಿಂದ ಲಲ್ಲೆಗರೆದರೆ 'ಹೊಸ ಸೀರೇನೋ, ವಡವೇನೋ, ಇಲ್ಲ ಹೊಸ ಸಿನಿಮಾ ನೋಡಲು ಕೇಳ್ತಾಳೆ' ಅನ್ನೋ ಸಂಕೇತ.

ಅವನು ಮಾತನಾಡುತ್ತಿದ್ದ ಹಾಗೇ ಜೋರಾಗಿ ಬಹಳ ಹೊತ್ತು ಕಾಲಿಂಗ್ ಬೆಲ್ ಸದ್ದು ಮಾಡಿತು. ''ರೈಲು ತುಂಬಾ ಹೊತ್ತು ಸದ್ದು ಮಾಡಿ ನಿಂತ್ರೆ ಕೈಮರ ಬಿದ್ದಿಲ್ಲ ಅನ್ನೋ ಸಂಕೇತ. ಕಾಲಿಂಗ್ ಬೆಲ್ ಬಹಳ ಹೊತ್ತು ಸದ್ದು ಮಾಡಿದ್ರೆ ಸಾಹೇಬ್ರಿಗೆ ಕೋಪ ಬಂದಿದೆ. ಎಲ್ಲಿ ಹಾಳಾಗಿ ಹೋಗಿದ್ದೀಯೋ ಎಂದು ಕೂಗಾಡ್ತಾರೆ ಅನ್ನೋ ಸಂಕೇತ ನಾನು ಬರ್ತೀನಿ'' ಅಂತ ಅವಸರವಾಗಿ ಹೊರಟ. ''ಕಲ್ಲೇಶಿ! ಇವತ್ತಿಗೆ ಇಷ್ಟು ಸಾಕು. ನಾಳೆ ನೋಡೋಣ!'' ಎಂದೆ.

''ನಿನ್ನ ಸಂದರ್ಶನವೇ ಆಗ್ಲಿಲ್ಲ? ಎಲ್ಲಾದರೂ ಉಂಟೆ? ಸಂಕೇತಗಳ ಬಗ್ಗೆ ನೀನೇನು ಹೇಳ್ತೀಯಾ?'' ಅಂದ. ''ನನಗೆ ಇಕ್ಕಳದ ಮಧ್ಯೆ ಸಿಕ್ಕಿ ಹಾಕಿಕೊಂಡ ಹಾಗಾಯಿತು''. ''ಸರಿ, ನಾನು ಒಂದೆರಡು ಮಾತು ಹೇಳ್ತೀನಿ ಬರ್‍ಕೋ'' ಅಂದೆ.

''ಕಲ್ಲೇಶಿ, ಸಾಹಿತಿಗಳ ಸಮಾಚಾರ ಯೋಚ್ನೆ ಮಾಡೋಣ. ಯಾರಾದರೂ ಒಬ್ಬ ಸಾಹಿತಿ ಇನ್ನೊಬ್ಬ ಸಾಹಿತಿಯನ್ನು ಉತ್ಪ್ರೇಕ್ಷೆ ಅನ್ನುವ ಹಾಗೆ ಹೊಗಳ್ತಾನೆ ಅಂದ್ರೆ ಆ ಸಾಹಿತಿಗೆ ಯಾವ್ದೋ ಅವಾರ್ಡ್ ಬಂದಿದೆ ಅನ್ನೋ ಸಂಕೇತ, ಒಬ್ಬ ಸಾಹಿತಿ ಇನ್ನೊಬ್ಬ ಸಾಹಿತಿಯನ್ನು ಕುರಿತು 'ಅವನಿಗೇನು ಗೊತ್ತಿದೆ ಪಿಂಡ!' ಎಂದು ಬೈದರೆ ಅದು ನವ್ಯ ಸಾಹಿತಿಯ ಸಂಕೇತ, ಒಂದು ಪುಸ್ತಕದ ಬಗ್ಗೆ ಅಭಿಪ್ರಾಯ ಕೇಳಿದರೆ ಗಂಟೆಗಟ್ಟಲೆ ಆಂಗ್ಲಸಾಹಿತಿಗಳ ಸಾಮ್ಯತೆಯನ್ನು ನೀಡಿ ಮಾತನಾಡಿದರೆ ಆತ ನವ್ಯ ಸಾಹಿತ್ಯ ವಿಮರ್ಶಕ – 'ಹೊಡೆಯಿರಿ ಬಡಿಯಿರಿ!' ಎಂದು, ಕಾವ್ಯರಚನೆ ಮಾಡಿದರೆ 'ಬಂಡಾಯ ಸಾಹಿತಿ', ಕಚ್ಚೆ ಪಂಚೆ, ಕ್ಲೋಸ್ಡ್ ಕಾಲರ್ ಕೋಟು,

ತಲೆಗೆ ಕರೀಟೋಪಿ ಅಥವಾ ಪೇಟ ಹಾಕಿದ್ದರೆ ಸಂಪ್ರದಾಯ ಸಾಹಿತಿ, ಯಾವಾಗಲೂ ವಾರ್ಧಕಷಟ್ಪದಿ–ಭಾಮಿನಿ ಷಟ್ಪದಿ–ಬಹೂರ್ವೀಹಿ ಸಮಾಸ–ಯಣ್‌ಸಂಧಿ (ಹೆಣ್ ಅಲ್ಲ, ಗಮನಿಸಿ) ಹೀಗೆ ಮಾತಿಗೊಮ್ಮೆ ಹೇಳುತ್ತಿದ್ದರೆ ಆತ ಜಮಾನಾಕಾಲದ ಸಾಹಿತಿ ಸಂಕೇತ, ಪೈಜಾಮ – ಜುಬ್ಬ, ಹಾಫ್ ಕೋಟು, ಕೈಯಲ್ಲಿ ಸಿಗರೇಟು ಇದ್ದರೆ ಅವನು ಕಾದಂಬರಿಕಾರ! ಅವನ ವೇಷವೇ ಅವನ ಸಂಕೇತ, ಸಾಹಿತಿ ಗಂಭೀರನಾಗಿದ್ದರೆ ಹಾಸ್ಯಸಾಹಿತಿ ಸಂಕೇತ. ಯಾವಾಗಲೂ ಹೊಸ ಜೋಕ್‌ಗಳ ಬಗ್ಗೆ ಯೋಚಿಸುತ್ತಿರುತ್ತಾನೆ.''

ನಾನು ಮಾತನಾಡುತ್ತಿದ್ದ ಹಾಗೆ, ಪ್ರೆಸಿಡೆಂಟ್ ಸುಗ್ರೀವ ಮತ್ತು ಕಾರ್ಯದರ್ಶಿ ಹಯಘ್ರೀವ ಬಂದು ಒಂದು ಟೇಬಲ್ಲಿನ ಬಳಿ ಕುಳಿತು ಕಾಫಿಗೆ ಆರ್ಡರ್ ಮಾಡಿದರು. ನಾನು, ಕಲ್ಲೇಶಿಯನ್ನು ಕರೆದುಕೊಂಡು ಅವರ ಬಳಿಗೆ ಹೋಗಿ ಸಂಕೇತಗಳ ಬಗ್ಗೆ ಹೇಳಿ ಅವರ ಅಭಿಪ್ರಾಯ ಕೇಳಿದೆ. ನಾವು ಸೀರಿಯಸ್ ಡಿಸ್‌ಕರ್ಷನ್ ಮಾಡ್ತಿದ್ದೀವಿ. ಆದರೂ ಇಬ್ಬರು ಹಾಸ್ಯ ಸಾಹಿತಿಗಳು ಬಂದು ಕೇಳುವಾಗ ಇಲ್ಲ ಅನ್ನಬಾರದು. ಒಂದು ಜೋಕ್ ಹೇಳ್ತೀನಿ ಕೇಳಿ ''ಪೋಲಿಸ್ ಅಂದರೆ ಏನು? ಪೋಲ್+ಬೀಸ್, ಪೋಲ್ ಅಂದರೆ ಲಟ್ಟದೊಣ್ಣೆ ಲಟ್ಟ ಬೀಸುವವ ಪೋಲೀಸ್ ಅದಕ್ಕೇ ಪೋಲಿಸಿನವರಿಗೆ ದೊಣ್ಣೆಲಟ್ಟ ಕೊಟ್ಟಿರ್ತೀವಿ. ಲಟ್ಟದೊಣ್ಣೆ ಪೋಲೀಸಿನವರ ಸಂಕೇತ!'' ಎಂದರು. ರಿಟೈರ್ಡ್ ಐ.ಜಿ.ಪಿ. ಹಯಘ್ರೀವ ಅವರು, ಅಲ್ಲಿದ್ದವರೆಲ್ಲಾ ನಕ್ಕರು.

ನಾನು ಒಂದು ಜೋಕ್ ಹೇಳ್ತೀನಿ ಅಂದ ರಿಟೈರ್ಡ್ ಹೈಕೋರ್ಟ್ ಛೀಫ್ ಜಸ್ಟೀಸ್, ''ಕೋರ್ಟ್‌ನಲ್ಲಿ ನ್ಯಾಯದೇವತೆ ಕೈಯಲ್ಲಿ ತೂಗುತಕ್ಕಡಿ ಕೊಟ್ಟಿದ್ದೀವಿ. ಎಲೆಕ್ಟ್ರಾನಿಕ್ ಬ್ಯಾಲೆನ್ಸ್ ಕೊಟ್ಟಿಲ್ಲ ಯಾಕೆ ಗೊತ್ತಾ ಜೋರಾಗಿ ಗಾಳಿ ಬೀಸಿದತ್ತ ತೂಗುತಕ್ಕಡಿವಾಲುತ್ತದೆ. ಕೋರ್ಟ್ ತೀರ್ಪು ಅಷ್ಟೇ ಯಾರು ಬಲವಾಗಿ ವಾದ ಮಾಡ್ತಾರೋ ಅವರ ಕಡೆಗೆ ವಾಲುತ್ತೆ – ತಕ್ಕಡಿ ತೂಗುಯ್ಯಾಲೆ ತೀರ್ಪಿನ ಸಂಕೇತ'' ಎಂದರು. ಮತ್ತೆ ಎಲ್ಲರೂ ನಕ್ಕರು.

''ಈಗ ನಮಗೆ ಬಿಡುವಿಲ್ಲ. ನಾಳೆ ಬನ್ನಿ ಮಾತನಾಡೋಣ!'' ಎಂದು ಹೇಳಿ ನಮ್ಮನ್ನು ಕಳುಹಿಸಿದರು. ನನಗೂ ಸಾಕಾಗಿತ್ತು.

''ಕಲ್ಲೇಶಿ ನಾಳೆ ಬಾ ಮುಂದುವರಿಸೋಣ! ಇವತ್ತಿಗೆ ಸಾಕು'' ಎಂದೆ ಅವನು ತನ್ನ ಪುಸ್ತಕ ಪೆನ್ ಎಲ್ಲ ಬ್ಯಾಗಿನಲ್ಲಿ ತೆಗೆದಿಟ್ಟುಕೊಂಡು ಹೊರಟ.

''ಟ್ರೀಟ್ ಕೊಡಿಸ್ತೀನಿ ಅಂದ್ಯಲ್ಲಯ್ಯಾ? ಎಲ್ಲಿ?!'' ಎಂದೆ.


''ನಾಳೆ ಬರ್ತೀನಲ್ಲ! ಕೊಡಿಸ್ತೀನಿ!'' ಎನ್ನುತ್ತಾ ಸ್ಕೂಟರ್ ಹತ್ತಿ ಹೊರಟ.

ನನಗೆ ಸಣ್ಣಗೆ ತಲೆನೋವು ಕಾಣಿಸಿತು. ಕ್ಲಬ್ ಡಿಸ್ಪೆನ್ಸರಿ ಕಡೆಗೆ ಹೆಜ್ಜೆ ಹಾಕಿದೆ.

# ಬೃಹತ್ ಹಂಡೆ ಗುರೂಜಿಯೊಂದಿಗೆ ಒಂದು ಸಂದರ್ಶನ 2018

• ಗೌತಮ

**ಆ**ರು ವರ್ಷಗಳ ಹಿಂದೆ ಶ್ರೀ ಶ್ರೀ ಶ್ರೀ ಬೃಹತ್ ಹಂಡೆ ಗುರೂಜಿ ನುಡಿದಿದ್ದ ಭವಿಷ್ಯವಾಣಿಗಳನ್ನು ನಿನ್ನೆ ನಮ್ಮ ತ್ರಿವರ್ಣ ವಾಹಿನಿಯಲ್ಲಿ ನೋಡಿದ್ದೀರಿ. ಆ ಕಾರ್ಯಕ್ರಮ ಪ್ರಸಾರವಾಗುತ್ತಿದ್ದಂತೆಯೇ ಲಕ್ಷಾಂತರ ವೀಕ್ಷಕರಿಂದ ಸಮುದ್ರದೋಪಾದಿಯಲ್ಲಿ ಸಂದೇಶಗಳು ಹರಿದುಬರುತ್ತಿವೆ. ಸಂದೇಶಗಳನ್ನು ಓದುವುದಕ್ಕೇ ಹತ್ತು ಜನಗಳನ್ನು ವಿಶೇಷವಾಗಿ ಹೆಚ್ಚುವರಿಯಾಗಿ ನೇಮಿಸಿಕೊಂಡಿದ್ದೇವೆ. ಎಲ್ಲ ಸಂದೇಶಗಳ ಸಾರಾಂಶ ಒಂದೇ: 'ಅವರು ಹೇಳಿದ ಭವಿಷ್ಯವಾಣಿಗಳೆಲ್ಲ ಬುರುಡೆವಾಣಿಗಳು. ನಿಮ್ಮ ಸ್ಟುಡಿಯೋಗೆ ಗುರೂಜಿಗಳನ್ನು ಕರೆಸಿ, ನಮ್ಮೊಡನೆ ನೇರ ಸಂಪರ್ಕಕ್ಕೆ ಈ ಕೂಡಲೇ ಅನುವು ಮಾಡಿಕೊಡಿ. ಇಲ್ಲದಿದ್ದರೆ ಸಮಸ್ತ ವೀಕ್ಷಕರೆಲ್ಲ ನಿಮ್ಮ ಸ್ಟುಡಿಯೋಕ್ಕೆ ನುಗ್ಗಿ ಸ್ಟುಡಿಯೋವನ್ನು ಧ್ವಂಸ ಮಾಡಿಬಿಡುತ್ತೇವೆ.' ನಮ್ಮ ವಾಹಿನಿಯ ಎಲ್ಲ ಸಿಬ್ಬಂದಿಯ ಮುಖಗಳ ಮೇಲೂ ಬೆವರಿಳಿಯಲು ಶುರುವಾಯಿತು. ನಮಗೆ ಏನು ಮಾಡಲೂ ತೋಚಲಿಲ್ಲ. 'ತಲೆ ತಪ್ಪಿಸಿಕೊಂಡು ಎಲ್ಲಿಗೋ ಓಡಿ ಹೋಗಿ ಭೂಗತರಾಗಿ ಬಿಟ್ಟಿರ್ತಾರೆ, ನಮಗೆ ಸಿಕ್ಕುವುದೇ ಇಲ್ಲ' ಎಂಬ ಆಶಾವಾದದಿಂದ ಗುರೂಜಿಗೆ ಫೋನ್ ಮಾಡಿದೆವು. 'ಆಶಾವಾದ' ಪದವನ್ನು ಏಕೆ ಉಪಯೋಗಿಸಿದೆವೆಂದರೆ, ಮಹಾಗುರುಗಳು ನಮ್ಮ ಕೈಗೇ, ಫೋನಿಗೇ ಸಿಕ್ಕದಿದ್ದ ಮೇಲೆ 'ಅವರು ಸಿಕ್ಕಲಿಲ್ಲ' ಅಂತ ನಿಮ್ಮೆದುರಿಗೆ ಕೈಚೆಲ್ಲಿ ಆರಾಮವಾಗಿ ಕೂರಬಹುದಲ್ಲಾ ಅದಕ್ಕೆ. ಆದರೆ, ಪ್ರಿಯ ವೀಕ್ಷಕರೇ, ಅದು ಹಾಗಾಗಲಿಲ್ಲ. ಒಂದು ಫೋನ್ ಕರೆಗೇ ಸಿಕ್ಕಿ(ಬಿದ್ದ/ದ)ರು. ಮಾತೂ ಆಡಿದರು. ನಮ್ಮ ಅಳಲನ್ನು ತೋಡಿಕೊಂಡೆವು. 'ಅಯ್ಯೋ, ಯಾಕ್ರೀ ಇಷ್ಟೊಂದು ಹೆದರಿಬಿಟ್ಟಿದ್ದೀರೀ? ಈ ಮೂಢ ಜನಗಳಿಗೆ ಸತ್ಯ ಯಾವುದು, ಸುಳ್ಳು ಯಾವುದು ಒಂದೂ ಗೊತ್ತಾಗಲ್ಲ. ಒಂದು ಕೆಲಸ ಮಾಡಿ. ನಾಳೆ ಎರಡು ಗಂಟೆ ಕಾರ್ಯಕ್ರಮ ಇಡಿ. 'ನೇರ ಸಂದರ್ಶನ. ಯಾರು ಬೇಕಾದರೂ ಫೋನ್ ಮಾಡಬಹುದು' ಅಂತ ಇವತ್ತು ಅನೌನ್ಸ್ ಮಾಡಿಬಿಡಿ. ಈ ಪೆದ್ದುಮುಂಡೇವುಗಳಿಗೆ ಹೇಗೆ ಹೇಳಬೇಕು ಅಂತ ನಂಗೊತ್ತು. ನಾನು ನುಡಿದಿರುವ ಭವಿಷ್ಯವಾಣಿಗಳೆಲ್ಲಾ ಸತ್ಯಸ್ಯ ಸತ್ಯ ಅಂತ ತೋರಿಸಿಕೊಡ್ತೀನಿ. ಎಲ್ಲಾ ಬಾಯಿ ಮುಚ್ಚಿಕೊಂಡು ಕಿವಿ ತೆಕ್ಕೊಂಡು ಕಣ್ಣು ಬಿಟ್ಟುಕೊಂಡು ಕೇಳಬೇಕು. ಎಲ್ಲಾ ಕೇಳಿದ ಮೇಲೆ ಎಲ್ಲರೂ ನನಗೆ ಸಾಷ್ಟಾಂಗ ನಮಸ್ಕಾರ ಮಾಡಬೇಕು. ಒಬ್ಬರೂ ಕಮಕ್ ಕಿಮಕ್ ಅನ್ನಲ್ಲ. ಹಾಗೆ ಮಾಡ್ತೀನಿ. ನೀವೇನೂ ಹೆದರಬೇಡಿ' ಅಂತ ಭರವಸೆ ಕೊಟ್ಟರು. 'ಬದುಕಿದೆಯಾ ಬಡಜೀವವೇ' ಅಂದುಕೊಂಡೆವು. ಇದೋ, ಅದೇ ಬೃಹತ್ ಬ್ರಹ್ಮಾಂಡಿಗರೊಂದಿಗೆ ನೇರ ಸಂಪರ್ಕ ಏರ್ಪಡಿಸಿದ್ದೇವೆ. ಬಹುಶಃ ಇದು ಈ ಶತಮಾನದ ಅತ್ಯದ್ಭುತ ಸಂದರ್ಶನಗಳಲ್ಲಿ




ಒಂದಾಗಬಹುದು. ಯಾರು ಯಾವ ಪ್ರಶ್ನೆಯನ್ನು ಬೇಕಾದರೂ ಕೇಳಬಹುದು. ಗುರೂಜಿಯವರೇ ಖುದ್ದು ಉತ್ತರ ನೀಡ್ತಾರೆ. ಆದರೆ ವೀಕ್ಷಕರಲ್ಲಿ ಒಂದು ವಿನಂತಿ. ಒಬ್ಬರು ಒಂದೇ ಒಂದು ಪ್ರಶ್ನೆಯನ್ನು ಕೇಳಬೇಕು ಮತ್ತು ಒಬ್ಬರು ಒಂದು ಸಾರಿ ಕೇಳಿದ ಪ್ರಶ್ನೆಯನ್ನು ಇನ್ನೊಬ್ಬರು ಇನ್ನೊಂದು ಸಾರಿ ಕೇಳಬಾರದು. ಸಿದ್ಧವಾಗಿದ್ದೀರಲ್ವೇ? ಇನ್ನೂ ಆಗಿಲ್ವೇ? ಆಗಿ ಆಗಿ. ಅಷ್ಟರಲ್ಲಿ ಒಂದು ಸಣ್ಣ ಬ್ರೇಕ್. ಓಕೇ?

ವೀಕ್ಷಕ 1 : ಗುರೂಜಿ, 'ಪ್ರಪಂಚದ 700 ಕೋಟಿ ಜನಗಳಲ್ಲಿ ನಾನು ಮತ್ತು 32 ಕೋಟಿ ಜನ ಅಂದರೆ, 32 ಕೋಟಿ ಒಂದು ಜನ ಮಾತ್ರ ಬದುಕಿ ಉಳಿದಿರ್ತಾರೆ' ಅಂತ ಹೇಳಿದ್ದಿರಿ. ಆದರೆ, ಇದೀಗ ತಾನೇ ಬಂದ ಅಂಕಿ ಅಂಶದ ಪ್ರಕಾರ ಇಂದಿನ ಜನಸಂಖ್ಯೆ 720 ಕೋಟಿ 32 ಲಕ್ಷದ 38 ಸಾವಿರದ 481. ಏನು ಹೇಳ್ತೀರಿ?

ಬೃಹಂಗು : ಹ್ಹ ಹ್ಹ ಹ್ಹ. ಇದಕ್ಕೇ ಹೇಳೋದು ನಿಮಗೆ ತಲೇಲಿ ಸಗಣಿ ತುಂಬಿದೆ ಅಂತ. ಅಲ್ರೀ ನೀವು ಹೇಳ್ತಾ ಇರೋ ಜನಸಂಖ್ಯೆಯಲ್ಲಿ ಎಷ್ಟು ಜನ ನಿಜವಾಗಿ ಬದುಕಿದ್ದಾರೇರೀ. ಬರೀ ಉಸಿರಾಡ್ತಿದ್ದರೆ ಬದುಕಿದ್ದಾರೆ ಅಂತ ಅರ್ಥವೇನ್ರೀ? ಒಂದು ತಿಳ್ಕಳ್ಳಿ. ಬದುಕಿರೋರಲ್ಲಿ ನಾನು ಹೇಳಿದ 32 ಕೋಟಿ ಒಂದು ಜನರನ್ನು ಬಿಟ್ಟರೆ ಮಿಕ್ಕವರೆಲ್ಲ ಒಂದೇ ಮೃಗಗಳು ಇಲ್ಲವೇ ಜೀವಂತ ಶವಗಳೂ ರೀ. ಅವರುಗಳು ಬದುಕಿದ್ದರೂ ಒಂದೇ.... ಬೇಡ ಬಿಡಿ. ನಾನು ಬಾಯಿಬಿಟ್ಟು ಹೇಳೋಲ್ಲ. ನೀವೇ ಅರ್ಥ ಮಾಡಿಕೊಳ್ಳಿ.

ವೀ 2 : ಕಂಬಗಳು ಗೋಡೆಗಳು ಮಾತನಾಡುತ್ವೆ ಅಂತ ಹೇಳಿದ್ದಿರಿ.

ಬೃಹಂಗು : ಹೌದು ಹೇಳಿದ್ದೆ. ಯಾವತ್ತಾರೂ ಒಂದಿನ ಏನೂ ಕೆಲಸವಿಲ್ದಿದ್ರೆ ಬೆಂಗಳೂರನ್ನ ಒಂದು ಸುತ್ತು ಹಾಕಿ. ಯಾವುದೇ ಕಂಬದ ಅಥವಾ ಗೋಡೆಯ ಅವಸ್ಥೆ ನೋಡಿ. ಅವುಗಳ ಬುಡದಲ್ಲಿ ಜನ ಮೂತ್ರವಿಸರ್ಜನೆ ಮಾಡಿರೋದನ್ನ ನೋಡೇ ಇರ್ತೀರ. ಆ ಗೋಡೆ, ಕಂಬಗಳ ಮುಖ ನೋಡಿದ್ದೀರೇನ್ರೀ. ಅವು ಏನು ಹೇಳ್ತಾ ಇವೆ ಅನ್ನೋದು ನಿಮಗೆ ಅರ್ಥ

ಆಯ್ತೇನ್ರೀ. ಅವು ಮಾತಾಡೋದನ್ನ ಅರ್ಥ ಮಾಡ್ಕೊಳೋಕೂ ಒಂದು ಹೃದಯ ಇರಬೇಕ್ರೀ. ನಿಮ್ಮಂಥೋರಿಗೆ ಎಲ್ಲಿ ಅರ್ಥ ಆಗತ್ತೆ ಆ ಪಾಪದ ಕಂಬಗಳ ಗೋಡೆಗಳ ಮಾತು? ನೆಕ್ಸ್ಟ್

ವೀ 3 : ಸ್ವಾಮೀಜೀ, ಮನುಷ್ಯರಂತೆ ಪ್ರಾಣಿ ಪಕ್ಷಿಗಳೂ ಮಾತಾಡ್ತವೆ ಅಂತ ಆರು ವರ್ಷದ ಹಿಂದೇನೇ ಹೇಳಿದ್ರಿ. ಅವತ್ತಿನಿಂದ ಒಂದು ದಿನಕ್ಕೂ ಪ್ರಾಣಿ ಪಕ್ಷಿಗಳು ಮಾತಾಡಿದ್ದನ್ನ ನಾನು ಕೇಳಿಲ್ಲ.

ಬೃಹಂಗು : ಹೌದು. ಅದೇ ವರ್ಷ, ಅಂದರೆ 2012ರ ಡಿಸೆಂಬರ್ ತಿಂಗಳಿಂದಲೇ ಪ್ರಾಣಿ ಪಕ್ಷಿಗಳು ಮಾತಾಡುತ್ವೆ ಅಂತ ಹೇಳಿದ್ದೆ. ಹೌದೇ? ನೀವು ಕೇಳಿಲ್ಲ ಅಂತೀರಿ. ಅಂದರೇನೂ? ಅವು ಮಾತಾಡೋ ಭಾಷೆ ನಿಮಗೆ ಅರ್ಥ ಆಗಲ್ಲ ಅಂತಾಯ್ತು. ಮೊದಲು ಅವುಗಳ ಭಾಷೇನ ಕಲ್ತುಕೊಳ್ರೀ. ಅದ್ಯಾಕೆ ಅರ್ಥ ಆಗಲ್ಲ ನಾನೂ ನೋಡ್ತೀನಿ.

ವೀ 4 : ನಂದೀ ದುರ್ಗದ ನಂದಿ 4 ಪಟ್ಟು ಬೆಳೆಯುತ್ತೆ ಅಂದಿದ್ದಿರಿ.

ಬೃಹಂಗು : ಪಟ್ಟು ಅಂದ್ರೆ ಏನು ಅಂತ ಗೊತ್ತೇನ್ರೀ. ಯಾವಾಗ ಮನುಷ್ಯ ಕುಬ್ಜನಾಗ್ತಾನೋ ಅವಾಗ ಅವನಿಗೆ ಹೋಲಿಸಿದರೆ ನಂದಿ ನಾಲ್ಕು ಪಟ್ಟು ಬೆಳೆದಂತೆಯೇ ಅಲ್ಲವೇನ್ರೀ? ಈ ತರ್ಕಗಳೆಲ್ಲ ನಿಮ್ಮಂಥ ಮಂಕುಮುಂಡೇವುಗಳಿಗೆ ಎಲ್ಲಿ ಅರ್ಥವಾಗತ್ತೆ. ಅದಕ್ಕೇ ನಾನು ಹೇಳ್ತೀನಿ ಕೇಳೀ. ಪ್ರತಿ ಶನಿವಾರ ಸಂಜೆ ಯಾವುದಾದರೂ ಒಂದು ದೊಡ್ಡ ಮರದ ಕೆಳಗೆ ಕೂತು ಮೂಗು ಹಿಡಿದುಕೊಂಡು ನಾನು ಹೇಳೋ ಮಂತ್ರಾನ ಐನೂರು ಸಲ ಹೇಳಿ. ಆ ಥರ ಒಂದು ಐನೂರು ಸಲ ಮಾಡಿ. ನಿಮ್ಮ ಬುದ್ಧಿಶಕ್ತಿ ಹೆಚ್ಚಾಗತ್ತೆ.

ವೀ 5 : ಗುರೂಜಿ, ಅದ್ಯಾವುದೋ ರಾಬಿನ್ ಗ್ರಹ ಭೂಮಿಗೆ ಅಪ್ಪಳಿಸುತ್ತೆ ಅಂತ ಹೇಳಿದ್ದಿರಲ್ವೇ? ರಾಬಿನ್ನೂ ಇಲ್ಲ ಬಾಬಿನ್ನೂ ಇಲ್ವಲ್ಲಾ?

ಬೃಹಂಗು : ಕುಚೋದ್ಯ ಮಾತಾಡಬೇಡಿ. ಹಾಗೆಲ್ಲ ಮಾಡಿದರೆ ನನಗೆ ಕೋಪ ಬಂದು ಶಾಪ ಕೊಟ್ಟರೂ ಕೊಟ್ಟುಬಿಟ್ಟೆ ಹುಷಾರ್. ಭೂಮಿ ಅನ್ನೋದರ ಅರ್ಥ ಗೊತ್ತೇನ್ರೀ ನಿಮಗೇ? ಅಕ್ಷರಗಳ ಮಧ್ಯೆ ಅರ್ಥ ಹುಡುಕೋಕೆ ಹೋಗಬೇಡಿ. ವಿಶಾಲ ದೃಷ್ಟಿಯಲ್ಲಿ ನೋಡೋದನ್ನ ಕಲಿಯಿರಿ. ಉದ್ಧಾರ ಆಗ್ತೀರ. ಭೂಮಿ ಅಂದರೆ ನಿಮ್ಮ ನಿಮ್ಮ ಮನೆಗಳೇ ಕಣ್ರೀ. ಯಾವಾಗ ಕಮ್ಮಿ ಬೆಲೆಗೆ ದಿನಸಿ, ತರಕಾರಿಗಳು ಸಿಗೋಲ್ವೋ ಆವಾಗ ಜನ ಏನ್ಮಾಡ್ತಾರೆ ಹೇಳಿ. ಇನ್ನೊಬ್ಬರ ಮನೆಗೆ ನೆಂಟರಂತೆ ಹೋಗ್ತಾರೆ. ಅವರು ನಿಮ್ಮ ಮನೆ ಮನೆಗೆ ಬಂದು ವಕ್ಕರಿಸಿದರೆ, ನಿಮ್ಮ ಮನೆಗೆ ರಾಬಿನ್ ಬಂತೂಂತ ಅರ್ಥ? ನೀವು ಅವರ ಮನೆಗೆ ನುಗ್ಗಿದರೆ ಅವರ ಮನೆಗೆ ರಾಬಿನ್ ಅಪ್ಪಳಿಸಿದ ಹಾಗೇನೇ ಅಲ್ವೇನ್ರೀ. ಹೇಳ್ರೀ. ಯಾಕ್ರೀ ಸುಮ್ಮನಾಗಿಬಿಟ್ರೀ?

ವೀ 6 : ಹಳೇ ಸೂರ್ಯ ಹೋಗಿ ಹೊಸಾ ಸೂರ್ಯ ಬರ್ತಾನೆ ಅಂತ ಅಪ್ಪಣೆ ಕೊಡಿಸಿದ್ದಿರೀ?

ಬೃಹಂಗು : ಒಂದು ವಿಷಯಾನ ಚೆನ್ನಾಗಿ ಮನದಟ್ಟು ಮಾಡಿಕೊಳ್ಳಿ. ಈ ಪ್ರಪಂಚದಲ್ಲಿರುವ ಸಕಲ ವಸ್ತುಗಳೂ ಕ್ಷಣ ಕ್ಷಣಕ್ಕೂ ಬದಲಾಗ್ತಾನೇ ಇರತ್ವೆ. ಸ್ಥಿರವಾಗಿರೋದು ಅಂದರೆ ಬದಲಾವಣೆ ಒಂದೇ. ಅಂಥಾದ್ದರಲ್ಲಿ ಸೂರ್ಯ ಏನು ಮಹಾ! ಅವನೂ ನಿತ್ಯನೂತನನೇ ಕಣ್ರೀ. ಅರ್ಥ ಆಯ್ತೇ? ಒಂದೊಂದು ಕ್ಷಣಕ್ಕೂ ಸೂರ್ಯ ಹಳೇದಾಗ್ತಾನೇ ಇರ್ತಾನೆ ಹೊಸ ಸೂರ್ಯ ಹುಟ್ತಾನೇ ಇರ್ತಾನೆ.

ವೀ 7 : ಗುರೂಜಿ ನಂದೊಂದು ಪ್ರಶ್ನೆ.

ಬೃಹಂಗು : ಕೇಳು ತಾಯೀ.


ವೀ 7 : ಸ್ವಾಮಿ ಒಂದು ಕಡೆ ಹೇಳ್ತೀರೀ ಸಮುದ್ರದ ನೀರು ಐಸ್ ಆಗತ್ತೆ ಅಂತ. ಇನ್ನೊಂದು ಕಡೆ ಹೇಳ್ತೀರೀ ಸಾವಿರಾರು ಸುನಾಮಿಗಳು ಏಳುತ್ವೆ ಅಂತ. ಮತ್ತೊಂದು ಕಡೆ ಹೇಳ್ತೀರೀ ಸಮುದ್ರ ಒಣಗುತ್ತೆ ಅಂತ. ಇದೂ... ಒಂದಕ್ಕೊಂದಕ್ಕೊಂದು ಸಂಬಂಧ ಇಲ್ಲ ಅನ್ನಿಸುತ್ತಲ್ವಾ ಗುರೂಜೀ.

ಬೃಹಂಗು : ಇದೆಲ್ಲ ನಿನಗೆ ಅರ್ಥ ಆಗಬೇಕಾದರೆ ಇನ್ನೂ ಒಂದೈದಾರು ಜನ್ಮ ಎತ್ತಿ ಬರಬೇಕಮ್ಮ. ಇರಲಿ ಬಿಡು ತಾಯೀ. ಒಣಗೋದು ಅನ್ನೋಕೆ ಅರ್ಥ ಗೊತ್ತಾ? 'ಏನೋ ಒಂದೇ ಒಂದು ತಿಂಗಳಲ್ಲಿ ಹೀಗೆ ಒಣಗಿ ಹೋಗಿದ್ದೀಯಲ್ಲೋ?' ಅಂತ ಕೇಳಲ್ಲವೇ? ಏನು ಹಾಗಂದರೆ? ಶಕ್ತಿ ಕಳೆದು ಕೊಂಡಿದ್ದೀಯ, ದುರ್ಬಲನಾಗಿದ್ದೀಯ ಅಂತ. ಹೌದೇ? ಅದೇ ಥರ. ಐಸ್ ಆಗೋದೂಂದ್ರೇನೂ? ನಾನೇನಾದರೂ ಐಸ್ ಗಡ್ಡೆ ಆಗತ್ತೆ ಅಂತ ಹೇಳಿದ್ದೆನಾ? ಇಲ್ವಲ್ಲಾ? ಐಸ್ ಥರ ತಣ್ಣಗಾಗತ್ತೆ ಅಂತ. ಅದು ಆಗೇ ಆಗತ್ತೆ. ಇನ್ನು ಸಮುದ್ರ ಅಂದರೆ ಉಬ್ಬರವಿಳಿತಗಳು ಇದ್ದೇ ಇರತ್ತೆ. ಉಬ್ಬರವಿದ್ದಾಗ ಸುನಾಮಿಗಳು ಆಗೇ ಆಗುತ್ತವೆ. ಸುನಾಮಿಗಳು ಸಣ್ಣವಿರಬಹುದು, ದೊಡ್ಡವಿರಬಹುದು, ಬೃಹತ್ತಾದವೂ ಇರಬಹುದು. ಸುನಾಮಿಗಳು ಎದ್ದಾಗಲೆಲ್ಲ ಒಂದಷ್ಟು ಜನ ಗೊಟಕ್ ಅಂದೇ ಅಂತಾರೆ, ಹೋಗೇ ಹೋಗ್ತಾರಲ್ವೇ? ಅರ್ಥ ಆಯ್ತೆ ತಾಯೀ?

ನಿರೂಪಕರು : ಬೃಹತ್ ಗುರೂಜಿಗಳು ವೀಕ್ಷಕರ ಎಲ್ಲ ಪ್ರಶ್ನೆಗಳಿಗೂ ಅದ್ಭುತವಾದ ಉತ್ತರಗಳನ್ನು ನೀಡ್ತಾ ಇದ್ದಾರೆ. ಇನ್ನೂ ಅನೇಕ ಪ್ರಶ್ನೆಗಳನ್ನು ಕೇಳಲು ವೀಕ್ಷಕರು ಕಾಯ್ತಾ ಇದ್ದಾರೆ ಅಂತ ನಮಗೆ ಚೆನ್ನಾಗಿ ಗೊತ್ತು. ನಿಮ್ಮ ನಿಮ್ಮ ಪ್ರಶ್ನೆಗಳನ್ನು ಮುಂದಿಟ್ಟುಕೊಂಡು ಕೇಳೋಕೆ ಸಿದ್ಧವಾಗಿರಿ. ಈಗೊಂದು ಸಣ್ಣ ಬ್ರೇಕ್.

# ನಗೆಗಾರ– ದಾರ್ಶನಿಕ ಬೀchi

● ಪುನರ್ವಸು



**ಹೆ**ಸರೇ ವಿಚಿತ್ರ. ಅರ್ಧ ಕನ್ನಡ, ಇನ್ನರ್ಧ ಇಂಗ್ಲಿಷ್. ಕನ್ನಡ ಮೊದಲು, ನಂತರ ಇಂಗ್ಲಿಷ್ ಮತ್ತು ಮತ್ತೆಲ್ಲಾ ಭಾಷೆ. ಎಂಥಾ ಸಂದೇಶ ಇದೆ ಅಲ್ಲವಾ ಈ ಹೆಸರಲ್ಲಿ, ಈಗೀಗ ನಡಿತಾ ಇರೋ ಗಲಾಟೆ ಎಲ್ಲಾ ನೆನೆಪಿಸಿಕೊಳ್ಳಿ – ಮಕ್ಕಳಿಗೆ ಶಿಕ್ಷಣ ಕನ್ನಡದಲ್ಲಿರಬೇಕೋ ಅಥವಾ ಇಂಗ್ಲಿಷಿನಲ್ಲೋ? ಉತ್ತರ ಸ್ಪಷ್ಟ.

ಹೌದು, ಹೆಸರೇ ವಿಚಿತ್ರ. ಈ ಹೆಸರು ಹೇಗೆ ಬಂತು ಅವರಿಗೆ?! ವಾಸ್ತವವಾಗಿ ಅವರ ಹೆಸರು ರಾಯಸಂ ಭೀಮಸೇನ ರಾವ್. ಅವರ ತಾಯಿ ಕೈಯಲ್ಲಿ ಸಿಕ್ಕಿ, ಕ್ಷಮಿಸಿ, ಕೈಯಲ್ಲಲ್ಲ ಬಾಯಲ್ಲಿ ಸಿಕ್ಕಿ ಅದು ಬೀಚಿ ಆಯಿತು. ಈ ತಾಯಂದಿರಿದ್ದಾರಲ್ಲಾ ಜಗತ್ತಿನಲ್ಲಿ, ಅವರು ಮಕ್ಕಳ ಹೆಸರಿಗೆ ಏನೇನೋ ರಿಪೇರಿ ಮಾಡಿ ಹೇಗೇಗೋ ಕರೆದುಬಿಡುತ್ತಾರೆ. ಅವುಗಳಲ್ಲಿ ವ್ಯಾಕರಣ ಇರಲ್ಲ, logic ಇರಲ್ಲ, reason ಇರಲ್ಲ, rhyme ಇರಲ್ಲ, ಆದರೆ ಮುಖ್ಯವಾಗಿ ಏನಿರಬೇಕೋ ಅದು ಇರುತ್ತೆ, ಅದೇ ಹೃದಯ, ಕರುಳು. ಸಾಕಲ್ಲವಾ? ಸಾಕಾಗೋ ಅಷ್ಟು ಒಂದು ಜೀವನಕ್ಕೆ? ತಾಯಿ ಪ್ರಭಾವ ಇರುವ ಮಕ್ಕಳನ್ನೆಲ್ಲಾ ಗಮನಿಸಿ, ಅವರಿಗೂ ತಮ್ಮ ಸುತ್ತ ಮುತ್ತಲಿರುವವರ ಮೇಲೆ ಕರುಣೆ, ಕಾಳಜಿ, etc. ಇರುತ್ತೆ. ನಾನು ಗಮನಿಸಿದ್ದೇನೆ. ನೀವೂ ಗಮನಿಸಿರಬಹುದು. ಸ್ವಾಮಿ ವಿವೇಕಾನಂದ, ಸರ್ ಎಂ. ವಿಶ್ವೇಶ್ವರಯ್ಯ, ಛತ್ರಪತಿ ಶಿವಾಜಿ, ಪಂಚ ಪಾಂಡವರು..... ಹೀಗೆ ಅನೇಕ ಜನರು. ಇವರೆಲ್ಲಾ ತಾಯಿ ಸಾಕಿದ ಮಕ್ಕಳು. ಅದಕ್ಕೇ ಬೀಚಿ ಕೂಡ ಅವರ ತಾಯಿ ಕೊಟ್ಟ ಬೀಚಿ ಅನ್ನುವ ಹೆಸರಿನಲ್ಲೇ ಗೀಚಿದ್ದು.

ಆದರೂ ಅವರಿಗೆ ಮೊದಮೊದಲು ಕನ್ನಡದ ಮೇಲೆ ಅಭಿಮಾನವಿರಲಿಲ್ಲ. ಅಭಿಮಾನವಿರದಿರೋದು ಹಾಗಿರಲಿ, ತಾತ್ಸಾರ ಇತ್ತು. 'ಏನಿದೆ ಕನ್ನಡದಲ್ಲಿ ಮಣ್ಣು' ಅಂತಿದ್ದರು. ಅವರ ಹೆಸರಿನ ಎರಡನೇ ಭಾಗವಾದ ಇಂಗ್ಲಿಷಿನ ಮೇಲೇ ಮೋಹ, ನಮ್ಮಲ್ಲಿ ಅನೇಕರಿಗೆ ಇರುವಂತೆ. ಭಾಷೆ ಅಂದರೆ ಅದು. ಓದಿದರೆ ಅದರಲ್ಲೇ ಓದಬೇಕು ಸಾಹಿತ್ಯ ಆಗಲಿ, ಏನೇ ಆಗಲಿ. ಇದು ಅವರ ಧೋರಣೆ. ಹೀಗಿದ್ದವರನ್ನ ಕನ್ನಡಕ್ಕೆ ತಂದದ್ದು ಅ.ನ.ಕೃ. ಅವರ ಸಂಧ್ಯಾರಾಗ ಕಾದಂಬರಿ. ಆ ಕಾದಂಬರಿ ಓದೋದಕ್ಕೆ ಕಾರಣರಾದ ಅವರ ಶ್ರೀಮತಿ. ಆ ಇಬ್ಬರಿಗೆ ಕರ್ನಾಟಕ ಎಷ್ಟು ಕೃತಜ್ಞತೆ ಹೇಳಬೇಕೋ!

ಹಾಸ್ಯಪ್ರಜ್ಞೆ ಅವರಿಗೆ ಮೊದಲಿನಿಂದಲೂ ಇತ್ತು. ಜೊತೆಗೆ ಪರಿಸರ ಬೇರೆ ಇಂಬುಕೊಟ್ಟಿತು. ಅವರು ಕೆಲಸ ಮಾಡುತ್ತಿದ್ದ ಕ್ಷೇತ್ರ – ಪೊಲೀಸ್ ಇಲಾಖೆ – ಇವರ ಹಾಸ್ಯಪ್ರಜ್ಞೆ ಮೇಲೆ ಯಾವ negative ಪ್ರಭಾವಾನೂ ಬೀರಲಿಲ್ಲ, ಬೆಳೆಸಿಕೊಂಡರು, ಪ್ರಜ್ಞೆನ, ಹಾಸ್ಯಪ್ರಜ್ಞೆನ. ಆಪ್ತಮಿತ್ರ ಪಾಟಿಲ್ ಪುಟ್ಟಪ್ಪನವರು ನೀರೆರೆದರು. ಬಂದವು ಕೃತಿಗಳು ಒಂದಾದ ನಂತರ ಒಂದು, ಒಟ್ಟು 62 ಕೃತಿಗಳು. ಕಾದಂಬರಿಗಳೇ 33. ಆ ಕಾದಂಬರಿಗಳೇ ಹೆಸರೇ ಚಂದ. ಕೆಲವನ್ನ ಗಮನಿಸಿ – ಸತೀಸೂಳೆ, ಸತ್ತವನು ಎದ್ದು ಬಂದಾಗ, ಕಾಣದ ಸುಂದರಿ, ಬಂಗಾರದ ಕತ್ತೆ (ಜಿಂಕೆ ಅಲ್ಲ!), ಬ್ರಹ್ಮಚಾರಿಯ ಮಗ... ಹೀಗೆ. ಇನ್ನು ಅವರು ಬರೆದ ಲೇಖನ ಸಂಗ್ರಹಗಳಂತೂ ಒಂದಕ್ಕಿಂತ ಒಂದು ಹಾಸ್ಯ, ವಿಚಾರ, ವಿಡಂಬನೆ, ಕಟಕಿ, ವ್ಯಂಗ್ಯ – ಎಲ್ಲದಕ್ಕೂ ಮಾದರಿ. ಲೇಖನ ಸಂಗ್ರಹಗಳ ಹೆಸರೂ ಅಷ್ಟೇ ಆಕರ್ಷಣೀಯ. ಉದಾಹರಣೆ ಬೇಕೆ? ತೊಗೊಳ್ಳಿ – ಚಿನ್ನದ ಕಸ, ಮಾತನಾಡುವ ದೇವರುಗಳು, ಸಂಪನ್ನರಿದ್ದಾರೆ ಎಚ್ಚರಿಕೆ, ಗರತಿಯ ಗುಟ್ಟು, ಕನ್ನಡ ಎಂಮೆ – ಹೀಗೇ.... ಮೂರು ನಾಟಕಗಳ ಸಂಗ್ರಹವನ್ನೂ ಕನ್ನಡಿಗರಿಗೆ ಕೊಟ್ಟಿದ್ದಾರೆ ಬೀಚಿ ಆಡಿಕೊಳ್ಳಿ ಅಂತ.... ಅಲ್ಲದೆ ಅವರ ಪ್ರವಾಸ (ಪ್ರಯಾಸ) ಕಥನ 'ದೇವರಿಲ್ಲದ ಗುಡಿ' ಒಂದು ವಿಶೇಷ ಕೃತಿ.... ಇದೆಲ್ಲಾ ಗದ್ಯ ಆಯಿತು. 'ಕಾವ್ಯ'ದಲ್ಲಿ ನಾನು ಯಾಕೆ ಹಿಂದೆ ಬೀಳಬೇಕು ಅಂದು 'ಅಂದನಾ ತಿಂಮ' ಬರೆದರು. 'ಇದು ನನ್ನ ಐವತ್ತೊಂದನೇ ಅಪರಾಧ' ಅಂತ ಅವರೇ ಹೇಳಿಕೊಂಡಿದ್ದಾರೆ. ಆದರೆ ಅದನ್ನ ಓದಿದವರು ಮಾತ್ರ 'ಇದು ಅವರ ಐವತ್ತೊಂದನೇ ಉಪಕಾರ' ಅಂತಂದುಕೊಳ್ಳುವ ಹಾಗಿದೆ ಆ ಪುಸ್ತಕ.... ಇಷ್ಟೇ ಅಲ್ಲ... ನಾ. ಕಸ್ತೂರಿ ಅವರ ಅನರ್ಥಕೋಶ ಓದಿದೀರಲ್ಲಾ ನೀವು? ಹಾಗೇ ಬೀಚಿ ಕೂಡ ಒಂದು ಅನರ್ಥಕೋಶ ಬರೆದಿದ್ದಾರೆ. ಆದರೆ ಅದೇ ಬೇರೆ, ಇದೇ ಬೇರೆ..... ಅಂದ ಹಾಗೆ ನಿಮಗೆ ನೆನಪಿರಬೇಕು. ಅವರು 'ಸುಧಾ' ವಾರಪತ್ರಿಕೆಯ ''ನೀವು ಕೇಳಿದಿರಿ'' ವಿಭಾಗದಲ್ಲಿ ಓದುಗರ ಪ್ರಶ್ನೆಗಳಿಗೆ ನೀಡುತ್ತಿದ್ದ ಉತ್ತರಗಳು... ಆಹಾ!... ಅದನ್ನು ಓದಿಯೇ ಆಸ್ವಾದಿಸಬೇಕು.... ಅವರೇ ಹೇಳುವ ಹಾಗೆ 'ಗೇರು ಸೊಪ್ಪೆಯ ದಭ ದಭೆ', ''ಆಡು ಮುಟ್ಟದ ಸೊಪ್ಪಿಲ್ಲ, ಬೀಚಿ ಮುಟ್ಟದ ವಿಷಯವಿಲ್ಲ.'' ಎಲ್ಲದರಲ್ಲೂ ಮೇಲು ನೋಟಕ್ಕೆ ಹಾಸ್ಯ, ಒಳ ನೋಟಕ್ಕೆ ವಿಚಾರ, ಸಂದೇಶ. ಅವರ ಶೈಲಿ inimitable ಅಂತಾರಲ್ಲಾ ಇಂಗ್ಲಿಷಿನಲ್ಲಿ ಆ ಜಾತಿ. ಎಲ್ಲರೂ ಮಾತಾಡುವ ವಿಷಯಗಳಿಗೆ ಹೊಸ ending, ಹೊಸ bending, ಹೊಸ pun-ch. Spin bowling ಅಲ್ಲ Pun bowling, Fun bowling. ಆದರೂ ಜನ ಅವರನ್ನ ಕೇವಲ ಹಾಸ್ಯ ಸಾಹಿತಿ ಅಂತಾನೇ ಗುರುತಿಸಿರೋದು. ಅವರನ್ನ ಅರ್ಧ ಅರ್ಥ ಮಾಡಿಕೊಂಡಂತೆ. ಈ ಬಗ್ಗೆ ಅವರೇ ಬೇಸರದಿಂದ ಹೇಳಿಕೊಂಡಿದ್ದಾರೆ – ಜನ ನನ್ನನ್ನ ಹಾಸ್ಯ ಸಾಹಿತಿ ಅಂತ brand ಮಾಡಿ, ನಾನು ಏನು ಹೇಳಿದರೂ serious ಆಗಿ ತೊಗೊಳ್ಳೋದಿಲ್ಲ, ಕೈಲಾಸಂನ ಒಂದು ಸಾರಿ ಒಬ್ಬರು ಕೇಳಿದರಂತೆ ನೀವು ಬರೆಯುವ ಉದ್ದೇಶ ಏನು ಅಂತ. ಅದಕ್ಕವರು ನನ್ನ ಉದ್ದೇಶ 'ಬುದ್ಧಿ ಇರೋರನ್ನ ನಗಿಸೋದು, ಹೃದಯ ಇರೋರನ್ನ ಅಳಿಸೋದು.' ಇದು ಬೀಚೀಗೂ ಅನ್ವಯ. ಅವರಿಗೆ ಹಾಸ್ಯಸಾಹಿತಿ ಅಂತ ಹಣೆಪಟ್ಟಿ ಹಚ್ಚಿ, ನಾವು ನಮ್ಮ ಬುದ್ಧಿ ಮಾತ್ರ ಉಪಯೋಗಿಸುತ್ತಾ ಇದ್ದೀವಿ ಅಂತಾಯ್ತು.

ತಿಂಮ ಇವರ ಮಾನಸ ಪುತ್ರ. ಡಿವಿಜಿ ಅವರ ತಿಮ್ಮ ಮಂಕುತಿಮ್ಮ ಆದರೆ ಬೀಚಿ ಅವರ ತಿಂಮ ಕೊಂಕುತಿಂಮ, ನಮ್ಮೆಲ್ಲರ ಕೊಂಕು ಮನಸ್ಸುಗಳ ಪ್ರತಿನಿಧಿ. ಮಹಾ ಬುದ್ಧಿವಂತ, ಕಿಲಾಡಿ, ಚತುರ, ಸಮಯ ಸಾಧಕ. ಸಮಾಜದಲ್ಲಿರುವವರ ಈ ಎಲ್ಲಾ ಗುಣಗಳನ್ನೂ, ಗುಣದವರನ್ನೂ ಬೀಚಿ ತಿಂಮನ ಮುಖಾಂತರ ಅನಾವರಣಗೊಳಿಸಿ ಮುಖಗಳಿಗೆ ಮತ್ತು ಮುಖವಾಡಗಳಿಗೆ ಕನ್ನಡಿ ಹಿಡಿಯುತ್ತಾರೆ, ನೋಡಿ! ಹೀಗಿದ್ದೀರಿ ನೀವು. ಬೇಕಾದರೆ ಬದಲಾಗಿ, ಇಲ್ಲದಿದ್ದರೆ ನಿಮ್ಮ ಹಣೆಬರಹ ಅಂತ ನಕ್ಕು ಮುಂದೆ ಹೋಗುತ್ತಾರೆ.

ಅವರ ಕೆಲವು ವಿಚಾರಗಳನ್ನ ಗಮನಿಸೋಣ ಈಗ.

.... ಇನ್ನೊಬ್ಬರನ್ನ imitate ಮಾಡುವವರೇ ಜಾಸ್ತಿ ನಮ್ಮಲ್ಲಿ. ಅವರ ಹಾಗಿರಬೇಕು, ಇವರ ಹಾಗಿರಬಾರದು, ಅವರೇ ಮಾದರಿ, ಇವರಿಂದ ದೂರ ಇರಿ... ಇಂಥ ಜನಗಳಿಗೆ ಏನಂತಾರೆ ಗೊತ್ತೆ ಬೀಚಿ?

ನಿನ್ನಂತೆ ನೀನಾಗು ನಿನ್ನ ನೀ ಅರಿ ಮೊದಲು
ಚೆನ್ನೆಂದು ದೊಡ್ಡವರನನುಕರಿಸಬೇಡ
ಏನಾಯ್ತು ಮರಿಕತ್ತೆ? ಚೆನ್ನಿತ್ತು ಮುದ್ದಿತ್ತು
ತನ್ನಪ್ಪನಂತಾಗಿ ಹಾಳಾಯ್ತೊ ತಿಂಮ

ಸ್ವಾಮಿ ವಿವೇಕಾನಂದರು ಒಂದು ಸಾರಿ ಹೇಳಿದರಂತೆ – What if Rama is great, Krishna is great, Buddha is great, Yesu is great. How far you are great? ಅದೇ ಧ್ವನಿ ಇದರಲ್ಲೂ ಇದೆ ಅಲ್ಲವಾ?

ದೊಡ್ಡ ಮನುಷ್ಯರು ಯಾರು? ದೊಡ್ಡ ಮನುಷ್ಯರು ಆಗೋದು ಹೇಗೆ? ಬೀಚಿ ಹೇಳುತ್ತಾರೆ – ಕೆಲವರು ಹುಟ್ಟಿನಿಂದ ದೊಡ್ಡ ಮನುಷ್ಯರು, ಕೆಲವರು ಹೆಣ್ಣಿನಿಂದ ದೊಡ್ಡ ಮನುಷ್ಯರು. ಇನ್ನೂ ಒಂದು ಜಾತಿ ಇದೆ, ಸತ್ತ ನಂತರ ದೊಡ್ಡ ಮನುಷ್ಯರಾಗುತ್ತಾರವರು, ಅವರು ಮಣ್ಣಿನಿಂದ ದೊಡ್ಡ ಮನುಷ್ಯರು.

ಬೀಚಿ ಗಂಡಿನ ಪರವೋ ಇಲ್ಲ ಹೆಣ್ಣಿನ ಪರವೋ? ಅವರ ಈ comment ಓದಿ ನೀವೇ ನಿರ್ಧರಿಸಿ – 'ಹೆಣ್ಣಿನ ಹಣೆ ಬರಹವೇ ಹಾಗೆ, ಕಾಗೆಯ ಜಾತಿಗೆ ಸೇರಿದುದು ಅದು. ಒಂದು ಬಂದರೆ ಆಯಿತು, ಕಾ, ಕಾ, ಎಂದು ಕೂಗಿ ಉಳಿದೆಲ್ಲವುಗಳನ್ನೂ ಕರೆಯುತ್ತದೆ, ಬಳಗವನ್ನು ಸೇರಿಸುತ್ತದೆ. ಗಂಡು ಹಾಗಲ್ಲ ಹಾಯಾಗಿ ಒಂದೇ ಇರಬಲ್ಲುದು – ಗೂಬೆಯಂತೆ....'

ಇನ್ನೊಂದು ಘಟನೆ. ಅವರಿಗೆ ಹೆಣ್ಣು ಕೊಡಲು ಒಬ್ಬರು ಮನೆಗೆ ಬಂದಾಗ 'ನಾನು ಮದುವೆಯ ಯೋಚನೆ ಮಾಡಿಲ್ಲ' ಎನ್ನುತ್ತಾರೆ. ಆಗ ಹೆಣ್ಣು ಕರೆತಂದವರು 'ಹಾಗೇ ಮಾಡ್ರಿ, ಮಾಡಿಕೊಂಬೋದು ಬ್ಯಾಡ, ಆತೇ? ಹುಡಿಗಿನ್ನಂತೂ ನೋಡಿ ಬರ್ರಿ' ಎನ್ನುತ್ತಾರೆ. ಆ ಸಂದರ್ಭ ನೆನೆದು ಬೀಚಿ ಬರೆಯುತ್ತಾರೆ: 'ಹೆಣ್ಣು ಅಂದರೆ ಅದೇನು ಕೊಂಡು ತಂದು ಮಾರಲು ಅಂಗಡಿಯಲ್ಲಿಟ್ಟ ಮಾಲೇ? ನೀವು ಬೇಕಾದರೆ ಕೊಳ್ಳಿ, ಬೇಡವಾದರೆ ಬಿಡಿ, ದಯವಿಟ್ಟು ನೋಡಿ ಹೋಗಿ ಎಂದು ಅಂಗಡಿಯವನು ಮಾರಲು ಇಟ್ಟ ಸೀರೆಗಳನ್ನು

ತೆಗೆತೆಗೆದು ನೆಲಕ್ಕೆ ಬಿಸುಡುವಿದಿಲ್ಲವೇ? ಮಗಳನ್ನು ಹಾಗೆ ಪುಕ್ಕಟೆ ಪ್ರದರ್ಶನಕ್ಕೆ ಇಡುವುದೆ?' ಈ ಜನಕ್ಕೆ ಆತ್ಮಗೌರವ ಇದೆಯೆ?... ಈಗ ಹೇಳಿ ಬೀಚಿ ಗಂಡಿನ ಪರವೋ ಇಲ್ಲ ಹೆಣ್ಣಿನ ಪರವೋ?

ಒಬ್ಬನಿಗೆ ಯಾವುದೋ ಚಟ ಬಿಟ್ಟ, ಕೇಳಿದರು ಒಬ್ಬರು. ಚಿಕ್ಕಂದಿನಲ್ಲೇ ಕಲಿತ ಚಟ. ಅದು ಹೇಗೆ ಬಿಟ್ಟೆಯೋ?... ಅದಕ್ಕಿಂತ ಮುಂಚೆ ಬಂದಿದ್ನೇ ಬಿಡಬೇಕಲ್ಲ.... ಯಾವುದು ಅದು?.... 'ಜೀವ' ಅಂದ ಇವ.

ವಿಷ ಗಂಟಲಲ್ಲೇ ಉಳಿದರೆ ಶಿವ. ಗಂಟಲಿಂದ ಕೆಳಗಿಳಿದರೆ ಶವ.

ದೇವರೇ! ಸತ್ತಮೇಲೆ ನರಕದಿಂದ ಪಾರು ಮಾಡಲು ಸುಪುತ್ರನನ್ನು ಕೊಡು ಅಂದರೆ... ಇದ್ದಾಗಲೇ ನರಕ ತೋರ್ಸೋ ಮಗನ್ನ ಕೊಡೋದೇ?

ಜನರು ಬೀಚಿ ಬಗ್ಗೆ ಮತ್ತು ಸ್ವತಃ ಬೀಚೀನೇ ಬಹಳ confuse ಮಾಡಿಕೊಂಡಿರುವ ವಿಷಯ ಅಂದರೆ ಬೀಚಿ ನಾಸ್ತಿಕರೋ ಅಲ್ಲವೋ ಅನ್ನೋದು. ದೇವರ ಕುರಿತ ಅವರ ಕೆಲವು ವಿಚಾರಗಳನ್ನು ಗಮನಿಸಿ:

ಪ್ರಶ್ನೆ : ದೇವರು ನಿರ್ದಯಿ ಅಲ್ಲವೆ?

ಉತ್ತರ : ಮಳೆ ಬರುತ್ತದೆ, ಮುರುಕು ಮನೆ ಸೋರುತ್ತದೆ, ಕುಸಿಯುತ್ತದೆ. ಹೊಲವನ್ನು ಉತ್ತು ಬಿತ್ತಿದವನಿಗೆ ಉಪಕಾರವಾಗುತ್ತದೆ. ಮಳೆಯನ್ನು ನಿರ್ದಯಿ ಅನ್ನುವುದೆ? ಅಥವಾ ದಯಾಮಯಿ ಅನ್ನುವುದೆ? ದೇವರೂ ಅಷ್ಟೆ

ಪ್ರಶ್ನೆ : ದೇವರು ಇಲ್ಲ ಅನ್ನುವವರೇ ದೇವಸ್ಥಾನಕ್ಕೆ ಹೆಚ್ಚು ಹೋಗುತ್ತಾರಲ್ಲ?

ಉತ್ತರ : ದೇವರು ಇಲ್ಲ ಎಂದು ನಂಬುವುದು, ದೇವರು ಇಲ್ಲ ಎಂದು ಹೇಳುವಷ್ಟು ಸುಲಭವಲ್ಲ.

ಪ್ರಶ್ನೆ : ದೇವರ ಮೂರ್ತಿಯನ್ನು ಮಾಡಿಕೊಂಡು ಪೂಜಿಸುವುದಕ್ಕಿಂತ ದೇವರ ಚಿತ್ರವನ್ನು ಮನದಲ್ಲಿ ಚಿತ್ರಿಸಿಕೊಂಡು ಪೂಜಿಸಬಾರದೇಕೆ?

ಉತ್ತರ : ಕನಸಿನಲ್ಲಿ ತಿನ್ನುವುದಾದರೆ ಕಸವನ್ನೇಕೆ ತಿನ್ನಬೇಕು? ಮನದಲ್ಲಿ ಚಿತ್ರಿಸಿಕೊಳ್ಳಲು ಬರುವುದಾದರೆ ಮೂರ್ತಿಯೂ ಬೇಡ, ಚಿತ್ರವೂ ಬೇಡ, ಅಸಲು ದೇವರನ್ನೇ ಮನದ ಕಣ್ಮುಂದೆ ತನ್ನಿ. ಅದೂ ಅಲ್ಲದೆ, ದೇವರು ಕೆಲವರಿಗಿದ್ದಾನೆ, ಕೆಲವರಿಗಿಲ್ಲಾ ಎಂಬುದಿಲ್ಲ, ಅವನಿದ್ದಾನೆ ಎಂಬ ಅರಿವು, ಆ ಅರಿವಿನ ಉಪಯೋಗ ಕೆಲವರಿಗಷ್ಟೇ ಆಗುತ್ತದೆ.

ಪ್ರಶ್ನೆ : ದೇವರನ್ನು ನೀವು ಏನು ಕೊಡೆಂದು ಬೇಡಿಕೊಳ್ಳುತ್ತೀರಿ?

ಉತ್ತರ : ಬೇಡಿಕೊಂಡರೆ ಮಾತ್ರ ಕೊಡುವ ದೇವರು ದೇವನೆ? ನನ್ನ ಕೆಲಸ ನಾನು ಮಾಡುತ್ತೇನೆ, ನಿನ್ನ ಕೆಲಸ ನೀನು ಮಾಡು ಎಂದು ಆತನಿಗೆ ಹೇಳುತ್ತೇನೆ. ಆತನೂ ನನಗೆ ಅಷ್ಟೇ ಹೇಳುತ್ತಾನೆ. (ಕರ್ಮಣ್ಯೇವಾಧಿಕಾರಸ್ತೆ.... ಅಲ್ಲವಾ?)

ಇಷ್ಟೆಲ್ಲಾ ಓದಿದ ಮೇಲೆ ಬೀಚಿ ನಾಸ್ತಿಕ ಅನ್ನಿಸುತ್ತಾ? ಮತ್ತು ಇಷ್ಟೆಲ್ಲಾ ವಿಚಾರಗಳನ್ನಿಟ್ಟುಕೊಂಡ ಬೀಚಿ ತಾನು ನಾಸ್ತಿಕ ಅಂತ ಹೇಳಿಕೊಂಡರೆ ನಾವದನ್ನ ನಂಬಬೇಕಾ? ನಾಸ್ತಿಕ ಅಂತ ಹೇಳಿಕೊಳ್ಳುವವರಿಗೆಲ್ಲಾ ಸಾಮಾನ್ಯವಾಗಿ ಈ ಗೊಂದಲ ಇರುತ್ತೆ. ಇಂತಹವರನ್ನು ನೋಡಿಯೇ ಡಿ.ವಿ.ಜಿ. ಅವರು ಬರೆದದ್ದೋ ಏನೋ!

ನಂಬದಿರ್ದನು ತಂದೆ ನಂಬಿದನು ಪ್ರಹ್ಲಾದ
ನಂಬಿಯೂ ನಂಬದಿರುವಿಬ್ಬಂದಿ ನೀನು
ಕಂಬದಿನೋ ಬಿಂಬದಿನೋ ದರುಶನ ಅವರಿಂಗಾಯ್ತು
ಸಿಂಬಳದಿ ನೊಣ ನೀನು ಮಂಕುತಿಮ್ಮ

.....ಇಷ್ಟೆಲ್ಲಾ ಬರೆದ ಅವರು autobiography ಬರೀಬಾರದೆ? ಬರೀಬೇಕು, ಬರೆದಿದ್ದಾರೆ ಕೂಡ – ''ನನ್ನ ಭಯಾಗ್ರಫಿ....'' ಅದರ ಮುನ್ನುಡಿಯಲ್ಲಿ ಹೇಳುತ್ತಾರೆ – ನೀವು ಆತ್ಮಚರಿತ್ರೆ ಬರೆಯಿರಿ ಎಂದು ಒತ್ತಾಯ ಮಾಡುವ ಅಧಿಕಾರ ಯಾರಿಗೂ ಇಲ್ಲ. ಎಲ್ಲರೂ ತಂತಮ್ಮ ಜೀವನ ಚರಿತ್ರೆಯನ್ನು ಬರೆಯಲೇಬೇಕೆಂಬ ಕಾಯಿದೆ ಇಲ್ಲ. ಇದು ತುಂಬಾ ಒಳ್ಳೆಯದು – ಸುಳ್ಳಿನ ಪುಸ್ತಕಗಳು ಕಡಿಮೆಯಾದಾವು. ಆತ್ಮಚರಿತ್ರೆಯನ್ನು ಬರೆಯುವವನು ಕೇವಲ ಸ್ವಯಂ ಪ್ರೇರಣೆಯಿಂದ ಈ ಕೆಲಸಕ್ಕೆ ಕೈ ಹಾಕುತ್ತಾನೆ. ಇದರಲ್ಲಿಯೂ ಸುಳ್ಳುಗಳೇಕೆ ಎಂಬುದು ನನ್ನ ಪ್ರಶ್ನೆ. ಸುಳ್ಳುಗಳಿಗಾಗಿಯೇ ಮೀಸಲಾಗಿರುವ ಕತೆ, ಕಾದಂಬರಿ, ಕವನ ಮುಂತಾದವು ಹಲವಾರು ಇರುವಾಗ ಆತ್ಮಚರಿತ್ರೆಯಲ್ಲಿಯೂ ಸುಳ್ಳಿಗೆ ಅವಕಾಶ ಮಾಡಿಕೊಡುವುದು ಪರವಂಚನೆಯಲ್ಲಿಯೇ ಪ್ರಾರಂಭಿಸಿ ಆತ್ಮವಂಚನೆಯಲ್ಲಿ ಪರ್ಯವಸಾನವಾಗುವುದಿಲ್ಲವೇ....

60 ವರ್ಷಕ್ಕೆ ಶಾಂತಿ ಮಾಡಿಕೊಳ್ಳುವವರಿಗೆ, ಮಾಡುವವರಿಗೆ ಬೀಚಿ ಹೇಳೋದು ಏನು ಗೊತ್ತಾ? 59ಕ್ಕೆ ಯಾರಾರು ಸಾಯುವುದಿಲ್ಲವೋ ಅವರಿಗೆಲ್ಲ 60 ತಾನಾಗಿಯೇ ಆಗುತ್ತದೆ. ಇದರಲ್ಲಿ ಮನುಷ್ಯರ ಪ್ರಯತ್ನ, ಸಹಾಯ ಏನು ಮಣ್ಣಿದೆ? 60 ಆಗುವುದು ಒಂದು ಮಹಾರಾಷ್ಟ್ರೀಯ ಘಟನೆಯೇ?.... ಇದು ಬೀಚಿ ವಿಚಾರ.

ತಮ್ಮ auto ಭಯಾಗ್ರಫಿಯ ಸಾರಾಂಶ ಅವರ ಬಾಯಿಯಲ್ಲೇ ಕೇಳಿ – ''ನಗುವವರ ಬೆನ್ನು ತಟ್ಟುವ, ಅಳುವವರ ಕಣ್ಣೊರೆಸುವ, ತಲೆವಂತರಿಗೆ ಹೃದಯದ ನೆನಪು ಮಾಡಿಕೊಡುವ, ಕಳ್ಳರನ್ನು ಕಚ್ಚುವ, ಒಳ್ಳೆಯವರನ್ನು ಮೆಚ್ಚುವ ನಾಯಿ, ಪೋಲಿ–ಪುಢಾರಿಗಳ ಪಾಲಿಗೆ ಯಮ, ಪ್ರಾಮಾಣಿಕರ ಪಾದದಾಳು, ವಾಗ್ದೇವಿಯ ಕೂಸು, ಪ್ರಶ್ನೆ ಕೇಳುವವರಿಗೆ ಉತ್ತರ ಕುಮಾರ, ಇನ್ನೂ ಯಾರಾರಿಗೋ ಏನೇನೋ ಆಗಿರುವ ದಾಸರ ದಾಸಯ್ಯ ಬಡ ಕಿಂಕರ ನಾನೆಂದು ತಿಳಿಸಲು ಸಂತೋಷಿಸುತ್ತೇನೆ.''

ಸಾಹಿತ್ಯದ ಉದ್ದೇಶ ಮುಖ್ಯವಾಗಿ ಮೂರಂತೆ: ಬುದ್ಧಿಗೆ ಪ್ರೇರಣೆ, ಮನಸ್ಸಿಗೆ ರಂಜನೆ, ಸಮಾಜ ಸುಧಾರಣೆ. ಈ ಮೂರೂ ಗುಣಗಳಿವೆ ಬೀಚಿ ಅವರ ಬರಹದಲ್ಲಿ, ಅವರ ಬರಹ ನೂರು ನೂರು ತರಹ. ಬನ್ನಿ ಆ ಬರಹಗಳನ್ನು ಓದಿ, ಆಸ್ವಾದಿಸಿ, ಅಳವಡಿಸಿಕೊಳ್ಳೋಣ.

# ಮಗನೆಂಬ ಮರ್ಕಟ....

● ಗೋಪಾಲಿ

**ನೋ**ಡಿದಿರಾ ನಿಮ್ಮ ಮಗ ಮೀಸೆ ಬಿಡ್ತಾ ಇದೆ ಅಂತ ನನ್ನ ಹೆಂಡತಿ ಹೇಳಿದಾಗ ಹೌದೇನೇ ಯಾವಾಗ ನೋಡಿದೆ? ಅಂತ ಕೇಳಿದೆ. ಮಗ ಮೀಸೆ ಬಿಡೋದು ದೊಡ್ಡ ವಿಷಯವೇ ಅಂತ ನೀವು ಕೇಳ್ತೀರೀ ಅಂತ ನನಗೆ ಗೊತ್ತು. ನಮ್ಮದು – ಅಂದರೆ ನಮ್ಮ ಮಗ – ಒಂದು ರೀತಿಯಲ್ಲಿ ವಿಚಿತ್ರದ್ದು – ನಿಮ್ಮದರ – ಅಂದರೆ ನಿಮ್ಮ ಸಂತಾನ – ಹಾಗೇ ಏತಿ ಅಂದರೆ ಪ್ರೇತಿ ಅನ್ನುವ ಸ್ವಭಾವದ್ದು – ಇದೂ ಸಹ ನಿಮ್ಮದರ ಹಾಗೇನೇ. ಇಷ್ಟು ಖಚಿತವಾಗಿ ನಿಮ್ಮದರ ಬಗ್ಗೆ ಹೇಗೆ ಹೇಳುತ್ತಾ ಇದೀನಿ ಅಂತ ನೀವು ಸೋಜಿಗ ಪಟ್ಟರೆ ಅದು ನನಗೆ ಆಶ್ಚರ್ಯ ತರಲ್ಲ, ಯಾಕೆ ಗೊತ್ತಾ? ಈಗಿನವು ಅಪ್ಪ ಅಮ್ಮರಿಗೆ ಖುಷಿ ಕೊಡುವಂತಹ ಯಾವುದನ್ನೂ ಮಾಡಲ್ಲ ಅಂತ ನನಗೂ ಗೊತ್ತು, ನಿಮಗೂ ಗೊತ್ತು – ಆದರಿಂದ ನಾನು ನನ್ನ ಮಗನೂ ನಿಮ್ಮ ಮಗನ ಹಾಗೆಯೇ ನನ್ನ ಮಗಳೂ ನಿಮ್ಮ ಮಗಳ ಹಾಗೆಯೇ ಅಂತ ಧೈರ್ಯವಾಗಿ ಹೇಳಬಲ್ಲೆ – ಇನ್ನೂ ಸ್ವಲ್ಪ ಬಿಡಿಸಿ ಹೇಳಬೇಕೆಂದರೆ ನಮ್ಮದು ಲೂಸು ರೀ ಸರ, ನಿಮ್ಮದರ ಹಾಗೇನೇ ಅಂತ....

ನನಗೆ ದಪ್ಪಕ್ಕಿರುವ ಮೀಸೆ ಇದೆ. ಅದನ್ನು ವಾರಕ್ಕೋ ಹದಿನೈದು ದಿವಸಕ್ಕೋ ಒಮ್ಮೆ ಕನ್ನಡಿಯ ಮುಂದೆ ನಿಂತು ಟ್ರಿಮ್ ಮಾಡುತ್ತೇನೆ – ಈ ತನಕ ಎಂಥೆಂಥಾ ಆಮಿಷಗಳನ್ನೂ ಮೀರಿ ಮೀಸೆಯನ್ನು ಉಳಿಸಿಕೊಂಡಿದ್ದೇನೆ. ಆಮಿಷಗಳು ಅಂದರೆ ಏನೇನೂಂತೀರೀ – ನಾಟಕದಲ್ಲಿ ದೊಡ್ಡ ಸ್ವಾಮಿಗಳ ಪಾರ್ಟಿನಿಂದ ಹಿಡಿದು ಸಂಪೂರ್ಣವಾಗಿ ನಾಟಕದ ಉದ್ದಕ್ಕೂ ಮಿಂಚಲು ಸಖತ್ ಅವಕಾಶಗಳಿರುವ ಹಿಡಿಂಬೆ ಪಾತ್ರ ನೀಡಲು ಸಹ ಸಿದ್ದರಿದ್ದರು – ನಾಟಕದ ತಾಲೀಮಿನ ಮಾಸ್ತರು – ಒಂದೇ ಕಂಡೀಷನ್ನಿನ ಮೇಲೆ – ಹಿಡಿಂಬೆಗೆ ಮೀಸೆ ಇರುಲ್ಲ ನೀನು ಮೀಸೆ ಮಡಕ್ಕೋ ಬಾರದು ಅಂತ ಹಿಡಿಂಬೆ ಪಾತ್ರ ಆಫರ್ ಮಾಡಿದಾಗ ಮತ್ತು ಯಾವ ಸ್ವಾಮಿಗಳೂ ಮೀಸೆ ಬಿಟ್ಟಿರಲ್ಲ – ಸ್ವಾಮಿಗಳ ಪಾತ್ರ ಬೇಕು ಅಂದರೆ ನಿನ್ನ ಮೀಸೆ ಖಟಾವ್ ಆಗಲಿಕ್ಕೇ ಬೇಕು ಅಂತ – ಸ್ವಾಮಿಗಳ ಪಾತ್ರದ ಆಫರೂ ಬಂದಿತ್ತು. ಆದರೆ

**ಅಧಿಕಾರ ಶಾಶ್ವತವಲ್ಲ**
**ಹಿಂಬಾಲಕರು ಶಾಶ್ವತವಲ್ಲ**
**ಸೀಟು ಗಿಟ್ಟಿಸಿಕೊಳ್ಳೋದು ಶಾಶ್ವತವಲ್ಲ**
**ಅಷ್ಟೇಕೆ ಹೆಂಡತಿ ಮಕ್ಕಳೇ ಶಾಶ್ವತವಲ್ಲ**
**ಸಾಕಷ್ಟು ದುಡ್ಡಿಲ್ಲದಿದ್ದರೆ**

ನಾನೋ ಜಗಮೊಂಡ ನನಗೆ ನನ್ನ ಮೀಸೆ ಹಾಗೂ ಮೀಸೆ ಬಿಡುವ ಮೂಲ ಭೂತ ಸ್ವಾತಂತ್ರದ ಹಕ್ಕು ಮುಖ್ಯ. ಸರ, ಮೀಸೆ ಬೇಡ ಅಂದರೆ ನಿಮ್ಮ ಪಾತ್ರವೇ ಬೇಡ ಅಂತ ಹೇಳಿ ನನ್ನ ಸ್ವಾತಂತ್ರ ಉಳಿಸಿಕೊಂಡಿದ್ದಾತ ನಾನು – ಆ ಕಾಲದಲ್ಲೇ ಅಂದರೆ ನಾನು ಕಾಲೇಜು ಕಲಿಯೋ ಸಮಯದಲ್ಲಿಯೇ – ಒಂದು ಬದ್ಧತೆಗೆ ಒಂದು ರೂಢಿಮೂಲ ಕಮಿಟ್ ಮೆಂಟಿಗೆ ಒಳಗಾಗಿದ್ದವನು! ಅಪ್ಪ ಮಾಡುವುದನ್ನು ಮಕ್ಕಳು ಚಿಕ್ಕವರಿದ್ದಾಗಿಂದಲೇ ಇಷ್ಟಪಡದಿರುವುದನ್ನು ಅಮ್ಮಂದಿರು ಮಕ್ಕಳು ಚಿಕ್ಕವರಿರುವಾಗಲೇ ಬೋಧಿಸಿ ತಯಾರಿಸಿ ಬಿಡುತ್ತಾರೆ – ಇದೂ ನಿಮಗೆ ಗೊತ್ತು. ಹೀಗಾಗಿ ನನ್ನ ಮಗನಿಗೆ ಮೀಸೆಯೆಂದರೆ ಆಗದು. ಹದಿನಾರರ ಸಮಯದಲ್ಲಿ ಅವನಿಗೆ ಮೀಸೆ ಮೂಡಲು ಶುರುವಾಯಿತು ನೋಡಿ ಅಂದಿನಿಂದಲೇ ಅಂವ ಮೀಸೆ ಬೋಳಿಸಲಿಕ್ಕೆ ಶುರು ಹಚ್ಚಿದ. ಅಪ್ಪನಿಗೆ ಇಷ್ಟವಾಗುವ ಮತ್ತೂ ನೂರು ವಿಷಯಗಳ ಬಗ್ಗೆ ಅವನಿಗೆ ಆಗಲೇ ಬೇಸರವಿದೆಯೆನ್ನುವುದು (ಇವೆಲ್ಲಕ್ಕೂ ಅಮ್ಮನ ಪ್ರೇರೇಪಣೆ ಇದೆ ಎಂದು ಧೈರ್ಯವಾಗಿ ಎದೆ ತಟ್ಟಿಕೊಂಡು ಹೇಳಲು ನನ್ನಲ್ಲಿ ಸೂಕ್ತವಾದ ಸಾಕ್ಷ್ಯಾಧಾರಗಳು ಇಲ್ಲ) ಗೊತ್ತು ಅಪ್ಪನಿಗೆ – ಅರ್ಥಾತ್ ನನಗೆ!

ಮಿಕ್ಕ ವಿಷಯಗಳು ಯಾವುವು ಅನ್ನುತ್ತೀರೋ ಅವುಗಳೆಂದರೆ ಅಪ್ಪನ ಮಾತುಗಳು, ಅಪ್ಪ ಆಗಾಗ ಯಾರುಯಾರನ್ನೋ ಚುಡಾಯಿಸಿ ಮಾತನಾಡುವುದು, ಹುಡುಗಿಯರ ಜತೆ ನಗುನಗುತ್ತಿರುವುದು (ಇದಕ್ಕಂತೂ ಅಮ್ಮನ ಒತ್ತಾಸೆ ಇದೆಯೆಂದು ನನಗೆ ಖಚಿತವಾಗಿ ಗೊತ್ತು), ಅಪ್ಪ ಅವನ ಕಡೆಯ ಬಂಧುಗಳ ಮನೆಗಳಿಗೆ ಆಗಾಗ ಹೋಗುವುದು, ಅವನ ಕಡೆಯ ಬಂಧುಗಳು ಇಲ್ಲೀಗೆ ಬರುವುದು..... ಹೀಗೆ ಹಲವು ಹತ್ತು – ಮೊದಮೊದಲು ಇದು ಹತ್ತು ಇದ್ದವು – ವಿಷಯಗಳಲ್ಲಿ ಅಪ್ಪ ಈಸ್ ಎ ಎನೆಮಿ ಟು ಸನ್ನು. ಇದು ಹಾಗಿರಲಿ ಬಿಡಿ – ಈಗ ಮೀಸೆ ವಿಷಯಕ್ಕೆ ಬನ್ನಿ...

ಮಗ ಮೀಸೆ ಬಿಡಲು ಶುರು ಹಚ್ಚಿದ್ದಾನೆ ಅಂದರೆ ಮೊದಲು ಖುಷಿಯಾಗುವುದು ಅಪ್ಪನಿಗೆ – ಮಗ ಗಂಡಸು ಆಗುತ್ತಿದ್ದಾನೆ ಅಂತ. ಆದರೆ ಅದೇ ಅಮ್ಮನಿಗೆ ಅದು ಅಷ್ಟು ಪಸಂದಿನ ಸಂಗತಿಯಲ್ಲ, ಇದಕ್ಕೆ ಹಲವಾರು ಕಾರಣಗಳು ಇರುತ್ತವೆ – ಒಂದು ಬಹಳ ಮುಖ್ಯವಾದ್ದು ಅಂದರೆ ಮಗ ಮೀಸೆ ಬಿಟ್ಟು ದೊಡ್ಡ ಗಂಡಸಿನಂತೆ ಪೋಸು ನೀಡಿದರೆ ತನ್ನ ನಿಜ ವಯಸ್ಸು ಜಗತ್ತಿಗೇ ಜಾಹೀರಾಗುತ್ತೆ ಎನ್ನುವ ಒಳಕುದಿ, ಎರಡನೆಯದು ಇಷ್ಟು ವರ್ಷ ಮೀಸೆ ಬಿಡದವನು ಈಗ ಮೀಸೆ ಬಿಡಲು ಶುರು ಮಾಡಿದ ಎಂದರೆ ಯಾವುದೋ ಹೆಣ್ಣು ಗಾಳಕ್ಕೆ ಬಿದ್ದಿರುವನೋ ಎಂಬ ಸಹಜವಾದ ಸಂಶಯ!

ಸರಿ, ನನಗೂ ಅದೇ ಸಂಶಯ ಹುಟ್ಟಿ ಯಾವಳನ್ನಾದರೂ ಲೋವು ಮಾಡ್ಲಿಕ್ಕೆ ಆರಂಭಿಸಿದಾನಾ ಅಂತ ಕೇಳಿದೆ. ಅದೇನು ಅದರಪ್ಪನ ಥರಹ ಅಲ್ರೀ ಕಂಡಕಂಡ ಹೆಣ್ಣುಗಳ ಹಿಂದೆ ಹೋಗಲಿಕ್ಕೆ...... ಅಂದಳು. ಈ ಮಾತು ನಾನು ಮದುವೆಯಾಗಿ ಬಂದಾಗಲಿಂದಲೂ ನನಗೆ ಇವಳಿಂದ ಕೇಳಿಬರುತ್ತಿರುವ ಮಾತು. ಮೊದಮೊದಲು ಈ ಮಾತಿನಿಂದ ಹಿಂಸೆಯಾಗುತ್ತಿತ್ತು, ಈಗ ಅದೆಷ್ಟು ಹೊಂದಿದೆಯೆಂದರೆ ಆಕಿ ಈ ಮಾತು ಹೇಳದೇ ಇದ್ದ ದಿನ ನನಗೆ ಏನೋ ಕಳೆದುಹೋದ ಅನುಭವವಾಗಿ ಬಿಡುತ್ತದೆ. ಮತ್ತೆ ಮೀಸೆ ಯಾಕಂತೇ.....

ಅದೇನೋ ನಾಟಕದಾಗೆ ಪಾರ್ಟ್ ಮಾಡ್ತಾನಂತೆ ಅಂತ ಉತ್ತರ ಬಂತು.


ವ್ಹಾ ಬೇಷ್ ಮಗನೆ, ನನಗಂತೂ ನಾಟಕದಲ್ಲಿ ಪಾರ್ಟ್ ಮಾಡುವ ಅವಕಾಶವೇ ಸಿಗಲಿಲ್ಲ, ನಿನಗೆ ಸಿಗ್ತಲ್ಲಾ ಅಂತ ಮನಸಿನಲ್ಲಿಯೇ ಮಗನ ಬೆನ್ನು ಚಪ್ಪರಿಸಿದೆ. ಯಾವಾಗ ನಾಟಕ ಅಂತ ಕೇಳಿದೆ. ಅದಿನ್ನೂ ತಿಳಿದಿಲ್ಲ..... ಅಂದಳು.

ಇದಾದ ಹದಿನೈದು ದಿವಸಕ್ಕೇ ಮತ್ತೊಂದು ಸುದ್ದಿ ತಂದಳು. ಮಗ ಜುಬ್ಬ ಹೊಲಿಸ್ಯಾನೆ..... ಅಂತ. ಜುಬ್ಬಾ ಸಹ ಹೆಂಡತಿ ವೀಟೋ ಮಾಡಿದ ಕೆಲವು ಸಂಗತಿಗಳಲ್ಲಿ ಒಂದು.

ಇದೂ ನಾಟಕಕ್ಕಾ?

ಅಲ್ಲಂತೀ.. ಜುಬ್ಬಾದಾಗ ಛಲೋ ಕಾಣಿಸ್ತೀ ಅಂತ ಅದ್ಯಾರೋ ಹೇಳಾರಂತೆ.....

ಯಾರೋ ಹೇಳ್ಯಾರೆ ಅಂದರೆ ಯಾರು?



ಅವನ ಕ್ಲಾಸ್ ಮೇಟಂತೆ

ಅದೇ ಅದು ಹುಡುಗನೋ ಹುಡುಗಿಯೋ?

ಅದೇ ತಿಳಿದಿಲ್ರೀ....

ಕಾಲೇಜಿನ ಹತ್ರ ಯಾರನ್ನಾದ್ರೂ ಕಳಿಸಿ ಅದೇನು ಅಂತ ತಿಳ್ಕೋ.. ಅಂತ ಸಲಹೆ ನೀಡಿದೆ.

ಪಕ್ಕದ ಮನೆ ಹುಡುಗಿಯೂ ಅದೇ ಕಾಲೇಜು. ಎರಡು ದಿವಸದ ನಂತರ ಹೆಂಡತಿ ಮೆಸೇಜು ಕೊಟ್ಟಳು – ಅದ್ಯಾರೋ ಹುಡುಗೀ ಸಂಗಡ ಈತ ತಿರುಗ್ತಾ ಅವನಂತೆ....

ಸರಿ ಭಲೋ ಆಯ್ತು ಬಿಡು ಇನ್ಮೇಲೆ ಅವನೇ ನಿನ್ನ ಸರಿ ದಾರಿಗೆ ಹಚ್ತಾನೆ ಅಂದ್ಕೊಂಡೆ ಮನಸ್ನಲ್ಲೇ. ಗಂಡ ನಾಯಿ ಬಾಲ ಅಂದರೆ ಮಗನೂ ಅದೇ ಆಗಬೇಕೇ ಅಂತ ಅವಳಿಗೆ ಚಿಂತೆ ಶುರುವಾಗುತ್ತೆ ಅಂತ ನನಗೆ ಖಾತ್ರಿ!

ಒಂದು ವಾರದ ಮೇಲೆ ಮಗ ಮನೆಯಲ್ಲಿ ಹಾವಿನ ಥರಹ ನೆಲದ ಮೇಲೆ ಹೊಟ್ಟೆಯಲ್ಲಿ ಹರಿದಾಡ್ತಿದ್ದ. ಅದ್ಯಾಕೋ ಹೊಟ್ಟೆ ನುಲಿಯುತ್ತಾ? ಅಂದೆ. ಇಲ್ಲಾಪ್ಪಾ ಹಿಂಗೆ ನುಲಿದರೆ ಹೆಂಗೆ ಅಂತ..... ಅಂದ!

ಕ್ರ್ಯಾಕ್ ಮುಂಡೇದು ಲವರ್ ಎಲ್ಲೋ ನೀನು ಹಾವಾಗಿದ್ದರೆ ಚೆನ್ನಿತ್ತು ಅಂತ ಹೇಳಿರಬೇಕು ಅಂದುಕೊಂಡೆ. ಸದ್ಯ ಹೆಂಡತಿ ಮನೆಯಲ್ಲಿರಲಿಲ್ಲ – ಯಾವುದೋ ಅವಳ ಕಡೆಯವರ ಮದುವೆ ಅಂತ ಬಹಳಾ ಅಪರೂಪಕ್ಕೆ ಒಂದು ವಾರ ನಮ್ಮನ್ನು ಬಿಟ್ಟು ಹೋಗಿದ್ದಳು – ಈಗ ನಾನೇ ಮನೆಗೆ, ಮಕ್ಕಳಿಗೆ ಕೇರ್ ಟೇಕರು, ಆಪತ್ಬಾಂಧವ ಹಾಗೂ ಗಾಡು!

ರಾತ್ರಿ ಮಗನ ರೂಮಿಗೆ ಹೋದೆ. ಏನೋ ಅಪ್ಪಾ ಹ್ಯಾಗೆ ನಡೀತಿದೆ ಅಭ್ಯಾಸ? ಅಂತ ಕೇಳಿಕೋತಾ ಅವನ ಹೃದಯಕ್ಕೆ ಹತ್ತಿರವಾದೆ. ನನ್ನ ಕಾಲೇಜು ದಿವಸಗಳ ಹನ್ನೆರೆಡು ಹುಡುಗಿಯರ ಸಂಗಡದ ರೋಮಾನ್ಸಿನ ಕಥೆಯನ್ನ ಗಾಢವಾಗಿ ಮನಸ್ಸು ತಟ್ಟುವ ಹಾಗೆ ಹೇಳಿದೆ.

ಏನು ಲವ್‌ನಲ್ಲಿ ಬಿದ್ದಿದ್ದೀಯಾ? ಅಂತ ಟೈಮು ನೋಡಿ ಮೊಳೆ ಹೊಡೆದೆ. ಹೌದೂ ಅಪ್ಪಾ.... ಅಂತ ಮಗ ಬೆಬ್ಬೆಬ್ಬೆ ಅಂದ.

ಮೆಚ್ಚಿದ ಹುಡುಗೀನ ಆಟ್ ಅನಿ ಕಾಸ್ಟು ಮದುವೆಯಾಗಿಬಿಡು ನನ್ನ ಸಪೋರ್ಟು ನಿನಗೈತೆ.... ಅಂತ ಹುರಿದುಂಬಿಸಿದೆ. ಲವ್ ಫೈಲ್ಯೂರು ಆಗಿ ಆಮೇಲೆ ಅವನು ಯಾವುದೋ ರಾಕ್ಷಸೀನ ಕಟ್ಟಿಕೊಳ್ಳಬಾರದು – ನನ್ನ ಹಾಗೆ, ಜೀವಮಾನ ಪೂರ್ತಿ ಒದ್ದಾಡಬಾರದು – ನನ್ನ ಹಾಗೆ ಅನ್ನುವ ಕಾಳಜಿ ನನಗೆ!

ಅಪ್ಪನ ಸಪೋರ್ಟು ಸಿಕ್ಕಿತು ಅಂತ ಮಗ ಖುಷಿಯಾದ. ಡೇ ಡೇ ಟುಡೇ ರಿಪೋರ್ಟು ನನಗೆ ಬರಲಿ..... ಅಂದೆ. ಹುಡುಗ ಖುಷಿಯಿಂದ ತಲೆಯಾಡಿಸಿತು.

ಇದಾದ ನಾಲ್ಕನೇ ದಿವಸ ಮನೆಯೆದುರಿನ ಮಾವಿನ ಮರ ಹತ್ತಿ ಕೂತಿದ್ದ ಮಗರಾಯ. ಮಾವಿನ ಕಾಯಿ ಕೀಳ್ತಾ ಇದಾನಾ? ಆಗಲೇ ಇಷ್ಟು ಮುಂದುವರಿದುಬಿಟ್ಟನಾ ಅಂತ ತಲೆ

ಚುನಾವಣೆಯಲ್ಲಿ ಹಣ, ಹೆಂಡ ಚೆಲ್ತಾರೆ
ಸತ್ತವರಿಂದಲೂ ಓಟು ಗಿಟ್ಟಿಸಿಕೊಳ್ತಾರೆ
ಒಂದು ಕುರ್ಚಿಗಾಗಿ ಎಲ್ಲ ಮಾಡ್ತಾರೆ
ನಾಚಿಕೆ ಮಾನ ಮರ್ಯಾದೆ ಎಲ್ಲ ಬಿಡ್ತಾರೆ
ಅಧಿಕಾರ ಒಂದೇ ಇರಬೇಕು ಅನ್ತಾರೆ

ಒಂದು ಸಲ ಥಿಂ ಅಂದುಬಿಟ್ಟಿತು – ಎರಡು ದಿವಸದ ಹಿಂದೆ ಲೋವು ಅಂದವನು ಆಗಲೇ ಮಾವಿನ ಮರ ಹತ್ತಿ ಕಾಯಿ ಕೀಳಲು ಶುರು ಮಾಡಿದರೆ ಅಪ್ಪನಿಗೆ ಹೇಗಾಗಬೇಕು? ಹಳೇ ಕನ್ನಡ ಸಿನಿಮಾದಲ್ಲಿ ಹೀರೋ ಯಾವಾಗ ಮಾವಿನಕಾಯಿ ಕೀಳುತ್ತಾನೆ?

ಏನು ಮಾವಿನ ಕಾಯಿ ಹುಡುಕುತ್ತಿದ್ದೀಯಾ ಅಂತ ಕೇಳಿದೆ.

ಇಲ್ಲಾಪ್ಪಾ ಮರ ಹತ್ತುವವರನ್ನು ಕಂಡರೆ ನನ್ನ ಲೋವಿಗೆ ಇಷ್ಟವಂತೆ ಅದಕ್ಕೇ ಮರ ಹತ್ತೋದು ಅಭ್ಯಾಸ ಮಾಡ್ತಿದೀನಿ... ಅಂದಿತು! ಸರಿ ಮಗನೇ ಮೊದಲು ಚಿಕ್ಕ ಮರಗಳನ್ನು ಹತ್ತು ಆಮೇಲೆ ದೊಡ್ಡ ಮರಗಳು.. ಜೀವನ ನಮಗೆ ಅದನ್ನೇ ಕಲಿಸೋದು..... ಅಂತ ಹುರಿದುಂಬಿಸಿದೆ.

ಅಮ್ಮ ಊರಿಗೆ ಬರೋದು ಪೋಸ್ಟ್ ಪೋನಾಯಿತು. ಅವಳ ಗೈರು ಹಾಜರಿ ಮುಂದುವರೀತು. ಇದಾದ ಮೂರು ದಿವಸಕ್ಕೆ ಮಗರಾಯ ಕಾಂಪೌಂಡಿನಿಂದ ಜಂಪ್ ಹೊಡೆದದ್ದು ನೋಡಿದೆ. ಇದೇನೋ ಕಾಂಪೌಂಡು ಹಾರೋದು ಇಷ್ಟವಂತ ನಿನ್ನ ಲೋವಿಗೆ ಅಂತ ಕೇಳಿದೆ.

ಇಲ್ಲಾಪ್ಪಾ ಅವಳಿಗೆ ಮಂಗ್ಯಾಗಳು ತುಂಬಾ ಇಷ್ಟವಂತೆ ಅವು ಮರದಿಂದ ಮರಕ್ಕೆ ಹೇಗೆ ಎಗರ್ತಾವೆ ನೋಡು ಅದು ಖುಷಿ ಕೊಡುತ್ತೆ ಅಂದಳು – ಅದಕ್ಕೇ ಹಾರೋದನ್ನ ಅಭ್ಯಾಸ ಮಾಡ್ತಿದೀನಿ.... ಅಂದ.

ಮಗನೇ ಹುಷಾರೋ, ನಿಮ್ಮ ದೊಡ್ಡಪ್ಪ ಹಿಂಗೇ ಹಾರೋಕ್ಕೆ ಹೋಗಿ ಕಾಲು ಮುರ್ಕೊಂಡಿದ್ದ ಅಂತ ಹುಷಾರು ಹೇಳಿದೆ.

ಎರಡು ಮೂರು ದಿವಸಕ್ಕೋ ಅಥವಾ ಎರಡು ಮೂರು ನಾಲ್ಕು ದಿವಸಕ್ಕೋ ಮಗರಾಯನ ಹೊಸಾ ಹೊಸಾ ಪ್ರಯೋಗಗಳು ನನ್ನ ಅವಗಾಹನೆಗೆ ಬರುತ್ತಿತ್ತು. ಅವುಗಳಲ್ಲಿ ಹೆಚ್ಚಿನವು ಹುಡುಗು ಬುದ್ಧಿಯವು ಅಂತ ಇಗ್ನೋರಿಸಬಹುದಾಗಿದ್ದವು. ಕೆಲವು ಮಾತ್ರ ಹೈಲಿ ಇಂಟೆಲೆಕ್ಚ್ಯುಯಲ್ ಟಚ್ ಇರುವಂತಹವು. ನಮ್ಮ ವಂಶದಲ್ಲಿ ಯಾರಿಗೂ ಇಂಟೆಲೆಕ್ಚ್ಯುಯಲ್ ಟಚ್ ಇಲ್ಲ! ಹಾಗಿರಬೇಕಾದರೆ ಒಮ್ಮೆ ಮಂಕುತಿಮ್ಮ ಇದೆಯಾ ನಮ್ಮನೇಲಿ ಅಂತ ಕೇಳಿದ. ನಾನು ಆಶ್ಚರ್ಯದಿಂದ ಹೌಹಾರಿಬಿಟ್ಟೆ, ಸ್ಟೂಲಿನಮೇಲೆ ನಿಂತು

ಅಟ್ಟದ ಮೇಲಿನಿಂದ ಅದೇನೋ ತೆಗೀತಿದ್ದವನು ಕೊಂಚದರಲ್ಲಿ ಬೀಳುವುದನ್ನು ತಪ್ಪಿಸಿಕೊಂಡೆ. ಅಮ್ಮನ ಹಾಗೆ ಪುಸ್ತಕಗಳ ಪರಮ ಶತ್ರು - ಇವನು ಮಂಕುತಿಮ್ಮ ಇದೆಯಾ ಅಂದರೆ?

ಏನು ಮಂಕುತಿಮ್ಮ ಅಂದರೆ ಅಂತ ಎಕ್ಸಪ್ಲನೇಷನ್ ಕೇಳಿದೆ. ಅದೇ ಅಪ್ಪಾ ಅದ್ಯಾರೋ ಬರೆದಿರೋ ಪುಸ್ತಕ.....

ಅದ್ಯಾಕೆ ನಿನಗೆ?

ನನ್ನ ಲೋವು ಅದನ್ನ ಓದಿದೀಯಾ ಅಂತ ಕೇಳ್ತು.... ಅವರಪ್ಪಂಗೆ ಆ ಪುಸ್ತಕ ತುಂಬಾ ಇಷ್ಟವಂತೆ....

ತಲೆ ಚಚ್ಚಿಕ್ಕೊಳ್ಳಬೇಕು ಅನಿಸಿದರೂ ಈ ಕಾರಣದಿಂದಲಾದರೂ ಒಂದು ಪುಸ್ತಕವನ್ನು ಇದು ಮುಟ್ಟುತ್ತಲ್ಲಾ ಅನ್ನುವ ಸಂತೋಷ ಹುಟ್ಟಿತು - ನನಗೆ. ಮಕ್ಕಳು ದೊಡ್ಡವರಿಗೆ ಸಂತೋಷ ನೀಡುತ್ತವೆ ಕಾಲಾನುಕಾಲದಲ್ಲಿ ಅಂತ ಹಿಂದೆ ನಾನು ತುಂಬಾ ಚಿಕ್ಕವನಿದ್ದಾಗ ಕೇಳಿದ್ದೆ. ಅದರ ಅನುಭವ ಈಗ ಆಗಿತ್ತು!

ಮಂಕುತಿಮ್ಮ ಇದೆಯಲ್ಲಾ ನಮ್ಮ ಮನೇಲೇ ಅಂದೆ.

ಸ್ವಲ್ಪ ತೆಗೆದು ಕೊಡ್ತೀಯಾ ಅಂತ ಕೇಳಿತು. ಯಾವ ಮಗ ಆದರೂ ಅಪ್ಪ ಮೆಚ್ಚಿದ್ದ ಅಪ್ಪ ಓದಿ ಖುಷಿ ಪಟ್ಟಿದ್ದ ಪುಸ್ತಕವನ್ನು ಕೊಡು ಎಂದೋ ತಾನೂ ಓದಬೇಕು ಎಂದೋ ಆಸಕ್ತಿ ತೋರಿಸಿದರೆ ಯಾವ ತಂದೆಗೆ ತಾನೇ ಖುಷಿಯಾಗೋದಿಲ್ರೀ? ನನಗೂ ಹಾಗೇ ಆಗಿದ್ದು. ಕಾಮನಬಿಲ್ಲಿನ ಮೇಲೆ ಕೂತಿದ್ದೀನಿ ಅನಿಸಿತು. ಅದೇನೋ ಮಗನೇ ಈಗ ಆ ಪುಸ್ತಕ ಕೇಳ್ತಿದ್ದೀ? ಅಂತ ಕೇಳಿದೆ.

ನನ್ನ ಲೋವಿದೆಯಲ್ಲಾ ಅಪ್ಪಾ ಅದರಪ್ಪನೊ ಯಾರೋ ಅಲ್ಲಿನ ಒಂದು ಪದ್ಯ ಬರೆಕೋಬೇಕಂತೆ..... ತೆಗೆದು ನಾಲ್ಕು ಕಪಾಳಕ್ಕೆ ಬಾರಿಸೋಣ ಅಂತ ಅನಿಸಿದರೂ ಅಟ್ಟದ ಮೇಲಿದೆ, ಹುಡುಕಿ ತೆಗೆದುಕೋ ಅಂದೆ! ಹುಡುಕಿ ತೆಗೆದುಕೊಂಡನೋ ಇಲ್ಲವೋ ತಿಳೀದು. ನೂರಕ್ಕೆ ನೂರು ಹುಡುಕಿಯೂ ಇರಲಾರ ಹಾಗೂ ತೆಗೆದುಕೊಂಡೂ ಇರಲಾರ - ನಮ್ಮ ದೇವರ ಸತ್ಯ ನನಗೆ ತಿಳಿಯದೇ?

ಈ ಪ್ರಯೋಗಗಳು ಆದ ನಂತರ ಮೊನ್ನೆ ನನಗೇ ವಿಲಕ್ಷಣವೆನಿಸುವ ಹೊಸದೊಂದನ್ನು ಅವನು ಪ್ರಯತ್ನಿಸುತ್ತಿರುವುದನ್ನು ನೋಡಿದೆ. ಹಾಸಿಗೆ ಮೇಲೆ ಅಂಗಾತ ಮಲಗಿ ಬಲಗಾಲನ್ನ ತಲೆವರೆಗೆ ತೆಗೆದುಕೊಳ್ಳಲು ಯತ್ನಿಸುತ್ತಿದ್ದ. ಇದೇನೋ ಹೊಸಾ ಯೋಗದ ಆಸನ? ಅಂದೆ. ಅಪ್ಪಾ ಇದು ಹೊಸಾ ಯೋಗಾಸನ ಅಲ್ಲ.

ಮತ್ತೇನು?

ನನ್ನ ಲೋವಿದೆಯಲ್ಲಾ ಅವರ ಮನೆಗೆ ಒಂದು ಹೊಸಾ ಪಾಪ ಬಂದಿದೆಯಂತೆ – ಅವರ ಸೋದರತ್ತೇದು. ಅದು.....

ಹುಂ ಅದೇನು ಮಾಡುತ್ತೆ?

ಅದು ಅದೂ ಕಾಲಿನ ಹೆಬ್ಬೆರಳನ್ನ ಬಾಯಿಯಲ್ಲಿ ಹಿಡಿದುಕೊಳ್ಳುತ್ತಂತೆ – ಆಗ ಅದು ತುಂಬಾ ಚೆನ್ನಾಗಿ ಕಾಣಿಸುತ್ತಂತೆ..... ಅಂತ ಉಗುಳು ನುಂಗುತ್ತಾ ಹೇಳಿದ.

ಸರಿ, ಈಗ ನೀನೇನು ಟ್ರೈ ಮಾಡ್ತಿರೋದೂ ಅಂದೆ.

ನನ್ನ ಬಲಗಾಲಿನ ಹೆಬ್ಬೆರೆಳು ಬಾಯಲ್ಲಿ ಹೋಗುತ್ತಾ ಅಂತ....

ಸಾರೀರೀ ಪಕ್ಕೆ ಹಿಡಿದುಕೊಂಡುಬಿಡ್ತು, ನಗು ತಡೆಯಲು ಆಗದೇ. ಅದಕ್ಕೇ ಸೀದಾ ಅವನ ರೂಮಿನಿಂದ ಆಚೆ ಓಡಿಬಂದುಬಿಟ್ಟೆ ನಾಳೆ ಅಂಬೆಗಾಲಿಕ್ಕುತ್ತಾನೆ, ಅದಕ್ಕೆ ಮೊದಲು ಬಾಟಲಿಯಲ್ಲಿ ಹಾಲು ಕೇಳುತ್ತಾನೆ, ಅಮ್ಮಾ ಯಾ ಮಾಡ್ಕೊಂಡಿದ್ದೀನಿ ತೊಳೆಸು ಅಂತಲೂ ಕೇಳಬಹುದೇನೋ ಈ ಸಮಯದಲ್ಲಿ ಅದರಮ್ಮ ಮನೆಯಲ್ಲಿ ಇರಬೇಕಿತ್ತು ಅಂತ ಅನಿಸಿಬಿಡ್ತು! ಹುಚ್ಚು ಹೀಗೇ ಏರಲಿ ಮಜಾ ಇರುತ್ತೆ ಅಂತ ತೆಪ್ಪಗಾದೆ. ಮಕ್ಕಳು ಅದರಲ್ಲೂ ಗಂಡುಮಗ ಬೆಳೀತಾ ಬೆಳೀತಾ ಅಪ್ಪನಿಗೆ ಚಾಲೆಂಜರ್ ಅಂತೆ ಗೊತ್ತಾ? ಅಪ್ಪನಿಗೆ ಮಗ ಪೈಪೋಟಿ ನೀಡುವವನು ಆದ್ದರಿಂದಲೇ ಯಾವಾಗಲೂ ಅಪ್ಪ ಮಗನಿಗೆ ಒಂದು ರೀತಿ ದ್ವೇಷವಿರುತ್ತಂತೆ! ಅರ್ಜುನ ಬಬ್ರುವಾಹನ ಸೊಹ್ರಾಬ್ ರುಸ್ತುಂ ಕತೆಯನ್ನ ಇದನ್ನು ಕುರಿತೇ ಹೇಳುವುದು!



ಅದರ ಅಮ್ಮನಿಗೆ ಬಾ ಅಂತ ಬರೀಲೇ ಅನಿಸಿತು. ಬೇಡ ಪಾಪ ಅವಳಿಗೇಕೆ ತೊಂದರೆ ಕೊಡಬೇಕು ಅನಿಸಿ ತೆಪ್ಪಗಾದೆ.

ಹೊಸಾ ಅವತಾರ ಯಾವುದು ಮುಂದೆ ಬರಬಹುದು ಅಂತ ಕಾದೆ. ಕಾಯುವುದರಲ್ಲಿ ಇರೋ ಸುಖ ಗೊತ್ತಾ ನಿಮಗೆ ಗೊತ್ತಾ ಅಂತ ಯಾವುದೋ ಈ ತಲೆಮಾರಿನ ಸಿನಿಮಾದ ಹಾಡಿದೆಯಂತೆ. ಆ ಸುಖವೂ ಎಷ್ಟು ಬೇಗ ಕಾಣಿಸಿತು ಅಂತೀರೀ?

ಎರಡು ಕೈಗಳನ್ನೂ ನೆಲಕ್ಕೆ ಊರಿ ಕಾಲೆರೆಡನ್ನೂ ನೆಲದ ಮೇಲಿರಿಸಿ ನಾಲ್ಕು ಕಾಲಿನ ಮೇಲೆ ಮಗರಾಯ ಸೊಂಟ ಬಳುಕಿಸುತ್ತಾ ನಡೀತಿದಾನೆ ಒಂದು ರಾತ್ರಿ. ಆಶ್ಚರ್ಯದಿಂದ ಹತ್ತಿರ ಹೋದೆ, ನಾನು ಹೋಗಿದ್ದು ಹಿಂದಿನಿಂದ ಅವನಿಗೆ ಅದು ಗೊತ್ತಾಗಲಿಲ್ಲ. ಸೊಂಟವನ್ನು ಮತ್ತೂ ಬಳುಕಿಸುತ್ತಾ ಅವನು ಮಿಯಾಂವ್ ಮಿಯಾಂವ್ ಅಂತ ಕೂಗಿದ. ಹುಚ್ಚು ನಾಯಿಗಳು ಕಚ್ಚಿದರೆ ರೇಬೀಸ್ ಅನ್ನುವ ಖಾಯಿಲೆ ಬರುತ್ತೆ, ಆಗ ನಾಯಿ ಕಚ್ಚಿಸಿಕೊಂಡವರು ನಾಯಿಯ ಥರಹವೇ ಕೂಗುತ್ತಾರೆ ಅಂತ ಓದಿದ್ದೆ, ಕೇಳಿದ್ದೆ ಮತ್ತು ನೋಡಿದ್ದೆ. ಆದರೆ ಬೆಕ್ಕು ಕಚ್ಚುತ್ತೆ ಅದರ ಕೈಲಿ ಕಚ್ಚಿಸಿಕೊಂಡವರು ಬೆಕ್ಕಿನಥರಹ ಆಡುತ್ತಾರೆ ಅಂತ ಗೊತ್ತಿರಲಿಲ್ಲ. ಇವನಿಗೆ ಚಿಕ್ಕವನಿರಬೇಕಾದರೆ ಯಾವುದಾದರೂ ಬೆಕ್ಕು ನನಗೆ ಗೊತ್ತಿಲ್ಲದ ಹಾಗೆ ಕಚ್ಚಿತ್ತಾ ಅಂತ ಹಳೇ ನೆನಪನ್ನು ಕೆದಕಿದೆ. ಗಂಡಸರಿಗೆ ನೆನಪುಗಳು ಕಡಿಮೆಯಂತೆ (ಅದರಿಂದಲೇ ಅವರು ಹೆಂಗಸರಿಗಿಂತಲೂ ಸುಖಿಗಳು ಎಂದು ನನ್ನ ಗೆಳೆಯ ಸೂರಿ ಹೇಳುತ್ತಾನೆ), ಇವನಿಗೆ ಬೆಕ್ಕು ಕಚ್ಚಿದ ನೆನಪು ಬರಲಿಲ್ಲ, ಬದಲಿಗೆ ಗೆಳೆಯನೊಬ್ಬನ ಮನೆಯಲ್ಲಿ ಮಲಗಿದ್ದಾಗ ಬೆಕ್ಕು ಕೂಗಿದ್ದೂ ಬೆಕ್ಕನ್ನು ಓಡಿಸಲು ಗೆಳೆಯನ ತಂಗಿ ಆಚೆ ಹೋಗಿದ್ದೂ ಮೂರು ದಿವಸ ಬೆಕ್ಕು ಹುಡುಕುತ್ತಲೇ ಇದ್ದು ಮನೆಯವರ ಕಣ್ಣಿಗೆ ಬೀಳದೇ ಇದ್ದದ್ದೂ ಮೂರು ದಿವಸದ ನಂತರ ಯಾರ ಜತೆಗೋ ಮನೆಗೆ ಬಂದು ಇವನು ನನ್ನ ಗಂಡ ಎಂದು ಹೇಳಿದ್ದೂ ಹಸಿಹಸಿಯಾಗಿ ನೆನಪಿಗೆ ಬಂತು!

ಆದರೂ ಮಗ ಅಂದರೆ ಮಗನೇ ಅಲ್ಲವೇ. ಮನಸ್ಸು ಕರಗಿತು, ಪಾಪ ಅದೇನು ಹಿಂಸೆ ಅನುಭವಿಸುತ್ತಾ ಇದೆಯೋ ಅಂತ ಅಯ್ಯೋ ಅನಿಸಿತು. ಹಿಂದಿನಿಂದ ಅವನ (ಅದರ?) ಮುಂದೆ ಹೋದೆ, ಅವನೆದುರು ನಿಂತೆ.

ಯಾಕಪ್ಪಾ ಮಗರಾಯಾ ಏನಾಗಿದೆ ನಿನಗೆ ಯಾವುದಾದರೂ ಹಾಳು ಬೆಕ್ಕು ನೀನು ಚಿಕ್ಕವನಿರಬೇಕಾದರೆ ನಿನ್ನನ್ನು ಕಚ್ಚಿತ್ತೇ ಅಂತ ಪ್ರೀತಿಯಿಂದ, ಕಕ್ಕುಲತೆಯಿಂದ ನೋವು ತುಂಬಿದ ಆರ್ದ್ರ ದನಿಯಲ್ಲಿ ವಿಮರ್ಶಕ ಮಹಾಶಯರು ಹೊಸದಾಗಿ ಕಾದಂಬರಿ ರಚಿಸಿದ ಲೇಖಕಿಗೆ ವಿಮರ್ಶೆ ಗಂಡಸರಿಗೆ ಮಾಡಿದ ಹಾಗೆ ಮಾಡಲೋ ಅಥವಾ ನಿಮಗಾಗಿ ಹೊಸಾ ಪರಿಭಾಷೆ ಹುಡುಕಲೋ ಎಂದು ಕೇಳುವ ಹಾಗೆ, ಮನೆಯಲ್ಲಿನ ಹೆಂಗಸು ಗಂಡನಿಗೆ ನಿಮ್ಮನ್ನು ಕೊನೆಗಾಣಿಸಲು ಇಲಿ ಪಾಷಾಣ ಹಾಕಲೋ ಫಾಲಿಡಾಲೇ ಸಾಕೋ ಎಂದು ಕೇಳುವ ರೀತಿಯಲ್ಲಿ ಕೇಳಿದೆ.

ಅಪ್ಪಾ ನೀನು ಬಂದಿದ್ದು ಒಳ್ಳೆಯದೇ ಆಯಿತು. ಬೆಕ್ಕಿನ ರಿಹರ್ಸಲ್ ಮಾಡ್ತಿದೀನಿ, ಬೆಕ್ಕು ಹೀಗೇ ತಾನೇ ಓಡಾಡೋದೂ ಸ್ವಲ್ಪ ಹೇಳು..... ಅಂತ ಎರಡು ಕೈಗಳನ್ನೂ ನೆಲಕ್ಕೆ ಊರಿ ಕಾಲೆರೆಡನ್ನೂ ನೆಲದ ಮೇಲಿರಿಸಿ ನಾಲ್ಕು ಕಾಲಿನ ಮೇಲೆ ಸೊಂಟ ಬಳುಕಿಸುತ್ತಾ, ಸೊಂಟವನ್ನು ಮತ್ತೂ ಬಳುಕಿಸುತ್ತಾ ಅವನು ಮಿಯಾಂವ್ ಮಿಯಾಂವ್ ಅಂತ ಮತ್ತೆ ಮತ್ತೆ ಕೂಗಿದ!

ಹಿ ಈಸ್ ಇನ್ ಸೆನ್ಸಸ್ ಅಂತ ಖುಷಿಯಾಯಿತು. ಕರೆಕ್ಟು ಮರೀ ಬೆಕ್ಕು ಹೀಗೇ ನಡೆಯೋದೂ ಕೂಗೋದೂ ಎಲ್ಲಾ ನೀನು ಮಾಡ್ತಿರೋದು ನೋಡಿದರೆ ಬೆಕ್ಕೇ ನಿನ್ನಿಂದ ಕಲ್ತಿದೆ ಅಂತ ಹೇಳಬಹುದು ಅಂತ ಉಬ್ಬಿಸಿದೆ. ನಿನಗೆ ಪ್ರೇರಣೆ ಎಲ್ಲಿಯದು ಅಂತ ಹತ್ತು ರಿಹರ್ಸಲ್ ಆದ ನಂತರ ಅವನು ಸುಸ್ತು ಪರಿಹಾರ ಮಾಡಿಕೊಳ್ಳಲು ಕುಳಿತಾಗ ಕೇಳಿದೆ. ಲೋವರಿನ ಮನೆಯಲ್ಲಿ ಬೆಕ್ಕು ಹೀಗೇ ಆಡುತ್ತೆ ಅಂತ ಉತ್ತರ ಬಂದಿತು!

ಸಮಸ್ಯೆ ತೀವ್ರ ಸ್ವರೂಪ ಪಡೀತಿದೆ, ಹೀಗೇ ಬಿಟ್ಟರೆ ಮಗ ಮೆಂಟಲ್ ಆಗಬಹುದು ಅನಿಸಿತು. ಹೇಗೆ ಪರಿಹಾರ ಹುಡುಕುವುದು? ನನಗೆ ಸಮಸ್ಯೆಗಳಿಗೆ ಪರಿಹಾರ ಹುಡುಕುವುದು ಅಂತಹ ಕಷ್ಟದ ಕೆಲಸವಲ್ಲ – ಸೀದಾ ಇಪ್ಪತ್ತು ಮೂವತ್ತು ವರ್ಷದ ನನ್ನ ಬಾಲಕಾಂಡಕ್ಕೆ ನುಗ್ಗಿದರೆ ಯಾವ ಸಮಸ್ಯೆ ಹೇಳಿ – ಅದಕ್ಕೆ ಪರಿಹಾರ ಇದೆ ಅದರಲ್ಲಿ. ಒಂದು ಕಾಲದಲ್ಲಿ ನಾವೂ ಹುಡುಗರೇ ಅಲ್ಲವೇ? ನಾವೂ ಹೀಗೇ ಆಡಿ ಈ ಅವಸ್ಥೆಗಳನ್ನು ದಾಟಿ ಬಂದವರಲ್ಲವೇ?

ರಾತ್ರಿ ಕೂತೆ. ಬಾಲ್ಯಕಾಲಕ್ಕೆ ಹೋದೆ. ಹೀಗೇ ಹಿಂದೆ ನಾನೂ ಲವ್ವಿಗೆ ಬಿದ್ದಿದ್ದಾಗ ಬೆಕ್ಕಿನ ಹಾಗೆ ರಿಹರ್ಸಲ್ ಮಾಡಿದ್ದಾಗ ಹದಿನೈದು ನಾಯಿಗಳು ಅಟ್ಟಿಸಿಕೊಂಡು ಬಂದ ನೆನಪು ಒತ್ತರಿಸಿತು. ಮಾರನೇ ದಿವಸ ಮಗನನ್ನು ಫೀಲ್ಡಿನಲ್ಲಿ ರಿಹರ್ಸಲ್‌ಗೆ ಒಯ್ದೆ. ಮೊದಲೇ ಗೋಪಣ್ಣನಿಗೆ ಸೂಚಿಸಿದ್ದ ಹಾಗೆ ಅವನು ಇಪ್ಪತ್ತು ಬೀದಿ ನಾಯಿಗಳನ್ನು ರಿಹರ್ಸಲ್ ಸಮಯದಲ್ಲಿ ನುಗ್ಗಿಸಿದ......

ಲವ್ ಅಫೇರ್ ಇಲ್ಲೀಗೆ ಖತಂ ಆಯಿತು. ಬೆಕ್ಕಿನ ರಿಹರ್ಸಲ್ ಮಾಡುಕ್ಕೆ ಹೋಗಿ ನನ್ನ ಪ್ರಾಣವನ್ನೇ ಕಳೆದುಕೊಳ್ಳುತ್ತಿದ್ದೆ. ಅದೂ ಮದುವೇಗೆ ಮೊದಲೇ; ಮದುವೆ ಆದ ನಂತರ ಇನ್ನೂ ಏನೇನು ತೊಂದರೆಗಳಿಗೆ ಸಿಕ್ಕಿ ಕೊಳ್ತಾ ಇದ್ದೆನೋ..... ಅಪ್ಪಾ ಗಾಡ್ ಸೇವ್ಡ್ ಮಿ...... ಅಂದ ಮಗರಾಯ ಒಂದು ವಾರದ ನಂತರ – ಅವರಮ್ಮ ಮನೇಗೆ ಬರುವ ಹಿಂದಿನ ದಿವಸ ಇಬ್ಬರೂ ಕ್ಲಬ್ಬಿನಲ್ಲಿ ಗಂಟಲು ತಂಪು ಮಾಡಿಕೊಳ್ಳಬೇಕಾದರೆ!

ಮೈ ಸನ್, ಐ ಆಯಾಮ್ ದಟ್ ಗಾಡ್ – ನಾನೇ ಆ ಗಾಡು ಅಂತ ನಾನು ಬಾಯಿ ಬಿಡಲಿಲ್ಲ! ಗಾಡ್ ಸೇವ್ ಮಿ ಅಂಡ್ ಮೈ ಸನ್!

# ಕಳ್ಳನನ್ನು ಹಿಡಿದ ಪುರೋಹಿತರು!

● ರಮ್ಯ

**ಅ**ಮೆರಿಕನ್ನರು ಒಂದೆರೆಡು ಕೆಲಸವನ್ನು ತಲೆಕೆಳಗಾಗಿ ಮಾಡ್ತಾರೆ. ಅವರ ಮನೆಗಳಲ್ಲಿ ಎಲೆಕ್ಟ್ರಿಕ್ ಸ್ವಿಚ್ ಉಲ್ಟಪುಲ್ಟ! ಸ್ವಿಚ್ ಮೇಲಿಂದ ಕೆಳಕ್ಕೆ ಹಾಕಿದ್ರೆ ಲೈಟ್ ಆರುತ್ತೆ, ಕೆಳಗಿಂದ ಮೇಲಕ್ಕೆ ಹಾಕಿದ್ರೆ ಬಲ್ಬ್ ಉರಿಯುತ್ತೆ! ಹಾಗೆಯೇ ಅವರು ಆಡೋ ಫುಟ್‌ಬಾಲ್ ಕೂಡ ಕಾಲಿನಿಂದ ಒದೆಯೋ ಆಟ ಅಲ್ಲ! ಬಾಲನ್ನು ಕೈಲಿ ಹಿಡಿದುಕೊಂಡು ಎದುರಾಳಿಯ ಗೋಲಿನ ಕಡೆ ಓಡಿ ಅದನ್ನೂ ದಾಟಿ ಹೊರಗಡೆ ಓಡೋದು! ಆವಾಗ ಅವರಿಗೆ ಗೋಲ್ ತರಹ ಪಾಯಿಂಟ್ ಸಿಗುತ್ತೆ. ಆಶ್ಚರ್ಯವೆಂದ್ರೆ ಗೋಲಲ್ಲಿ ಗೋಲೀನೇ ಇರೋದಿಲ್ಲ! ಎದುರಾಳಿಯ ಕಡೆಯಿಂದ 150-150 ಕೆ.ಜಿ. ತೂಗುವ ಧಾಂಡಿಗರು ನಿಮ್ಮ ಕೈಕಾಲು ಮುರಿದು ಮೂಳೆ ಪುಡಿಮಾಡಿಯಾದ್ರೂ ನಿಮ್ಮನ್ನು ಮುಂದೆ ಹೋಗಲು ಬಿಡದೆ ಅಲ್ಲೇ ಕೆಳಗೆ ಬೀಳಿಸಲು ಪ್ರಯತ್ನಿಸ್ತಾರೆ. ಬಿದ್ದ ಮೇಲೆ ಸವಾರಿ ಮಾಡುವ ಹಾಗೆ ಹೊಟ್ಟೆಯ ಮೇಲೆ ಒಂದಿಬ್ಬರು ಕೂತ್ಕೋತಾರೆ ಕೂಡಾ! ಕೊನೆಗೆ ಅಂಪೈರ್ ಹತ್ತಿರ ಬಂದು ನಿಮ್ಮ ಮೂಗಿನ ಹತ್ತಿರ ಬೆರಳಿಟ್ಟು ನೀವು ಉಸಿರಾಡುತ್ತಿದ್ದೀರಾ ಅಂತ ಖಚಿತಪಡಿಸಿಕೊಂಡು ಆಟ ಮುಂದುವರಿಸಲು ಸನ್ನೆ ಮಾಡುತ್ತಾನೆ! ಅವರು ಅದಕ್ಕೆ ಬೇಕಾದ ಹೆಲ್ಮೆಟ್, ಕೈ ಕಾಲು ಭುಜಕ್ಕೆ ಪ್ಯಾಡ್ ಧರಿಸಿ ಯುದ್ಧಕ್ಕೆ ಹೋಗುವ ಯೋಧರಂತೆ ಅವರು ಸಜ್ಜಾಗಿಯೇ ಫೀಲ್ಡಿಗೆ ಇಳಿಯುವುದು.

ಅಮೆರಿಕನ್ನರ ಸ್ಟೈಲ್ ಫುಟ್ಬಾಲ್ ಬಹಳ ವರ್ಷದ ಹಿಂದೆ ನಮ್ಮ ಬೆಂಗಳೂರಿನ ಉತ್ತರಾಧಿ ಮಠದಲ್ಲಿ ನೋಡುವುದಕ್ಕೆ ನನಗೆ ಒಂದವಕಾಶ ಸಿಕ್ಕಿತ್ತು!

★★★

ನಮ್ಮ ಮನೆ ಗಾಂಧೀಬಜಾರಿನ ಉತ್ತರಾಧಿಮಠದ ರಸ್ತೆಯಲ್ಲಿತ್ತು. ಉತ್ತರಾಧಿಮಠ ಮಧ್ವಾಚಾರ್ಯರ ಮಾಧ್ವ ಧರ್ಮವನ್ನು ಪಾಲಿಸುವ ಪ್ರಚಾರ ಮಾಡುವ ಮಠ. ಮಠದ ಒಂದು ಕಡೆ ಮಧ್ವಾಚಾರ್ಯರ ದೇವಸ್ಥಾನ. ಮಧ್ಯೆ ಒಂದು ದೊಡ್ಡ ಮೈದಾನವಿತ್ತು. ಇನ್ನೊಂದು ಕೊನೆಯಲ್ಲಿ ದೇವಸ್ಥಾನದಲ್ಲಿ ದಿನನಿತ್ಯ ಪೂಜೆ ಮಾಡುವುದಕ್ಕೆ ಬರುವ ಪುರೋಹಿತರುಗಳ ಕ್ವಾರ್ಟರ್ಸ್ ಅನ್ನಬಹುದಾದ ಅಗ್ರಹಾರ. ಪುರೋಹಿತರು ಬೆಳಗ್ಗೆ ಸ್ನಾನ ಮಾಡಿ ಶುದ್ಧ ಬಟ್ಟೆಯನ್ನುಟ್ಟು ಮೈದಾನದ ಮೂಲಕ ದೇವಸ್ಥಾನಕ್ಕೆ ಬರುತ್ತಿದ್ದರು. ಇದು ಪ್ರತಿ ದಿನ ಸುಮಾರು 9 ಘಂಟೆಯಲ್ಲಿ ನಡೆಯುವ ನಿತ್ಯ ಕಾರ್ಯ.

ಒಂದು ದಿವಸ ಸುಮಾರು 8.30ರ ಸಮಯ. ನಮ್ಮ ಮನೆಯ ಹತ್ತಿರದಲ್ಲಿ 'ಕಳ್ಳ! ಕಳ್ಳ! ಹಿಡೀರಿ!' ಅಂತ ಕೂಗು ಕೇಳಿಸಿತು. ಹೊರಗೆ ಹೋಗಿ ನೋಡಿದರೆ, ಒಬ್ಬ ಕಳ್ಳ ಓಡುತ್ತಿದ್ದ, ಅವನ ಹಿಂದೆ 'ಕಳ್ಳ! ಹಿಡೀರಿ' ಎಂದು ಕೂಗುತ್ತಾ ಅಟ್ಟಿಸಿಕೊಂಡು ಹೋಗುವ ಗುಂಪು.



ಕಳ್ಳ ಸುಮಾರು 20–25 ವಯಸ್ಸಿನ ಯುವಕ ಮತ್ತು ಬಲಿಷ್ಟ ಜೋರಾಗಿ ಓಡುತ್ತಿದ್ದ. ಅವನನ್ನು ಹಿಡಿಯಲು ಓಡುತ್ತಿದ್ದವರು ವಯಸ್ಸಾದವರು; ಏದುಸಿರು ಬಿಡುತ್ತಾ ಇನ್ನು ಕಳ್ಳ ಸಿಗುವುದಿಲ್ಲ ಎಂದು ಹತಾಶರಾಗುತ್ತಿದ್ದರು. ಕಳ್ಳ ರಸ್ತೆಯಿಂದ ಇದ್ದಕ್ಕಿದ್ದಂತೆ ಉತ್ತರಾಧಿಮಠದ ಕಾಪೌಂಡ್ ಗೋಡೆ ಹಾರಿ ಅದರ ಮೈದಾನದಲ್ಲಿ ಓಡತೊಡಗಿದ. ಎದುರಿನಿಂದ ಮಠದ ಪುರೋಹಿತರು, ಬೆಳಗ್ಗೆ ಸ್ನಾನ ಮುಗಿಸಿ ಮಡಿಯುಟ್ಟುಕೊಂಡು ದೇವಸ್ಥಾನಕ್ಕೆ ಬರುತ್ತಿದ್ದರು.

ಅವರನ್ನು ದಾಟಿದರೆ ಕಳ್ಳ ಸೇಫ್! ಇನ್ನೊಂದು ರಸ್ತೆ ದಾಟಿದರೆ ನ್ಯಾಷನಲ್ ಹೈಸ್ಕೂಲ್ ಮೈದಾನ. ಅಲ್ಲಿಂದ ಅವನು ಓಡಿಬಿಟ್ಟರೆ ಆಗ ಕಥೆ ಮುಗಿಯಿತು. ಅವನನ್ನು ಹಿಡಿಯುವುದು ಭಗವಂತನಿಗೂ ಕಷ್ಟದ ಕೆಲಸವೇ!

ಕಳ್ಳನ ಹಿಂದೆ 'ಕಳ್ಳ! ಹಿಡೀರಿ!' ಎಂದು ಕೂಗುತ್ತಾ ಬರುವ ಗುಂಪನ್ನು ನೋಡಿದ ಪುರೋಹಿತರು ತಕ್ಷಣವೇ ಏನು ನಡೆಯುತ್ತಿದೆಯೆಂದು ಗ್ರಹಿಸಿ ತಮ್ಮ ಮಡಿಯನ್ನೂ ಲಕ್ಷಿಸದೆ ಎದುರಿಗೆ ಓಡಿಬರುತ್ತಿದ್ದ ಕಳ್ಳನನ್ನು ತಬ್ಬಿ ಕೊಂಡು ಕೆಳಗೆ ಬೀಳಿಸಿದರು! ಕತ್ರಿ ಪಟ್ಟು ಹಾಕಿದ್ದ ಪುರೋಹಿತರೂ ಅವರೂ ಅವನ ಮೇಲೆ ಬಿದ್ದರು! ಅವನು ಕದ್ದಿದ್ದ ಸಾಮಾನ್ ಕೂಡ ಕೆಳಗ್ಬಿತ್ತು.

ಸುಮಾರು ವಯಸ್ಸಾದ ಪುರೋಹಿತರು ತಮ್ಮ ವಯಸ್ಸನ್ನೂ ಲೆಕ್ಕಿಸದೆ ತಮಗಿಂತಲೂ ಚಿಕ್ಕವನೂ ಹಾಗೂ ಬಲಿಷ್ಟನಾದ ಕಳ್ಳನನ್ನು 'ಅಪೀಟ್' ಮಾಡಿ ಬೀಳಿಸಿದ್ದರು ಪುರೋಹಿತರು! ಕಳ್ಳ ಸಿಕ್ಕಿಬಿದ್ದ ಅಂತ ಅವನನ್ನು ಹಿಂಬಾಲಿಸುತ್ತಿದ್ದ ಗುಂಪಿನವರಿಂದ ಹರ್ಷೋದ್ಗಾರ!

ಎಲ್ಲರೂ ತಲಾ ಎರಡೆರೆಡು ಏಟು, ಗುದ್ದು ಹಾಕಿದ ಮೇಲೆ ತಾನು ಹಿಡಿದ ಕಳ್ಳ ಕದ್ದಿದ್ದು ಚಿನ್ನದ ಸರವಲ್ಲ, ಬೆಳ್ಳಿಯ ಡಾಬಲ್ಲ ಬರೀ ಚಕ್ಕೋತನೆ ಹಣ್ಣೊಂತ ಕೇಳಿ ಪುರೋಹಿತರಿಗೆ ಬಹಳ ಬೇಸರವಾಯಿತು!

ಆದದ್ದು ಇಷ್ಟೆ! ನಮ್ಮ ಪಕ್ಕದ ಮನೆಯಲ್ಲಿ ಒಂದು ಚಕ್ಕೋತ ಮರವೊಂದಿದೆ. ಮರದಲ್ಲಿ ಹಣ್ಣು ಬಿಟ್ಟಾಗ ಹೋಗಿ ಬರೋವ್ರೆಲ್ಲಿಗ್ರೂ ಅದರ ಮೇಲೇ ಕಣ್ಣು! ಕಳ್ಳ ಹಣ್ಣನ್ನು ಕದ್ದುಕೊಂಡು ಓಡುವಾಗ ಮನೆಯವರು 'ಕಳ್ಳ ಕಳ್ಳ' ಅಂತ ಕೂಗಿದಾಗ ಬೀದಿಯಲ್ಲಿ ಹೋಗುತ್ತಿದ್ದ ಒಂದಿಬ್ಬರು ಅವನನ್ನು ಅಟ್ಟಿಸಿಕೊಂಡು ಹೋದ್ರು. ಮಿಕ್ಕವರೂ ಸೇರ್ಕೊಂಡು ಕೊನೆಗೆ ಪುರೋಹಿತರು ಡೈವ್ ಮಾಡಿ ಅವನನ್ನು ಕೆಳಗೆ ಕೆಡವಿದ್ರು.

ಮೈಲಿಗೆಯಾಗಿ ಮಾಘ ಮಾಸದಲ್ಲಿ ಮತ್ತೆ ಸ್ನಾನ ಮಾಡಬೇಕಾಗುತ್ತೇಂತ ರೇಗಿ, ಪುರೋಹಿತರೂ ಕಳ್ಳನಿಗೆ ಎರಡು ಏಟು ಬಿಗಿದರು!




Since 1998
**Whisper Hearing Aids**
Pvt. Ltd.
1030/13, 25 main, 39 cross,
4th 'T' block, Jayanagara, Bengaluru

**SIEMENS**
Authorised Hearing Care Centre

Avail **FREE** supply of batteries for a year on purchase of hearing aids for this week.
10am - 1:30pm, 5pm - 8pm
Appointment : 26640571, 9741765454

**ಕಿವಿ - ಕೇಳುವ ಅಂಗವೇ ಆದರೂ ಅದರ ಒಂದು ಭಾಗ ನಮ್ಮ ದೇಹದ ಸಮತೋಲನ ಮಾಡುವ ಕೆಲಸ ನಿಭಾಯಿಸುತ್ತದೆ. ಕೇಳಿಸುವ ಭಾಗಕ್ಕೆ ತೊಂದರೆಯಾದರೆ ಕಿವುಡುತನ ಬರುತ್ತದೆ, ಹಾಗೆಯೇ ಉಳಿದ ಭಾಗಕ್ಕೆ ತೊಂದರೆಯಾದರೆ ತಲೆಸುತ್ತು ಕಿವಿಮೊರೆತ ಉಂಟಾಗುತ್ತದೆ. ಕಿವಿಮೊರೆತಕ್ಕೆ ಉಳಿದಂತೆ ಹಲವಾರು ಕಾರಣಗಳು ಇದ್ದರೂ ಈ ಸೂಕ್ಷ್ಮವಾದ ಅಂಗದ ತೊಂದರೆಯೇ ಬಹುಮಟ್ಟಿನ ಕಾರಣ. ಬಹಳ ಸಲ ಈ ತೊಂದರೆ ಔಷಧಿಗೆ ಒಗ್ಗದು. ಮೊರೆತ ಮುಚ್ಚುವಂತೆ ಶಬ್ದವನ್ನು ಹಿಯರಿಂಗ್ ಏಡ್ ಮೂಲಕ ಕೊಡಬೇಕಾಗುತ್ತದೆ. ಸದ್ಯಕ್ಕೆ ಅದೇ ಉತ್ತರ. ಕಿವಿಯ ಸೂಕ್ಷ್ಮತೆ ಕಡಿಮೆಯಾದ ನಂತರ ಹಿಯರಿಂಗ್ ಏಡ್ ಧರಿಸಿ ಎಲ್ಲರಂತೆಯೇ ಮಾತಿನ ಚಟುವಟಿಕೆಯಲ್ಲಿ ಭಾಗವಹಿಸಬೇಕು, ಅದು ಸಾಮಾನ್ಯ ಜೀವನ.**

**ಡಾ|| ಜಿ. ಪುರುಷೋತ್ತಮ ಇಡಿ.ಡಿ.**
**ವಾಕ್ - ಶ್ರವಣದೋಷ ತಜ್ಞ, ವಿಸ್ಪರ್ ವಾಕ್ - ಶ್ರವಣ ಕೇಂದ್ರ**

# ಕಾಡು ಹರಟೆ

**• ಅಶೋಕ ಭಾಗಮಂಡಲ**

ಇತ್ತೀಚಿಗೆ ಖ್ಯಾತ ಇತಿಹಾಸ ಸಂಶೋಧಕ ಶ್ರೀ ಚಿದಾನಂದ ಮೂರ್ತಿಗಳು ಬೆಂಗಳೂರಿನ ಹೆಸರಿನ ಮೂಲದ ಬಗ್ಗೆ ಹೊಸ ಬೆಳಕು ಚೆಲ್ಲಿದ್ದು ನೀವೆಲ್ಲರೂ ಪತ್ರಿಕೆಗಳಲ್ಲಿ ಓದಿರುತ್ತೀರಿ. ಈಗಿನ ಹಳೆ ಬೆಂಗಳೂರು ಪ್ರದೇಶದಲ್ಲಿ ಹಿಂದೆ ಹೇರಳವಾಗಿ ಬಿಳಿ ಕಲ್ಲುಗಳು ದೊರಕುತ್ತಿದ್ದವಂತೆ. ಬಿಳಿಗಲ್ ಊರು ಎಂಬುದು ಬೆಂಗಲ್ ಊರು ಎಂದಾಗಿ ಕ್ರಮೇಣ ಬೆಂಗಳೂರು ಆಯಿತಂತೆ. ಇದರಿಂದ ಈಗಿನ ಬೆಂಗಳೂರೇ ಆಗಿನ ಬೆಂದ ಕಾಳೂರು ಅನ್ನೋ ನಮ್ಮ ಓಬಿ ರಾಯನ ಕಾಲದ ನಂಬುಗೆಗೆ ಕೊಡಲಿಪೆಟ್ಟು ಬಿದ್ದಿದೆ!

ನಾನಂತೂ ಬೆಂಗಳೂರಿನಲ್ಲಿ ಎಲ್ಲೆಂದರಲ್ಲಿ ಮಾರಲ್ಪಡುವ, ಹದವಾಗಿ ಉಪ್ಪು ಬೆರಸಿ, ಮೆದುವಾಗಿ ಬೇಯಿಸಿದ ಕಡಲೆ ಕಾಯಿಗಳ ಕಟ್ಟಾ ಅಭಿಮಾನಿ! ಹಾಗಂತ ಬೆಂಗಳೂರಿನ ಹಳೆ ಹೆಸರು ಬೆಂದ ಕಾಳೂರು ಅನ್ನುವುದು ನನಗೆ ಎಳ್ಳಷ್ಟೂ ರುಚಿಸಿರಲಿಲ್ಲ. ದಿನ ಬೆಳಗಾಗುವುದರ ಒಳಗೆ ಬದುಕನ್ನೇ ಬದಲಿಸಿಬಿಡುವ, ಅಸಾಧ್ಯವಾದದ್ದನ್ನು ಸಾಧ್ಯವಾಗಿಸುವ, ವಿವಿಧ ಭಾಷಿಕರಿಂದ ಕೂಡಿ ವಿವಿಧ ಸಂಸ್ಕೃತಿಗಳಿಂದ ಮೆರೆಯುವ ನಮ್ಮ ಬೆಂಗಳೂರು ಒಂದು ಕಾಲದಲ್ಲಿ ಬೆಂದ ಕಾಳೂರು ಎಂಬ ನಿಸ್ಸಾರ ಹೆಸರು ಹೊತ್ತಿತ್ತು ಎಂದು ಕಲ್ಪಿಸಲು ನನಗೆ ಕಷ್ಟವಾಗುತ್ತಿತ್ತು.

ಇನ್ನೂ ಹೆಚ್ಚು ಆಳವಾಗಿ ವಿಮರ್ಶಿಸಿದರೆ, ಬೆಂದ ಕಾಳೂರು ಎಂದು ನಾಮಕರಣ ಮಾಡಿದ್ದು ಮಾರ್ಗದ ಬದಿಯಲ್ಲಿ ಕುಳಿತು ಬೆಂದ ಕಾಳುಗಳನ್ನು ಮಾರುತ್ತಿದ್ದ ಯಾರೋ ಅನಾಮಧೇಯ ಮುದುಕಿಯಂತೆ. ಕ್ಷಮಿಸಿ! ಪ್ರಾಯದ ಬಗ್ಗೆಯೋ ಅಥವಾ ವೃತ್ತಿಯ ಬಗ್ಗೆಯೋ ಹಗುರವಾಗಿ ಮಾತಾಡುತ್ತಿದ್ದೇನೆಂದು ದಯವಿಟ್ಟು ಭಾವಿಸಬೇಡಿ. ಇಲ್ಲಿ ನಾನು ಒತ್ತು ನೀಡಲು ಪ್ರಯತ್ನಿಸುತ್ತಿರುವುದು. ಈ ಮುದುಕಿ ನಮ್ಮ ಮೆಚ್ಚಿನ ಮಹಾನಗರಕ್ಕೆ ನಾಮಕರಣ ಮಾಡಿದ ಸನ್ನಿವೇಶಕ್ಕೆ ಮಾತ್ರ!

ಅದು ಬ್ರಿಟೀಷರ ಕಾಲ. ಈಗಿನ ಶಿವಾಜಿನಗರದ ಕಂಟೋನ್ಮೆಂಟ್ ಪ್ರದೇಶದಲ್ಲಿ ಹರಡಿರುವ ಸೈನ್ಯ ಸಮುಚ್ಚಯಗಳು ಬ್ರಿಟಿಷರ ಕಾಲದಲ್ಲೇ ಇತ್ತು. ಇದನ್ನು ಸುತ್ತುವರೆದು ಸೈನಿಕರ ಹಾಗೂ ಸೈನ್ಯ ಸಂಬಂದೀ ಚಟುವಟಿಕೆಗಳಲ್ಲಿ ನಿರತರಾದವರ ವಸತಿ ಪ್ರದೇಶಗಳಿದ್ದವು. ಈ ಮುದುಕಿ ಅದ್ಯಾವುದೋ ಒಂದು ದಿನ ಮುಸ್ಸಂಜೆಯವರೆಗೆ ತಿರುಗಿ ಪುಡಿಗಾಸಿನ ವ್ಯಾಪಾರವಿಲ್ಲದೆ ಬೇಸತ್ತು ತನ್ನ ಮುಂದೆ ಬೇಯಿಸಿದ ಕಡಲೆ ಕಾಳುಗಳನ್ನಿಟ್ಟುಕೊಂಡು ಕೂತಿದ್ದಳಂತೆ. ಆಗ ಅಲ್ಲೇ ಅಡ್ಡಾಡುತ್ತಿದ್ದ ಒಬ್ಬ ಪರಂಗಿ ಸೈನಿಕ ಕಡಲೆ ಕಾಳುಗಳನ್ನು ಕೊಳ್ಳಲು ಬಂದನಂತೆ. ಹೆಸರು ಗೊತ್ತಿಲ್ಲದ ಊರಿಗೆ ಅದು ಹೇಗೆ ಬಂದು ಸೇರಿದ್ದನೋ ಈ ಪುಣ್ಯಾತ್ಮ, ಅಜ್ಜಿಯೊಂದಿಗೆ ಊರಿನ ಹೆಸರೇನು ಎಂದು ಕೇಳಿದನಂತೆ! ಮೊದಲೇ ಬೇಸತ್ತಿದ್ದ ಮುದುಕಿಗೆ

## ಉದ್ಯಾನ ನಗರಿ

*ಅಂದು ಎಲ್ಲೆಲ್ಲೂ*
*''ಕೈ ಮುಗಿದು ಒಳಗೆ ಬಾ ಇದು ಸಸ್ಯ ರಾಶಿ''*
*ಇಂದು ಬೀದಿಬೀದಿಯಲ್ಲೂ*
*''ಮೂಗ್ಹಿಡಿದು ಒಳಗೆ ಬಾ ಇಲ್ಲಿ ನಾರುವ ಕಸ ರಾಶಿ''*

ಈ ಅಸಂಬದ್ಧ ಪ್ರಶ್ನೆಯಿಂದ ಪಿತ್ತ ಕೆರಳಿದಂತಾಗಿ 'ಬೆಂದ್ ಕಾಳೂರು' ಅಂದಳಂತೆ. ಅದಕ್ಕೆ ಮೊದಲು ಏನು ಹೆಸರಿತ್ತೋ ಶಿವನೇ ಬಲ್ಲ. ಮುದುಕಿಯ ಬಾಯಿಂದ ಬಿದ್ದ ಈ ಹೆಸರೇ ಮುಂದೆ ಬಲವಾಯಿತಂತೆ!

ನಾವು ಚಿಕ್ಕವರಿದ್ದಾಗ ಚೆಂದದ ಹುಡುಗಿಯರನ್ನು ಹೆಸರೇನು ಎಂದು ಕೇಳಿದರೆ, ''ಹೆಸರು ಹೆಸರ್ ಕಾಳು, ಬೆಂದರೆ ಬೇಳೆ ಕಾಳು'' ಎಂದು ಉಡಾಫೆಯಿಂದ ಉತ್ತರಿಸುತ್ತಿದ್ದದ್ದುಂಟು! ಅದೇ ಧಾಟಿಯಲ್ಲಿ ಕೊಟ್ಟ ತೇಲು ಉತ್ತರವಷ್ಟೇ ಇದು ಎಂದು ನನ್ನ ಅಭಿಪ್ರಾಯ. ಒಟ್ಟಿನಲ್ಲಿ ಈ ಕಥೆ ಜನ ಮಾನಸದಲ್ಲಿ ತಳವೂರಿತ್ತು. ಆದರೆ ಈಗ ಚಿದಾನಂದ ಮೂರ್ತಿಯವರು ತಮ್ಮ ಸಂಶೋಧನೆಯ ಮೂಲಕ ಬಿಳಿ ಕಲ್ಲು ಎಂಬುದು ಬಿಳಿಗಲ್ ಆಗಿ ಮುಂದುವರೆದು ಬೆಂಗಲ್ ಎಂದಾಯಿತು ಎಂದು ಹೇಳಿ ಬಿಳಿ ಕಲ್ಲುಗ್ಗಳಿಂದ ಕೂಡಿದ ಊರೇ ಬೆಂಗಳೂರು ಎಂದು ವ್ಯಾಕ್ಯಾನಿಸಿರುವುದು ನನಗೆ ಬಹುಮಟ್ಟಿಗೆ ಸಮಾಧಾನ ತಂದುಕೊಟ್ಟಿದೆ. ಯಾಕೆಂದರೆ ಬಿಳಿಗಲ್ಲು ಎಂದರೆ ಸುಣ್ಣದ ಕಲ್ಲಾಗಿರದು, ಬದಲಿಗೆ ಅಮೃತ ಶಿಲೆಯೇ ಆಗಿರಬಹುದು ಎಂದು ನನ್ನ ತರ್ಕ! ಹಾಗಾಗಿ ಊರಿನ ಕಿಮ್ಮತ್ತು ಈ ಹೆಸರಿನಿಂದ ಹೆಚ್ಚಿದೆ ಎಂದು ನನ್ನ ಅನಿಸಿಕೆ. ಈ ವಿಷಯವನ್ನು ಸುದ್ದಿ ಮಾಧ್ಯಮಗಳಲ್ಲಿ ಅರಿತ ಮಂದಿ ಹಲವು ರೀತಿಯಲ್ಲಿ ಮಾತಾಡಿಕೊಳ್ಳುತ್ತಿದ್ದಾರಂತೆ! ಆಗ ಹೇರಳವಾಗಿ ದೊರಕುತ್ತಿದ್ದ ಬಿಳಿಗಲ್ಲುಗಳು ಇಂದೆಲ್ಲಿ ಮಾಯವಾದವು? ಎಂಬ ಪ್ರಶ್ನೆ ದಲ್ಲಾಳಿ ವರ್ಗದವರನ್ನು ಕಾಡುತ್ತಿದೆಯಂತೆ. ಇವರು ಒಳಗೊಳಗೇ ಕುದಿಯುತ್ತಿರುವಾಗ ಇನ್ನೊಂದು ವರ್ಗದ ಜನ ಇಲ್ಲಿದ್ದ ಬಿಲಿಕಲ್ಲುಗಳನ್ನೇ ಒಯ್ದು ಷಹಜಹಾನನು ತಾಜ್ ಮಹಲ್ ಕಟ್ಟಿರಬಹುದೇ ಎಂದು ತರ್ಕಿಸುತ್ತಿದ್ದಾರಂತೆ!

ಇವರ ಸುದ್ದಿ ಬಿಡಿ. ಈಗ ಸ್ವಲ್ಪ ಐತಿಹಾಸಿಕ ಸಂಶೋಧನೆಗಳ ಬಗ್ಗೆ ಚಿಂತಿಸೋಣ. ಸಂಶೋಧನೆಗಳೆಲ್ಲ ಹಲವು ಭಾರಿ ಕೇವಲ ಆಕಸ್ಮಿಕಗಳು ಎಂಬ ವಾದವೊಂದಿದೆ. ಜೀವನದಲ್ಲಿ ಆಕಸ್ಮಿಕಗಳು ಹಲವಾರು! ಆದರೆ ಆ ಆಕಸ್ಮಿಕಗಳನ್ನು ಸಂಧಿಸಿ, ಹಿನ್ನೆಲೆಯಲ್ಲಿ ಅಡಗಿದ ಸತ್ಯವನ್ನು ಗುರುತಿಸಿ, ತರ್ಕದ ಒರೆಗೆ ಹಚ್ಚಿ ನೋಡಿ ಸಾಧಿಸುವವನೇ ಸಂಶೋಧಕ. ಚಕ್ರದಂತಹಾ ಅನುಪಮ ಸಾಧನದ ಸಂಶೋಧನೆಯೂ ಕೂಡ ಹೀಗೆ ಒಂದು ಆಕಸ್ಮಿಕವೇ ಆಗಿದ್ದಿರಬಹುದು ಎಂದು ನನ್ನ ಭಾವನೆ. ಹೇಗೆ ಎಂದಿರಾ?! ಹೇಳುತ್ತೇನೆ ಕೇಳಿ. ಆದಿಮಾನವ ಕಾಡು ಬಿಟ್ಟು ಊರಿಗೆ ಬಂದ ಮೇಲೆ ಕೃಷಿ ಮಾಡಲು ಕಲಿತನಲ್ಲವೇ? ಅದಕ್ಕೂ ಮೊದಲು ಕಾಡಿನಲ್ಲಿ ಬೇಟೆ ಆಡಲು ಹರಿತವಾದ ಆಯುಧಗಳನ್ನು ಆವಿಷ್ಕರಿಸಿದ್ದ. ಈ ಉಪಕರಣಗಳು ಅವನಿಗೆ ಕೃಷಿ

ಕೆಲಸ ಮಾಡಲೂ ಉಪಯೋಗಕ್ಕೆ ಬಂದವು. ಕಾಲಕ್ರಮೇಣ ಅವನು ಸೌತೆಕಾಯಿ ಬೆಳೆಯಲು ಕಲಿತ. ಬೆಳೆದ ಸೌತೆ ಕಾಯಿಗಳನ್ನು ಯಾಕೋ ಸುಮ್ಮನೆ, ಯಾವುದೊ ಹರಿತವಾದ ಆಯುಧದಲ್ಲಿ ಅಡ್ಡಡ್ಡ ಕತ್ತರಿಸುವಾಗ ಬಿದ್ದ ಚಕ್ರಾಕಾರದ ಹೋಳುಗಳು ನೆಲದಲ್ಲಿ ಅಷ್ಟು ದೂರ ಉರುಳಿ ಹೋಗಿ ಬೀಳುತ್ತಿದ್ದದ್ದು ನೋಡಿ ಚಕ್ರದ ಪರಿಕಲ್ಪನೆ ಆಕಸ್ಮಿಕವಾಗಿ ಆದಿಮಾನವನ ಮನದಲ್ಲಿ ಮೂಡಿತಂತೆ! ಈ ವಿಷಯ ನನ್ನ ತಲೆಗೆ ಹೊಳೆದದ್ದು ಮೊನ್ನೆ ನಗರದ ಉಪಹಾರಗೃಹವೊಂದರಲ್ಲಿ ಚಕ್ರಾಕಾರದ ಸೌತೆ ಹೋಳುಗಳ ಮುಂದೆ ಕುಳಿತು ಅನಿರ್ದಿಷ್ಟಾವಧಿಯವರೆಗೆ ತಿಂಡಿಗೆ ಕಾಯುತ್ತ ಕುಳಿತಿದ್ದಾಗ!

ತಮಾಷೆ ಸಾಕು. ನಿಜಕ್ಕೂ ಮೊನ್ನೆ ನಾನು ಆಕಸ್ಮಿಕವಾಗಿ ಡಾ. ಚಿದಾನಂದ ಮೂರ್ತಿಯವರ ಸಂಶೋಧನೆಯಷ್ಟೇ ಗಂಭೀರವಾದ ಸಂಶೋಧನೆಯೊಂದರಲ್ಲಿ ನನಗರಿವಿಲ್ಲದೇ ಭಾಗಿಯಾಗಿದ್ದೆ. ಸಂಶೋಧಕರು ಯಾರು ಅಂದಿರಾ? ಸಂಶೋಧಕರು ಬೇರೆ ಯಾರೂ ಅಲ್ಲ, ಕಡು ಸಿಡುಕರ ಮೋರೆಯಲ್ಲಿಯೂ ನಗು ಇಣುಕುವಂತೆ ಪ್ರಹಸನಗಳನ್ನು ಬರೆಯುವುದರಲ್ಲಿ ನಿಪುಣರಾದ ಅನಿತಾ ನರೇಶ್ ಮಂಚಿಯವರು! ಅವರು ನನ್ನ ಬಾಲ್ಯದ ಗೆಳತಿ ಕೂಡ. ಮಾಮೂಲಿನಂತೆ ಅವರೊಂದಿಗೆ ಹರಟುತ್ತಿರುವಾಗ ಯಾಕೋ ಏನೋ ಮಾತು ಶ್ರೀ ಡಿ.ಎನ್. ಕೃಷ್ಣಯ್ಯನವರ 'ಕೊಡಗಿನ ಇತಿಹಾಸ' ಎಂಬ ಪುಸ್ತಕದತ್ತ ಹೊರಳಿತು. ಕೊಡಗೆಂದರೆ ಎಲ್ಲಿಲ್ಲದ ಉತ್ಸಾಹ ನನಗೆ. ಯಾಕೆಂದರೆ ಕೊಡಗಿನ ಭಾಗಮಂಡಲವೇ ನಮ್ಮೂರು. ಅನಿತಾರವರದ್ದೂ ಕೂಡ. ನಾನು ಮೊದಲೇ ಕೃಷ್ಣಯ್ಯನವರ ಪುಸ್ತಕವನ್ನು ಓದಿಕೊಂಡಿದ್ದ ಕಾರಣ ಅದರಲ್ಲಿ ಇರುವ ಹಳೆ ಕಾಲದ ಕೊಡಗಿನ ಜನ ಜೀವನದ ಬಗ್ಗೆ ರಸವತ್ತಾಗಿ ಹೇಳತೊಡಗಿದೆ. ಊರಿಂದ ದೂರವಾಗಿದ್ದ ಗೆಳತಿಗೆ ಊರು ಕಣ್ಣಿಗೆ ಕಟ್ಟಲಿ ಎಂಬ ಉದ್ದೇಶ ಇದರ ಹಿಂದೆ ಇತ್ತು. ಹೀಗೆ ಮುಂದೆ ಸಾಗಿದ ಮಾತು ರಾಜರ ಕಾಲದ ಭೋಜನಕ್ಕೆ ಬಂದು ಮುಟ್ಟಿತು. ಕೊಡಗು ರಾಜನ ಕಾಲದಲ್ಲಿ ಪಹರೆಯವರಿಗೆ, ಕೆಲಸದ ಆಳುಗಳಿಗೆ ಅರಮನೆ ಲೆಕ್ಕದಲ್ಲಿ ಭರ್ಜರಿ ಊಟದ ವ್ಯವಸ್ಥೆ ಇತ್ತು. ಇದಕ್ಕೆ 'ತೊಂಬಾರ' ಅನ್ನುತ್ತಿದ್ದರು ಅಂತ ವಿವರಿಸುತ್ತಿದ್ದೆ. ಕುಶಿಯಲ್ಲಿ ಹೂಗುಟ್ಟಿ ಕೇಳುತ್ತಿದ್ದ ಅನಿತಾ ಇದ್ದಕ್ಕಿದ್ದಂತೆ ಆರ್ಕಿಮಿಡೀಸ್ 'ಯುರೇಕಾ' ಅಂದಷ್ಟೇ ಜೋರಾಗಿ 'ಅಶೋಕಾ' ಅಂದರು! ತಬ್ಬಿಬ್ಬಾದ ನಾನು 'ಏನು' ಅಂದೆ. ಆಗ ಅನಿತಾ ಭಾಗಮಂಡಲದಲ್ಲಿ ಇರುವ ತೊಂಬಾರ ದಡ್ಡಿಗೂ ಇದಕ್ಕೂ ಏನಾದರೂ ಸಂಬಂದ ಇರಬಹುದೇ ಎಂದರು! ನಾನು ಇದನ್ನು ಕೇಳಿ ಹೌಹಾರಿ ಹೋದೆ! ಯಾಕಂದರೆ ಅನಿತಾ ಹೇಳಿದ ತೊಂಬಾರ ದಡ್ಡು ನಮ್ಮ ಊರಿನ ಸ್ಮಶಾನ!

ಈ ಮೊದಲು ಕೆಲವು ಸಲ ನಮ್ಮ ಊರಿನ ದೊಡ್ಡ ತಲೆಗಳೊಂದಿಗೆ ಈ ಜಾಗಕ್ಕೆ ಈ ಹೆಸರು ಯಾಕೆ ಅಂತ ನಾನು ಪ್ರಸ್ತಾಪಿಸಿದ್ದೆ. ಯಾರೂ ಸಮರ್ಪಕ ಉತ್ತರ ಕೊಟ್ಟಿರಲಿಲ್ಲ. ತೊಂಬಾರ ಅಂದರೆ ಏನೆಂದು ನನಗೂ ಆಗ ತಿಳಿದಿರಲಿಲ್ಲ. ತೊಂಬಾರ ಅನ್ನುವುದು ರಾಜ ಪ್ರಸಾದಿತ ಭೋಜನವಾದರೆ, ದಡ್ಡು ಅನ್ನುವ ಶಬ್ದ ಸಮತಟ್ಟಾದ ನೆಲವೆಂಬ ಅರ್ಥ ಕೊಡುತ್ತದೆ. ತೊಂಬಾರ ದಡ್ಡು ಎಂದು ಕರೆಸಿಕೊಳ್ಳುವ ಈ ಜಾಗ ನಮ್ಮೂರಲ್ಲಿ ಕಾವೇರಿ ತೀರದಲ್ಲೇ ಇದೆ. ಹೊಳೆಯ ಇನ್ನೊಂದು ಬದಿಯಲ್ಲಿ ಸಂಗಮ ಕಾಡು ಎಂಬ ಅರಣ್ಯ

ಪ್ರದೇಶವಿದೆ. ಇಲ್ಲಿ ಅಡುಗೆ ಮಾಡಲು ಬೇಕಾದ ನೀರು ಮತ್ತು ಉರುವಲಿಗೆ ದೂರ ಹೋಗ ಬೇಕಾದ್ದಿಲ್ಲ. ಬೇಕಾದಷ್ಟು ಮಂದಿ ಕುಳಿತು ಉಣ್ಣಲು ಸ್ಥಳಾವಕಾಶವಿದೆ. ಹಾಗೆಂದರೆ ಇದು ಅನಿತಾರವರ ಅನಿಸಿಕೆಯಂತೆ ರಾಜ ವೈಭವಕ್ಕೆ ಸಾಕ್ಷಿಯಾಗಿದ್ದ ಸ್ಥಳವೆ ಹೌದು ಅನ್ನಿಸಿತು.

ಆದರೆ ಈಗ ಯಾಕೆ ಇದು ಸ್ಮಶಾನವಾಗಿದೆ ಎಂದು ಅನಿತಾರನ್ನೇ ಕೇಳಿದೆ!

ಅಶೋಕಾ, ಬಹುಷಃ ಟಿಪ್ಪು ಸುಲ್ತಾನನ ಕಡೆಯವರು ಸಂಚು ಮಾಡಿ ಭೋಜನಕ್ಕೆ ಹಲ್ಲಿ ಹಾಕಿ ಸಾಮೂಹಿಕ ಹತ್ಯೆ ಮಾಡಿರಬಹುದು. ಹಸಿದುಣ್ಣಲು ಬಂದವರೆಲ್ಲಾ ಅಸುನೀಗಿ ಈ ಸ್ಥಳ ಸ್ಮಶಾನವಾಯಿತೇನೋ ಎಂದು ವಾದ ಮಂಡಿಸಿದರು. ಅಲ್ಲದೆ ಕನ್ನಡ ರತ್ನ ಕೋಶದ ಪ್ರಕಾರ 'ದಡ್ದು' ಅಂದರೆ ಚರ್ಮ ಸೆಟೆದುಕೊಂಡು ಗಟ್ಟಿಯಾಗುವುದು ಎಂಬ ಅರ್ಥ ಇದೆ. ವಿಷಪ್ರಾಶನದಿಂದ ಚರ್ಮ ದದ್ದುಗಟ್ಟಿರಬಹುದು ಎಂದೂ ಸೇರಿಸಿದರು. ಇದೆಲ್ಲ ಕೇಳಿದಾಗ ನನಗೆ ವಿಷಯ ಬಹಳಷ್ಟು ಸಮರ್ಪಕವೆನಿಸಿತು. ಹೆಚ್ಚಿನ ವಿವರಗಳನ್ನು ಕೇಳಲು ದುರದೃಷ್ಟವಶಾತ್ ಶ್ರೀಮಾನ್ ಕೃಷ್ಣಯ್ಯನವರು ಈಗ ಇಲ್ಲ. ಅವರು ದೈವಾಧೀನರಾಗಿ ಹಲವು ವರ್ಷಗಳೇ ಆಯಿತು. ಇನ್ನು ಮತ್ತೆ ಬೇಕಿದ್ದರೆ ಡಾ.ಚಿದಾನಂದ ಮೂರ್ತಿಯವರನ್ನೇ ಹೆಚ್ಚಿನ ಸಂಶೋದನೆ ನಡೆಸಲು ಕೋರಿಕೊಳ್ಳುವುದು ಎಂದು ಸಮಾಧಾನ ಪಟ್ಟುಕೊಂಡೆವು!!

ಇದೆಲ್ಲದರ ಮಧ್ಯದಲ್ಲಿ ನಾನು ಬರೇ ಕೀಟಲೆ ಸುಬ್ಬಿ ಎಂದು ಪರಿಗಣಿಸಿದ್ದ ಅನಿತಾ ಸಂಶೋದಕಿಯ ಮಟ್ಟಕ್ಕೆ ಏರಿದ್ದನ್ನು ಕಂಡು ಸೋಜಿಗ ಪಡುತ್ತಿದ್ದೆ! ಆದರೂ ಇದರಲ್ಲಿ ನಾನೂ ಬಾಗಿಯಾದದ್ದು ತುಂಬಾ ಕುಷಿ ನೀಡಿತು. ಅದೇನೇ ಇರಲಿ, ಈಗ ನೀವು ಇಲ್ಲಿಯವರೆಗೆ ಇದನ್ನು ಓದಿದ್ದು ಹೌದಾದರೆ ನೀವೂ ಸಹ ನಮ್ಮಂತಯೇ ಸಂಶೋಧಕ ಮನೋಭಾವದ ಸಹೃದಯಿಗಳು ಎಂದು ಮನಸಾರೆ ಅಭಿನಂದಿಸುತ್ತಾ ನನ್ನ ಬರಹವನ್ನು ನಿಲ್ಲಿಸುತ್ತೇನೆ.



# ಹಗರಣಗಳಿಂದ ಸ್ವಯಂ ನಿವೃತ್ತಿ

"**ನಾ**ನು ಸಾರ್ವಜನಿಕ ಸೇವೆಯಲ್ಲಿ ಮುಂದುವರಿದರೂ ಸಹ ಇನ್ನು ಮೇಲೆ ಯಾವುದೇ ಹಗರಣಗಳಲ್ಲಿ ಭಾಗಿಯಾಗುವುದಿಲ್ಲ'' ಅಂತಾರೆ ದೆಹಲಿಯಲ್ಲಿ ಕೆಲಸ ಮಾಡುತ್ತಿರುವ ಒಬ್ಬ ಸರ್ಕಾರಿ ಅಧಿಕಾರಿ ಇಮಾಮ್ ಸಿಂಗ್ ಅಲ್‌ಬೇಲ.

ಐವತ್ತು ಸಾವಿರ ಲಂಚ ತಿಂದು ''ಫೇಕಿಂಗ್ ನ್ಯೂಸ್'' ಪತ್ರಿಕೆಗೆ ನೀಡಿದ ಸಂದರ್ಶನದಲ್ಲಿ ಅವರು ''ಇದೇ ನಾನು ತೆಗೆದುಕೊಳ್ಳುತ್ತಿರುವ ಕೊನೆಯ ಲಂಚ. ಇಂದಿನಿಂದ ನಾನು ಯಾವುದೇ ಮೋಸದ ಹಾಗೂ ಅನೈತಿಕವಾದ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದಿಲ್ಲ. ಇನ್ನು ಯಾವುದೇ ಹಗರಣಕ್ಕೂ ನನ್ನಿಂದ ಯಾವುದೇ ವಿಧವಾದ ಕೊಡುಗೆ ಇರುವುದಿಲ್ಲ'' ಎಂದರು.

ಹಗರಣಗಳೇ ತುಂಬಿರುವ ಅವರ ಜೀವನದ ಹಂತಗಳನ್ನು ನೆನೆಪಿಸಿಕೊಂಡ. ಅವರು ''ನಾನು ಪ್ರಾಮಾಣಿಕ ಅಧಿಕಾರಿಯಾಗಿ ದುಡಿದಿದ್ದರೆ ಸಿಗುತ್ತಿದ್ದ ಹಣಕ್ಕಿಂತ ಸಾವಿರ ಪಟ್ಟು ಹಣವನ್ನ ಹಗರಣಗಳಲ್ಲಿ ಮಾಡಿಕೊಂಡಿದ್ದೇನೆ. ಅದಕ್ಕೆ ಅನುಕೂಲವಾಗುವಂತಹ ಜನರ ಜೊತೆ ನಾನು ಸ್ನೇಹ ಮಾಡಿದ್ದೆ'' ಎಂದು ನುಡಿದರು.

''ಹಗರಣಗಳಲ್ಲಿ ಪಾಲ್ಗೊಳ್ಳುವುದು ಬುದ್ಧಿಗೆ ಶಕ್ತಿಯನ್ನು ಒದಗಿಸುವಂತಹ ಕ್ರಿಯೆ. ನೀವು ಅದಕ್ಕೆ ಬಹಳ ಎಚ್ಚರಿಕೆಯಿಂದ ಪ್ಲಾನ್ ಮಾಡಬೇಕು, ನೀವು ಸಿಕ್ಕಿಹಾಕಿಕೊಳ್ಳದ ರೀತಿ ಆ ಪ್ಲಾನ್ ಇರಬೇಕು, ಅದಕ್ಕಾಗಿ ನೀವು ವಿಷಯವನ್ನ ಎಲ್ಲಾ ದಿಕ್ಕಿನಿಂದಲೂ ಪರಿಶೀಲಿಸಬೇಕು. ನೀವು ಹಾಕಿಕೊಂಡ ಪ್ಲಾನ್ ಫ್ಲಾಪ್ ಆಗದ ರೀತಿ ಹಂತಹಂತವಾಗಿ ಅದನ್ನ ರೂಪಿಸಬೇಕು. ಇವೆಲ್ಲಕ್ಕಿಂತ ಹೆಚ್ಚಾಗಿ ಆರ್ಥಿಕವಾಗಿ ಸಾಧ್ಯವಾಗುವಂತಹ ಪ್ಲಾನನ್ನೇ ಹಾಕಿಕೊಳ್ಳಬೇಕು'' ಎಂದರು ಅಲಬೇಲ.

''ಬೋರ್ ಹೊಡೆಯುವಂತಹ, ತಲೆಗೆ ಕೆಲಸ ಕೊಡದೆ ಇರುವ, ಹಗರಣಗಳೇ ಇಲ್ಲದೆ ಇರುವ ಸರ್ಕಾರಿ ಕೆಲಸವನ್ನು ಯೋಜಿಸಿ, ಅನುಷ್ಠಾನಕ್ಕೆ ತರೋದಕ್ಕಿಂತ ಯಶಸ್ವಿ ಹಗರಣವನ್ನ ರೂಪಿಸುವುದೇ ಹೆಚ್ಚು ಚಾಲೆಂಜಿಂಗ್ ಆಗಿರುತ್ತೆ'' ಎನ್ನುತ್ತಾರವರು.

ಇಮಾಮ್ ತಮ್ಮ ಇಲಾಖೆಗೆ ಸಂಬಂಧಿಸದ ಹಗರಣಗಳಿಂದ ಹಿಡಿದು ಇಲಾಖೆಗೆ ಸಂಬಂಧಿಸಿದ ಹಗರಣಗಳವರೆಗೆ ಎಲ್ಲದರಲ್ಲೂ ತಮಗೆ ನೆರವಾದ ಸಹೋದ್ಯೋಗಿಗಳಿಗೆ ಕೃತಜ್ಞತೆ ಅರ್ಪಿಸಿದರು. ''ಹಗರಣ ಮಾಡುವವರಿಗೆ ಯಾವುದೇ ಜಾತಿ, ಮತ, ಭಾಷೆ, ಇತ್ಯಾದಿಗಳ ತಾರತಮ್ಯವಿಲ್ಲ, ಎಲ್ಲಾ ಹಗರಣಗಾರರ ಗುರಿಯೂ ಒಂದೇ ತೆರಿಗೆದಾರರ ಹಣದ ಲೂಟಿ'' ಎಂದರು ಅಲಬೇಲ.

''ಆದರೆ ಈಗ ಲೂಟಿ ಮಾಡುವ ಬಯಕೆ ಇಲ್ಲದ ಅಧಿಕಾರಿಗಳ ಜೊತೆ ಕೆಲಸ ಮಾಡುವುದರಿಂದ ಹಲವಾರು ತಾರತಮ್ಯಗಳನ್ನು ಎದುರಿಸಬೇಕಾಗಬಹುದು'' ಎಂದು ಅವರು ಆತಂಕ ವ್ಯಕ್ತಪಡಿಸಿದರು.

''ನಿವೃತ್ತಿ ಹೊಂದಿದವರು ಅದೇ ಮಾರ್ಗದಲ್ಲಿ ಆಸಕ್ತಿ ಇರುವವರಿಗೆ ತರಬೇತಿ ನೀಡುವುದು ಸಾಮಾನ್ಯ ಪದ್ಧತಿ. ನೀವೂ ಸಹ ಮುಂದಿನ ಹಗರಣಗಾರರಿಗೆ ತರಬೇತಿ ನೀಡುವಿರೇನು?'' ಎಂದುದಕ್ಕೆ ಉತ್ತರ ನೀಡದ ಅವರು ತಮ್ಮ ಮುಂದಿನ ಕಾರ್ಯಚಟುವಟಿಕೆಗಳ ಬಗ್ಗೆ ಹೇಳಲು ನಿರಾಕರಿಸಿದರು.

''ನಾನು ಹೇಳಬಯಸುವುದಿಷ್ಟೆ ಕೊಂಚ ವಿಶ್ರಾಂತಿ ಪಡೆದು, ಪ್ರಾಮಾಣಿಕನಾಗ ಬಯಸುತ್ತೇನೆ'' ಎಂದರು ಇಮಾಮ್.

ಸರ್ಕಾರಿ ವಲಯಗಳ ಪ್ರಕಾರ ಇಮಾಮ್ ಸಾರ್ವಜನಿಕ ಸ್ವತ್ತನ್ನು ಸರ್ಕಾರದ ಬೊಕ್ಕಸದಿಂದ ಲೂಟಿ ಮಾಡುವುದರಿಂದ ನಿವೃತ್ತಿ ಹೊಂದುತ್ತಿರುವ ಪ್ರಪ್ರಥಮ ಆಡಳಿತಾಧಿಕಾರಿಯಾಗಿದ್ದಾರೆ.

ಸರಣಿ ಹಗರಣಗಳಲ್ಲಿ ಸಿಲುಕುವುದನ್ನೇ ಜೀವನವಾಗಿರಿಸಿಕೊಂಡಿರುವ ಆದಾಯ ತೆರಿಗೆ ಇಲಾಖೆಯ ಅಧಿಕಾರಿಯಾದ ಕುಕು ಘೋಷ್ ''ನಮಗೆ ನಿಜಕ್ಕೂ ದಿಗ್ಭ್ರಮೆಯಾಗಿದೆ. ಒಮ್ಮೆ ಹಗರಣದಲ್ಲಿ ಸಿಲುಕಿಕೊಂಡರೆ ಹಲವಾರು ಹಗರಣಗಳಲ್ಲಿ ಸಿಲುಕಿಕೊಳ್ಳುವುದು ನಮ್ಮ ರೀತಿ. ಇದು ನಾವು ಕೆಲಸ ಬಿಡುವವರೆಗೆ ನಡೆದುಬರುವುದು ವಾಡಿಕೆಯಾಗಿದೆ. ಕೆಲವೊಮ್ಮೆ ಟಾಟ್ರಾ ಟ್ರಕ್ ಡೀಲ್‌ನಂತಹ ಹಗರಣಗಳಲ್ಲಿ, ನಿವೃತ್ತ ಅಧಿಕಾರಿಗಳನ್ನೂ ಹಗರಣದಲ್ಲಿ ಭಾಗವಹಿಸಲು ಸೇರಿಸಿಕೊಳ್ಳಲಾಗುತ್ತದೆ. ಹೀಗಿರುವಾಗ ಹೀಗೆ ಹಗರಣದಿಂದ ನಿವೃತ್ತಿ ಹೊಂದುವುದು ಇದೊಂದೇ ಸಂದರ್ಭವಾಗಲಿ ಎಂದು ಆಶಿಸುತ್ತೇನೆ'' ಎಂದರು.

*ಆಧಾರ: ಫೇಕಿಂಗ್ ನ್ಯೂಸ್*




– ಶ್ರೀವತ್ಸ ಜೋಶಿ

# ನಾಡಿಗೇರ್ ಕೃಷ್ಣರಾಯರ ಅಪ್ರಕಟಿತ ಹಾಸ್ಯಗಳ ಒಂದು ನೈಜ ಲೇಖನ

● ಎಸ್.ಎನ್. ಚಂದ್ರಶೇಖರ್

''**ನಾ**ಡಿಗೇರ್'' ರೆಂದೇ ಸ್ವಾತಂತ್ರ್ಯ ಚಳುವಳಿಯಲ್ಲಿ, ಪತ್ರಿಕೋದ್ಯಮದಲ್ಲಿ, ಹಾಸ್ಯ ಸಾಹಿತ್ಯದಲ್ಲಿ ಹೆಸರು ಮಾಡಿದ್ದ ನಾಡಿಗೇರ್ ಕೃಷ್ಣರಾಯರು ನನ್ನ ಮಾತೃಶ್ರೀಯವರ ಸೋದರಮಾವನ ಮಗ. ತಂದೆ ದಿ|| ನಾಡಿಗೇರ್ ದತ್ತಾತ್ರೇಯ ರಾಯರು, ಶಾನುಭೋಗರು ಮತ್ತು ಆಗಿನ ಹರಿಹರದಲ್ಲಿ ಖ್ಯಾತ ಜ್ಯೋತಿಷಿಗಳು. ತಾಯಿಯನ್ನು ನಾವು ಕಾಂಚಮತ್ತೆ ಎಂದು ಕರೆಯುತ್ತಿದ್ದೆವು. ವಿಪರೀತ ಮಡಿ.

ನಾವೆಲ್ಲ ಅವರನ್ನು ಕರೆಯುತ್ತಿದ್ದುದು 'ಹರಿಹರ ಕಿಟ್ಟಣ್ಣ'. ನನ್ನ ತಾಯಿಯ ತಂದೆ, ಅಂದರೆ ನನ್ನ ಅಜ್ಜ ನಾಡಿಗ ಬನ್ನಪ್ಪನವರು ಭದ್ರಾವತಿಯಿಂದ ಚೆನ್ನಗಿರಿಯ ರಸ್ತೆಯಲ್ಲಿರುವ ''ಕಾಗೆಕೊಡಮಗ್ಗಿಯವರು'', 103 ವರ್ಷ ಬದುಕಿದ್ದವರು. ಶ್ರೀರಾಮನ ಪರಮ ಭಕ್ತರು. ಗೋಂದಾವಲಿ ಬ್ರಹ್ಮಚೈತನ್ಯರ ಶಿಷ್ಯರು, ಆರಾಧಕರು ಅವರು ನಾಡಿಗೇರ್‌ರವರ ಸೋದರಮಾವ.


'ಕವಿ ಮುದ್ದಣ್ಣನ ಹೆಂಡತಿಯ ಊರು ಕಾಗೆಕೊಡಮಗ್ಗಿ'. ನಾವು ಚಿಕ್ಕವರಿದ್ದಾಗ ಆಕೆಯ ತಂದೆ ಬಾಬುರಾಯರ ಮನೆಯಲ್ಲಿ ಕಾಲ ಕಳೆಯುತ್ತಿದ್ದೆವು.

ಆರು ಜನ ಅಣ್ಣತಮ್ಮಂದಿರಿದ್ದ ಮನೆಯಲ್ಲಿ ನಾಡಿಗೇರ್‌ರೇ ಹಿರಿಯಣ್ಣ. ಇದು ಅವರು ಹಾಸ್ಯಚಟಾಕಿಗೆ ಬೇಕಾಗಿರುವ ಹಿನ್ನೆಲೆ. ಅದಕ್ಕಾಗಿ ಸೇರಿಸಿದ್ದೇನೆ. ಈಗ ನಾಡಿಗೇರ್‌ರ ಅಪರಿಚಿತ ಹಾಸ್ಯಗಳತ್ತ ಬರೋಣ.

ಆರು ಜನರಲ್ಲಿ ನಾಡಿಗೇರ್‌ರು ಮತ್ತು ಅವರ ತಮ್ಮ ನಾಡಿಗೇರ್ ಗೋವಿಂದರಾಯರು ಹಾಸ್ಯಪ್ರವೃತ್ತಿಯವರು. ನಾಡಿಗೇರ್ ಗೋವಿಂದರಾಯರು ಮೈಸೂರಿನಲ್ಲಿ ನಮ್ಮ ಮನೆಯಲ್ಲೇ ಇದ್ದು 'ಕನ್ನಡ' ಎಂ.ಎ. ಮಾಡಿ ಮುಂಬೈನಲ್ಲಿ ಅಂತಿಮ ಕಾಲದವರೆವಗೂ ನೆಲೆಸಿ, ಮೈಸೂರಿಗೆ ತಿರುಗಿ ಬಂದು ದೈವಾಧೀನರಾದರು.

ನಾಡಿಗೇರ್‌ರು ವಾದ ಮಾಡುತ್ತಿದ್ದುದ್ದು, 'ನಮ್ಮ ಹಾಸ್ಯ ನಾಟಿ ಹಾಸ್ಯವಾಗಿರಬೇಕು. ''ಬಿಟ್ಸ್'' ''ಪಂಚ್'' ಅವುಗಳಿಂದ ಕದ್ದಿರಬಾರದು. ಅವರ ಹಾಸ್ಯ ಚಟಾಕಿಗಳನ್ನು ನಿಮ್ಮ ಮುಂದಿಡುತ್ತೇನೆ.

1. ಸಾಮಾನ್ಯವಾಗಿ ಬೇಸಿಗೆಗೆ ನಾವೆಲ್ಲ ನಮ್ಮ ತಾಯಿಯ ಊರು ಕಾಗೆಕೊಡಮಗ್ಗಿಯಲ್ಲಿ ಸೇರುತ್ತಿದ್ದೆವು. ಅಲ್ಲಿ ಒಬ್ಬಾಕೆ ಒಂದು ಹೆಣ್ಣು ಮಗುವಿನ ತಾಯಿ. ನೋಡಲು




ಲಕ್ಷಣವಂತೆ. ಆದರೆ ಆಕೆಯ ಪತಿವ್ರತಾ ಹಿನ್ನೆಲೆ ಅಷ್ಟು ಚೆನ್ನಾಗಿರಲಿಲ್ಲ. ಸಾಕಷ್ಟು ಗಂಡಸರ ಜೊತೆ ಓಡಾಡಿದವರು. ಅವರಿಗೊಂದು ಐದು ವರ್ಷದ ಸುಂದರವಾದ ಹೆಣ್ಣುಮಗು ಇತ್ತು. ಯಾವ ಗಂಡಸರು ಕರೆದು ಎತ್ತಿಕೊಂಡರೂ ನಗುನಗುತ್ತ ಅವರ ಹತ್ತಿರ ಹೋಗುತ್ತಿತ್ತು. ನಾಡಿಗೇರ್‌ರು ''ನೋಡಿ, ಆ ಮಗು ಎಲ್ಲಾ ಅವರ ಅಮ್ಮನ ಹಾಗೇ ಕರೆದವರ ಹತ್ತಿರವೆಲ್ಲಾ ಹೋಗುತ್ತೇ''. ನಗುವಿನ ಬುಗ್ಗೆ. ಸದ್ಯ ಆಕೆ ಅಲ್ಲಿರಲಿಲ್ಲ.

2. ಇದು ನಮ್ಮಮ್ಮ ಹೇಳಿದ್ದು. ನಾಡಿಗೇರ್‌ರ ಮೊದಲನೇ ಪತ್ನಿ ದಿವಂಗತರಾದಾಗ, ಮನೆಯೆಲ್ಲ ದುಃಖದಲ್ಲಿ ಮುಳುಗಿದೆ. ನಾಡಿಗೇರ್‌ರು ಬಾಡಿದ ಮುಖದಿಂದ ಒಂದು ಮೂಲೆಯಲ್ಲಿ ಕುಳಿತ್ತಿದ್ದಾರೆ. ನಮ್ಮ ಅಜ್ಜ ನಾಡಿಗೇರ್‌ರನ್ನು ಸಂತೈಸುತ್ತಿದ್ದಾರೆ. ''ದುಃಖ ತಡೆದುಕೊ ಕಿಟ್ಟಣ್ಣ, ಸಾವನ್ನು ತಡೆಯಲು ಯಾರ ಕೈಯಿಂದ ಸಾಧ್ಯ. ಇವತ್ತು ಅವಳು, ನಾಳೆ ನಾವು''. ತಕ್ಷಣ ನಾಡಿಗೇರ್ ''ಅಯ್ಯೋ ಕಕ್ಕ, ಅವಳು ಸತ್ತು ಅಂತ ಅತ್ತಿಲ್ಲ. ನಮ್ಮಪ್ಪ ಈ ಮದುವೆ ಮಾಡೋಕೇ ಇಷ್ಟು ವರ್ಷ ತಗೊಂಡ, ಇನ್ನೊಂದು ಮದ್ವೆ ಯಾವ ಕಾಲಕ್ಕೆ ಮಾಡ್ತಾನೋ''. ಅಲ್ಲಿದ್ದವರೆಲ್ಲಾ ನಗಬೇಕಾ, ಅಳಬೇಕಾ?

3. ಇದೂ ನಮ್ಮಮ್ಮ ಹೇಳಿದ್ದು. ನಾಡಿಗೇರ್‌ರ ತಂದೆ ದಿವಂಗತರಾಗಿದ್ದಾರೆ. ಶವ ಜಗುಲಿಯಲ್ಲಿ ಮಲಗಿಸಿದ್ದಾರೆ. ತಮ್ಮಂದಿರೆಲ್ಲ ಅಳ್ತಿದ್ದಾರೆ. ಇವರು ಮಾತ್ರ ನಗ್ತಾನೆ ಮುಂದಿನ ಕೆಲಸದತ್ತ ಓಡಾಡ್ತಿದ್ದಾರೆ. ಇವರೆಲ್ಲ ಯಾಕಳ್ತಿದ್ದಾರೆ ಗೊತ್ತ ನಾಗಮ್ಮ (ನಮ್ಮ

ತಾಯಿಯನ್ನು ಹಾಗೇ ಕರೆಯುತ್ತಿದ್ದರು), ''ಇಷ್ಟು ದಿನ ನಮ್ಮಪ್ಪ ಮನೆಯ ಯಜಮಾನ ಆಗಿದ್ದ ಇವತ್ತಿಂದ ನಾನು ಯಜಮಾನ. ಇವರಿಗೆ ಹೊಟ್ಟೆಕಿಚ್ಚು'' ಅದಕ್ಕೆ ಅಳ್ತಿದ್ದಾರೆ.

4. ಹಳ್ಳಿಕಡೆ ಜನ ಎಷ್ಟು ಮುಗ್ಧರು ಅನ್ನೋಕೆ ಈ ಹಾಸ್ಯ ಚಟಾಕಿ ಕೇಳಿ. ಬೋರಯ್ಯ ನಿಂಗವ್ವನಿಗೆ ಹೇಳ್ತಾನೆ ನಿಂಗವ್ವ ನೀನು ಅಂದ್ರೆ ನಂಗೆ ದೇವ್ತೆ ಇದ್ದಂಗವ್ವ. ನಿಂದೆಂತ ಗುಣ, ನೀ ಬೋ ಒಳ್ಳೇಳು, ಆದ್ರೆ ನಿನ್ಗಂಡ ಜವರ ಇದ್ದಾನಲ್ಲ, ಅವ್ನು ಬಾಳ ಮೋಸಗಾರ್ನವ್ವ. ನಂಗೆ ಅವ್ನ ಕಂಡ್ರೆ ಕ್ವಾಪ ಬರ್ತದವ್ವ 'ಅವ್ನ ಹೆಂಡ್ರನಾ.....' ನಿಂಗವ್ವ ಹೇಳ್ತಾಳೆ ''ಅವ್ನು ಅಂಗೇಕನಣ್ಣ ಬಿಡತ್ತ, ಅವ್ನಿಗೆ ಯಾವಾಗ ಬುದ್ಧಿ ಬರ್ತದೋ ನಾ ಕಾಣೆ?''

5. ನಾಡಿಗೇರರು ಸಿಗರೇಟು ಪ್ರಿಯರು. ನಮ್ಮ ತಂದೆಯವರಿಗೆ ಅದು ಹಿಡಿಸ್ತಿರ್ಲಿಲ್ಲ. ಆದರೂ ಅವರು ನಮ್ಮ ಮನೆ ವರಾಂಡದಲ್ಲಿ ಸೇದೋಕೆ ಅನುಮತಿ ಇತ್ತು. ನನ್ನ ತಂಗಿಗೆ – ''ಶಾರದಾ! ಎದುರಂಗ್ಡಿಗೆ ಹೋಗಿ ಒಂದು ಪ್ಯಾಕೆಟ್ ಬರ್ಕ್ಲಿ ಸಿಗರೇಟ್ ತಗೊಂಡ್ಬಾ, ಮೋಸ ಮಾಡ್ತಾರೆ, ಸೇದಿ ನೋಡಿ ತಗೊಂಡ್ ಬಾ''.

6. ಒಂದಿನ ಬೆಳಿಗ್ಗೇನೆ ಮನೆಗೆ ಬಂದ್ರು. ನಮ್ಮಮ್ಮ ದೋಸೆಗೆ ಚಟ್ನಿ ಮಾಡ್ಬೇಕಾಗಿತ್ತು. ನನ್ನನ್ನು 4 ಆಣೆಗೆ ಹಸಿಮೆಣಸಿನಕಾಯಿ ತಗೊಂಬರಕ್ಕೆ ನನ್ನ ಅಮ್ಮ ಹೇಳಿದ್ರು. ತಕ್ಷಣ ನಾಡಿಗೇರರು ''ಸುಬ್ಬಣ್ಣ ಈಗಿನ್ ಮೆಣಸಿನಕಾಯ್ಗಳಲ್ಲಿ ಖಾರಾನೇ ಇರೊಲ್ಲ. ಎರಡು ಮೆಣಸಿನಕಾಯ್ನ ತಿಂದ್ನೋಡಿ ತಗೊಂಡು ಬಾ''.

7. ನಾವು ಬಸವನಗುಡಿಯಲ್ಲಿದ್ದಾಗ, ಬೆಳಿಗ್ಗೇನೆ ಮನೆಗೆ ಬಂದ್ರು. ''ಯಾಕೋ ಕಿಟ್ಟಣ್ಣ ಇಷ್ಟು ಬೇಗ ಬಂದಿದ್ದೀಯ'' ಅಂತ ನಮ್ಮ ತಂದೆವ್ರು ಕೇಳಿದ್ರು. ಅವರು ಕೊಟ್ಟ ಉತ್ತರ – ''ಅಯ್ಯೋ ಭಾವ – ನನ್ನ ಸ್ನೇಹಿತ ಒಬ್ಬ ಸೀರಿಯಸ್ಸಾಗಿದ್ದಾರೆ. ಇನ್ನೇನು ಅರ್ಧ ಘಂಟೇಲಿ ಹೋಗ್ಬಿಡ್ತಾರೆ. ನೀವು ಬೇಗ್ನೆ ಬಂದ್ರೆ ಒಳ್ಳೇದು ಅಂತ ಫೋನ್ ಬಂತು. ನಾನು ಹೂಗುಚ್ಚ ತಗೊಂಡು ಹೋದೆ. ಒಂದೆರಡು ಕಣ್ಣು ಹನಿ ಸುರಿಸೋಕು ರೆಡಿಯಾಗಿದ್ದೆ. ಹೋಗಿ ನೋಡ್ತೀನಿ – ಅವ್ನು ಕೂತ್ಕೊಂಡು ಬ್ರೆಡ್ ತಿಂತಿದ್ದ. ನಂಗೆ ನಿರಾಶೆಯಾಯ್ತು, ನಾನು ಬಂದ್ಬಿಟ್ಟೆ''.

8. ಒಮ್ಮೆ ನಾನೇ ಅವರನ್ನ ಒಂದು ಪ್ರಶ್ನೆ ಕೇಳ್ದೆ. ಆಗ ಅವರಿಗೆ 65 ವರ್ಷ ದಾಟಿತ್ತು. ''ಕಿಟ್ಟಣ್ಣ, ನಿಮ್ಮ ತಲೇಲಿ ಒಂದೂ ಬಿಳೀ ಕೂದ್ಲು ಇಲ್ಲ, ಆದ್ರೆ ಇಂದ್ರಮ್ಮಂಗೆ (ಪತ್ನಿ) ಆಗ್ಲೇ ಎಷ್ಟೊಂದು ಬಿಳೀ ಕೂದ್ಲು ಅಂತ''. ''ಅಯ್ಯೋ, ಅಷ್ಟೂ ಗೊತ್ತಾಗಲ್ವ ನಿಂಗೆ. ಹಾಲ್ನೋರು, ಪೇಪರ್ನೋರು, ಅಂಗಡಿ ಸಾಲ ಕೊಟ್ನೋರು – ಎಲ್ಲರೂ ನಮ್ಮನೆಗೆ ಬರ್ತಾರೆ, ನಾನ್ಮನೇನಲ್ಲಿ ಇರೋಲ್ಲ ಅಂತ ಅವರಿಗೆ ಉತ್ತರ ಹೇಳೋಳು ನನ್ನ ಹೆಂಡ್ತಿ. ಅವರೆಲ್ಲ ಅವಳನ್ನೇ ಬಯ್ಯೋದು, ಅದಕ್ಕೆ ಅವಳ ತಲೆ ಬೆಳ್ಳಗಾಗಿದೆ''.

9. ಒಂದ್ಸಲ ನಮ್ಮಮ್ಮನ ಹತ್ರ ಮಾತಾಡ್ತ ''ನಾಗಮ್ಮ ನೋಡು, ನನ್ನ ಸ್ನೇಹಿತನ ಮಗಳ ಮದ್ವೆ ಗೊತ್ತಾಗಿತ್ತು. ಆದ್ರೆ ಆ ಮದ್ವೆ ಕ್ಯಾನ್ಸಲ್ ಆಯ್ತಂತೆ. ಯಾಕೆ ಗೊತ್ತಾ? ಹೆಣ್ಣಿನ ಕಡೆಯವ್ರು ನಿಮ್ಮ ಮಗಂಗೆ ಮುವ್ವತ್ತು ಸಾವಿರ ರೂಪಾಯಿ ವರದಕ್ಷಿಣೆ ಕೊಡ್ತೀವಿ ಅಂದ್ರಂತೆ. ಅದಕ್ಕೆ ಗಂಡಿನ ಕಡೆಯವ್ರು ನಮಗೆ ವರದಕ್ಷಿಣೆ ಬೇಡ. ಬಸವನಗುಡಿ ಆಸ್‌ಪಾಸ್ನಲ್ಲಿ ಕಮ್ಮಿ ಬಾಡ್ಗೆಗೆ ಒಂದು ಮನೆ ಕೊಡ್ಸೀ ಅಂದ್ರಂತೆ. ಅದಕ್ಕೆ ಇವ್ರು ಅದನ್ನ ಮಾತ್ರ ಕೇಳ್ಬೇಡಿ, ಇನ್ನೂ ಬೇಕಾದ್ರೆ ಹತ್ಸಾವಿರ ವರದಕ್ಷಿಣೆ ಜಾಸ್ತಿ ಕೊಡ್ತೀವಿ ಅಂದ್ರಂತೆ. ಗಂಡಿನವರು ಅದೆಲ್ಲ ಬೇಡ, ನಮಗೆ ಬಾಡಿಗೆ ಮನೇನೆ ಬೇಕು ಅಂದ್ರಂತೆ. ಅದಕ್ಕೆ ಮದುವೆ ನಿಂತ್ಹೋಯ್ತು, ಪಾಪ''.

10. ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಕನ್ನಡ ಕಾದಂಬರಿಗಾರ್ತಿ ಎಂ.ಕೆ. ಇಂದಿರಾರವರಿಗೆ ಸನ್ಮಾನ ಇತ್ತು. ದಿ॥ ಅನಕೃ ಅವರು ಅಧ್ಯಕ್ಷತೆ, ನಾಡಿಗೇರ ಕೃಷ್ಣರಾಯರು ಉಪಸ್ಥಿತಿಯಲ್ಲಿದ್ದರು. ಆಗ ನಾಡಿಗೇರರು ಎಂ.ಕೆ. ಇಂದಿರಾರವರ ಬಗ್ಗೆ ಮಾತ್ನಾಡ್ತಾ ಶ್ರೀಮತಿ ಇಂದಿರಾರವರ ಇನಿಷಿಯಲ್ಸ್, ಅವರ ದೇಹಕ್ಕೂ ಒಪ್ಪುತ್ತೆ – ಎರಡೂ 'ಎಮ್ಕೇನೇ'.

11. ಇನ್ನೊಂದು ಸಲ ದಿ॥ ಕೆಂಗಲ್ ಹನುಮಂತಯ್ಯನವರ ಅಧ್ಯಕ್ಷತೆಯಲ್ಲಿ ಮಾ॥ ಹಿರಣಯ್ಯನವರ ನಾಟಕ ಕಂಪನಿಯಲ್ಲೇ 1971ರಲ್ಲಿ ಸನ್ಮಾನ ಮಾಡಿದ್ರು. ಮಾ॥ ಹಿರಣ್ಣಯ್ಯನವರು ಮಾತನಾಡುತ್ತಾ 'ಎಷ್ಟೋ ಜನ ನನಗೆ ನಾಟಕಗಳಲ್ಲಿ ಪಾತ್ರ ವಹಿಸಲು ಅವಕಾಶ ಮಾಡಿಕೊಡಿ ಎಂದು ಕೇಳ್ತಾರೆ, ಆದ್ರೆ 'ಶ'ಕಾರ 'ಸ'ಕಾರ ಗೊತ್ತಿರಲ್ಲ, 'ಅ'ಕಾರ 'ಹ'ಕಾರ ಗೊತ್ತಿರಲ್ಲ, ಏನ್ಮಾಡೋದು? ಅಂದ್ರು. ನಾಡಿಗೇರರು ತಕ್ಷಣ 'ಗೇಟ್ ಕಾವಲು ಕಾಯೋ ಪಾತ್ರ ಕೊಡಿ' ಅಂದರು.

12. ನಾಡಿಗೇರರು ಒಂದು ದಿನ ನಮ್ಮ ತಂದೆ ಹತ್ರ ಹೇಳ್ತಿದ್ರು, 'ಭಾವ ಈ ದೇವಸ್ಥಾನದಲ್ಲಿ ಅರ್ಚನೆ ಮಾಡ್ತಾರಲ್ಲ ಅರ್ಚಕರು, ಎಷ್ಟೇ ಸಂಪಾದಿಸ್ಲಿ ಅವರಿಗೆ ಕೈಹತ್ತಲ್ಲ. ಏಕೇಂದ್ರೆ ಅಷ್ಟೋತ್ತರ ಮಾಡುವಾಗ 'ರಾಮ ಏನ್ನಮಹ, ಕೃಷ್ಣ ಏನ್ನಮಹ, ಶಿವಾ ಏನ್ನಮಹ, ವಿಷ್ಣು ಏನ್ನಮಹ,' ಅಂತ ಜೋರಾಗಿ ವೇಗವಾಗಿ ಹೇಳ್ತಾರೆ. ದೇವ್ರಿಗೆ ಕೋಪ ಬಂದು ''ನಮ್ಮನ್ನೇ ಏನ್ನಮಹಾ ಅಂತೀರಾ ಅಂತ ನೀವು ಗಳ್ಸಿರೋ ಹಣ ನಿಮ್ಮ ಕೈಗೆ ಹತ್ತದೆ ಹೋಗ್ಲಿ'' ಅಂತ ಶಾಪ ಕೊಟ್ಟಿದ್ದಾರೆ.

13. ಶ್ರೀ ನಾಡಿಗೇರರ ಪ್ರಕಾರ ಒಲಿಂಪಿಕ್ಸ್ ಕ್ರೀಡಾಕೂಟದಲ್ಲಿ 'ರಿಲೇ' ರೇಸ್ ಕರ್ನಾಟಕದ ಕೊಡುಗೆಯಂತೆ. ಒಲಿಂಪಿಕ್ಸ್ ಕ್ರೀಡಾ ಸಮಿತಿಯವರು ಹಳೇ ಮೈಸೂರಿಗೆ ಬಂದಿದ್ದರಂತೆ. ಹಳೇ ಕಾಲದ ಬ್ರಾಹ್ಮಣರ ಮನೇಲಿ ಉಳಿದ್ರಂತೆ. ಬೆಳಗಿಂದ ಸಾಯಂಕಾಲದವರೆಗೂ, ಹೆಂಡ್ತಿ ಗಂಡನ್ನ 'ರೀ' ಅಂತ ಕರ್ಯೋದು, ಗಂಡ ಹೆಂಡ್ತೀನ 'ಲೇ' ಅಂತ ಕರ್ಯೋದು. ಆ ಸಂವಾದದ ರೀತೀನ ನೋಡಿ ಅರ್ಥ ಏನೂಂತ ಕೇಳಿ ತಿಳ್ಕೊಂಡು 'ರಿಲೇ' ರೇಸು ಒಲಂಪಿಕ್ಸ್ ಕೂಟಕ್ಕೆ ಸೇರ್ಸಿದ್ರಂತೆ.

14. ನಾಡಿಗೇರರಿಗೆ ಸಂಗೀತದಲ್ಲಿ ಸ್ವಲ್ಪ ಆಸಕ್ತಿ ಇತ್ತು. ಮೋಹನ ರಾಗದ ಬಗ್ಗೆ ಆಸೆ. ಒಬ್ಬ ಮಗನಿಗೆ ಮೋಹನ ಅಂತಲೇ ಹೆಸರು ಇಟ್ಟಿದ್ರು. ಒಂದು ಸಂಗೀತ ಕಛೇರಿಗೆ ಇವರನ್ನೇ ಮುಖ್ಯ ಅತಿಥಿಗಳಾಗಿ ಕರ್ಸಿದ್ದರು. ಶ್ರೀ ರಾಜ ಅಯ್ಯಂಗಾರ್ ಎಂಬುವವರು ಸಂಗೀತಕಾರರು. ಅವರು ಆಲಾಪನೆ, ಕೀರ್ತನೆಗಳನ್ನು ಹಾಡ್ತಿದ್ರಂತೆ. ಕೊನೆಯಲ್ಲಿ ಒಂದು ಆಲಾಪನೆ ಕೀರ್ತನೆ ಸ್ವರ ಪ್ರಸ್ತಾರವಾದ ಮೇಲೆ ನಾಡಿಗೇರರು ಎದ್ದು ''ದಯವಿಟ್ಟು ಮೋಹನ ರಾಗದಲ್ಲಿ ಒಂದು ಕೀರ್ತನೆ ಹಾಡಬೇಕೆಂದು'' ಕೇಳಿದರೆ ಸಭೆಯಲ್ಲಿದ್ದವರೂ, ಸಂಗೀತಗಾರರೂ ಎಲ್ಲರೂ ನಕ್ಕರು. ಏಕೆಂದರೆ ಅವರು ಹಾಡಿದ ಕೀರ್ತನೆ ಮೋಹನ ರಾಗದಲ್ಲೇ ಇತ್ತು.

15. ಒಂದು ದಿನ ನನ್ನ ತಂಗಿ ವಾರದ ಅಡಿಗೆಯನ್ನು ಪ್ರಜಾಮತದಿಂದ ಆಯ್ದು ಬರೆದುಕೊಳ್ಳುತ್ತಿದ್ದಳು. ಅಷ್ಟು ಹೊತ್ಗೆ ಇವರು ಅಂದರೆ, ನಾಡಿಗೇರರ ಆಗಮನವಾಯಿತು. ''ಏನದು ಗಿರಿಜಾ ಬರ್ಕೋತಾ ಇದ್ದೀಯ'' ಎಂದು ಕೇಳಿದರು. ನನ್ನ ತಂಗಿ ''ವಾರದ ಅಡಿಗೆ ವಿಶೇಷ'' ಎಂದಳು. ಆಗ ನಾಡಿಗೇರರು ''ನಾನೊಂದು ಅಡಿಗೆ ವಿಶೇಷ ಹೇಳ್ತೀನಿ ಬರ್ಕೋ'' ಎಂದರು. ''ಕಿರುನೆಲ್ಲಿಕಾಯಿ ಬರ್ಫಿ. ವಿವರ: ½ ಕೆ.ಜಿ. ಕಿರುನೆಲ್ಲಿ ಕಾಯಿಯನ್ನು ತುರಿದು ಇಟ್ಟುಕೋ, ಎರಡು ತೆಂಗಿನಕಾಯನ್ನು ತುರಿದು ಇಟ್ಟುಕೋ. 1½ ಪಾವು ಸಕ್ಕರೆಯನ್ನು, 2½ ಪಾವು ನೀರಿರುವ ಪಾತ್ರೆಗೆ ಹಾಕು. ಒಲೆಯ ಮೇಲಿಟ್ಟು ಕದರು. ಒಂದು ಹದ ಪಾಕ ಮಾಡಿಕೋ. ಪಾಕ ಬಂದ ಮೇಲೆ ತೆಂಗಿನಕಾಯಿ ತುರಿ, ಏಲಕ್ಕಿ ಪುಡಿ, ಚೂರು ಮಾಡಿದ ಗೋಡಂಬಿ, ದ್ರಾಕ್ಷಿ, ಚೂರು ಪಚ್ಚಕರ್ಪೂರ ಹಾಕು. ಚೆನ್ನಾಗಿ ತಳ ಕಟ್ಟದಂತೆ ಗೊಟಾಯಿಸು. ನಂತರ ತುಪ್ಪ ಸವರಿದ ಸ್ಟೈನ್‌ಲೆಸ್ ಅಥವಾ ಅಲ್ಯೂಮಿನಿಯಂ ತಟ್ಟೆಗೆ ಹದ ಬಂದ ಬರ್ಫಿಯನ್ನು ಸುರಿದು ತಟ್ಟೆಗೆ ಹರಡು. ನಂತರ ಬಿಲ್ಲೆಗಳನ್ನು ಮಾಡು'. ನನ್ನ ತಂಗಿ ಕೇಳಿದಳು 'ಅದ್ಸರಿ, ಕಿರುನೆಲ್ಲಿಕಾಯಿತುರಿ ಏನು ಮಾಡ್ಲಿ.' 'ಕಿಟಕಿಯಿಂದ ಆಚೆ ಎಸಿ' ಎಂದರು.

16. ಮಗ ಕಾಣೆಯಾಗಿದ್ದಾನೆ: ಸರಿಯಾಗಿ ಓದದೇ, ಕೆಟ್ಟವರ ಸಹವಾಸ ಮಾಡಿ, ಎಸ್.ಎಸ್.ಎಲ್.ಸಿ. ಐದು ಸಲಿ ಫೇಲಾದ ಮಗ ಮನೆ ಬಿಟ್ಟು ಎಲ್ಲಿಗೋ ಓಡಿಹೋದ. ತಂದೆ ಕನ್ನಡ ಪತ್ರಿಕೆಗಳಲ್ಲಿ ಕಾಣೆಯಾದವನ ಬಗ್ಗೆ ಒಂದು ಜಾಹಿರಾತು ಕೊಟ್ಟರು. ''ಮಗನೇ, ನೀನು ಮನೆ ಬಿಟ್ಟು ಹೋಗಿ ಒಂದು ವಾರವಾಯಿತು. ನೀನು ಮನೆ ಬಿಟ್ಟು ಹೋದಾಗಿನಿಂದ ಮನೆಯಲ್ಲಿ ಶಾಂತಿ ನೆಲೆಸಿದೆ. ನನ್ನ ಹೆಂಡತಿಯ ಆರೋಗ್ಯ ಸುಧಾರಿಸಿದೆ. ನೀನು ಎಲ್ಲಿದ್ದೀಯೋ, ಅಲ್ಲೇ ಇರು. ನಮಗೆ ತಿಳಿಸಬೇಡ, ಇವನನ್ನು ನೋಡಿದವರು ಅವನ ಮಾಹಿತಿಯನ್ನು ದಯವಿಟ್ಟು ನಮಗೆ ತಿಳಿಸಬೇಡಿ''.

# ಕೋಚ್ತಿವಿದ್ಯೆ

• ವಾಣೀ ಸುರೇಶ್

**'ಮ**ನವೆಂಬುವುದೊಂದು ಮರ್ಕಟ' ಅದೂ ಇದೂಂತೆಲ್ಲ ತಿಳಿದೋರು ಅಷ್ಟಲ್ಲದೇ ಹೇಳ್ತಾರ್ಯೇ! ಆದ್ರೆ ನೋಡಿ, ನ್ಯೂ ಏಜ್ ಪುಸ್ತಕಗಳ ಕರ್ತೃ ಏಕ್ ಹಾರ್ಟ್ ಟೋಲ್ಲೆ ಮಾತ್ರ, ತನ್ನ ಬೆಸ್ಟ್ ಸೆಲ್ಲರ್ – 'ದ ಪವರ್ ಆಫ್ ನೌ'ನಲ್ಲಿ ಅದಕ್ಕೆ ಎಂಥಾ ಸುಲಭೋಪಾಯ ಹೇಳ್ತಾನೇಂತ? ಅವನ ಪ್ರಕಾರ – ನಮ್ಮ ಆತ್ಮ ವಿಕಸನಕ್ಕೆ ಯಾವ ವಿಧದ ಧ್ಯಾನಪಾನಾದಿಗಳೂ ಬೇಕಿಲ್ಲ, ನಾವು ಎಚ್ಚರಾಗಿರುವ ಪ್ರತೀಕ್ಷಣವೂ ಸುಮ್ನೆ ನಮ್ಮ ಮನಸ್ಸನ್ನ ವರ್ತಮಾನದ ನಾವಿರುವ ಕ್ಷಣದಲ್ಲಿ ಜಾಗೃತವಾಗಿರುವಂತೆ ನೋಡಿಕೊಂಡರೆ ಸಾಕು. ಅದೇ ಹರಿದಾಡುವ ಮನಸ್ಸನ್ನು ಬಿಗಿ ಹಿಡಿದು ನಿಲ್ಲಿಸತ್ತೇಂತ! ಆದರೆ ಅದೇನು ಓದಿದಷ್ಟು ಸಲೀಸೇ ಸದ್ಯ?

ಅಲ್ಲ ಮಾತಿಗ್ಹೇಳ್ತೀನಿ, ಈಗ್ನೋಡೀ.... ಬೆಳಗಾಗೆದ್ದು ಕಾಫೀ ಮಗ್ಗು ಹಿಡ್ಕೊಂಡು, ಚಿತ್ಸಿದ್ಧಿಯಾಗಿ, ಇಲ್ಲೇ ಸಿಟೌಟಲ್ಲಿ (ಇಲ್ಲಿ ಡೆಕ್ ಅಂತಾರೆ ಅದಕ್ಕೆ) ನೇತುಹಾಕಿರೋ ಧಾನ್ಯದ ಕೊಳವೇಗೆ ಮುತ್ತಿಕೊಳ್ಳುವ ಚಿಲಿಪಿಲಿ ಹಕ್ಕಿಗಳನ್ನ ಹಾಗೇ ಎಂಜಾಯ್ ಮಾಡ್ತಾ..., ನೋಡ್ಕೊಂಡು ಕೂತ್ಕೊಂಡೆ ಅಂತಿಟ್ಟುಕೊಳ್ಳಿ. ಆದರೆ ಈ ಮನಸ್ಸನ್ನೋ ಕಪಿ ಸುಮ್ಮನಿರ್ಬೇಕಲ್ಲ!..

ಅದು, ಬೆಂಗಳೂರಲ್ಲಿ ಹೀಗೇ ಇಷ್ಹೊತ್ತಲ್ಲೇ, ಪ್ರಿಂಟ್ ಇಂಕಿನ ಹಸಿಹಸೀ ವಾಸನೆಯಿರ್ತಿದ್ದ, ಮಡಿಕೆ ಮುರೀದ ಪ್ರಜಾವಾಣಿ, ಗರಿಗರೀ ಡೆಕ್ಕನ್ ಹೆರಾಲ್ಡು, ಇಂಡಿಯಾ ಟು

ಡೇ, ಸುಧಾ ಇತ್ಯಾದಿಗಳೆಲ್ಲಾ ನಮ್ಮನೆಯ ಬೀದೀವೆರಾಂಡಾದೊಳಗೆ ಬಂದು ಬಿದ್ದಿರ್ತಿದ್ದಿದ್ದನ್ನ ಮಿಸ್ ಮಾಡೂಂತ ಒಂದೇ ಸಮನೆ ವರಾತ ಶುರುಮಾಡುತ್ತೆ.. ಅದರಿಂದ ಬಲವಂತವಾಗಿ ತಪ್ಪಿಸಿಕೊಳ್ಳುವಷ್ಟರಲ್ಲಿ, ಹೌದೋ ಅಲ್ವೋ ಅಂತನ್ನೋ ಹಾಗೆ ಎಲ್ಲೋ ದೂರದ ಸೊಪ್ಪಿನೋನು ಕೂಗೋ ಹಿನ್ನೆಲೇಲಿ ಸಣ್ಣದಾಗಿ ಎಂ.ಎಸ್. ಹಾಡಿರೋ ವೆಂಕಟೇಶ್ವರ ಸುಪ್ರಭಾತ ಕೇಳಿಸಿದ ಹಾಗಾಗತ್ತೆ.

ಆಗಲೇ ಫೋನೂ ಸಹಾ ಟ್ರಿಣಗುಟ್ಟಕ್ಕೆ ಶುರುಮಾಡಬೇಕೇ?... ಅಯ್ಯೋರಾಮ, ಇಷ್ಟು ಬೇಗ ಯಾರಿರಬಹುದು! ''ಏ, ಸಂಜೆ ಎಲ್ಲಿಗಾದ್ರೂ ಹೋಗ್ತಿದ್ದೀಯಾ? ಇಲ್ದೇದ್ರೆ ಇಸ್ಕಾನಲ್ಲಿ ಕಲಾಕ್ಷೇತ್ರ ಟ್ರೂಪ್ದು ಡ್ಯಾನ್ಸ್ ಡ್ರಾಮ ಇದೆ. ಸಂಜೆ ನಾಲ್ಕಕ್ಕೇ ಹೊರಡ್ತೀನಿ ಇಲ್ಲಿಂದ. ಇಂದಿರಾ ನಗರದಿಂದ ಎಂ.ಜೀ.ರೋಡಿನ ಆಫೀಸ್ ಟ್ರಾಫಿಕ್ಕು ತಟಾಯಿಸಿಕೊಂಡು ಬರ್ಬೇಕಲ್ಲ, ಕಾಯಿಸಬೇಡಾ, ರೆಡಿಯಾಗಿರು. ಹೋಗೋಣಾ, ಏನಂತೀ?''– ನೋಡಿದ್ರೆ ರತ್ನ!.. ಅನ್ನೋದೇನು ಸದ್ಯ, ಮದ್ರಾಸಿನ ಕಲಾಕ್ಷೇತ್ರ ದೋರ ಡ್ಯಾನ್ಸ್ ಪ್ರೋಗ್ರಾಮ್ ಇಲ್ಲೇ ಬೆಂಗಳೂರಲ್ಲಿ ಮನೇ ಪಕ್ಕದಲ್ಲೇ ಸಿಗತ್ತೆ ಅಂದ್ರೆ ಹಾಗೆಲ್ಲಾ ಬಿಟ್ಟುಬಿಡಕ್ಕಾಗತ್ಯೇ?




ಹಾಗಾದ್ರೆ ಸಂಜೆ ಹೋಗ್ಬೇಕೂಂತ ಅನ್ಕೊಂಡಿದ್ದ ಹರಿಣಿ ಮಗಳ ಮಹೆಂದೀಗೆ ಬದಲಾಗಿ ಇದು. ಅಂಜೂನ್ನ ಮಾತ್ರ ಹೋಗೇಂದ್ರಾಯ್ತು, ಹೇಗಿದ್ರೂ ಚಿಕ್ಕೋರ್ಗೂ ಅದೇ ಬೇಕಾಗಿರತ್ತಲ್ಲ, ಅಮ್ಮಂದಿರ ವಿಜಿಲೆನ್ಸ್ ಯಾರಿಗ್ತಾನೇ ಇಷ್ಟವಾಗುತ್ತೆ!... ಆದರೆ ಮಾತ್ರ ಏಯ್ತ್ ಮೈನಿನ ಎಕ್ಸ್‌ಟೆನ್ಷನ್ನಿಂದ ಡ್ರೈ ಕ್ಲೀನಿಂಗ್ಗೆ ಕೊಟ್ಟಿದ್ದ ಸೀರೆಗಳನ್ನ ತಂದಿಟ್ಟುಬಿಟ್ಟು ಹೋಗೂನ್ನಬೇಕು. ಇಲ್ದೇದ್ರೆ ನಾಡಿದ್ದು ಮದ್ವೆ ಮನೆಗೆ ಉಡಕ್ಕೆ ಮತ್ತೆ ತಡಕಾಡಬೇಕಾಗತ್ತೆ ಅಷ್ಟೇ. ಅಯ್ಯೋ ಅದೆಷ್ಟು ದುಬಾರಿ ಆಗಿ ಹೋಗಿದೆ ಈ ಡ್ರೈ ಕ್ಲೀನಿಂಗೂಂತ, ಮತ್ತೆ ಸುಮ್ಮನೆ ಹಳೇಕಾಲದಲ್ಲಿ ಮಾಡ್ತಿದ್ದ ಹಾಗೇ, ಸೋಮಾರಿತನ ಬಿಟ್ಟು ಅಂಟುವಾಳದ ಕಾಯಿ ಹಾಕಿ ಕೈಯಲ್ಲಿ ಒಗೀಬೇಕು ಅಷ್ಟೇ. ಇಲ್ದೇದ್ರೆ ಈರಮ್ಮನ್ನೇ ಗೋಗರೀಕೋ ಬೇಕಾಗತ್ತಷ್ಟೇ – ಸಿಲ್ಕ್ ಸೀರೆಗಳನ್ನ ಜೆಂಟೀಲ್ ಹಾಕಿ ಬೇರೆಯಾಗಿ ಒಕ್ಕೊಡೂಂತ, ಆದ್ರೆ ಆಮೇಲಂತೂ ಇಸ್ತ್ರಿ ಮಾಡಿಸಲೇಬೇಕಾಗತ್ತಲ್ಲ? ಆದ್ರೆ ಬಣ್ಣ–ಗಿಣ್ಣ ಹೋದ್ರೆ? ಅಯ್ಯೋ, ಅದೊಂದು ಪಂಚಾಯಿತಿ.. ಸರಿ, ಯಾವುದಕ್ಕೂ ನಾಳೆ ಸಂಪಿಗೆ ರೋಡಿಗೆ ಹೋದಾಗ ಹಾಗೇ ಗ್ರಂಥಿಗೆ ಅಂಗಡೀಗೂ ಹೋಗಿ ಒಂದಿಷ್ಟು ಅಂಟುವಾಳದ ಕಾಯಿ ತಂದಿಟ್ಕೋಬೇಕು. ಹೌದು, ಸಂಪಿಗೆ ರೋಡೂಂದ ತಕ್ಷಣ ಜ್ಞಾಪಕಕ್ಕೆ ಬಂತು, ಈ ಸಲದ ಹಬ್ಬಕ್ಕೆ ಸುಮ್ಮನೆ ಮಯ್ಯಾಸ್ನಿಂದ್ಲೇ ಯಾಕೆ ಒಂದಿಷ್ಟು ಬೇಳೆ ಒಬ್ಬಟ್ಟು ಹಿಡ್ಕೊಂಡು ಬಂದು ಫ್ರಿಜ್ಜಲ್ಲಿಟ್ಟು ಬಿಡಬಾರದೂಂತ?! ಬೇಳೆ ಒಬ್ಬಟ್ಟಾದ್ರೆ ಇವರದ್ದಷ್ಟೇ ಅಲ್ಲ, ಅಂಜು – ಸಂಜೂದೂ ತರಲೆ ಇರಲ್ಲ,

... ಓ ಇದೇ ನಿವತ್ತು. ಬೆಳಗಾಗಕ್ಕಿಲ್ಲ ಮತ್ತೆ ಮತ್ತೆ ಫೋನ್ ಕಾಲು! 'ಉದಯಾ ಟೀವೀಲಿ ಹಬ್ಬಕ್ಕೋಸ್ಕರ ಹಲಸಿನ ಬೀಜದ ಒಬ್ಬಟ್ಟು ಮಾಡೋದು ತೋರಿಸ್ತಿದ್ದಾರೆ ನೋಡು' – ಅಂತ ವಿಜಯಾ. ಅಯ್ಯೋ ಯಾರ್ ಕೈಲಾಗತ್ತೆ ಹೂರಣ ಮಾಡ್ಕೊಂಡು, ಕಣಕ ಕಲಸಿಕೊಂಡು ಫಜೀತಿಪಡಕ್ಕೆ ಸದ್ಯ... ಆಗ಼್್ಲೇ ಈ ಸಲಕ್ಕೆ ಮಯ್ಯಾಸ್ನೂಂತ ಡಿಸೈಡ್ ಮಾಡಾಯ್ತಲ್ಲ.

ಅಯ್ಯೋ ರಾಮ, ಇವತ್ಯಾಕೋ ಬರೀ ಅಲ್ಲಿಯ ನಮ್ಮನೆ ಜ್ಞ್ಯಾಪಕವೇ ಆಯ್ತಲ್ಲ ಛೇ.

ಇಲ್ಲಿ ನೋಡಿದ್ರೆ ಎಷ್ಟೊಂದು ಹಕ್ಕಿಗಳು! ಈಗ ತಾನೆ ಹಾರಿಕೊಂಡು ಬಂತಲ್ಲ ಆ ನೀಲಿ ಹಕ್ಕಿ ಅಂತೂ ಎಷ್ಟು ಮುದ್ದಾಗಿದೆ! ಬ್ಲೂ ಜೇಂತಾನೋ ಏನೋ ಅದ್ರ ಹೆಸರು ಹೇಳಿದ ಹಾಗಿತ್ತು ರವಿ... ಆದ್ರೆ ಅದರ ಧ್ವನೀ ಮಾತ್ರ ನೋಡಿದ್ರಾ, ದೇವರಿಗೇ ಪ್ರೀತಿ! ಅದೂ ಅಲ್ಲದೇ ಎಲ್ಲಾ ಹಕ್ಕೀಗಳನ್ನೂ ಅದೆಷ್ಟು ಕರ್ಕಶವಾಗಿ ಜಬರದಸ್ತು ಮಾಡಿ ಓಡಿಸಿ, ಎಲ್ಲಾ ಕಾಳೂ ತನ್ನದೇಂತ ನಮ್ಮೂರ ರಾಜಕಾರಣಿಗಳಾಡೋ ಹಾಗಾಡತ್ತಲ್ಲ! ಓ ಅಂದ ಹಾಗೇ, ಏನಾಯ್ತೋ ನಮ್ಮೂರ ಸಿ.ಎಂ. ಕುರ್ಚೀಗಾಗಿ ಗಲಾಟೆ, ಅವಾಂತರಗಳು? ಇಲ್ಲೂ ಪ್ರೆಸಿಡೆಂಟ್ ಸೀಟಿಗೆ ಒಬಾಮಂಗೂ ರಾಮ್ನೀಗೂ ಜಟಾಪಟೀ ಇರಲಿಲ್ವೇ, ಆದರೂ ಅದೆಂಥಾ ನಯ ಏನು ಕಥೆ! ಬರೀ ಮಾತಿನ ಚಕಮಕಿ, ತಮ್ಮ ಸಾಧನೆಗಳ ಸ್ಟ್ಯಾಟಿಸ್ಟಿಕ್ಸ್‌ಗಳು, ಸಮೀಕ್ಷೆಗಳು... ಏನೇ ಅಂದ್ರೂ ನಮ್ಮೂರಿನೋರಿಗೆ ಹೋಲಿಸಿದರೆ ಒಂದು ತರಾ ಸಪ್ಪಪ್ಪೇನೇ ಅಲ್ವೇ?

ಅಲ್ಲಾ, ಅವಾಂತರ ಅನ್ನುತ್ಲೂ ಜ್ಞಾಪಕಕ್ಕೆ ಬಂತು... ಇಲ್ಲೀ ಸ್ಯಾಂಡಿ ಚಂಡಮಾರುತ ಮೊನ್ನೆ ಎಲ್ಲಾ ನ್ಯೂಯಾರ್ಕಲ್ಲಿ, ನ್ಯೂಜೆರ್ಸೀಲಿ ಮಾಡಿರೋ ಅವಾಂತರಗಳು ಸಾಕೇ? ಅಯ್ಯೋ ಸ್ವಾಮೀ ದೇವಾ, ಇನ್ನೂ ಏನೇನು ರಂಪ ರಾದ್ಧಾಂತಗಳನ್ನು ತೋರಿಸ್ಬೇಕೂನ್ತಿದ್ದೀಯಪ್ಪಾ! ಅಲ್ಲಾ, ಆಗ ಶುರುವಾಗಿರೋ ಚಳಿ ಗಾಳಿ, ಸ್ವಲ್ಪ ಹೆಚ್ಚು ಕಮ್ಮಿ ಹಾಗೇ ಈ ಡೆಟ್ರಾಯ್ಟಲ್ಲಿ ಇನ್ನೂ ಮುಂದುವರೀತಲೇ ಇದ್ಯಲ್ಲ! ವಿಂಟರ್ ಶುರುವಾಗಕ್ಕೆ ಒಂದು ನೆವ ಬೇಕಿತ್ತೂಂತ ಕಾಣತ್ತೆ! ಅಂದ ಹಾಗೆ ಎಂಥಾ ವೆದರ್ ಇದ್ರೂ ಸರಿ, ಬೇರೆ ಕೆಲಸ ಮಾಡಕ್ಕೆ ಮುಂಚೆ ಇಂಡಿಯನ್ ಸ್ಟೋರ್ಸಿನ ಗ್ರೋಸರಿ ಈ ವೀಕೆಂಡು ಮುಗಿಸಲೇಬೇಕು. ಇಲ್ಲದೇದ್ರೆ ಸೋಮವಾರದಿಂದ ಪಲ್ಯಕ್ಕೂ ತರಕಾರಿ ಇರಲ್ಲ ಅಷ್ಟೇ. ಹಾಗೇ ಅಲ್ಲೇ ಪಕ್ಕದಲ್ಲಿ ಇರೋ ಕೋಲ್ಸ್ ಸ್ಟೋರ್‌ನಲ್ಲಿ ಅವತ್ತು ನೋಡಿದ್ದ ಆ ಸ್ವೆಟರ್ರು ಸೇಲ್ಗೆ ಬಂದಿದ್ಯಾಂತ ಹೋಗೊಂದ್ಸಲ ನೋಡಿದ್ರೆ ಹೇಗೆ? ಅಯ್ಯೋ ಈ ದೇಶದಲ್ಲಿ ಸೇಲ್ ಅನ್ನೋದೇ ಒಂದು ವಿಚಿತ್ರಾಪ್ಪ, ನಂಗಂತೂ ಅರ್ಥವಾಗಲ್ಲ. ಸೀಸನ್ ಬದಲಾದರೆ ಗ್ಯಾರಂಟಿಯಾಗಿ ಸೇಲು. ಲಾಂಗ್ ವೀಕೆಂಡ್ ಅಂದ್ರೆ ಸೇಲು! ಇನ್ನು ಹ್ಯಾಲೋವೀನು, ಥ್ಯಾಂಕ್ಸ್ ಗಿವಿಂಗು, ಕ್ರಿಸ್ಮಸ್ಸು, ಈಸ್ಟರ್ – ಅಂತ ಏನು ಹಬ್ಬ ಬಂದರೂ, ನಮ್ಮಲ್ಲೀ ಹಾಗೆ ಸೇಲು ಸರಿಯೇ ಸರಿ. ಇಲ್ಲ ಕೊನೇ ಪಕ್ಷ, ತುಂಬಾ ದಿನ ಅದೇ ಬಟ್ಟೆ ಅಥವಾ ವಸ್ತು ಹ್ಯಾಂಗರ್ ಮೇಲೆ ಇಲ್ಲ ಬಡು ಮೇಲೆ ಮಾರಾಟವಾಗದೇ ಉಳಿದರೂ, ಅದೊಂದಕ್ಕೆ ಮಾತ್ರ ಸೇಲು!! ಆದ್ರಿಂದ್ಲೇ ತಾಳ್ಮೆಯಿಂದ ಕಾದರೆ ಒಂದಲ್ಲ ಒಂದು ದಿನ ನಾವು ಆಸೆ ಪಡೋ ಎಂಥಾ ದುಬಾರೀ ವಸ್ತೂನೂ – ಊರಿಗೆ ಬಂದೋಳು ನೀರಿಗೆ ಬರುಲ್ವೇಂತ್ತೇಂತನ್ನೋ ಹಾಗೆ

– ಸೇಲಿಗೆ ಬರೋ ಚಾನ್ಸ್ ಇದ್ದೇ ಇರತ್ತಲ್ಲ! ಇನ್ನೂ ಆ ಥ್ಯಾಂಕ್ಸ್‌ಗಿವಿಂಗ್ ಡೇ ಸ್ಪೆಷಲ್ ಸೇಲ್ ಬಗ್ಗೆ ಅಂತೂ ಹೇಳೋ ಹಾಗೆ ಇಲ್ಲವಲ್ಲ ಸದ್ಯ. ಅಬ್ಬಾ ಅದೇನು ರಾತ್ರಿಂದ ರಾತ್ರಿ ಈ ಚಳೀಲಿ ನಡುಗಿಕೊಂಡು ಕ್ಯೂನಲ್ಲಿ ನಿಂತ್ಕೊಂಡು ಕಾಯ್ತಾರಲ್ಲ ಅಂಗಡಿ ಬಾಗಿಲು ತೆಗೆಯುಕ್ಕೆ! ಇದೂ ಒಂದು ಥರದ ಹುಚ್ಚಲ್ಲದೇ ಇನ್ನೇನು?...

ಅಯ್ಯೋ ದೇವಾ, ಎಲ್ಲಿಂದೆಲ್ಲಿಗೆ ಹಾರೋ ಯೋಚನೆಗಳು! ಸಾಕಿನ್ನು ಬರ್ಡ್‌ವಾಚ್ ಮಾಡ್ತಾ ವರ್ತಮಾನದಲ್ಲಿದ್ದಿದ್ದು... ನಿನ್ನೆ ರಾತ್ರಿಯ ಚಪಾತಿಗೆ ಬರೀ ತುಪ್ಪ – ಚಟ್ನಿಪುಡೀನೇ ಹಾಕಿ ಕಳಿಸಿಬಿಡ್ತೀನಿ ಮಕ್ಕಳ ಲಂಚಿಗಿವತ್ತು. ಅಯ್ಯೋ ಚಟ್ನೀಪುಡೀಂತಂದ ತಕ್ಷಣ ಜ್ಞಾಪಕಕ್ಕೆ ಬರ್ತಿದೆ – ಇವತ್ತು ರಾತ್ರಿ ಆದ್ರೂ ಶೀಲೂಗೆ ಕಾಲ್ ಮಾಡಿ ಅವಳು ಕೊಟ್ಟ ಬೆಳ್ಳುಳ್ಳಿ ಚಟ್ನೀಪುಡಿ ರೆಸಿಪಿ ಚೆನ್ನಾಗಿ ಬಂತೂಂತ ಮುಂಚೆ ಹೇಳ್ಬೇಕು. ಅಲ್ಲಾ, ಹಾಗಂದ್ಹಾಗೆ,.....

ನೋಡಿದ್ರಾ, ಕೋತಿವಿದ್ಯೇಂತ ಯಾಕಂದೇಂತ? ಹೀಗಾದರೆ, ಎಕಾರ್ಟ್ ಟೋಲ್ಲೆ ಹೇಳಿದ್ದನ್ನ ಅನುಸರಿಸಿ ಸುಲಭದಲ್ಲಿ ಸಾಧಿಸಿಕೊಂಡುಬಿಡಬೇಕೂಂತಿದ್ದ ನನ್ನ ಆತ್ಮೋದ್ಧಾರ ಮತ್ತು ಭವಿಷ್ಯದ ಗತಿ ಏನೂಂತ ನಂಗಂತೂ ಈಗ ಒಂದೇ ಯೋಚನೆಯಾಗಿಬಿಟ್ಟಿದೆ!...

## ಜೈಲಿನ ವಾಸ

ಇತ್ತೀಚೆಗೆ ಪೇಪರಲ್ಲಿ ಬರೀ ಜೈಲಿನ ವಿಚಾರನೇ ಬರ್ತಿರುತ್ತೆ. ನೀವು ಜೈಲು ಹೇಗಿರುತ್ತೆ ಅಂತ ನೋಡಿದೀರ ಅಂತ ತಿಮ್ಮಪ್ಪ ನಾಗಪ್ಪನ್ನ ಕೇಳಿದ್ದಕ್ಕೆ ಅವರು ಓ ನೋಡಿದೀನಿ. ನೋಡಿರೋದೇನು ಅಲ್ಲೇ ಇದ್ದೆ ನಾನು ಅಂದ್ರು. ತಿಮ್ಮಪ್ಪ ಹೌದಾ ಎಲ್ಲಿ ಅಂತ ಕೇಳಿದ್ದಕ್ಕೆ ನಾಗಪ್ಪ ನಾನು ಮೊದಲು ಚಾಮರಾಜನಗರ ಜೈಲಲ್ಲಿದ್ದೆ ಅಲ್ಲಿಂದ ಹಾಸನದ ಜೈಲಿಗೆ ಹಾಕಿದರು ಅಲ್ಲಿಂದ ಒಂದು ವರ್ಷ ಭದ್ರಾವತಿ ಜೈಲಲ್ಲಿದ್ದೆ ಕೊನೆಗೆ ಪರಪ್ಪನ ಅಗ್ರಹಾರ ಜೈಲಲ್ಲೂ ಇದ್ದೆ ಅಂದ್ರು. ಅಷ್ಟೊಂದು ಕಡೆ ಜೈಲಲ್ಲಿರೋಂಥ ತಪ್ಪು ಏನು ಮಾಡಿದ್ರಿ ಮತ್ತು ಈಗ ಹೇಗೆ ಹೊರಗೆ ಬಂದ್ರಿ, ಅಂತ ತಿಮ್ಮಪ್ಪ ಕೇಳಿದ್ದಕ್ಕೆ ನಾನಿದ್ದದ್ದು ಜೈಲು ಸೂಪರಿಂಟೆಂಡೆಂಟ್ ಆಗಿ ಮೊನ್ನೆ 58 ವರ್ಷ ಆಯ್ತಲ್ಲ ರಿಟೈರಾಯ್ತು ಅದಕ್ಕೆ ಹೊರಕ್ಕೆ ಬಂದೆ ಅಂದಾಗ ತಿಮ್ಮಪ್ಪ ಬೆರಗಾದರು.

# ರಾಂಗ್ ನಂಬರ್... ರೈಟ್ ನಂಬರ್...

● ಎಚ್. ಗೋಪಾಲಕೃಷ್ಣ

**ಮು**ಂಜಾವಿನ ರಾತ್ರಿ ಸರಿಹೊತ್ತಿನಲ್ಲಿ ಸುಖವಾದ ನಿದ್ದೆ ಅನುಭವಿಸುತ್ತಾ ಇರುತ್ತೀರಿ. ಇಡೀ ದಿವಸದ ದಣಿವಿನಿಂದ ನಿಮಗೆ ನಿದ್ದೆ ಹತ್ತುವುದೂ ನಿಧಾನವಾಗಿ. ಹಾಸಿಗೆ ಮೇಲೆ ಹೊರಳಾಡಿ ಹೊರಳಾಡಿ, ಅದೆಷ್ಟೋ ಲಕ್ಷ ಕುರಿಗಳನ್ನು ಎಣಿಸಿ ಹಾಗೂ ಹೀಗೂ ನಿದ್ರಾ ದೇವಿಯನ್ನು ಒಲಿಸಿಕೊಳ್ಳುವಲ್ಲಿ ಯಶಸ್ವಿಯಾಗಿರುತ್ತೀರಿ... ದೇವಿಯನ್ನು ಒಲಿಸಿಕೊಂಡು ಒರಗಿರುತ್ತೀರಿ.

ಆಗ ನಿಮ್ಮ ದೂರವಾಣಿ ಕರ್ಕಶವಾಗಿ ಹೊಡೆದುಕೊಂಡರೆ ನಿಮಗೆ ಹೇಗಾಗಬೇಕು?

ನಿದ್ದೆಯಿಂದ ದಡಬಡಿಸಿ ಎದ್ದು ದೂರದ ಟೇಬಲ್ಲಿನ ಮೇಲಿದ್ದ ಫೋನಿನ ಬಳಿ ನಡೆದು ಅದು ಯಾರಿಗೆ ಅದೇನಾಗಿದೆಯೋ ಎನ್ನುವ ಆತಂಕದಲ್ಲಿ ರಿಸೀವರನ್ನು ಎತ್ತಿ ಕಿವಿಗೆ ಹಿಡಿದರೆ ಆಕಡೆಯಿಂದ ಗುರುತು ಪರಿಚಯವೇ ಇಲ್ಲದ ದನಿಯೊಂದು ಅಸ್ಪಷ್ಟವಾಗಿ ನಿಮಗೆ ಗೊತ್ತಿಲ್ಲದ ನೀವು ಈವರೆಗೆ ಕೇಳೇ ಇರದ ವ್ಯಕ್ತಿಯೊಬ್ಬರು ನಿಮ್ಮ ಮನೇಲಿದ್ದಾರೆಯೇ ಅಂತ ಕೇಳಿದರೆ... ಹೇಗೆ?

ಕಣ್ಣುಜ್ಜುತ್ತಾ ಅವರು ಯಾರು ಅಂತ ಕೇಳುತ್ತೀರಿ, ಸಿಡುಕಿ ಫೋನನ್ನು ಕುಕ್ಕಿ ನಿದ್ದೆ ಕೆಡಿಸಿದ ಮಹಾನುಭಾವನಿಗೆ ಹಿಡಿ ಶಾಪ ಹಾಕುತ್ತಾ ದಿಂಬಿಗೆ ತಲೆ ಕೊಡುತ್ತೀರಿ.... ಸರಿ ತಾನೇ? ಮತ್ತೆ ಅದೇ ಫೋನು ರಿಂಗನಿಸಿದರೆ ನಿಮ್ಮ ಕೋಪ ತಾರಕಕ್ಕೆ ಏರುತ್ತೆ... ಇದೂ ಸರೀ ತಾನೇ?

ನನ್ನ ಗೆಳೆಯರೊಬ್ಬರಿಗೆ ಮಧ್ಯ ರಾತ್ರಿ ಹೀಗೇ ಫೋನು ಬಂತು. ಅದು ರಾಂಗ್ ನಂಬರು. ಮೊದಲನೇ ಸಲ ರಾಂಗ್ ನಂಬರು ಅಂತ ಹೇಳಿದರು. ಮತ್ತೆ ಫೋನು ಐದೇ ನಿಮಿಷಕ್ಕೆ ಹೊಡೆದುಕೊಂಡಿತು. ಗೆಳೆಯರು ಫೋನು ತೆಗೆದುಕೊಂಡರು – ಹಿಂದಿನ ಧ್ವನಿಯೇ ಮತ್ತೆ ಅದೇ ಹಿಂದೆ ಕೇಳಿದ್ದ ವ್ಯಕ್ತಿಯ ಹೆಸರನ್ನೇ ಕೇಳಿ ಅವರ ಮನೆಯೇ ಇದು? ಅಂತ ಆ ಕಡೆಯಿಂದ ಪ್ರಶ್ನೆ ಬಂದಿತು.

ಇಲ್ಲ ಸಾರ್ ಇದು ಆ ನಂಬರಲ್ಲ...

ಆ ತುದಿಯಿಂದ ಸಾರಿ ಸಾರ್, ಕ್ಷಮಿಸಿ ಅಂತ ಕೇಳಿಸಿತು, ಫೋನೂ ಕಟ್ಟಾಯಿತು.

ಕೊಂಚ ಹೊತ್ತಿಗೆ ಮತ್ತೆ ಫೋನು ಟ್ರಿಣಟ್ರಿಣ್ಣಿಸ ಬೇಕೇ?


ಮತ್ತೆ ಅದೇ ಧ್ವನಿ, ಹಿಂದೆ ಕೇಳಿದ್ದ ವ್ಯಕ್ತಿಯ ಹೆಸರು...

ಗೆಳೆಯರಿಗೆ ಕೋಪ ಬಂತು.

ಇವರು ಸಿಡುಕಿನಿಂದ ಅಲ್ಲ.. ಹೀಗೆ ಯಾಕೆ ಸರಿ ಹೊತ್ತಿನಲ್ಲಿ ನಿದ್ದೆ ಕೆಡಿಸತೀರಿ ಅಂತ ಕೇಳಬೇಕು, ಸಿಡುಕಬೇಕು, ಬೈಯಬೇಕು, ನೀರಿಳಿಸಬೇಕು.... ಅಂದುಕೊಂಡವರು ಆ ಕಡೆಯ ಧ್ವನಿಯಲ್ಲಿದ್ದ ಆತಂಕ ಕೇಳಿ ಸೌಮ್ಯವಾಗಿ ಇದು ನೀವು ಮೊದಲು ಮಾಡಿದ ನಂಬರೇ ಸಾರ್, ಸಮಸ್ಯೆ ಏನು ಹೇಳಿ ಅಂದರು.

ನೋಡಿ ಯಾರದ್ದೋ ಸಾವಿನ ಸುದ್ದಿ ತಿಳಿಸಬೇಕು. ನನ್ನ ಹತ್ತಿರ ಅವರು ಕೊಟ್ಟಿರೋ ನಂಬರು ಮಾಸಲಾಗಿದೆ. ಅಲ್ಲದೇ ಈ ಟೆನ್ಷನ್‌ನಲ್ಲಿ ನಂಬರೂ ಸರಿಯಾಗಿ ನೆನಪಿಗೆ ಬರ್ತಿಲ್ಲ, ಅದರಿಂದ ನಿಮಗೆ ತೊಂದರೆ ಕೊಡಬೇಕಾಯಿತು... ಸರಿ ಹೊತ್ತಿನಲ್ಲಿ ಕಣ್ಣು ಸರಿಯಾಗಿ ಕಾಣಿಸದು, ಅಲ್ಲದೆ ನನ್ನ ಮನೆ ಸಹ ತುಂಬಾ ದೂರ, ಮನೇಲಿ ವೆಹಿಕಲ್ಲೂ ಇಲ್ಲ, ವಯಸ್ಸಾಗಿದೆ ಅಂತ ಪೇಚಾಡಿಕೊಂಡರು.

ಗೆಳೆಯ ಪೂರ್ಣ ಎಚ್ಚರ ಮಾಡಿಕೊಂಡರು – ಅವರ ಮನೆ ವಿಳಾಸ ಇದೆಯೇ ನಿಮ್ಮಲ್ಲಿ? ವಿಳಾಸ ಇದ್ದರೆ ಕೊಡಿ – ಸತ್ತವರು ಯಾರು ಅವರ ವಿವರ ಸಹ ಕೊಡಿ, ಅವರು ಇವರಿಗೇನಾಗಬೇಕು ಅಂತ ಗೊತ್ತಾ? ಅದನ್ನೂ ಹೇಳಿ..... ನಾನೇ ತಿಳಿಸ್ತೀನಿ ಅಂತ ಅವರ ವಿಳಾಸ ಬರೆದುಕೊಂಡರು. ಸರಿ ಹೊತ್ತಿನಲ್ಲಿ ಆ ವಿಳಾಸ ಹುಡುಕಿಕೊಂಡು ಹೊರಟರು. ಸುಮಾರು ಹೊತ್ತು ಹುಡುಕಿದ ನಂತರ ಮನೆ ಸಿಕ್ಕಿತು. ಮನೆಯವರನ್ನ ಎಬ್ಬಿಸಿ ತಮಗೆ



ಗೊತ್ತಿದ್ದ ವಿಷಯಗಳನ್ನು ಅವರಿಗೆ ತಿಳಿಸಿದರು. ಸತ್ತವರು ಯಾರು ಎಂದೇ ಗೊತ್ತಿಲ್ಲದ ಅವರ ಮುಖ ಪರಿಚಯವೂ ಇಲ್ಲ ವ್ಯಕ್ತಿಯೊಬ್ಬರು ಸರಿ ರಾತ್ರಿ ಹೊತ್ತಿನಲ್ಲಿ ಬಂದು ಇಂತಹ ಸಂಗತಿ ತಿಳಿಸಿದರೆ ಯಾರಿಗೆ ಆಶ್ಚರ್ಯವಾಗಲ್ಲ?

ಮನೆಯವರು ಆಶ್ಚರ್ಯದಿಂದ ನಿಮಗೆ ಹೇಗೆ ಈ ಸುದ್ದಿ ತಲುಪಿತು ಅಂತ ಕೇಳಿದರು.

ಗೆಳೆಯರು ಸರಿ ರಾತ್ರಿಯಲ್ಲಿ ವೃದ್ಧರೊಬ್ಬರು ತಮಗೆ ಮೂರು ಸಲ ಫೋನು ಮಾಡಿ ಅದು ರಾಂಗ್ ನಂಬರು ಅಂತ ತಿಳಿದು ಪೇಚಾಡಿದ್ದನ್ನು ಅವರಿಗೆ ತಿಳಿಸಿದರು. ಅದರಿಂದ ವಿಷಯ ಅದೇನು ತುರ್ತಿನದೋ ಹಾಗೂ ಸಾವಿನ ಸಂಗತಿಗಳು ಆದಷ್ಟು ಜಾಗ್ರತೆಯಾಗಿ ಸಂಬಂಧಪಟ್ಟವರಿಗೆ ತಿಳೀಬೇಕು ಅಂತ ತಾವೇ ವಿಳಾಸ ಹುಡುಕಿ ಬಂದೆ ಅಂತ ತಿಳಿಸಿದರು. ಹಾಗಾಗಿ ನಿಜವಾಗಲೂ ಆಗಿ ಪರಿವರ್ತಿತವಾಯಿತು!

ಗೆಳೆಯರ ಈ ವರ್ತನೆ ನಮಗೆ ಮಾದರಿಯಾಗಬೇಕು ಅನ್ನುವವ ನಾನು.....

(ವರ್ಣ ಚಿತ್ರ ಕಲಾವಿದರು ಹಾಗೂ ರೇಖಾಚಿತ್ರಗಾರರೂ ಆದ ನಮ್ಮ ಶ್ರೀ ಎಂ.ಎಸ್. ಮೂರ್ತಿ ಅವರ ಸ್ವಂತ ಅನುಭವ ಇದು. ಅವರ ಸಂಕಲನದಿಂದ ಈ ಕಟ್ಟು ಹೊರಬಂದಿದೆ.)

## ಅಂಚೆಯ ಓಟ

ಸುಬ್ಬಣ್ಣ ಪೋಸ್ಟಾಫೀಸಿಗೆ ಹೊರಟಿದ್ರು. ಎದುರಿಗೆ ಮುರಾರಿ ಸಿಕ್ಕಿ ಏನು ಪೋಸ್ಟಾಫೀಸಿಗೆ ಹೊರಟಿರೋ ಹಾಗಿದೆ ಕೈಲಿ ಕಾಗದ ಹಿಡ್ಕೊಂಡು ಅಂದ್ರು. ಮುರಾರಿನ ಕಿಚಾಯಿಸಬೇಕು ಅಂತ ಸುಬ್ಬಣ್ಣ ಹೌದು, ನೀವು ಹೇಳಿ ಈ ಕಾಗದಾನ ಇವತ್ತು ಇಲ್ಲಿಂದ ಪೋಸ್ಟ್ ಮಾಡಿದರೆ ಇದು ಮುಂಬೈಗೆ ಯಾವತ್ತು ಹೋಗುತ್ತೆ ಅಂತ ಕೇಳಿದ್ರು. ಅದಕ್ಕೆ ಮುರಾರಿ ನಾಲ್ಕು ದಿನ ಅಂದ್ರು, ಸುಬ್ಬಣ್ಣ ಇಲ್ಲ ಅಂದ್ರು, ಒಂದು ವಾರ ಅಂದ್ರು ಅದಕ್ಕೂ ತಲೆಯಾಡಿಸಿದರು, ಹದಿನೈದು ದಿನ ಅಂದ್ರು ಸುಬ್ಬಣ್ಣ ಸಾಧ್ಯವೇ ಇಲ್ಲ ಅಂದ್ರು. ಹಾಗಾದ್ರೆ ಎಷ್ಟು ದಿನಕ್ಕೆ ಹೋಗುತ್ತೆ ಅಂತ ಕೇಳಿದರೆ ಸುಬ್ಬಣ್ಣ ಇದು ಮುಂಬೈಗೆ ಹೋಗೋದೇ ಇಲ್ಲ ಯಾಕೆಂದ್ರೆ ಇದರಲ್ಲಿ ವಿಳಾಸ ಬರೆದಿರೋದು ದೆಹಲಿದು ಅಂದಾಗ ಮುರಾರಿ ಇವರನ್ನು ಯಾಕಪ್ಪಾ ಮಾತಾಡಿಸಿದೆ ಅಂತ ತಲೆತಗ್ಗಿಸಿಕೊಂಡು ಹೊರಟುಹೋದರು.